| ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ (ಸೆಸ್ಕಾಂ) | 612.82 | 110.06 | 875.74 | 803.89 |
| ಒಟ್ಟು | **11,887.39** | **13,127.55** | **13,880.09** | **41,989.34** |

ಆಕರ: ಹಣಕಾಸು ಲೆಕ್ಕಗಳು

2019–20ರವರೆಗೆ ಸರ್ಕಾರವು ಈ ಕಂಪನಿಗಳಲ್ಲಿ ₹41,989.34 ಕೋಟಿಗಳ ಹೂಡಿಕೆ ಮಾಡಿದೆ ಮತ್ತು ಸಂಚಿತ ನಷ್ಟವು ₹13,880.09 ಕೋಟಿಯಷ್ಟಿದೆ. ಆರ್ಥಿಕ ಇಲಾಖೆಯು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ

ಸಲ್ಲಿಸಿದ ತನ್ನ ಉತ್ತರದಲ್ಲಿ (ಫೆಬ್ರವರಿ 2011) ರಾಜ್ಯದ/ಸಾರ್ವಜನಿಕ ಸೇವೆಯ ಮೂಲಭೂತ ಅಗತ್ಯತೆಗಳನ್ನು ಸೃಷ್ಟಿಸಲು ಸ್ಥಾಪಿಸಲಾದ ಮೇಲಿನ ಕಂಪನಿಗಳು/ನಿಗಮಗಳಲ್ಲಿನ(ನೀರಾವರಿ ಮತ್ತು ವಿದ್ಯುಚ್ಛಕ್ತಿ) ಹೂಡಿಕೆಯನ್ನು ಹಣಕಾಸಿನ ದೃಷ್ಟಿಯಿಂದ ನೋಡಲಾಗುವುದಿಲ್ಲ ಎಂದು ತಿಳಿಸಿತ್ತು.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ಐದನೇ ವರದಿಯಲ್ಲಿ (ಜುಲೈ 2015) ಆರ್ಥಿಕ ಇಲಾಖೆಯ ಉತ್ತರವನ್ನು ಸಾಮಾನ್ಯವಾಗಿ ಒಪ್ಪಿಕೊಂಡರೂ, ನಷ್ಟವನ್ನುಂಟು ಮಾಡುವ ಕಂಪನಿಗಳು/ನಿಗಮಗಳ ಕಾರ್ಯ ಸಾಧ್ಯತೆಯನ್ನು ನಿರ್ಣಯಿಸಲು ಮತ್ತು ಹದಿಮೂರನೆ ಹಣಕಾಸು ಆಯೋಗವು ಶಿಫಾರಸು ಮಾಡಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸದ ಕಂಪನಿಗಳು/ನಿಗಮಗಳನ್ನು ಮುಚ್ಚುವಿಕೆಗಾಗಿ ಗುರುತಿಸಲು ಶಿಫಾರಸು ಮಾಡಿದೆ. ಆದರೆ, ರಾಜ್ಯ ಸರ್ಕಾರವು ಅಂತಹ ಯಾವುದೇ ಕ್ರಮಕ್ಕೆ ಚಾಲನೆ ನೀಡಿರಲಿಲ್ಲ. 2019–20ರಲ್ಲಿ, ಸರ್ಕಾರವು ನಷ್ಟ ಉಂಟು ಮಾಡುತ್ತಿರುವ ಕಂಪನಿಗಳಾಗಿದ್ದರೂ, ಹೆಸ್ಕಾಮ್, ಗೆಸ್ಕಾಮ್ ಮತ್ತು ಸೆಸ್ಕಾಮ್‌ಗಳಲ್ಲಿ ಕ್ರಮವಾಗಿ ₹156.00 ಕೋಟಿ, ₹104.06 ಕೋಟಿ ಮತ್ತು ₹64.00 ಕೋಟಿಗಳನ್ನು ಹೂಡಿಕೆ ಮಾಡಿದೆ. ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ ಸಂಬಂಧಪಟ್ಟ ಇಲಾಖೆಗಳಿಗೆ ಅಗತ್ಯ ಕ್ರಮ ತೆಗೆದುಕೊಳ್ಳವಂತೆ ತಿಳಿಸಲಾಗುವುದು ಎಂದು ಹೇಳಿದೆ.

ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತಕ್ಕೆ ಸಂಬಂಧಿಸಿದಂತೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ತನ್ನ ಉತ್ತರದಲ್ಲಿ (ಸೆಪ್ಟೆಂಬರ್ 2020), ದುಡಿಯುವ ಬಂಡವಾಳದ ಕೊರತೆಯಿಂದಾಗಿ ಕಂಪನಿಯು ನಷ್ಟವನ್ನು ಅನುಭವಿಸುತ್ತಿದೆ ಎಂದು ಹೇಳಿದೆ. 2015–16 ಮತ್ತು 2016–17ರ ಅವಧಿಯಲ್ಲಿ ಕಬ್ಬಿನ ರಸ ಹಿಂಡುವ ಕೆಲಸವನ್ನು ನಿಲ್ಲಿಸಲಾಯಿತು. ಈ ಪ್ರದೇಶದ ರೈತರ ಹಿತಾಸಕ್ತಿ ಕಾಪಾಡಲು, ಮತ್ತು ಈ ಪ್ರದೇಶದ ಇತರ ಪೂರಕ ಘಟಕಗಳನ್ನು ಪುನರುಜ್ಜೀವನಗೊಳಿಸಲು ಮತ್ತು ನೌಕರರಿಗೆ ಸಂಬಳ/ವೇತನ /ಪಿಂಚಣಿಗಳನ್ನು ಪಾವತಿಸಲು, ಸರ್ಕಾರವು 2017–18 ಮತ್ತು 2018–19ರಲ್ಲಿ ₹57.00 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ₹17.00 ಕೋಟಿಯನ್ನು ಸಾಲವಾಗಿ ಪರಿಗಣಿಸಲಾಗಿದೆ. ಕಂಪನಿಯನ್ನು ಗುತ್ತಿಗೆ ಪುನರ್ವಸತಿ ಕಾರ್ಯಾಚರಣೆ ಮತ್ತು ವರ್ಗಾವಣೆ (ಎಲ್‌ಆರ್‌ಒಟಿ) ಅಡಿಯಲ್ಲಿ 40 ವರ್ಷಗಳ ಕಾಲ ಖಾಸಗಿಯಾಗಿ ಗುತ್ತಿಗೆ ನೀಡುವ ಪ್ರಸ್ತಾಪವಿದೆ ಮತ್ತು ಒಟ್ಟು 285 ಖಾಯಂ ಸಿಬ್ಬಂದಿಗಳಲ್ಲಿ 208 ಜನರಿಗೆ ಸ್ವಯಂಪ್ರೇರಿತ ನಿವೃತ್ತಿ ನೀಡುವ ಪ್ರಸ್ತಾಪವಿದೆ ಎಂದು ತಿಳಿಸಲಾಗಿದೆ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಫೆಬ್ರವರಿ 2021) ಸರ್ಕಾರವು ಈ ನಿಗಮಕ್ಕೆ ಆರ್ಥಿಕ ಸಹಾಯವನ್ನು ಒದಗಿಸಿದೆ ಮತ್ತು ಈ ನಿಗಮದಲ್ಲಿ ಯಾವುದೇ ಹೂಡಿಕೆ ಮಾಡಿಲ್ಲವೆಂದು ತಿಳಿಸಿದೆ. ಆದರೆ, ಹಣಕಾಸು ಲೆಕ್ಕಗಳಲ್ಲಿ ₹335.78 ಕೋಟಿಗಳ ಸರ್ಕಾರದ ಹೂಡಿಕೆ ತೋರಿಸಲಾಗಿದೆ.

#### *2.5.4.2 ರಾಜ್ಯ ಸರ್ಕಾರದಿಂದ ಸಾಲ ಮತ್ತು ಮುಂಗಡಗಳು*

ಸರ್ಕಾರವು ಕಂಪನಿಗಳು, ನಿಗಮಗಳು ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಹೂಡಿಕೆ ಮಾಡುವುದರ ಜೊತೆಗೆ, ಅನೇಕ ಸಂಸ್ಥೆಗಳಿಗೆ ಸಾಲ ಮತ್ತು ಮುಂಗಡಗಳನ್ನು ಒದಗಿಸುತ್ತದೆ. 31 ಮಾರ್ಚ್ 2020ರ ಹೊತ್ತಿಗೆ ಬಾಕಿ ಇರುವ ಸಾಲಗಳು ಮತ್ತು ಮುಂಗಡಗಳ ಸ್ಥಿತಿಯನ್ನು ಮತ್ತು ಕಳೆದ ಐದು ವರ್ಷಗಳಲ್ಲಿ ಬಡ್ಡಿ ಪಾವತಿಗಳನ್ನು ಮತ್ತು ಬಡ್ಡಿಸ್ವೀಕೃತಿಗಳನ್ನು**ಕೋಷ್ಟಕ–2.24**ರಲ್ಲಿ ಪ್ರಸ್ತುತಪಡಿಸಲಾಗಿದೆ.

**ಕೋಷ್ಟಕ–2.24: ಕಳೆದ ಐದು ವರ್ಷಗಳಲ್ಲಿ ವಿತರಿಸಲಾದ ಮತ್ತು ವಸೂಲು ಮಾಡಲಾದ ಸಾಲಗಳ ಪ್ರಮಾಣ**

(₹ ಕೋಟಿಗಳಲ್ಲಿ)

| | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಬಾಕಿಯಿರುವ ಸಾಲಗಳ ಪ್ರಾರಂಭಿಕ ಶಿಲ್ಕು | 13,216 | 13,813 | 15,578 | 20,525 | 24,981 |
| ಪ್ರಸಕ್ತ ವರ್ಷದಲ್ಲಿ ಮುಂಗಡ ನೀಡಿದ ಮೊತ್ತ | 657 | 1,935 | 5,092 | 4,487 | 4,069 |
| ಪ್ರಸಕ್ತ ವರ್ಷದಲ್ಲಿ ವಸೂಲು ಮಾಡಿದ ಮೊತ್ತ | 60 | 100 | 137 | 31 | 203 |
| ಬಾಕಿಯಿರುವ ಸಾಲಗಳ ಅಂತಿಮ ಶಿಲ್ಕು | 13,813 | 15,648 | 20,533 | 24,981 | 28,847 |
| ನಿವ್ವಳ ಕೂಡಿಕೆ | 597 | 1,835 | 4,955 | 4,456 | 3,866 |

| | 2015-16 | 2016-17 | 2017-18 | 2018-19 | 2019-20 |
|---|---|---|---|---|---|
| ಗಳಿಸಿದ ಬಡ್ಡಿ | 264 | 145 | 99 | 108 | 357 |
| ಬಾಕಿಯಿರುವ ಸಾಲಗಳು ಮತ್ತು ಮುಂಗಡಗಳಿಗೆ ಬಡ್ಡಿ ಪಾವತಿಗಳ ಶೇಕಡಾವಾರು | 1.91 | 0.93 | 0.48 | 0.43 | 1.24 |
| ಬಾಕಿಯಿರುವ ಹೊಣೆಗಾರಿಗಳಿಗೆ ಬಡ್ಡಿ ಪಾವತಿಗಳ ಶೇಕಡಾವಾರು | 6.19 | 5.81 | 6.08 | 5.82 | 5.90 |
| ಬಡ್ಡಿ ಸ್ವೀಕೃತಿಗಳು ಮತ್ತು ಬಡ್ಡಿ ಪಾವತಿಗಳ ನಡುವಿನ ವ್ಯತ್ಯಾಸ (ಶೇಕಡಾ) | (-) 4.28 | (-) 4.88 | (-) 5.60 | (-) 5.39 | (-) 4.66 |

ಆಕರ: ಹಣಕಾಸು ಲೆಕ್ಕಗಳು

- ಮಾರ್ಚ್ 31, 2020ರಂದು ಬಾಕಿ ಇರುವ ಸಾಲಗಳು ಒಟ್ಟು ₹.24,981 ಕೋಟಿ 2015-16ರಲ್ಲಿ (-)4.28ರಷ್ಟಿದ್ದ ಸರ್ಕಾರಿ ಸಾಲಗಳ ಬಡ್ಡಿ ಹರಹು 2019-20ರಲ್ಲಿ (-)4.66ಕ್ಕೆ ಏರಿದೆ. ಇದರ ಅರ್ಥ ರಾಜ್ಯವು ಮಾಡಿದ ಸಾಲಗಳು ಅದು ನೀಡಿದ ಸಾಲಗಳಿಗಿಂತ ಹೆಚ್ಚು ದುಬಾರಿಯಾಗಿದೆ.
- 2019-20ರಲ್ಲಿ ನೀಡಿದ ಒಟ್ಟು ಸಾಲಗಳಲ್ಲಿ, (₹4,069 ಕೋಟಿ) ಸಾಮಾಜಿಕ ಸೇವೆಗಳ ವಿಭಾಗಕ್ಕೆ ₹1,061 ಕೋಟಿ, ಆರ್ಥಿಕ ಸೇವೆಗಳ ವಿಭಾಗಕ್ಕೆ ₹3,002 ಕೋಟಿ ಮತ್ತು ಉಳಿದ ₹6 ಕೋಟಿ ಸರ್ಕಾರಿ ನೌಕರರಿಗೆ ಸಂದಿದೆ. ಸಾಮಾಜಿಕ ಸೇವೆಗಳ ವಿಭಾಗದಲ್ಲಿ ನಗರಾಭಿವೃದ್ಧಿಗೆ ಪ್ರಮುಖ ಪಾಲು ₹1,056.15 ಕೋಟಿ (ಶೇಕಡಾ 26) ಮತ್ತು ಆರ್ಥಿಕ ಸೇವೆಗಳಲ್ಲಿ ವಿದ್ಯುತ್ ಯೋಜನೆಗಳು ₹2,500.00 ಕೋಟಿ (ಶೇಕಡಾ 61) ನಂತರ ಕೈಗಾರಿಕೆ ಮತ್ತು ಖನಿಜಗಳಿಗೆ ₹488.89 ಕೋಟಿ (ಶೇ 12) ರಷ್ಟು ನೀಡಲಾಗಿದೆ.
- 21 ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಾಲ ಮರುಪಾವತಿಯ ವಿವರವಾದ ಲೆಕ್ಕಗಳನ್ನು ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಮತ್ತು 842 ಸಂಸ್ಥೆಗಳ ವಿವರಗಳನ್ನು ಸರ್ಕಾರದ ಇಲಾಖೆಗಳ ಮುಖ್ಯಸ್ಥರು/ಮುಖ್ಯ ನಿಯಂತ್ರಣಾಧಿಕಾರಿಗಳು ನಿರ್ವಹಿಸುತ್ತಾರೆ.
- ಪ್ರಧಾನ ಮಹಾಲೇಖಾಪಾಲರು (ಲೆಕ್ಕ ಮತ್ತು ಹಕ್ಕುದಾರಿ) ನಿರ್ವಹಿಸುತ್ತಿರುವ ಸಾಲ ಲೆಕ್ಕಗಳಿಗೆ ಸಂಬಂಧಿಸಿದಂತೆ, ₹9,231.55 ಕೋಟಿ ಮೊತ್ತದ ಸಾಲ ಮತ್ತು ಮುಂಗಡಗಳ ಮರುಪಾವತಿ (ಅಸಲು ₹4,856.60 ಕೋಟಿ ಮತ್ತು ಬಡ್ಡಿ: ₹4,374.85 ಕೋಟಿ) 31 ಮಾರ್ಚ್ 2020 ರ ವೇಳೆಗೆ ಅವಧಿ ಮೀರಿತ್ತು. (**ಅನುಬಂಧ 2.5**).
- ಆದರೆ, 2019-20ರ ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ ಸಂಖ್ಯೆ 7 ರಲ್ಲಿರುವ ಇಲಾಖೆಗಳ ಮುಖ್ಯಸ್ಥರು/ಮುಖ್ಯ ನಿಯಂತ್ರಣಾಧಿಕಾರಿಗಳು ನಿರ್ವಹಿಸುವ ಸಾಲಗಳಿಗೆ ಸಂಬಂಧಿಸಿದ ಅವಧಿ ಮೀರಿದ ಅಸಲು ಮತ್ತು ಬಡ್ಡಿಯ ಮಾಹಿತಿಯು ಅಪೂರ್ಣವಾಗಿದೆ, ಏಕೆಂದರೆ 842 ಸಂಸ್ಥೆಗಳಲ್ಲಿ ಕೇವಲ 16[17] ಸಂಸ್ಥೆಗಳು ಮಾತ್ರ ಅಗತ್ಯ ಮಾಹಿತಿಯನ್ನು ಒದಗಿಸಿವೆ.
- ಭಾರತೀಯ ಸರ್ಕಾರಿ ಲೆಕ್ಕ ಪ್ರಮಾಣಕಗಳು (ಐಜಿಎಎಸ್)-3ರ ಅನ್ವಯಸಾಲಗಳನ್ನು ನಿಯಂತ್ರಿಸುವ ನಿರ್ದಿಷ್ಟ ನಿಯಮಗಳು ಮತ್ತು ಷರತ್ತುಗಳಿಲ್ಲದೆ ಮಂಜೂರಾದ ಸಾಲಗಳನ್ನು ಪ್ರಕಟಪಡಿಸುವ ಅಗತ್ಯವಿದೆ. 2019-20ರಲ್ಲಿ ರಾಜ್ಯ ಸರ್ಕಾರವು ಮಂಜೂರು ಮಾಡಿದ ₹5,463.87 ಕೋಟಿ ಮೊತ್ತದ 62 ಸಾಲ ಪ್ರಕರಣಗಳಲ್ಲಿ, ₹5,025.37 ಕೋಟಿ ಮೊತ್ತದ 41 ಸಾಲಗಳನ್ನು ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸದೆ ಮಂಜೂರು ಮಾಡಲಾಗಿದೆ. ಇದರ ವಿವರಗಳು ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ ಸಂಖ್ಯೆ 18ರ ಅಡಿಯಲ್ಲಿ ಹೆಚ್ಚುವರಿ ಮಾಹಿತಿಯಾಗಿ ಪ್ರಕಟಗೊಂಡಿದೆ.

ಹಣಕಾಸು ಇಲಾಖೆ ತನ್ನ ಸುತ್ತೋಲೆಯಲ್ಲಿ (ಆಗಸ್ಟ್ 2018) ರಾಜ್ಯ ಸರ್ಕಾರವು ಸಾಲ ಮಂಜೂರಾತಿಗೆ ಸಂಬಂಧಿಸಿದಂತೆ ಇಲಾಖೆಗಳು ಪಾಲಿಸಬೇಕಾದ ನಿಯಮಗಳು ಮತ್ತು ಷರತ್ತುಗಳನ್ನು ಮತ್ತು ಇತರ ಕಾರ್ಯವಿಧಾನದ ಅಂಶಗಳನ್ನು ಪರಿಷ್ಕರಿಸಿದೆ ಎಂದು ಹೇಳಿದ್ದು, ನವೆಂಬರ್ 2013 ರ ಸರ್ಕಾರಿ ಆದೇಶದಲ್ಲಿನ ನಿಯಮಗಳಿಗೆ ಎಲ್ಲಾ ಇಲಾಖೆಗಳೂ ಬದ್ಧವಾಗಿರಲು ಸೂಚನೆ ನೀಡಲಾಗಿದೆ ಎಂದು

[17] 2018-19ರಲ್ಲಿ 842ರಲ್ಲಿ 19 ಸಂಸ್ಥೆಗಳು ಮಾಹಿತಿಯನ್ನು ಒದಗಿಸಿವೆ.

ಹೇಳಿದೆ. 2019–20ರ ಅವಧಿಯಲ್ಲಿ ಮಂಜೂರಾದ ಸಾಲಗಳು ನಿಯಮಗಳು ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸದ ಕಾರಣ, ವಿವಿಧ ಇಲಾಖೆಗಳು ಸರ್ಕಾರದ ಸೂಚನೆಗಳನ್ನು ಅನುಸರಣೆ ಮಾಡುವಲ್ಲಿ ವಿಫಲವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. ಇದು ಅಸಮರ್ಪಕ ಸಾಲ ನಿರ್ವಹಣೆ ಮತ್ತು ಅಲ್ಪ ವಸೂಲಾತಿಗೆ ಎಡೆ ಮಾಡಿಕೊಡುತ್ತದೆ.

ಸಾಲ ಮರುಪಾವತಿಯಲ್ಲಿನ ಅಲ್ಪ ಪ್ರಗತಿ ಮತ್ತು ನಿಯಮಗಳು ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸದೆ ಸಾಲಗಳ ಮಂಜೂರಾತಿಯನ್ನು 2006–07ರಿಂದ ಗಮನಕ್ಕೆ ತರಲಾಗುತ್ತಿದೆ. ನಿಯಮಗಳು ಮತ್ತು ಷರತ್ತುಗಳ ಪರಿಷ್ಕರಣೆ ಕುರಿತು ರಾಜ್ಯ ಸರ್ಕಾರವು ಮತ್ತೆ ಮತ್ತೆ ಸುತ್ತೋಲೆಗಳನ್ನು ಹೊರಡಿಸಿದೆ. ಆದಾಗ್ಯೂ, ಇದು ಸಾಲ/ಬಡ್ಡಿ ಮರುಪಾವತಿಗೆ ಯಾವುದೇ ಮಾರ್ಗದರ್ಶನವನ್ನು ಸಿದ್ಧಪಡಿಸಿಲ್ಲ ಅಥವಾ ವಿವಿಧ ಇಲಾಖೆಗಳು ಸರ್ಕಾರದ ಸುತ್ತೋಲೆಗಳನ್ನು ಪಾಲಿಸದಿರುವ ಬಗ್ಗೆ ಯಾವುದೇ ಕ್ರಮಗಳನ್ನು ಜಾರಿಗೊಳಿಸಿಲ್ಲ

ಹಣಕಾಸಿನ ನಿರ್ವಹಣಾ ಪರಿಶೀಲನಾ ಸಮಿತಿಯು ಹಿಂದಿನ ವರ್ಷದಲ್ಲಿ ನೀಡಿದ ಸಲಹೆಯನ್ನು ಮುಂದುವರೆಸಿ (ಫೆಬ್ರವರಿ 2020) ಆರ್ಥಿಕ ಇಲಾಖೆಯು ಸಾಲಗಳನ್ನು ಸಕಾಲಿಕವಾಗಿ ಮರುಪಾವತಿ ವೇಳಾಪಟ್ಟಿಯ ಪ್ರಕಾರ ಮರುಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಕಾರ್ಯದರ್ಶಿ ಮಟ್ಟದಲ್ಲಿ ಆಡಳಿತಾತ್ಮಕ ಇಲಾಖೆಗಳೊಂದಿಗೆ ನಿಯಮಿತವಾಗಿ ಸಭೆಗಳನ್ನು ನಡೆಸುವಂತೆ ಸಲಹೆ ನೀಡಿದೆ.

### *2.5.4.3 ಸರ್ಕಾರಿ ಕಂಪನಿ/ನಿಗಮಗಳಲ್ಲಿ ಹೂಡಿಕೆ ಮತ್ತು ಆಯವ್ಯಯ ಬೆಂಬಲ*

ಜನ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ಕೈಗೊಳ್ಳಲು ಕರ್ನಾಟಕದಲ್ಲಿ ರಾಜ್ಯ ಸರ್ಕಾರಿ ಕಂಪನಿಗಳು ಮತ್ತು ಶಾಸನಬದ್ಧ ನಿಗಮಗಳನ್ನು ಒಳಗೊಂಡಿರುವ ರಾಜ್ಯ ಸಾರ್ವಜನಿಕ ವಲಯದ ಸಂಸ್ಥೆಗಳನ್ನು (ಎಸ್‌ಪಿಎಸ್‌ಯು) ಸ್ಥಾಪಿಸಲಾಗಿದೆ. ಈ ಸಂಸ್ಥೆಗಳಲ್ಲಿ ಕರ್ನಾಟಕ ಸರ್ಕಾರದ ಹಣಕಾಸಿನ ಪಾಲು ಇದ್ದು ಅದು ಮುಖ್ಯವಾಗಿ ಕೆಳಕಂಡ ರೂಪದಲ್ಲಿದೆ.

| | |
|---|---|
| • ಷೇರು ಬಂಡವಾಳ ಮತ್ತು ಸಾಲಗಳು | ಸಾಲಗಳ ಮೂಲಕ ಬಂಡವಾಳದ ಕೊಡುಗೆ ಮತ್ತು ಹಣಕಾಸಿನ ಸಹಾಯ |
| • ವಿಶೇಷ ಹಣಕಾಸು ಬೆಂಬಲ | ಅನುದಾನ ಮತ್ತು ಸಹಾಯಧನಗಳ ಮೂಲಕ ಆಯವ್ಯಯ ಬೆಂಬಲ. |
| • ಖಾತರಿಗಳು | ವಲಯದ ಉದ್ದಿಮೆಗಳು ಪಡೆದ ಸಾಲವನ್ನು ಬಡ್ಡಿಯೊಂದಿಗೆ ಮರುಪಾವತಿಸಲು. |

2018–19ನೇ ಸಾಲಿನಲ್ಲಿಈ ಉದ್ದಿಮೆಗಳ ವಹಿವಾಟು (₹70,599.16 ಕೋಟಿ[18]) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ ಐದರಷ್ಟು ಇದ್ದುದರಿಂದ ಇದು ರಾಜ್ಯದ ಆರ್ಥಿಕತೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ.

ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳ ದಾಖಲೆಗಳ ಪ್ರಕಾರ ಬಾಕಿ ಇರುವ ಇಕ್ವಿಟಿ, ಸಾಲಗಳು ಮತ್ತು ಖಾತರಿಗಳಿಗೆ ಸಂಬಂಧಿಸಿದ ಅಂಕಿ ಅಂಶಗಳು ರಾಜ್ಯದ ಹಣಕಾಸು ಲೆಕ್ಕಗಳಲ್ಲಿ ಕಂಡುಬರುವ ಅಂಕಿ ಅಂಶಗಳೊಂದಿಗೆ ತಾಳೆಯಾಗಬೇಕು. ಅಂಕಿ ಅಂಶಗಳು ತಾಳೆಯಾಗದಿದ್ದಲ್ಲಿ, ಸಂಬಂಧಪಟ್ಟ ಉದ್ದಿಮೆಗಳು ಮತ್ತು ಆರ್ಥಿಕ ಇಲಾಖೆಯ ನಡುವಿನ ವ್ಯತ್ಯಾಸಗಳ ಸಮನ್ವಯವನ್ನು ಕೈಗೊಳ್ಳಬೇಕು. 31 ಮಾರ್ಚ್ 2019 ರಲ್ಲಿದ್ದಂತೆ ಈ ವಿಷಯದಲ್ಲಿನ ಸ್ಥಿತಿಯನ್ನು **ಕೋಷ್ಟಕ–2.25** ರಲ್ಲಿ ನೀಡಲಾಗಿದೆ.

[18]ಸೆಪ್ಟಂಬರ್ 2019ರಲ್ಲಿದ್ದಂತೆ ಇತ್ತೀಚಿನ ಅಂತಿಮಗೊಳಿಸಿದ ಲೆಕ್ಕಪತ್ರಗಳು

**ಕೋಷ್ಟಕ-2.25: ಸಾರ್ವಜನಿಕ ವಲಯ ಉದ್ದಿಮೆಗಳ ದಾಖಲೆಗಳ ಪ್ರಕಾರ ಮತ್ತು ಹಣಕಾಸು ಲೆಕ್ಕಗಳ ಪ್ರಕಾರ ಬಾಕಿ ಇರುವ ಈಕ್ವಿಟಿ, ಸಾಲಗಳು ಖಾತರಿಗಳು**

(₹ ಕೋಟಿಗಳಲ್ಲಿ)

| ಕ್ರಮಸಂಖ್ಯೆ | ಬಾಕಿ ಇರುವ ಸಂಬಂಧಿಸಿದ ಅಂಶ | ಮೊತ್ತ | | ವ್ಯತ್ಯಾಸ |
|---|---|---|---|---|
| | | ಹಣಕಾಸು ಲೆಕ್ಕಗಳು ಪ್ರಕಾರ | ಸಾರ್ವಜನಿಕ ವಲಯ ಉದ್ದಿಮೆಗಳ ಪ್ರಕಾರ | |
| 1 | ಈಕ್ವಿಟಿ | 56,774.34 | 70,010.43 | (–)13,236.09 |
| 2 | ಸಾಲಗಳು | 5,096.29 | 4,651.29 | 445.00 |
| 3 | ಖಾತರಿಗಳು | 20,973.69 | 18,758.09 | 2,215.60 |

ಆಕರ: ಪಿಎಸ್‌ಯು – 2018–19ರ ಕುರಿತು ಸಿ & ಎ ಜಿ ವರದಿ

ಒಂಬತ್ತು[19] ವಿದ್ಯುತ್ ವಲಯದ ಉದ್ದಿಮೆಗಳು ಮತ್ತು 87 ಇತರ ಉದ್ದಿಮೆಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸಗಳಿವೆ. ಎಂಟು ಕಂಪನಿಗಳಲ್ಲಿ ಪ್ರಮುಖ ವ್ಯತ್ಯಾಸಗಳನ್ನು ಗಮನಿಸಲಾಗಿದೆ. ಸರ್ಕಾರ ಮತ್ತು ಉದ್ದಿಮೆಗಳು ಲೆಕ್ಕಗಳನ್ನು ಸಮನ್ವಯಗೊಳಿಸಲು ದೃಢವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯ ಸರ್ಕಾರದ ಪಾಲಿನ ವಿವರಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### (i) *ರಾಜ್ಯ ವಲಯದ ಸಾರ್ವಜನಿಕ ಉದ್ದಿಮೆಗಳಲ್ಲಿ ಷೇರು ಬಂಡವಾಳ*

2019ನೇ ವರ್ಷಕ್ಕೆ ಕೊನೆಗೊಂಡ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ವರದಿಯ ಪ್ರಕಾರ, ಅವರ ಲೆಕ್ಕಪರಿಶೋಧನಾ ವ್ಯಾಪ್ತಿಯಲ್ಲಿ ರಾಜ್ಯದಲ್ಲಿ 114[20] ಸಾರ್ವಜನಿಕ ಉದ್ದಿಮೆಗಳಿವೆ. ಸಾರ್ವಜನಿಕ ಉದ್ದಿಮೆಗಳು ತಮ್ಮ ಇತ್ತೀಚಿನ ಅಂತಿಮ ಲೆಕ್ಕಗಳಲ್ಲಿ ಒದಗಿಸಿದಂತೆ ರಾಜ್ಯ ಸರ್ಕಾರವು 2019 ರ ಮಾರ್ಚ್ ಅಂತ್ಯದ ವೇಳೆಗೆ ಈ ಉದ್ದಿಮೆಗಳಲ್ಲಿ ₹70,013.64 ಕೋಟಿಗಳನ್ನು ಹೂಡಿಕೆ ಮಾಡಿದೆ.

ಆದರೆ, ಹಣಕಾಸು ಲೆಕ್ಕಗಳ ಪ್ರಕಾರ, 96 ಸರ್ಕಾರಿ ಕಂಪನಿಗಳು ಮತ್ತು ಶಾಸನಬದ್ಧ ನಿಗಮಗಳಿಗೆ, ಸರ್ಕಾರವು 2019–20ರ ಅಂತ್ಯಕ್ಕೆ ₹60,297 ಕೋಟಿಗಳನ್ನು ಹೂಡಿಕೆ ಮಾಡಿದೆ.

ಈ ಹೂಡಿಕೆಗಳ ಜೊತೆಗೆ, 2018–19ರ ಅವಧಿಯಲ್ಲಿ, ಕೇಂದ್ರ ಸರ್ಕಾರವು ₹2,326.44 ಕೋಟಿ ಮೊತ್ತದ ಅನುದಾನ/ಸಹಾಯಧನಗಳನ್ನು ನೀಡಿದ್ದರೆ, ರಾಜ್ಯ ಸರ್ಕಾರವು ಈ 114 ರಾಜ್ಯ ಸಾರ್ವಜನಿಕ ಉದ್ದಿಮೆಗಳಿಗೆ ₹14,135.95 ಕೋಟಿಗಳನ್ನು ನೀಡಿದೆ.

### (ii) *ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆ / ಅವುಗಳ ಮುಚ್ಚುವಿಕೆ*

ರಾಜ್ಯದಲ್ಲಿನ ಸಾರ್ವಜನಿಕ ವಲಯ ಉದ್ದಿಮೆಗಳ ಸುಧಾರಣೆ ಮತ್ತು ಅವುಗಳ ಖಾಸಗೀಕರಣದ ಕುರಿತು ಒಂದು ಸಮಗ್ರ ನೀತಿಯನ್ನು ರಾಜ್ಯ ಸರ್ಕಾರವು ಅನುಮೋದಿಸಿದೆ ಮತ್ತು ಅಂಗೀಕರಿಸಿದೆ (ಫೆಬ್ರವರಿ 2001). ಅದರಂತೆ, ಸೆಪ್ಟೆಂಬರ್ 2019ರ ಕೊನೆಯಲ್ಲಿ ಏಳು ಕಂಪನಿಗಳನ್ನು ರದ್ದುಪಡಿಸಲಾಯಿತು/

[19] ಈಕ್ವಿಟಿ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲ ಸೌಕರ್ಯ ಮತ್ತು ಅಭಿವೃದ್ಧಿ ನಿಗಮ ನಿಯಮಿತ, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾವೇರಿ ನೀರಾವರಿ ನಿಗಮ ನಿಯಮಿತ, ವಿಶ್ವೇಶ್ವರಾಯ ಜಲ ನಿಗಮ ನಿಯಮಿತ,
ಸಾಲಗಳು: ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ, ವಿಶ್ವೇಶ್ವರಾಯ ಜಲ ನಿಗಮ ನಿಯಮಿತ ಮತ್ತು ದಿ ಮೈಸೂರು ಪೇಪರ್ ಮಿಲ್ಸ್ ನಿಯಮಿತ.

[20] ಶಾಸನಬದ್ಧ ನಿಗಮಗಳು–6, ಕಾರ್ಯನಿರ್ವಹಿಸದ ಸರ್ಕಾರಿ ಕಂಪೆನಿಗಳು–13, ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಕಂಪೆನಿಗಳು–95.

ಒಗ್ಗೂಡಿಸಲಾಯಿತು. 103 ಉದ್ದಿಮೆಗಳಲ್ಲಿ (ವಿದ್ಯುತ್ ವಲಯವನ್ನು ಹೊರತುಪಡಿಸಿ), ಸರ್ಕಾರವು ನಿಷ್ಕ್ರಿಯ 13 ಉದ್ದಿಮೆಗಳನ್ನು ಮುಚ್ಚಲು ಆದೇಶ ನೀಡಿತು.

### (iii) ಸರ್ಕಾರಿ ಕಂಪನಿಗಳು / ನಿಗಮಗಳಿಂದ ಪ್ರತಿಫಲ

2014–15 ರಿಂದ 2018–19ರ ಅವಧಿಯಲ್ಲಿ, ಲಾಭ ಗಳಿಸಿದ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ 44 ಮತ್ತು 47ರ ನಡುವೆ ಇದ್ದು, ಅದರಲ್ಲಿ ಕೇವಲ 10 ರಿಂದ 17 ಉದ್ದಿಮೆಗಳು ಲಾಭಾಂಶವನ್ನು ಘೋಷಿಸಿವೆ. 2018–19ರ ಅವಧಿಯಲ್ಲಿ, ಈ ಘಟಕಗಳು ಗಳಿಸಿದ ₹1,972.16ಕೋಟಿ ಲಾಭಕ್ಕೆ ಪ್ರತಿಯಾಗಿ, ಕೇವಲ ₹34.89 ಕೋಟಿಗಳನ್ನು ಲಾಭಾಂಶವಾಗಿ ಪಾವತಿಸಿದೆ. ಪಾವತಿಸಿದ ಬಂಡವಾಳದ ಶೇಕಡಾವಾರು ಲಾಭಾಂಶ ಪಾವತಿ ಕೇವಲ ನಾಮಮಾತ್ರವಾಗಿತ್ತು ಮತ್ತು 2018–19ರ ಅವಧಿಯಲ್ಲಿ ಶೇಕಡಾ 0.31 ರಷ್ಟಿತ್ತು.

ಸಾರ್ವಜನಿಕ ವಲಯ ಉದ್ದಿಮೆಗಳ ಲಾಭದಾಯಕತೆಯನ್ನು ಸಾಂಪ್ರದಾಯಿಕವಾಗಿ ಹೂಡಿಕೆಯ ಮೇಲಿನ ಆದಾಯ [21], ಷೇರುಗಳ ಮೇಲಿನ ಆದಾಯ [22] ಮತ್ತು ಕಾರ್ಯವಾಹಿ ಬಂಡವಾಳದ ಮೇಲಿನ ಆದಾಯದ[23] ಮೂಲಕ ನಿರ್ಣಯಿಸಲಾಗುತ್ತದೆ.

- ರಾಜ್ಯದ ಎಂಟು ವಿದ್ಯುತ್ ವಲಯದ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ತುಂಬಿದ ರಾಜ್ಯ ಸರ್ಕಾರದ ನಿಧಿಯ ಮೇಲಿನ ಆದಾಯವು (ಪಿವಿನಲ್ಲಿ) ಹಿಂದಿನ ವೆಚ್ಚದ ಆಧಾರದ ಮೇಲೆ ಬರುವ ಪ್ರತಿಫಲಕ್ಕಿಂತ ಕಡಿಮೆಯಾಗಿದೆ. ಪ್ರತಿಫಲವು ಕಡಿಮೆಯಾಗುತ್ತಿರುವ ಪ್ರವೃತ್ತಿಯಲ್ಲಿದೆ ಮತ್ತು ಇದು 2016–17ರಲ್ಲಿ ಅತ್ಯಂತ ಕಡಿಮೆಯಾಗಿದೆ.
- ಎಂಟು ವಿದ್ಯುತ್ ವಲಯದ ಉದ್ದಿಮೆಗಳಲ್ಲಿ ಈಕ್ವಿಟಿಯ ಮೇಲಿನ ಪ್ರತಿಫಲವು 2017–18 ಮತ್ತು 2018–19ರಲ್ಲಿ ಶೂನ್ಯ ಆಗಿದ್ದರೆ, 2018–19ರ ಅವಧಿಯಲ್ಲಿ ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲವು ಶೇಕಡಾ 12.11 ರಷ್ಟಿತ್ತು.
- ವಿದ್ಯುತ್ ವಲಯವನ್ನು ಹೊರತುಪಡಿಸಿ ಎಲ್ಲಾ ಸಾರ್ವಜನಿಕ ವಲಯ ಉದ್ದಿಮೆಗಳು 2014–15 ರಿಂದ 2018–19ರ ಅವಧಿಯಲ್ಲಿ ಹೂಡಿಕೆಯ ಮೇಲೆ ನಕಾರಾತ್ಮಕ ಲಾಭವನ್ನು ಹೊಂದಿವೆ.
- ಅದೇ ರೀತಿ, ಎಲ್ಲಾ ಐದು ವರ್ಷಗಳಲ್ಲಿ ಉದ್ದಿಮೆಗಳು ನಷ್ಟವನ್ನು ಅನುಭವಿಸಿದ್ದರಿಂದ – ವಿದ್ಯುತ್ ವಲಯವನ್ನು ಹೊರತುಪಡಿಸಿ – ಉದ್ದಿಮೆಗಳಲ್ಲಿನ ಇಕ್ವಿಟಿಯ ಮೇಲಿನ ಪ್ರತಿಫಲವು ನಕಾರಾತ್ಮಕವಾಗಿತ್ತು
- ವಿದ್ಯುತ್ ವಲಯವನ್ನು ಹೊರತುಪಡಿಸಿ ಎಲ್ಲ ಉದ್ಯಮಗಳಲ್ಲಿ ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲವು ಇಳಿತದ ಪ್ರವೃತ್ತಿಯಲ್ಲಿದೆ ಮತ್ತು 2018–19ರ ಅವಧಿಯಲ್ಲಿ ಇದು ಶೇಕಡಾ 1.36 ರಷ್ಟಿತ್ತು, ಇದು ಲಾಭದಾಯಕತೆಯು ತೊಡಗಿಸಿದ ಬಂಡವಾಳಕ್ಕೆ ಪೂರಕವಾಗಿಲ್ಲ ಎಂಬುದನ್ನು ಸೂಚಿಸುತ್ತದೆ.

### (iv) ನಷ್ಟಗಳಿಗೆ ಈಡಾದ ಸರ್ಕಾರಿ ಕಂಪನಿಗಳು / ನಿಗಮಗಳು

2018–19ರ ಅವಧಿಯಲ್ಲಿ 43 ರಾಜ್ಯ ವಲಯ ಸಾರ್ವಜನಿಕ ಉದ್ದಿಮೆಗಳು ಒಟ್ಟಾರೆ ₹4,498.16 ಕೋಟಿಗಳ (ಇದರಲ್ಲಿ ವಿದ್ಯುತ್ ವಲಯದ ಉದ್ದಿಮೆಗಳು – ₹587.33 ಕೋಟಿ) ನಷ್ಟವನ್ನು

[21] ಈಕ್ವಿಟಿ ಮತ್ತು ದೀರ್ಘಾವಧಿಯ ಸಾಲಗಳ ರೂಪದಲ್ಲಿ ಹೂಡಿಕೆ ಮಾಡಿದ ಹಣದ ಮೊತ್ತಕ್ಕೆ ಸಂಬಂಧಿಸಿದಂತೆ ನಿಗದಿತ ವರ್ಷದಲ್ಲಿ ಮಾಡಿದ ಲಾಭ ಅಥವಾ ನಷ್ಟವನ್ನು ಅಳೆಯುತ್ತದೆ ಮತ್ತು ಒಟ್ಟು ಹೂಡಿಕೆಯ ಲಾಭದ ಶೇಕಡಾವಾರು ಪ್ರಮಾಣದಲ್ಲಿ ವ್ಯಕ್ತ ಮಾಡಲಾಗುತ್ತದೆ.

[22] ನಿವ್ವಳ ಲಾಭವನ್ನು ಷೇರುದಾರರ ನಿಧಿಯಿಂದ ಭಾಗಿಸುವ ಮೂಲಕ ಲೆಕ್ಕಹಾಕಿದ ಕಾರ್ಯಕ್ಷಮತೆಯ ಅಳತೆ.

[23] ಕಂಪನಿಯ ಲಾಭದಾಯಕತೆ ಮತ್ತು ಅದರ ಬಂಡವಾಳವನ್ನು ಬಳಸುವ ದಕ್ಷತೆಯನ್ನು ಅಳೆಯುವ ಹಣಕಾಸು ಅನುಪಾತ ಮತ್ತು ಕಂಪನಿಯ ಗಳಿಕೆಯನ್ನು ಬಡ್ಡಿ ಮತ್ತು ತೆರಿಗೆಗಳ ಮೊದಲು ಭಾಗಿಸುವ ಮೂಲಕ ಲೆಕ್ಕ ಹಾಕಲಾಗುತ್ತದೆ.

ಅನುಭವಿಸಿವೆ. ಉಳಿದ ನಷ್ಟಕ್ಕೆ ಸಂಬಂಧಿಸಿದಂತೆ, ಕರ್ನಾಟಕ ನೀರಾವರಿ ನಿಗಮದ ಕೊಡುಗೆ ಪ್ರಮುಖವಾಗಿದೆ.

### (v) *ಉದ್ದಿಮೆಗಳಲ್ಲಿ ಬಂಡವಾಳ ಅಳಿವು*

ನಿವ್ವಳ ಮೌಲ್ಯವು ಒಂದು ಸಂಸ್ಥೆಯು ಅದರ ಮಾಲೀಕರಿಗೆ ಎಷ್ಟು ಬೆಲೆಯುಳ್ಳದ್ದು ಎಂಬುದರ ಮಾಪನವಾಗಿದೆ. ಋಣಾತ್ಮಕ ನಿವ್ವಳ ಮೌಲ್ಯವು ಮಾಲೀಕರ ಸಂಪೂರ್ಣ ಹೂಡಿಕೆಯನ್ನು ಸಂಚಿತ ನಷ್ಟವು ಅಳಿಸಿಹಾಕಿದೆ ಎಂಬುದನ್ನು ಸೂಚಿಸುತ್ತದೆ. 2018–19ರ ಅಂತ್ಯದ ವೇಳೆಗೆ, 24 ಸಾರ್ವಜನಿಕ ಉದ್ದಿಮೆಗಳಲ್ಲಿ ₹3,697.61 ಕೋಟಿ ಮೌಲ್ಯದ ಬಂಡವಾಳವು ಅಳಿದುಹೋಗಿದೆ.

2018–19 ಕ್ಕೆ ಕೊನೆಗೊಂಡ ಕಳೆದ ಐದು ವರ್ಷಗಳಲ್ಲಿ ಎಂಟು ವಿದ್ಯುತ್ ವಲಯದ ಉದ್ದಿಮೆಗಳ ಒಟ್ಟಾರೆ ನಿವ್ವಳ ಮೌಲ್ಯವು ಧನಾತ್ಮಕವಾಗಿದ್ದರೆ, ಎರಡು ಉದ್ದಿಮೆಗಳ (₹635.12 ಕೋಟಿ) ನಿವ್ವಳ ಮೌಲ್ಯವು ಕ್ಷೀಣಿಸಿದೆ.

ಅಂತೆಯೇ, ಕಳೆದ ಐದು ವರ್ಷಗಳಲ್ಲಿ ವಿದ್ಯುತ್ ವಲಯವನ್ನು ಹೊರತುಪಡಿಸಿ ಉದ್ದಿಮೆಗಳ ಒಟ್ಟಾರೆ ನಿವ್ವಳ ಮೌಲ್ಯವು ಧನಾತ್ಮಕವಾಗಿದೆ. ಆದರೆ, 31 ಮಾರ್ಚ್ 2019ರ ವೇಳೆಗೆ 26 ಉದ್ದಿಮೆಗಳ (₹3,061.46 ಕೋಟಿ) ನಿವ್ವಳ ಮೌಲ್ಯವು ಸವೆದುಹೋಗಿದೆ

### (vi) *ದೀರ್ಘಕಾಲೀನ ಸಾಲಗಳ ವಿಶ್ಲೇಷಣೆ*

ಸಾರ್ವಜನಿಕಉದ್ದಿಮೆಗಳು ಸರ್ಕಾರ, ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳಿಗೆ ಬಡ್ಡಿ ವ್ಯಾಪ್ತಿ ಅನುಪಾತ ಮತ್ತು ಋಣ ವಹಿವಾಟು ಅನುಪಾತದ ಮೂಲಕ ತಮ್ಮ ಜವಾಬ್ದಾರಿಯಋಣವನ್ನು ಪೂರೈಸುವ ಸಾಮರ್ಥ್ಯದ ಮೌಲ್ಯಮಾಪನವು ಈ ಕೆಳಗಿನ ಅಂಶಗಳನ್ನು ತೋರಿಸಿದೆ:

- 31 ಮಾರ್ಚ್ 2019ರ ಹೊತ್ತಿಗೆ, ಎಂಟು ವಿದ್ಯುತ್ ವಲಯದ ಉದ್ದಿಮೆಗಳಲ್ಲಿ, ಏಳು ಉದ್ದಿಮೆಗಳಿಗೆಬಡ್ಡಿಯ ಹೊರೆಯಾಗಿದೆ. ಈ ಪೈಕಿ ಮೂರು ಉದ್ದಿಮೆಗಳ ಬಡ್ಡಿ ವ್ಯಾಪ್ತಿ ಅನುಪಾತವು ಒಂದಕ್ಕಿಂತ ಕಡಿಮೆಯಿದ್ದಿತು.
- ವಿದ್ಯುತ್ ವಲಯದ ಎಂಟು ಉದ್ದಿಮೆಗಳ ಸಂಯುಕ್ತ ವಾರ್ಷಿಕ ವಹಿವಾಟಿನ ವೃದ್ಧಿಯದರವು 2014–15 ರಿಂದ 2018–19ರ ಅವಧಿಯಲ್ಲಿ ಋಣಕ್ಕಿಂತ ಕಡಿಮೆಯಾಗಿದ್ದು. ಋಣ ವಹಿವಾಟು ಅನುಪಾತವು ಸುಧಾರಣೆಯಾಗಿಲ್ಲ.
- 31 ಮಾರ್ಚ್ 2019 ರ ಹೊತ್ತಿಗೆ, 46 ಉದ್ದಿಮೆಗಳಲ್ಲಿ 42 ಉದ್ದಿಮೆಗಳ ಬಡ್ಡಿ ಅನುಪಾತವು ಒಂದಕ್ಕಿಂತ ಕಡಿಮೆ ಇದ್ದು, ಈ ಉದ್ದಿಮೆಗಳು ಬಡ್ಡಿ ವೆಚ್ಚವನ್ನು ಪೂರೈಸಲು ಸಾಕಷ್ಟು ಆದಾಯವನ್ನು ಗಳಿಸಲು ಸಾಧ್ಯವಿಲ್ಲ ಎಂದು ಸೂಚಿಸುತ್ತದೆ
- 2014–15 ರಿಂದ 2018–19ರ ಅವಧಿಯಲ್ಲಿ ವಿದ್ಯುತ್ ವಲಯವನ್ನು ಹೊರತುಪಡಿಸಿ ಉಳಿದ ಸಕ್ರಿಯ ಸಾರ್ವಜನಿಕ ಉದ್ದಿಮೆಗಳ ಋಣ– ವಹಿವಾಟಿನ ಅನುಪಾತವು ಸಂಯುಕ್ತ ವಾರ್ಷಿಕ ವೃದ್ಧಿಯ ದರವು ಋಣಕ್ಕಿಂತ ಕಡಿಮೆಯಾಗಿದ್ದರಿಂದ ಸುಧಾರಣೆಯಾಗಿಲ್ಲ.

### (vii) *ಸಾರ್ವಜನಿಕ ವಲಯ ಉದ್ದಿಮೆಗಳ ಜವಾಬ್ದಾರಿಯ ಚೌಕಟ್ಟು ಮತ್ತು ಲೆಕ್ಕಸಲ್ಲಿಕೆ ಹಾಗೂ ಅವುಗಳ ಲೆಕ್ಕಪರಿಶೋಧನೆ*

ಸರ್ಕಾರಿ ಕಂಪನಿಗಳ ಲೆಕ್ಕಪರಿಶೋಧನೆಯ ಪ್ರಕ್ರಿಯೆಯನ್ನು ಕಂಪೆನಿ ಕಾಯ್ದೆ 1956ರ ಪರಿಚ್ಛೇದ 619 ಮತ್ತು ಕಂಪೆನಿಗಳ ಕಾಯ್ದೆ 2013ರ ಪರಿಚ್ಛೇದ 139 ಮತ್ತು 143ರ ಆಯಾ ನಿಬಂಧನೆಗಳಿಂದ ನಿಯಂತ್ರಿಸಲಾಗುತ್ತದೆ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರುಸರ್ಕಾರಿ ಕಂಪನಿಯ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸುತ್ತಾರೆ. . ಇದಲ್ಲದೆ, ಕಾಯಿದೆಯ ಸೆಕ್ಷನ್ 143 ರ ಉಪ– ಪರಿಚ್ಛೇದ7 ರ ಪ್ರಕಾರ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು

(ಸಿಎಜಿ) ಯಾವುದೇ ಕಂಪನಿಯು, ಪರಿಚ್ಛೇದ 139ರ ಉಪ– ಪರಿಚ್ಛೇದ (5) ಅಥವಾ ಉಪ–ಪರಿಚ್ಛೇದ (7)ರ ವ್ಯಾಪ್ತಿಯಲ್ಲಿದ್ದರೆ ಅಗತ್ಯವೆಂದು ಕಂಡುಬಂದಲ್ಲಿ, ಆದೇಶದ ಮೂಲಕ, ಅಂತಹ ಕಂಪನಿಯ ಲೆಕ್ಕಗಳ ಪರೀಕ್ಷಾ ತನಿಖೆಯನ್ನು ನಡೆಸಲು ಅವಕಾಶವಿದೆ.

ಸರ್ಕಾರಿ ಕಂಪನಿಗಳ ಹಣಕಾಸು ತಃಖ್ತೆಗಳನ್ನು ಸಿಎಜಿ ನೇಮಕ ಮಾಡುವ ಶಾಸನಬದ್ಧ ಲೆಕ್ಕ ಪರಿಶೋಧಕರು ತಪಾಸಣೆ ಮಾಡುತ್ತಾರೆ. ಈ ಹಣಕಾಸು ತಃಖ್ತೆಗಳು ಲೆಕ್ಕಪರಿಶೋಧನಾ ವರದಿಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆಸಿಎಜಿ ನಡೆಸುವ ಪೂರಕ ಲೆಕ್ಕಪರಿಶೋಧನೆಗೆ ಒಳಪಟ್ಟಿರುತ್ತದೆ. ಆದರೂ , ನಾಲ್ಕು ಶಾಸನಬದ್ಧ ನಿಗಮಗಳಿಗೆ ಸಿಎಜಿ ಏಕೈಕ ಲೆಕ್ಕಪರಿಶೋಧಕರಾಗಿದ್ದು, ಎರಡು ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ ಪೂರಕ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ.

2018–19ರ ಅವಧಿಯಲ್ಲಿ, ವಿದ್ಯುತ್ ವಲಯದ 11 ಸಾರ್ವಜನಿಕ ಉದ್ದಿಮೆಗಳಲ್ಲಿ, ಎರಡು ಉದ್ದಿಮೆಗಳಿಂದ ಎರಡು ಲೆಕ್ಕಗಳ ಸಲ್ಲಿಕೆಬಾಕಿ ಉಳಿದಿವೆ. ವಿದ್ಯುತ್ ವಲಯವನ್ನು ಹೊರತುಪಡಿಸಿ, 95 ಸಕ್ರಿಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ, 50 ಸಕ್ರಿಯ ಉದ್ದಿಮೆಗಳಿಂದ 78 ಲೆಕ್ಕಗಳ ಸಲ್ಲಿಕೆಬಾಕಿ ಉಳಿದಿದೆ. ಲೆಕ್ಕ ಸಲ್ಲಿಕೆಯ ಬಾಕಿಯು ಒಂದರಿಂದ 6 ವರ್ಷಗಳಿಗೆ ಸಂಬಂಧಿಸಿದೆ. 52 ಉದ್ದಿಮೆಗಳ ಪೈಕಿ 28 ಉದ್ದಿಮೆಗಳಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸದ ವರ್ಷಗಳಲ್ಲಿ ರಾಜ್ಯ ಸರ್ಕಾರವು ₹6,779.04 ಕೋಟಿ ನಿವ್ವಳ ಹೂಡಿಕೆ ಮಾಡಿದೆ. ಆದ್ದರಿಂದ, ಲೆಕ್ಕಪರಿಶೋಧನೆಯು ಅದರ ಲೆಕ್ಕಪತ್ರ ನಿರ್ವಹಣೆ ಮತ್ತು ಬಳಕೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ

### *2.5.4.4 ಅಪೂರ್ಣ ಯೋಜನೆಗಳಲ್ಲಿ ಬಂಧಿತವಾಗಿರುವ ಬಂಡವಾಳ ವೆಚ್ಚ*

ಅಪೂರ್ಣ ಕಾಮಗಾರಿಗಳಲ್ಲಿ ತೊಡಗಿಸಿದ ಹಣವು ಬಂಧಿತವಾಗಿರುವುದು– ಇದರಲ್ಲಿ ದಾವೆ ಮುಂತಾದ ಕಾರಣಗಳಿಂದಾಗಿ ಸ್ಥಗಿತಗೊಂಡ ಕಾಮಗಾರಿಗಳು ಸೇರಿವೆ–ವೆಚ್ಚದ ಗುಣಮಟ್ಟವನ್ನು ಋಣಾತ್ಮಕವಾಗಿ ಬಾಧಿಸುತ್ತದೆ. 31 ಮಾರ್ಚ್ 2020 ರಲ್ಲಿದ್ದಂತೆ ಅಪೂರ್ಣ ಯೋಜನೆಗಳ ವರ್ಷವಾರು ಕಾಲಾನುಕ್ರಮ ವಿವರವನ್ನು **ಕೋಷ್ಟಕ–2.26**ರಲ್ಲಿ ತೋರಿಸಲಾಗಿದೆ ಮತ್ತು ಇಲಾಖಾವಾರು ಮಾಹಿತಿಯನ್ನು **ಕೋಷ್ಟಕ–2.27** ರಲ್ಲಿ ನೀಡಲಾಗಿದೆ.

**ಕೋಷ್ಟಕ–2.26: 31 ಮಾರ್ಚ್ 2020ರಲ್ಲಿದ್ದಂತೆ ಒಂದು ಕೋಟಿಗೂ ಅಧಿಕವಾಗಿರುವ ಅಪೂರ್ಣ ಯೋಜನೆಗಳ ಕಾಲಚಿತ್ರಣ (₹ ಕೋಟಿಗಳಲ್ಲಿ)**

| ಈ ವರ್ಷದ ಕೊನೆಯಲ್ಲಿ | ಅಪೂರ್ಣ ಯೋಜನೆಗಳ ಸಂಖ್ಯೆ | ಅಂದಾಜು ವೆಚ್ಚ | ವೆಚ್ಚ |
|---|---|---|---|
| **2012–13** | 4 | 7.10 | 7.36 |
| **2013–14** | 4 | 12.79 | 9.90 |
| **2014–15** | 20 | 128.60 | 126.46 |
| **2015–16** | 31 | 179.01 | 87.14 |
| **2016–17** | 94 | 278.52 | 243.00 |
| **2017–18** | 62 | 255.72 | 208.67 |
| **2018–19** | 398 | 1,952.51 | 1,080.35 |
| **2019–20** | 365 | 1,542.81 | 578.17 |
| **ಒಟ್ಟು** | **978** | **4,358.06** | **2,341.06** |

**ಕೋಷ್ಟಕ–2.27: 31 ಮಾರ್ಚ್ 2020ರಲ್ಲಿದ್ದಂತೆ ಒಂದು ಕೋಟಿಗೂ ಅಧಿಕವಾಗಿರುವ ಅಪೂರ್ಣ ಯೋಜನೆಗಳ ಇಲಾಖಾವಾರು ವಿವರ (₹ ಕೋಟಿಗಳಲ್ಲಿ)**

| ಇಲಾಖೆಯಡಿ | ಅಪೂರ್ಣ ಯೋಜನೆಗಳ ಸಂಖ್ಯೆ | ಅಂದಾಜು ವೆಚ್ಚ | ವೆಚ್ಚ |
|---|---|---|---|
| **ರಸ್ತೆಗಳು ಮತ್ತು ಸೇತುವೆಗಳು** | 856 | 3,847.79 | 1,942.89 |
| **ನೀರಾವರಿ** | 76 | 140.37 | 104.36 |
| **ಕಟ್ಟಡಗಳು** | 39 | 136.10 | 95.41 |
| **ಇತರೆ** | 7 | 233.81 | 198.40 |
| **ಒಟ್ಟು** | **978** | **4,358.06** | **2,341.06** |

ಆಕರ : ಹಣಕಾಸು ಲೆಕ್ಕಗಳು

2020 ರ ಮಾರ್ಚ್ ಅಥವಾ ಅದಕ್ಕೂ ಮೊದಲು ಪೂರ್ಣಗೊಳ್ಳಬೇಕೆಂದು ನಿಗದಿಪಡಿಸಲಾಗಿದ್ದ 978 ಕಾಮಗಾರಿಗಳಿಗೆ ಸಂಬಂಧಿಸಿದಂತೆ ₹4,358.06 ಕೋಟಿಗಳ ಆರಂಭಿಕ ಅಂದಾಜಿಗೆ ಪ್ರತಿಯಾಗಿ, ಸಂಚಿತ ವೆಚ್ಚವು ₹2,341.06 ಕೋಟಿಗಳಷ್ಟಾಗಿದೆ. 28 ಯೋಜನೆಗಳಲ್ಲಿ ವಿಳಂಬವು ಐದು ವರ್ಷಗಳಿಗಿಂತ

ಹೆಚ್ಚಾಗಿದ್ದು 585 ಕಾಮಗಾರಿಗಳಲ್ಲಿ ವಿಳಂಬವು ಐದು ವರ್ಷಗಳಿಗಿಂತ ಕಡಿಮೆ ಆದರೆ ಒಂದು ವರ್ಷಕ್ಕಿಂತ ಹೆಚ್ಚಿನದಾಗಿದೆ ಮತ್ತು 365 ಕಾಮಗಾರಿಗಳಲ್ಲಿ ಒಂದು ವರ್ಷಕ್ಕಿಂತ ಕಡಿಮೆ ವಿಳಂಬವಾಗಿದೆ. ಕಾಮಗಾರಿ ಪೂರ್ಣಗೊಳ್ಳಲು ವಿಳಂಬವಾಗಲು ಯಾವುದೇ ಕಾರಣಗಳನ್ನು ಲೋಕೋಪಯೋಗಿ ಮತ್ತು ಬಂದರು ಮತ್ತು ಒಳನಾಡು ಜಲ ಸಾರಿಗೆ ಮತ್ತು ನೀರಾವರಿ ಇಲಾಖೆಗಳು ನೀಡಿಲ್ಲ.

31.03.2020 ರಂದು ಅಪೂರ್ಣವಾಗಿರುವ 978 ಯೋಜನೆಗಳಲ್ಲಿ, ಶೇಕಡಾ 20ರಷ್ಟು ಯೋಜನೆಗಳು ಮೂರು ವರ್ಷಗಳಿಗಿಂತ ಹೆಚ್ಚು ಕಾಲದಿಂದ ಅಪೂರ್ಣವಾಗಿಯೇ ಉಳಿದಿವೆ. ಸಮಯ ಮತ್ತು ವೆಚ್ಚದ ಒತ್ತಡವನ್ನು ಕಡಿಮೆ ಮಾಡಲು, ಪೂರ್ಣಗೊಳ್ಳುವ ಹಂತದಲ್ಲಿರುವ ಯೋಜನೆಗಳಿಗೆ ಆದ್ಯತೆಯ ಮೇರೆಗೆ ಹಣವನ್ನು ಒದಗಿಸಬೇಕೆಂದು ಎಂದು ಎಫ್‌ಎಂಆರ್‌ಸಿಯು ಸಲಹೆ ನೀಡಿದೆ (ಜುಲೈ 2018). ಆದಾಗ್ಯೂ, 31 ಮಾರ್ಚ್ 2019ರ ವೇಳೆಗೆ ಇದ್ದ 878 ಅಪೂರ್ಣ ಯೋಜನೆಗಳ ಸಂಖ್ಯೆಯು 31 ಮಾರ್ಚ್ 2020ರವರೆಗೆ 978ಕ್ಕೆ ಏರಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ.

ಇದಲ್ಲದೆ, ಆಯಾ ವರ್ಷಗಳಲ್ಲಿ ಈ ಯೋಜನೆಗಳ ಅನುಷ್ಠಾನಕ್ಕಾಗಿ ಪಡೆದ ಸಾಲದ ಹಣವು ನಿರರ್ಥಕವೆಂದು ಸಾಬೀತಾಗಿರುವುದಲ್ಲದೆ ಸಾಲ ಮತ್ತು ಆಂತರಿಕ ಹೊಣೆಗಾರಿಕೆಗಳ ತೀರುವಳಿಯ ವಿಷಯದಲ್ಲಿ ರಾಜ್ಯವು ಹೆಚ್ಚುವರಿ ಹೊರೆಯನ್ನು ಹಂಚಿಕೊಳ್ಳಬೇಕಾಗಿದೆ. ಸಮಯದ ಅತಿಕ್ರಮಣದಿಂದಾಗಿ ವೆಚ್ಚವು ಅತಿಕ್ರಮಿಸುವುದನ್ನು ತಪ್ಪಿಸಲು ಮೇಲಿನ ಎಲ್ಲಾ ಯೋಜನೆಗಳನ್ನು ಹೆಚ್ಚಿನ ವಿಳಂಬವಿಲ್ಲದೆ ಪೂರ್ಣಗೊಳಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

ಆರ್ಥಿಕ ಇಲಾಖೆಯು ನಿರ್ಗಮನ ಸಭೆಯಲ್ಲಿ (ಫೆಬ್ರವರಿ 2021) ಅವಲೋಕನವನ್ನು ಗಮನಿಸಲಾಗಿದೆ ಮತ್ತು ಈ ವಿಚಾರವನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದೆ.

### *2.5.5 ವೆಚ್ಚ ಆದ್ಯತೆಗಳು*

ಸಾಮಾಜಿಕ ವಲಯ ಮತ್ತು ಆರ್ಥಿಕ ಮೂಲಸೌಕರ್ಯಕ್ಕೆ ಸಂಬಂಧಿಸಿದ ವೆಚ್ಚ ಜವಾಬ್ದಾರಿಗಳು ಹೆಚ್ಚಾಗಿ ರಾಜ್ಯದವಿಷಯಗಳಾಗಿವೆ. ಮಾನವ ಅಭಿವೃದ್ಧಿ ಮಟ್ಟವನ್ನು ವರ್ಧಿಸಲು ರಾಜ್ಯಗಳು ಶಿಕ್ಷಣ, ಆರೋಗ್ಯ ಮುಂತಾದ ಪ್ರಮುಖ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚವನ್ನು ಹೆಚ್ಚಿಸಬೇಕಾಗುತ್ತದೆ. ಕಡಿಮೆ ಹಣಕಾಸಿನ ಆದ್ಯತೆಯನ್ನು (ಒಟ್ಟು ವೆಚ್ಚಕ್ಕೆ ವೆಚ್ಚವರ್ಗದ ಅನುಪಾತ) ಆ ನಿರ್ದಿಷ್ಟ ವೆಚ್ಚ ಶೀರ್ಷಿಕೆಯು ಸಾಮಾನ್ಯ ವರ್ಗ ರಾಜ್ಯಗಳ (ಜಿಸಿಎಸ್)/ರಾಷ್ಟ್ರೀಯ ಸರಾಸರಿಗಿಂತ ಕೆಳಗಿದ್ದರೆ ಒಂದು ನಿರ್ದಿಷ್ಟ ವಲಯಕ್ಕೆ ನೀಡಲಾಗುತ್ತದೆ. ಒಟ್ಟು ವೆಚ್ಚಗಳಿಗೆ ಈ ಘಟಕಗಳ ಅನುಪಾತವು ಹೆಚ್ಚಾಗಿದ್ದರೆ ವೆಚ್ಚದ ಗುಣಮಟ್ಟವು ಉತ್ತಮವಾಗಿದೆಯೆಂದು ಪರಿಗಣಿಸಲಾಗುತ್ತದೆ. ಪ್ರಸಕ್ತ 2019–20ನೇ ಸಾಲಿನಲ್ಲಿ ಸಾಮಾನ್ಯ ವರ್ಗ ರಾಜ್ಯಗಳಿಗೆ ಮತ್ತು ನೆರೆಯ ರಾಜ್ಯಗಳಿಗೆ ಸಾಪೇಕ್ಷವಾಗಿ ಅಭಿವೃದ್ಧಿ ವೆಚ್ಚಗಳು, ಸಾಮಾಜಿಕ ವೆಚ್ಚಗಳು ಮತ್ತು ಬಂಡವಾಳ ವೆಚ್ಚಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಹಣಕಾಸಿನ ಆದ್ಯತೆಯನ್ನು **ಕೋಷ್ಟಕ–2.28** ವಿಶ್ಲೇಷಿಸುತ್ತದೆ.

**ಕೋಷ್ಟಕ 2.28: 2019–20ರಲ್ಲಿ ರಾಜ್ಯಗಳ ಹಣಕಾಸಿನ ಆದ್ಯತೆ**

(ಶತಾಂಶವಾಗಿ)

| | ಒವೆ/ರಾಒಆಉ | ಬಂವೆ/ಒವೆ | ಅವೆ/ಒವೆ | ಶಿಕ್ಷಣ/ಒವೆ | ಆರೋಗ್ಯ/ಒವೆ |
|---|---|---|---|---|---|
| ಸಾಮಾನ್ಯ ವರ್ಗದ ರಾಜ್ಯಗಳು | 15.15 | 12.97 | 65.42 | 15.91 | 5.21 |
| ಕೇರಳ* | 13.39 | 7.39 | 46.06 | 16.40 | 6.59 |
| ತಮಿಳುನಾಡು | 13.01 | 10.68 | 60.38 | 16.20 | 5.13 |
| ಆಂಧ್ರಪ್ರದೇಶ | 15.94 | 7.89 | 68.39 | 17.18 | 4.86 |
| ತೆಲಂಗಾಣ | 13.86 | 12.55 | 72.27 | 9.33 | 5.14 |
| ಮಹಾರಾಷ್ಟ್ರ | 11.77 | 10.75 | 63.66 | 18.47 | 4.34 |
| ಮಧ್ಯಪ್ರದೇಶ | 19.93 | 16.19 | 57.96 | 15.93 | 4.70 |
| ಕರ್ನಾಟಕ | 12.59 | 18.52 | 73.80 | 12.96 | 4.28 |

ಆಕರ: ಆರ್ಥಿಕ ಸಲಹೆಗಾರರು

*ಕೇರಳದ ರಾಒಆಂಉಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ಮಹಾಲೇಖಾಪಾಲರು, ಕೇರಳರವರಿಂದ ಪಡೆಯಲಾಗಿದೆ.
ಒವೆ: ಒಟ್ಟು ವೆಚ್ಚ, ಬಂವೆ: ಬಂಡವಾಳ ವೆಚ್ಚ, ಅವೆ: ಅಭಿವೃದ್ಧಿ ವೆಚ್ಚ (ಸಾಮಾಜಿಕ ಮತ್ತು ಆರ್ಥಿಕ ವಲಯಗಳ ಒಟ್ಟು ವೆಚ್ಚವನ್ನು ಒಳಗೊಂಡಿದೆ.)
ರಾಒಆಂಉಕ್ಕೆ ಸಂಬಂಧಿಸಿದಂತೆ, ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ವೆಬ್‌ಸೈಟ್‌ನಲ್ಲಿ 31.07.2020 ರಂದು ಲಭ್ಯವಿರುವಂತೆ ದತ್ತಾಂಶ.

2019ನೇ ವರ್ಷದ ತುಲನಾತ್ಮಕ ವಿಶ್ಲೇಷಣೆಯು ಕೆಳಗಿನ ಅಂಶಗಳನ್ನು ವ್ಯಕ್ತಪಡಿಸಿದೆ.

- ರಾಜ್ಯದ ಬಂಡವಾಳ ವೆಚ್ಚ ಮತ್ತು ಅಭಿವೃದ್ಧಿ ವೆಚ್ಚ, ಒಟ್ಟಾರೆ ವೆಚ್ಚದ ಅನುಪಾತವು ಸಾಮಾನ್ಯ ವರ್ಗದ ರಾಜ್ಯಗಳ ಅನುಪಾತಕ್ಕಿಂತ ಅಧಿಕವಾಗಿದ್ದು ಇದು ವೆಚ್ಚದ ಗುಣಮಟ್ಟವು ಉತ್ತಮವಾಗಿರುವುದನ್ನು ಸೂಚಿಸುತ್ತದೆ.
- ರಾಜ್ಯವು ಬಂಡವಾಳ ವೆಚ್ಚಕ್ಕೆ ಹೆಚ್ಚಿನ ಅವಕಾಶದ ಆದ್ಯತೆ ಒದಗಿಸಿದ್ದು, ಇದರ ಒಟ್ಟಾರೆ ವೆಚ್ಚದ ಅನುಪಾತವು ನೆರೆ ರಾಜ್ಯಗಳಿಗೆ ಹೋಲಿಸಿದರೆ ಅಧಿಕವಾಗಿದ್ದು, ಒಟ್ಟಾರೆ ವೆಚ್ಚವು ರಾಒಆಂಉಕ್ಕಿಂತ ಕಡಿಮೆಯಾಗಿರುವುದು ಕಾರಣವಾಗಿದೆ (ಶೇಕಡ 12.59).
- ಶಿಕ್ಷಣ ಮತ್ತು ಆರೋಗ್ಯ ವಲಯಗಳ ವೆಚ್ಚವುನೆರೆ ರಾಜ್ಯಗಳಈ ವಲಯಗಳು ಮತ್ತು ಸಾಮಾನ್ಯ ವರ್ಗದ ರಾಜ್ಯಗಳ ವೆಚ್ಚಗಳಿಗಿಂತ ಕಡಿಮೆ ಇದ್ದು, ಈ ವಲಯಗಳಿಗೆ ಸಾಕಷ್ಟು ಪ್ರಾಮುಖ್ಯತೆ ಕೊಡುವ ಅವಶ್ಯಕತೆ ಇದೆ.
- 2014–15 ರಿಂದ 2019–20ರ ಶಿಕ್ಷಣ ಮತ್ತು ಆರೋಗ್ಯ ವಲಯಗಳ ವೆಚ್ಚ ಹಾಗೂ ಒಟ್ಟಾರೆ ವೆಚ್ಚದ ಅನುಪಾತದ ಪ್ರವೃತ್ತಿಯು, 2018–19ರವರೆಗೆ ಶಿಕ್ಷಣ ವಲಯದಲ್ಲಿ ಕಡಿಮೆ ಪ್ರಾಮುಖ್ಯತೆಯನ್ನು ತೋರಿಸಿದೆ ಮತ್ತು ಆರೋಗ್ಯ ವಲಯದಡಿ ಪ್ರಾಮುಖ್ಯತೆಯಲ್ಲಿ ಮಹತ್ತರ ಬದಲಾವಣೆ ಕಂಡು ಬಂದಿಲ್ಲ. ಆದಾಗ್ಯೂ, 2019–20ರಲ್ಲಿ ಶಿಕ್ಷಣ ವಲಯದ ಪ್ರಾಮುಖ್ಯತೆಯಲ್ಲಿ ಸ್ವಲ್ಪ ಏರಿಕೆ ಕಂಡಿದ್ದು, ಆರೋಗ್ಯ ವಲಯದ ಪ್ರಾಮುಖ್ಯತೆಯಲ್ಲಿ ಇಳಿಕೆ ಕಂಡಿದೆ.
- ರಾಜ್ಯದ ಅಭಿವೃದ್ಧಿ ವೆಚ್ಚ/ಒಟ್ಟಾರೆ ವೆಚ್ಚದ ಅನುಪಾತವು ನೆರೆ ರಾಜ್ಯಗಳು ಮತ್ತು ಸಾಮಾನ್ಯ ವರ್ಗದ ರಾಜ್ಯಗಳಿಗಿಂತ ಹೆಚ್ಚಾಗಿದ್ದು, ಇದು ಪ್ರಮುಖವಾಗಿ ಆರ್ಥಿಕ ಸೇವೆಗಳ ವಲಯ/ಒಟ್ಟಾರೆ ವೆಚ್ಚದ ಹೆಚ್ಚಿನ ಅನುಪಾತದಿಂದ ಉಂಟಾಗಿದೆ.

## 2.6 ಸಾರ್ವಜನಿಕ ಲೆಕ್ಕ

ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿ ಮೀಸಲು ನಿಧಿ, ಠೇವಣಿ, ಅಮಾನತ್ತು, ಇರಸಾಲು ಮುಂತಾದ ಕೆಲವು ಸಂಚಿತನಿಧಿಯ ಭಾಗವಾಗದ ವಹಿವಾಟುಗಳಿಗೆ ಸಂಬಂಧಿಸಿದ ಸ್ವೀಕೃತಿ ಮತ್ತು ವಿತರಣೆಗಳನ್ನು ಸಂವಿಧಾನದ ಅನುಚ್ಛೇದ 266(2)ರ ಅನ್ವಯ ಸ್ಥಾಪಿಸಲಾದ ಸಾರ್ವಜನಿಕ ಲೆಕ್ಕದಲ್ಲಿ ಇರಿಸಲಾಗುತ್ತದೆ.ಮತ್ತು ಈ ವಹಿವಾಟುಗಳು ರಾಜ್ಯ ವಿಧಾನಸಭೆಯ ಮತಕ್ಕೆ ಒಳಪಡುವುದಿಲ್ಲ. ಈ ವಹಿವಾಟುಗಳು ಕೇವಲ ವಹಿವಾಟುಗಳಾಗಿ ಹಾದುಹೋಗುವುದರಿಂದ ಸರ್ಕಾರವು ಸಾರ್ವಜನಿಕ ಹಣದ ಪಾಲನೆಗಾಗಿ ಬ್ಯಾಂಕರ್/ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತದೆ.

### *2.6.1 ನಿವ್ವಳ ಸಾರ್ವಜನಿಕ ಲೆಕ್ಕ ಶಿಲ್ಕುಗಳು*

ಸಾರ್ವಜನಿಕ ಲೆಕ್ಕ ಅಡಿಯಲ್ಲಿ 2015–16ರಿಂದ 2019–20ರ ಅವಧಿಯ ನಿವ್ವಳ ವಹಿವಾಟುಗಳನ್ನು **ಕೋಷ್ಟಕ–2.29**ರಲ್ಲಿನೀಡಲಾಗಿದೆ. ಮತ್ತು ಸಾರ್ವಜನಿಕ ಲೆಕ್ಕಶಿಲ್ಕುಗಳ ಸಂಯೋಜನೆಯಲ್ಲಿನ ವಾರ್ಷಿಕ ಬದಲಾವಣೆಗಳನ್ನು **ನಕ್ಷೆ–2.13**ರಲ್ಲಿ ಚಿತ್ರಿಸಲಾಗಿದೆ.

**ಕೋಷ್ಟಕ–2.29: ವರ್ಷದ ಮಾರ್ಚ್ 31ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕದಲ್ಲಿ ಘಟಕವಾರು ನಿವ್ವಳ ಶಿಲ್ಕು**

(₹ ಕೋಟಿಗಳಲ್ಲಿ)

| ವಲಯ | ಉಪವಲಯ | 2015–16 | 2016–17 | 2017–18 | 2018–19 | 2019–20 |
|---|---|---|---|---|---|---|
| I -ಸಣ್ಣ ಉಳಿತಾಯಗಳು, ಭವಿಷ್ಯನಿಧಿ, ಮುಂತಾದವುಗಳು | ಸಣ್ಣ ಉಳಿತಾಯಗಳು, ಭವಿಷ್ಯನಿಧಿ, ಮುಂತಾದವುಗಳು | 2,086 | 2,657 | 2,811 | 3,292 | 4,156 |
| J - ಮೀಸಲು ನಿಧಿಗಳು | (ಎ) ಬಡ್ಡಿ ಹೊಂದಿರುವ ಮೀಸಲು ನಿಧಿಗಳು | – | 1,236 | (–)1,194 | 393 | 839 |
| | (ಬಿ) ಬಡ್ಡಿ ಹೊಂದಿರದ ಮೀಸಲು ನಿಧಿಗಳು | 2,081 | 4,777 | 4,212 | 2,804 | 3,889 |
| K - ಠೇವಣಿಗಳು ಮತ್ತು ಮುಂಗಡಗಳು | (ಎ) ಬಡ್ಡಿ ಹೊಂದಿರುವ ಠೇವಣಿಗಳು | 14 | 48 | (–) 3 | 62 | 99 |
| | (ಬಿ) ಬಡ್ಡಿ ಹೊಂದಿರದ ಠೇವಣಿಗಳು | 270 | 2,994 | 1,837 | 3,006 | 3,074 |
| | (ಸಿ) ಮುಂಗಡಗಳು | – | – | – | – | – |
| L -ಅಮಾನತ್ತು ಮತ್ತು ಇತರೆ | (ಎ) ಅಮಾನತ್ತು | (–) 4 | 87 | 17 | (–) 15 | 178 |
| | (ಬಿ) ಇತರೆ ಲೆಕ್ಕಗಳು | 995 | 404 | (–)1,526 | (–)6,072 | (–)1,542 |
| | (ಸಿ) ಹೊರದೇಶಗಳ ಸರ್ಕಾರಗಳೊಂದಿಗಿನ ಲೆಕ್ಕಗಳು | – | – | – | – | – |
| | (ಡಿ) ಇತರೆ | – | – | – | – | – |
| M -ಇರಸಾಲುಗಳು | (ಎ) ಮನಿ ಆರ್ಡರ್‌ಗಳು ಮತ್ತು ಇತರೆ ಇರಸಾಲುಗಳು | (–) 18 | (–) 20 | (–) 51 | (–) 81 | (–) 263 |
| | (ಬಿ) ಅಂತರ ಸರ್ಕಾರಿ ಹೊಂದಾಣಿಕೆ ಲೆಕ್ಕ | 1 | (–) 18 | (–) 25 | 42 | (–) 84 |
| **ಒಟ್ಟು** | | **5,425** | **12,165** | **6,078** | **3,431** | **10,346** |

*ಟಿಪ್ಪಣಿ: + ಧನಾತ್ಮಕ ಶಿಲ್ಕನ್ನು ಮತ್ತು – ಋಣಾತ್ಮಕ ಶಿಲ್ಕನ್ನು ಸೂಚಿಸುತ್ತದೆ.*

ನಕ್ಷೆ–2.13 :ಸಾರ್ವಜನಿಕ ಲೆಕ್ಕದಲ್ಲಿನ ಶಿಲ್ಕುಗಳ ಸಂಯೋಜನೆಯಲ್ಲಿ ವಾರ್ಷಿಕ ಬದಲಾವಣೆಗಳು

(₹ ಕೋಟಿಗಲ್ಲಿ)




ಸಾರ್ವಜನಿಕ ಲೆಕ್ಕದ ನಿವ್ವಳ ಸ್ವೀಕೃತಿಗಳು 2015–16ರಲ್ಲಿದ್ದ ₹5,425 ಕೋಟಿಯಿಂದ 2019–20ರಲ್ಲಿ ₹10,346 ಕೋಟಿಗೆ ಏರಿದೆ. ಹಿಂದಿನ ವರ್ಷಕ್ಕಿಂತ 2019–20ರಲ್ಲಿಯ (₹.6,915 ಕೋಟಿ) ನಿವ್ವಳ ಹೆಚ್ಚಳವು ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿಗಳು ಮತ್ತು ಬಡ್ಡಿರಹಿತ ಮೀಸಲು ನಿಧಿಗಳು ಅಡಿಯಲ್ಲಿ ಉಂಟಾಗಿದೆ. ಮೀಸಲು ನಿಧಿಗಳು, ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿಯ ಅಡಿಯಲ್ಲಿ

ನಿಧಿಗಳ ನಿವ್ವಳ ಲಭ್ಯತೆಯು ವಿತ್ತೀಯ ಕೊರತೆಯನ್ನು ನೀಗಿಸುವಲ್ಲಿ ಪ್ರಮುಖ ಪಾಲನ್ನು ಹೊಂದಿದೆ. ಅಮಾನತ್ತು ಮತ್ತು ಇತರೆ ಅಡಿಯಲ್ಲಿ, ನಗದೀಕರಿಸದ ಚೆಕ್‌ಗಳಿಗೆ ಸಂಬಂಧಿಸಿದ ವಹಿವಾಟುಗಳಲ್ಲಿ ಇಳಿಕೆ ಕಂಡುಬಂದಿದೆ, ಇದು 2018–19ರ ಅವಧಿಯ ₹6,072 ಕೋಟಿಗೆ ಹೋಲಿಸಿದರೆ 2019–20ರಲ್ಲಿ ₹1,543 ಕೋಟಿಗಳಷ್ಟಿತ್ತು.

### *2.6.2 ಮೀಸಲು ನಿಧಿಗಳು*

ರಾಜ್ಯ ಸರ್ಕಾರದ (ಸಾರ್ವಜನಿಕ ಲೆಕ್ಕ) ಲೆಕ್ಕಗಳಲ್ಲಿ ವಿಭಾಗ 'ಜೆ' ಅಡಿಯಲ್ಲಿ ನಿರ್ದಿಷ್ಟ ಮತ್ತು ವಿಶಿಷ್ಟ ಉದ್ದೇಶಗಳಿಗಾಗಿ ಮೀಸಲು ನಿಧಿಯನ್ನು ಸ್ಥಾಪಿಸಲಾಗಿದೆ. ಈ ನಿಧಿಯನ್ನು ಭಾರತದ ಅಥವಾ ರಾಜ್ಯದ ಸಂಚಿತ ನಿಧಿಯಿಂದ ಅಥವಾ ಹೊರಗಿನ ಏಜೆನ್ಸಿಗಳ ಕೊಡುಗೆಗಳು ಅಥವಾ ಅನುದಾನದಿಂದ ತುಂಬಲಾಗುತ್ತದೆ. ವಂತಿಗೆಗಳನ್ನು ಸಂಚಿತ ನಿಧಿಯ ಅಡಿಯಲ್ಲಿ ವೆಚ್ಚ ಎಂದು ಪರಿಗಣಿಸಲಾಗುತ್ತದೆ. ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಆರಂಭದಲ್ಲಿ ಸಂಚಿತ ನಿಧಿಯ ಅಡಿಯಲ್ಲಿ ಲೆಕ್ಕ ಹಾಕಲಾಗುತ್ತದೆ, ಇದಕ್ಕಾಗಿ ಶಾಸಕಾಂಗದ ಅನುಮೋದನೆಯನ್ನು ಪಡೆಯಲಾಗುತ್ತದೆ. ವರ್ಷದ ಕೊನೆಯಲ್ಲಿ, ಲೆಕ್ಕಗಳನ್ನು ಅಂತಿಮಗೊಳಿಸುವ ಸಮಯದಲ್ಲಿ, ನಿಧಿಗೆ ಸಂಬಂಧಿಸಿದ ವೆಚ್ಚವನ್ನು ಸಾರ್ವಜನಿಕ ಲೆಕ್ಕಕ್ಕೆ ವರ್ಗಾಯಿಸಲಾಗುತ್ತದೆ. ಮೀಸಲು ನಿಧಿಗಳನ್ನು 'ಬಡ್ಡಿ ಸಹಿತ ನಿಧಿಗಳು' ಮತ್ತು 'ಬಡ್ಡಿ ರಹಿತ ನಿಧಿಗಳು' ಎಂದು ವರ್ಗೀಕರಿಸಬಹುದು.

ಸರ್ಕಾರದ ಹೊಣೆಗಾರಿಕೆಯ ಮೇಲೆ ಪರಿಣಾಮ ಬೀರುವ ಕೆಲವು ಪ್ರಮುಖ ಮೀಸಲು ನಿಧಿಗಳ ವೆಚ್ಚಗಳ ವಿಶ್ಲೇಷಣೆಯನ್ನು ಕೆಳಗೆ ವಿವರಿಸಲಾಗಿದೆ.

#### *(ಅ) ಕ್ರೋಢೀಕೃತ ಋಣ ಪರಿಹಾರ ನಿಧಿ*

ಹನ್ನೆರಡನೆ ಹಣಕಾಸು ಆಯೋಗವು ಶಿಫಾರಸು ಮಾಡಿದಂತೆ ರಾಜ್ಯ ಸರ್ಕಾರವು ಎಲ್ಲಾ ಸಾಲಗಳ ಮರುಪಾವತಿಗಾಗಿ 2012–13ರಲ್ಲಿ ಒಂದು ಕ್ರೋಢೀಕೃತ ಋಣ ಪರಿಹಾರ ನಿಧಿಯನ್ನು ಸ್ಥಾಪಿಸಿ ₹1,000 ಕೋಟಿಗಳನ್ನು ನಿಧಿಯ ಮೂಲಧನಕ್ಕೆ ವರ್ಗಾಯಿಸಿತು. ಈ ನಿಧಿಯನ್ನು ಭಾರತೀಯ ರಿಜರ್ವ್ ಬ್ಯಾಂಕ್ ನಿರ್ವಹಿಸುತ್ತದೆ ಮತ್ತು ಮೂಲಧನವನ್ನು ಭಾರತ ಸರ್ಕಾರದ ಭದ್ರತೆಗಳಲ್ಲಿ ಹೂಡಿಕೆ ಮಾಡಲಾಗಿದೆ. ಸರ್ಕಾರದ ಅಧಿಸೂಚನೆಯ ಪ್ರಕಾರ (ಫೆಬ್ರವರಿ 2013), ಹಿಂದಿನ ಹಣಕಾಸು ವರ್ಷದ ಅಂತ್ಯದಲ್ಲಿ ರಾಜ್ಯ ಸರ್ಕಾರವು ಬಾಕಿ ಇರುವ ಜವಾಬ್ದಾರಿಗಳ ಶೇಕಡಾ 0.50 ರಷ್ಟು (ಆಯವ್ಯಯ ಹೊರಗಿನ ಸಾಲಗಳನ್ನು ಹೊರತುಪಡಿಸಿ) ನಿಧಿಗೆ ಕನಿಷ್ಠ ವಾರ್ಷಿಕ ವಂತಿಗೆಯನ್ನು ನೀಡಬೇಕು. 2019–20ನೇ ಸಾಲಿಗೆ ಅಗತ್ಯವಿದ್ದ ₹1,351.88 ಕೋಟಿ ಗಳಿಗೆ ಪ್ರತಿಯಾಗಿ ರಾಜ್ಯ ಸರ್ಕಾರವು ಪ್ರಧಾನ ಲೆಕ್ಕ ಶೀರ್ಷಿಕೆ 2048–ಕ್ರೋಢೀಕೃತ ಋಣ ಪರಿಹಾರ ನಿಧಿಗೆ ವಂತಿಗೆ ಅಡಿಯಲ್ಲಿ ₹350.00 ಕೋಟಿಗಳನ್ನು ನೀಡಿದೆ.

ಹದಿನಾಲ್ಕನೆಯ ಹಣಕಾಸು ಆಯೋಗವು ಕ್ರೋಢೀಕೃತ ಋಣ ಪರಿಹಾರ ನಿಧಿಯು ವಿವೇಚನಾಯುಕ್ತ ಹಣಕಾಸು ನಿರ್ವಹಣೆಯ ಒಂದು ಸಮಗ್ರ ಭಾಗವಾಗಿದೆ ಎಂದು ತನ್ನ ವರದಿಯಲ್ಲಿ ವಿಶ್ಲೇಷಿಸಿದೆ. ಕ್ರೋಢೀಕೃತ ಋಣ ಪರಿಹಾರ ನಿಧಿಯು ಹಣಕಾಸಿನ/ಮಾರುಕಟ್ಟೆ ಒತ್ತಡದ ಸಮಯದಲ್ಲಿ ಮರುಪಾವತಿ ಹೊಣೆಗಾರಿಕೆಗಳನ್ನು ಪೂರೈಸಲು ಒಂದು ಆಧಾರವನ್ನು ಕಲ್ಪಿಸುತ್ತದೆ ಮತ್ತು ಹೂಡಿಕೆದಾರರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ ಮತ್ತು ಆ ಮೂಲಕ ಪ್ರಾಥಮಿಕ ಮಾರುಕಟ್ಟೆಯಲ್ಲಿ ಸಾಮಾನ್ಯ ಸಮಯದಲ್ಲೂ ಸಹ ಸಮಂಜಸವಾದ ವೆಚ್ಚದಲ್ಲಿ ಸಾಲ ಪಡೆಯಲು ಅನುಕೂಲವಾಗುತ್ತದೆ. ಲೆಕ್ಕ ಪುಸ್ತಕಗಳ ಪ್ರಕಾರ ವರ್ಷದ ಕೊನೆಯಲ್ಲಿ ನಿಧಿಯ ಅಡಿಯಲ್ಲಿಯ ಶಿಲ್ಕು ₹3,120 ಕೋಟಿಗಳಷ್ಟಿತ್ತು.

2019–20ರ ಅವಧಿಯಲ್ಲಿ ₹452.45 ಕೋಟಿಗಳ ಸಂಚಿತ ಬಡ್ಡಿಯನ್ನು ಸರ್ಕಾರಿ ಭದ್ರತೆಗಳಲ್ಲಿ ಹೂಡಿಕೆ ಮಾಡಲಾಗಿದೆ. ಆದಾಗ್ಯೂ, 2012–13 ರಿಂದ 2019–20ರ ಅವಧಿಯಲ್ಲಿ ಮಾಡಿದ ಹೂಡಿಕೆಯ ಮೇಲೆ ಪಡೆದ ₹1,220.73 ಕೋಟಿಗಳ ಬಡ್ಡಿಯು ಸರ್ಕಾರಿ ಲೆಕ್ಕಪುಸ್ತಕಗಳಲ್ಲಿ ದಾಖಲಾಗಿಲ್ಲ ಮತ್ತು ಕ್ರೋಢೀಕೃತ ಋಣ ಪರಿಹಾರ ನಿಧಿಯಲ್ಲಿಮರುಹೂಡಿಕೆಯಾಗಿದೆ. ರಾಜ್ಯ ಸಂಚಿತ ನಿಧಿಯಡಿ ಬಡ್ಡಿಯನ್ನು ಲೆಕ್ಕಹಾಕಲು ರಾಜ್ಯ ಸರ್ಕಾರವು ಸಮ್ಮತಿಸಿದೆ ಮತ್ತು ಈ ಬಗ್ಗೆ ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುಪತ್ರ) ಅವರೊಂದಿಗೆ ಸಮಾಲೋಚಿಸುತ್ತಿದೆ.

### *(ಆ) ಹಸಿರು ತೆರಿಗೆ*

ವಾಯುಮಾಲಿನ್ಯವನ್ನು ನಿಯಂತ್ರಿಸಲು ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಕಾಯ್ದೆ, 2002 ರಲ್ಲಿ ಹಸಿರು ತೆರಿಗೆ[24] ಎಂಬ ಉಪಕರ ಸಂಗ್ರಹಣೆಯನ್ನು ಸರ್ಕಾರವು ಪ್ರಾರಂಭಿಸಿತು.

31 ಮಾರ್ಚ್ 2016ನೇ ವರ್ಷಕ್ಕೆ ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ವರದಿಯ ಕಂಡಿಕೆ 1.3.1.1ರಲ್ಲಿ, 'ಹಸಿರು ತೆರಿಗೆ ಉಪಕರ ಸಂಗ್ರಹಗಳ ಅಸಮರ್ಪಕ ಲೆಕ್ಕಪತ್ರ ನಿರ್ವಹಣೆ ಮತ್ತು ಉಪಕರದ ಬಳಕೆಯಾಗದಿರುವುದರ ಬಗ್ಗೆ ವ್ಯಾಖ್ಯಾನಿಸುವಾಗ ಹಸಿರು ತೆರಿಗೆ ಉಪಕರ ಸಂಗ್ರಹವನ್ನು ರಾಜಸ್ವ ಸ್ವೀಕೃತಿಗಳ ಲೆಕ್ಕ ಶೀರ್ಷಿಕೆ '0041–00–102–0–11–ಹಸಿರು ತೆರಿಗೆ' ಯಡಿ ಮತ್ತು ವೆಚ್ಚವನ್ನು '2401–00–001–0–07–ವಾಯು ಮಾಲಿನ್ಯ ಮತ್ತು ಇತರ ಚಟುವಟಿಕೆಗಳನ್ನು ನಿಯಂತ್ರಿಸುವ ಕ್ರಮಗಳ ಅನುಷ್ಠಾನ' ಶೀರ್ಷಿಕೆ ಅಡಿಯಲ್ಲಿ ಲೆಕ್ಕ ಹಾಕಬೇಕು ಎಂದು ಸೂಚಿಸಲಾಗಿತ್ತು. ಸಂಗ್ರಹಿಸಿದ ಹಸಿರು ತೆರಿಗೆ ಉಪಕರವನ್ನು ವರ್ಗಾಯಿಸಲು ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಗಳ–'8229–00–200–0–63–ಹಸಿರು ತೆರಿಗೆ' ಅಡಿಯಲ್ಲಿ ಮೀಸಲು ನಿಧಿಯನ್ನು ಸ್ಥಾಪಿಸಲಾಯಿತು.

2019–20ರಲ್ಲಿ, ₹14.55 ಕೋಟಿ ರಾಜಸ್ವ ಸ್ವೀಕೃತಿಯಡಿ ಸಂಗ್ರಹಿಸಲಾಗಿದೆ ಮತ್ತು ವಾಯು ಮಾಲಿನ್ಯ ಮತ್ತು ಇತರ ಚಟುವಟಿಕೆಗಳನ್ನು ನಿಯಂತ್ರಿಸುವ ಕ್ರಮಗಳ ಅನುಷ್ಠಾನಕ್ಕೆ ಮಾಡಿದ ವೆಚ್ಚವು ₹0.14 ಕೋಟಿಯಾಗಿತ್ತು. ಹೀಗಾಗಿ, ಜೊತೆಗೆ ಸಂಗ್ರಹಿಸಿದ ಹಸಿರು ತೆರಿಗೆ ಉಪಕರ ಮತ್ತು ಸಂಬಂಧಿತ ವೆಚ್ಚವನ್ನು ಸಾರ್ವಜನಿಕ ಲೆಕ್ಕದ ಹಸಿರು ತೆರಿಗೆ ನಿಧಿಗೆ ವರ್ಗಾಯಿಸಬೇಕಾಗುತ್ತದೆ. ಆದರೆ, ಹಸಿರು ತೆರಿಗೆ ಉಪಕರ ಸಂಗ್ರಹಗಳ ರಾಜಸ್ವ ಸ್ವೀಕೃತಿ ಮತ್ತು ಅದಕ್ಕೆ ಅನುಗುಣವಾದ ವೆಚ್ಚಗಳನ್ನು ಸಾರ್ವಜನಿಕ ಲೆಕ್ಕಕ್ಕೆ ವರ್ಗಾಯಿಸಲಾಗಿಲ್ಲ.

### *(ಇ) ರಾಜ್ಯ ವಿಪತ್ತು ಪರಿಹಾರ ನಿಧಿ (ಎಸ್‌ಡಿಆರ್‌ಎಫ್)*

ವಿಪತ್ತು ನಿರ್ವಹಣಾ ಕಾಯ್ದೆ 2005 ರ ಅಡಿಯಲ್ಲಿ ರಚಿಸಲಾದ ರಾಜ್ಯ ವಿಪತ್ತು ಪರಿಹಾರ ನಿಧಿ 2010–11 ರಿಂದ ಬಡ್ಡಿರಹಿತ ಮೀಸಲು ನಿಧಿ ವಿಭಾಗದಡಿ ಕಾರ್ಯನಿರ್ವಹಿಸುತ್ತಿದೆ. ಮಾರ್ಗಸೂಚಿಗಳ ಪ್ರಕಾರ, ಎಸ್‌ಡಿಆರ್‌ಎಫ್‌ನ ಹೂಡಿಕೆಯ ಮೂಲಕ ಗಳಿಸಿದ ಆದಾಯದೊಂದಿಗೆ ಎಸ್‌ಡಿಆರ್‌ಎಫ್‌ಗೆ ಸೇರ್ಪಡೆಗೊಳ್ಳುವ ಆದಾಯವನ್ನು ಒಂದು ಅಥವಾ ಹೆಚ್ಚಿನ ಸಾಧನಗಳಲ್ಲಿ ಅಂದರೆ, ಕೇಂದ್ರ ಸರ್ಕಾರ ದಿನಾಂಕ ನಮೂದಿಸಿದ ಭದ್ರತೆಗಳು, ಹರಾಜು ಮಾಡಿದ ಖಜಾನೆ ಬಿಲ್‌ಗಳು ಮತ್ತು ಬಡ್ಡಿ ಗಳಿಸುವ ಠೇವಣಿಗಳು ಮತ್ತು ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಠೇವಣಿಗಳ ಪ್ರಮಾಣಪತ್ರಗಳಲ್ಲಿ ಹೂಡಿಕೆ

[24] ಹಸಿರು ತೆರಿಗೆ ಉಪಕರವು ದ್ವಿಚಕ್ರ ಮತ್ತು ಸಾರಿಗೆ–ರಹಿತ ವಾಹನಗಳಿಗೆ ಸಂಬಂಧಿಸಿದಂತೆ ಹದಿನೈದು ವರ್ಷಗಳಷ್ಟು ಹಳೆಯದಾಗಿರುವ ವಾಹನಗಳ ಮೇಲೆ ವಿಧಿಸುವ ಉಪಕರವಾಗಿದೆ, ಮತ್ತು ನೋಂದಣಿ ಪ್ರಮಾಣಪತ್ರವನ್ನು ನವೀಕರಿಸುವ ಸಮಯದಲ್ಲಿ ಸಾರಿಗೆ ವಾಹನಗಳಿಗೆ ಸಂಬಂಧಿಸಿದಂತೆ ಏಳು ವರ್ಷಗಳನ್ನು ಪೂರ್ಣಗೊಳಿಸಿದ ವಾಹನಗಳಿಗೆ ವಾಯುಮಾಲಿನ್ಯವನ್ನು ನಿಯಂತ್ರಿಸಲು ವಿವಿಧ ಕ್ರಮಗಳ ಅನುಷ್ಠಾನದ ಉದ್ದೇಶಕ್ಕಾಗಿ ವಿಧಿಸಿದ ತೆರಿಗೆಗೆ ಹೆಚ್ಚುವರಿಯಾಗಿ ವಿಧಿಸಲಾಗುತ್ತದೆ.

ಮಾಡಬೇಕು. ನೈಸರ್ಗಿಕ ವಿಪತ್ತುಗಳಾದ ಬರ, ಪ್ರವಾಹ, ಚಂಡಮಾರುತ, ಭೂಕಂಪ, ಅಗ್ನಿ ದುರಂತ ಇತ್ಯಾದಿಗಳು ಈ ಯೋಜನೆಯಡಿ ಪರಿಹಾರಕ್ಕೆ ಅರ್ಹವಾಗಿವೆ.

ಹದಿನಾಲ್ಕನೆಯ ಹಣಕಾಸು ಆಯೋಗವು ನಿಧಿಗೆ ನೀಡುವ ಕೊಡುಗೆಯು ಕ್ರಮವಾಗಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವೆ 90:10 ಅನುಪಾತದಲ್ಲಿರಬೇಕು ಎಂದು ಶಿಫಾರಸು ಮಾಡಿದೆ. ಇದನ್ನು ವಿಳಂಬವಾಗಿ 2018-19 ರಿಂದ ಜಾರಿಗೆ ತರಲಾಯಿತು. ಆದರೆ, 2019-20ರಲ್ಲಿ, ಭಾರತ ಮತ್ತು ರಾಜ್ಯ ಸರ್ಕಾರದ ಕೊಡುಗೆಯು 90:10 ರ ಅನುಪಾತಕ್ಕಿಂತ ಹೆಚ್ಚಾಗಿದೆ. 2019-20ರ ಅವಧಿಯಲ್ಲಿ, ಒಟ್ಟು ಮೊತ್ತ ₹876 ಕೋಟಿಗಳನ್ನು ನಿಧಿ ಖಾತೆಗೆ ವರ್ಗಾಯಿಸಲಾಗಿದೆ (ಭಾರತ ಸರ್ಕಾರದಿಂದ ₹507 ಕೋಟಿಮತ್ತುರಾಜ್ಯದ ಕೊಡುಗೆ ₹369 ಕೋಟಿ).

ಇದಲ್ಲದೆ, ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ (ಎನ್‌ಡಿಆರ್‌ಎಫ್) ₹2,905.28 ಕೋಟಿಗಳನ್ನು ಭಾರತ ಸರ್ಕಾರದ ಕೊಡುಗೆಯಾಗಿ ನಿಧಿ ಲೆಕ್ಕಕ್ಕೆ ವರ್ಗಾಯಿಸಲಾಗಿದೆ. ಒಟ್ಟು ಶಿಲ್ಕು ₹4,215.90 ಕೋಟಿ (ಆರಂಭಿಕ ಶಿಲ್ಕು ₹434.62 ಕೋಟಿ ಮತ್ತು ವರ್ಷದಲ್ಲಿ ಪಡೆದ ₹3,781.28 ಕೋಟಿ) ಪ್ರಧಾನ ಲೆಕ್ಕ ಶೀರ್ಷಿಕೆ '2245-ನೈಸರ್ಗಿಕ ವಿಪತ್ತುಗಳ ಪರಿಹಾರ'ದಡಿ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು ಇದನ್ನು ಎಸ್‌ಡಿಆರ್‌ಎಫ್ ಅಡಿ ಖರ್ಚು ಮಾಡಿದಂತೆ ತೋರಿಸಲಾಗಿದೆ. 31 ಮಾರ್ಚ್ 2019 ರಲ್ಲಿದ್ದಂತೆ ನಿಧಿಯಲ್ಲಿ ಬಾಕಿ ಉಳಿದಿಲ್ಲ. 2245 ರ ಅಡಿಯಲ್ಲಿನ ಖರ್ಚಿನ ವಿವರಗಳು – 2019-20ರಲ್ಲಿ ನೈಸರ್ಗಿಕ ವಿಪತ್ತುಗಳ ಪರಿಹಾರದ ವಿವರಗಳನ್ನು **ಕೋಷ್ಟಕ-2.30**ರಲ್ಲಿನೀಡಲಾಗಿದೆ.

### ಕೋಷ್ಟಕ 2.30: ನೈಸರ್ಗಿಕ ವಿಪತ್ತುಗಳ ಪರಿಹಾರಕ್ಕೆ ಮಾಡಿದ ವೆಚ್ಚದ ವಿವರಗಳು

(₹ ಕೋಟಿಗಳಲ್ಲಿ)

| ಪ್ರಧಾನ ಲೆಕ್ಕ ಶೀರ್ಷಿಕೆ 2245- ನೈಸರ್ಗಿಕ ವಿಪತ್ತುಗಳಿಗೆ ಪರಿಹಾರ | ಒಳ ಲೆಕ್ಕ ಶೀರ್ಷಿಕೆ | 2019-20ರಲ್ಲಿ ವೆಚ್ಚ |
|---|---|---|
| 02-ನೆರೆಗಳು, ಚಂಡಮಾರುತಗಳು ಇತ್ಯಾದಿ. | 101-ಉದ್ದೇಶರಹಿತ ಪರಿಹಾರ | 10.00 |
| | **ಉಪ-ಮೊತ್ತ** | **10.00** |
| 05-ರಾಜ್ಯ ವಿಪತ್ತು ಪರಿಹಾರ ನಿಧಿ | ಮೀಸಲು ನಿಧಿಗಳು ಮತ್ತು ಠೇವಣಿ ಖಾತೆಗಳಿಗೆ ವರ್ಗಾವಣೆ- ಎಸ್‌ಡಿಆರ್‌ಎಫ್ | 3,781.28 |
| | 901-ಕಳೆಯಿರಿ-ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿಯಿಂದ ಸಂಗ್ರಹಿಸಿದ ಮೊತ್ತ | (-) 4,215.90 |
| | **ಉಪಮೊತ್ತ** | **(-) 434.62** |
| 80-ಸಾಮಾನ್ಯ | 101-ವಿಪತ್ತು ಸನ್ನದ್ಧತೆಯ ತರಬೇತಿ ಕೇಂದ್ರ | 6.02 |
| | 102-ನೈಸರ್ಗಿಕ ವಿಪತ್ತುಗಳ ನಿರ್ವಹಣೆ, ವಿಪತ್ತು ಪೀಡಿತ ಪ್ರದೇಶಗಳಲ್ಲಿ ಸಾಂದರ್ಭಿಕ ಯೋಜನೆಗಳು | 4,904.55 |
| | 911- ಕಳೆಯಿರಿ ಹೆಚ್ಚಿನ ಪಾವತಿಗಳ ವಸೂಲಾತಿ | - |
| | **ಉಪಮೊತ್ತ** | **4,910.57** |
| | **ಒಟ್ಟು ಮೊತ್ತ** | **4,485.95** |

ಇದಲ್ಲದೆ, ರಾಜ್ಯ ಸರ್ಕಾರವು ಎಸ್‌ಡಿಆರ್‌ಎಫ್‌ನ ಆರಂಭಿಕ ಶಿಲ್ಕು (₹434.62 ಕೋಟಿಗೆ) ಓವರ್ ಡ್ರಾಫ್ಟ್‌ಗಳಿಗೆ (2019-20ರಲ್ಲಿ ಶೇಕಡಾ5.58) ಅನ್ವಯವಾಗುವ ದರದಲ್ಲಿ ₹24.25 ಕೋಟಿ ಬಡ್ಡಿಯನ್ನು ಪಾವತಿಸಬೇಕಾಗಿತ್ತು ಮತ್ತು ಅದನ್ನು ಅರ್ಧ ವಾರ್ಷಿಕ ಆಧಾರದ ಮೇಲೆ ಪ್ರಧಾನ ಲೆಕ್ಕ ಶೀರ್ಷಿಕೆ '2049-ಬಡ್ಡಿ ಪಾವತಿ'ಯಡಿ ವೆಚ್ಚ ತೋರಿಸಿ ಪಾವತಿ ಮಾಡಬೇಕಾಗಿದೆ. ಆದರೆ ನಿಧಿಯ ಬಾಕಿಗಳಿಗೆ ಯಾವುದೇ ಬಡ್ಡಿಯನ್ನು ಪಾವತಿಸಲಾಗಿಲ್ಲ. ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಫೆಬ್ರವರಿ 2021) ಬಡ್ಡಿ ಪಾವತಿಗೆ ಸಾಂಕೇತಿಕ ಅವಕಾಶವನ್ನು ಪೂರಕ ಅಂದಾಜು – 2ರಲ್ಲಿ ಕಲ್ಪಿಸಲಾಗಿದೆ ಎಂದು ಹೇಳಿದೆ.

### *(ಈ) ಅರಣ್ಯ ಅಭಿವೃದ್ಧಿ ನಿಧಿ*

ಅರಣ್ಯ ಅಭಿವೃದ್ಧಿ ತೆರಿಗೆಯ ಮೂಲಕ ಸಂಗ್ರಹವಾದ ಆದಾಯವನ್ನು ಸರ್ಕಾರದ ಆದಾಯವೆಂದು ಜಮೆ ಮಾಡಲಾಗುತ್ತದೆ ಮತ್ತು ಸಮಾನ ಮೊತ್ತವನ್ನು ಸಾರ್ವಜನಿಕ ಲೆಕ್ಕದಡಿಯಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಗೆ (ಕೆಎಫ್‌ಡಿಎಫ್) ವರ್ಗಾಯಿಸಲಾಗುತ್ತದೆ. ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಗಳಿಗೆ ಮಾಡಿದ ವಾಸ್ತವ ವೆಚ್ಚವನ್ನು ಲೆಕ್ಕ ಹೊಂದಾಣಿಕೆಗಳ ಮೂಲಕ ಲೆಕ್ಕ ಶೀರ್ಷಿಕೆ 8229–00–200–0–04 ಅಡಿಯಲ್ಲಿ ಕೆಎಫ್‌ಡಿಎಫ್‌ಗೆ ವರ್ಗಾಯಿಸಲಾಗುತ್ತದೆ.

1 ಏಪ್ರಿಲ್ 2019ರಂದು ನಿಧಿಯಲ್ಲಿ ₹2,973.47 ಕೋಟಿ ಶಿಲ್ಕು ಇತ್ತು. 2019–20ರಲ್ಲಿ ₹0.26 ಕೋಟಿ ಮೊತ್ತವನ್ನು ನಿಧಿಗೆ ಜಮಾ ಮಾಡಲಾಗಿದೆ. ಆದರೆ ಈ ವರ್ಷದಲ್ಲಿ ಮಾಡಿದ ₹268.45 ಕೋಟಿಗಳ ವೆಚ್ಚವನ್ನು ನಿಧಿಗೆ ವರ್ಗಾಯಿಸಲಾಗಿಲ್ಲ. 2020ರ ಮಾರ್ಚ್ ಅಂತ್ಯದ ವೇಳೆಗೆ ನಿಧಿಯಲ್ಲಿ ₹2,973.73 ಕೋಟಿಗಳ ಶಿಲ್ಕು ಉಳಿದಿದೆ.

### *(ಉ) ಗ್ರಾಹಕ ಕಲ್ಯಾಣ ನಿಧಿ*

ರಾಜ್ಯ ಗ್ರಾಹಕ ಕಲ್ಯಾಣ ನಿಧಿಯನ್ನು (ಬಡ್ಡಿ ರಹಿತ) ಸಾರ್ವಜನಿಕ ಲೆಕ್ಕದ ಮೀಸಲು ನಿಧಿಗಳು ವಿಭಾಗದಡಿ ಕರ್ನಾಟಕ ರಾಜ್ಯ ಗ್ರಾಹಕ ಕಲ್ಯಾಣ ನಿಧಿ ನಿಯಮಗಳು 2005ರ ನಿಯಮ 3ರ ಅನ್ವಯ ಪ್ರಧಾನ ಲೆಕ್ಕ ಶೀರ್ಷಿಕೆ '8229–00–123–ಗ್ರಾಹಕ ಕಲ್ಯಾಣ ನಿಧಿ' ಅಡಿಯಲ್ಲಿ ಸ್ಥಾಪಿಸಲಾಗಿದೆ.

ಈ ನಿಯಮಗಳಲ್ಲಿರುವ ನಿಬಂಧನೆಗಳ ಪ್ರಕಾರ, ರಾಜ್ಯದಿಂದ ಗ್ರಾಹಕ ಆಂದೋಲನೆಯನ್ನು ಬಲಪಡಿಸಲು ಕೇಂದ್ರ ಸರ್ಕಾರವು ಒದಗಿಸಿದ ಸಹಾಯ/ಅನುದಾನ, ಹೊಂದಾಣಿಕೆಯ ಅನುದಾನ ಅಥವಾ ರಾಜ್ಯ ಸರ್ಕಾರದ ಯಾವುದೇ ಸಹಾಯ, ಜಿಲ್ಲಾ ಮತ್ತು ರಾಜ್ಯ ಗ್ರಾಹಕ ವೇದಿಕೆಯಲ್ಲಿ ಸಂಗ್ರಹವಾದ ನ್ಯಾಯಾಲಯದ ಶುಲ್ಕ, ಗ್ರಾಹಕರು ಬಳಸುವ ಉತ್ಪನ್ನಗಳು ಅಥವಾ ಸೇವಾ ಪೂರೈಕೆದಾರರ ತಯಾರಕರು ಪಾವತಿಸುವ ಯಾವುದೇ ದಂಡ, ಮತ್ತು ನಿಧಿಯ ಶಿಲ್ಕುಗಳ ಹೂಡಿಕೆಯಿಂದ ಬರುವ ಯಾವುದೇ ಆದಾಯ ಮತ್ತು ನಿಧಿಯ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಪಡೆದ ಯಾವುದೇ ಮೊತ್ತವು ಈ ನಿಧಿಗೆ ಸಲ್ಲುತ್ತದೆ. ನಿಧಿಯಲ್ಲಿನ ಸಂಗ್ರಹವನ್ನು ರಾಜ್ಯ ಸರ್ಕಾರವು ಗ್ರಾಹಕರ ಕಲ್ಯಾಣಕ್ಕಾಗಿ ಬಳಸಿಕೊಳ್ಳುತ್ತದೆ.

2019–20ರಲ್ಲಿ, ಶೀರ್ಷಿಕೆ 1456–00–800–0–01ರ ಅಡಿಯಲ್ಲಿ ಸ್ವೀಕೃತವಾದ ₹0.30 ಕೋಟಿಗಳನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸಬೇಕಾಗಿತ್ತು. ಈ ವರ್ಗಾವಣೆಗೆ ಲೆಕ್ಕಶೀರ್ಷಿಕೆ 3456–00–797–0–04–261ರಡಿಯಲ್ಲಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದ್ದರೂ ಸಹ ಯಾವುದೇ ಮೊತ್ತವನ್ನು ನಿಧಿಗೆ ವರ್ಗಾಯಿಸಲಾಗಿಲ್ಲ. ಪ್ರಸಕ್ತ ವರ್ಷದಲ್ಲಿ ₹0.30 ಕೋಟಿ ಖರ್ಚು ತೋರಿಸಲಾಗಿದ್ದರೂ, ಅದನ್ನು ನಿಧಿಗೆ ವರ್ಗಾಯಿಸಲಾಗಿಲ್ಲ. ನಿಧಿಯ ಲೆಕ್ಕದಲ್ಲಿ ಆರಂಭಿಕ ಮತ್ತು ಮುಕ್ತಾಯದ ಶಿಲ್ಕು ₹1.43 ಕೋಟಿ ಉಳಿದಿದೆ. ಹಿಂದಿನ ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಲೆಕ್ಕಪರಿಶೋಧನೆಯಲ್ಲಿ ಸೂಚಿಸಿದ್ದರೂ ಸಹ, ಸ್ವೀಕೃತಿ ಮತ್ತು ವೆಚ್ಚಗಳನ್ನು ನಿಧಿ ಖಾತೆಗೆ ವರ್ಗಾಯಿಸಲು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

### ಮೀಸಲು ನಿಧಿಯ ವಹಿವಾಟಿನ ಪರಿಣಾಮ

2019–20ರ ಅವಧಿಯಲ್ಲಿ ಮೇಲಿನ ಮೀಸಲು ನಿಧಿಗಳ ವಹಿವಾಟಿನ ಪರಿಣಾಮ / ಫಲಿತಾಂಶವನ್ನು ಕೆಳಗೆ ನೀಡಲಾಗಿದೆ.

- ಕ್ರೋಡೀಕೃತ ಋಣ ಪರಿಹಾರ ನಿಧಿಗೆನೀಡಿದ ವಂತಿಗೆಯಲ್ಲಿನಕೊರತೆಯು ರಾಜಸ್ವ ಹೆಚ್ಚಳ ಪ್ರಮಾಣವನ್ನು ಅಧಿಕವಾಗಿ ಮತ್ತು ವಿತ್ತೀಯ ಕೊರತೆಯನ್ನು ಕಡಿಮೆಯಾಗಿ ತೋರಿಸಿರುವುದರಲ್ಲಿ ಪರಿಣಮಿಸಿತು;

- ಸಾರ್ವಜನಿಕ ಲೆಕ್ಕದಲ್ಲಿಸ್ವೀಕೃತಿ ಮತ್ತು ವೆಚ್ಚ ಎರಡನ್ನೂ ಹಸಿರು ತೆರಿಗೆ ನಿಧಿಗೆ ವರ್ಗಾಯಿಸದಿರುವುದು ರಾಜಸ್ವ ಸ್ವೀಕೃತಿ/ವೆಚ್ಚವನ್ನು ಅಧಿಕವಾಗಿ ಹೇಳಿದಂತಾಗಿದೆ;
- ಅರಣ್ಯ ಅಭಿವೃದ್ಧಿ ನಿಧಿಗೆ ಸ್ವೀಕೃತಿಗಳನ್ನು ಮಾತ್ರ ವರ್ಗಾಯಿಸಿ ಸಂಬಂಧಿಸಿದ ವೆಚ್ಚವನ್ನು ವರ್ಗಾಯಿಸದೆ ಇರುವುದು ರಾಜಸ್ವ ವೆಚ್ಚವನ್ನು ವಿತ್ತೀಯ ಕೊರತೆಯನ್ನು ಅಧಿಕವಾಗಿ ಮತ್ತು ರಾಜಸ್ವ ಹೆಚ್ಚಳವನ್ನು ಕಡಿಮೆಯಾಗಿ ತೋರಿಸಿದಂತಾಗಿದೆ ಮತ್ತು
- ಜಿಲ್ಲಾಧಿಕಾರಿಗಳ ರಾಜ್ಯ ವಿಪತ್ತು ಪರಿಹಾರ ನಿಧಿಗಳ ವೈಯಕ್ತಿಕ ಠೇವಣಿಗಳಲ್ಲಿನ ಬಳಕೆಯಾಗದ ಶಿಲ್ಕುಗಳು ಲೆಕ್ಕಗಳಲ್ಲಿ ಪ್ರತಿಫಲಿತವಾಗದೆ ಸಾಮಾನ್ಯ ಶಿಲ್ಕುಗಳೊಂದಿಗೆ ವಿಲೀನಗೊಂಡಿವೆ. ಈ ವೆಚ್ಚ ಮಾಡದ ಶಿಲ್ಕುಗಳು ಸಾರ್ವಜನಿಕ ಲೆಕ್ಕದಲ್ಲಿಯ ನಿಧಿಲೆಕ್ಕವನ್ನು ಕಡಿಮೆ ಹೇಳಲು ಮತ್ತು ಸಂಚಿತ ನಿಧಿಯಲ್ಲಿ ವಿಪತ್ತು ಪರಿಹಾರಕ್ಕಾಗಿ ವೆಚ್ಚವನ್ನು ಅಧಿಕವಾಗಿ ಹೇಳಲು ಕಾರಣವಾಯಿತು.

### 2.6.3 ನಿಷ್ಕ್ರಿಯ ಮೀಸಲು ನಿಧಿಗಳು

31 ಮಾರ್ಚ್ 2020 ರ ಅಂತ್ಯದ ವೇಳೆಗೆ, 50 ಮೀಸಲು ನಿಧಿಗಳಲ್ಲಿ 26 ನಿಧಿ ಲೆಕ್ಕಗಳು ನಿಷ್ಕ್ರಿಯವಾಗಿದೆ (ಆರ್ಥಿಕ ಇಲಾಖೆಯ ಒಪ್ಪಿಗೆಯೊಂದಿಗೆ 2019-20ರ ಅವಧಿಯಲ್ಲಿ ಶೂನ್ಯ ಶಿಲ್ಕು ಹೊಂದಿದ್ದ 80 ನಿಷ್ಕ್ರಿಯ ಮೀಸಲು ನಿಧಿ ಲೆಕ್ಕಗಳನ್ನು ಅಂತಿಮಗೊಳಿಸಲಾಗಿದೆ) ಈ 26 ನಿಷ್ಕ್ರಿಯ ಮೀಸಲು ನಿಧಿಗಳಲ್ಲಿ, 31 ಮಾರ್ಚ್ 2020ರ ವೇಳೆಗೆ ಮೂರು ಮೀಸಲು ನಿಧಿಗಳು ಶೂನ್ಯ ಶಿಲ್ಕನ್ನು ಹೊಂದಿವೆ, 13 ಮೀಸಲು ನಿಧಿಗಳು ₹3,138.01 ಕೋಟಿಗಳ ಧನಾತ್ಮಕ ಶಿಲ್ಕು ಮತ್ತು 10 ಮೀಸಲು ನಿಧಿಗಳು ₹2,470.14 ಕೋಟಿಗಳ ಋಣಾತ್ಮಕ ಶಿಲ್ಕು ಹೊಂದಿವೆ. ಲೆಕ್ಕಗಳ ಮೇಲಿನ ಇದರ ಪರಿಣಾಮವೆಂದರೆ ಮೀಸಲು ನಿಧಿಯಡಿ ಸರ್ಕಾರದ ಆಸ್ತಿ ₹667.87 ಕೋಟಿ (ನಿವ್ವಳ) ಹೆಚ್ಚಾಗಿದೆ. 80 ನಿಷ್ಕ್ರಿಯ ಮೀಸಲು ನಿಧಿಗಳನ್ನು ಮುಚ್ಚಲು ರಾಜ್ಯ ಸರ್ಕಾರ ಕ್ರಮತೆಗೆದುಕೊಂಡಿರುವುದು ಶ್ಲಾಘನೀಯ. ಉಳಿದ 26 ನಿಷ್ಕ್ರಿಯ ಮೀಸಲು ನಿಧಿಗಳನ್ನು ಲೆಕ್ಕ ಹೊಂದಾಣಿಕೆ ಮಾಡಿ ಅಂತಿಮಗೊಳಿಸಲು ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

### 2.6.4 ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ನಿಧಿ

ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರವು ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯಿದೆ 2016ರ ಅನ್ವಯ ಅಸ್ತಿತ್ವಕ್ಕೆ ಬಂದಿದ್ದು ವಸತಿ ವ್ಯವಹಾರ ಮತ್ತು ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಕರ್ನಾಟಕದಲ್ಲಿ 10 ಜುಲೈ 2017ರಂದು ಕರ್ನಾಟಕ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ನಿಯಮಗಳು 2017 ಅನುಮೋದನೆ ಮತ್ತು ಅಧಿಸೂಚಿತವಾಯಿತು.

14 ಜುಲೈ 2017ರ ಸರ್ಕಾರಿ ಆದೇಶದ ಅನ್ವಯ ಬಡ್ಡಿಸಹಿತ ಠೇವಣಿ ಶೀರ್ಷಿಕೆ 8343-00-120-0-02 ಅಡಿ ಸ್ಥಿರಾಸ್ತಿ ನಿಯಂತ್ರಣ ಪ್ರಾಧಿಕಾರ ನಿಧಿಯು ಸ್ಥಾಪಿಸಲ್ಪಟ್ಟು ಸ್ಥಿರಾಸ್ತಿ (ನಿಯಂತ್ರಣ ಮತ್ತು ಅಭಿವೃದ್ಧಿ) ವ್ಯವಹಾರಗಳನ್ನು ಇದರಡಿ ಲೆಕ್ಕ ಹಾಕಲಾಗುತ್ತದೆ. ಈ ನಿಧಿಯಲ್ಲಿ ಸಂಗ್ರಹವಾದ ಮೊತ್ತವನ್ನು ರಾಜ್ಯ ಸರಕಾರವು ಪ್ರಾಧಿಕಾರದ ಮತ್ತು ಮೇಲ್ಮನವಿ ನ್ಯಾಯ ಮಂಡಳಿಯ ವೇತನ, ಭತ್ಯೆ, ಆಡಳಿತ ವೆಚ್ಚ ಮತ್ತು ಅಧಿನಿಯಮದ ಅನುಷ್ಠಾನಕ್ಕೆ ಸಂಬಂಧಿಸಿದ ವೆಚ್ಚಗಳನ್ನು ಭರಿಸಲು ಬಳಸಿಕೊಳ್ಳುತ್ತದೆ.

ಈ ನಿಧಿಯು 2017-18 ರಿಂದಲೇ ಅಸ್ತಿತ್ವಕ್ಕೆ ಬಂದಿದ್ದರೂ ಸಂಗ್ರಹವಾದ ಶುಲ್ಕ (₹9.07 ಕೋಟಿ) ಮತ್ತು ವೆಚ್ಚಗಳನ್ನು (₹3.72 ಕೋಟಿ) 2019-20ರಲ್ಲಿ ಮೊದಲ ಬಾರಿಗೆ ನಿಧಿಗೆ ವರ್ಗಾಯಿಸಲಾಯಿತು. 2017-18 ಮತ್ತು 2018-19ನೇ ವರ್ಷಗಳಲ್ಲಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ನಿಧಿಗೆ ವರ್ಗಾಯಿಸಿರಲಿಲ್ಲ. 31 ಮಾರ್ಚ್ 2020ರಂದು ನಿಧಿಯಲ್ಲಿ ₹5.35 ಕೋಟಿಗಳ ಶಿಲ್ಕು ಉಳಿದಿತ್ತು.

## 2.7 ಋಣ ನಿರ್ವಹಣೆ

ಋಣ ನಿರ್ವಹಣೆಯು ಸರಕಾರವು ಅಗತ್ಯವಿರುವ ಮೊತ್ತಗಳ ಸಂಗ್ರಹಣೆ,ಅದರಲ್ಲಿನ ಸಂಭಾವ್ಯ ಅಪಾಯಮತ್ತು ಅದಕ್ಕಾಗಿ ತೆರಬೇಕಾದಬೆಲೆ ಮತ್ತು ಅಧಿನಿಯಮನ ಅಥವ ವಾರ್ಷಿಕ ಆಯವ್ಯಯ ಪ್ರಕಟನೆಗಳ ಮೂಲಕ ಋಣ ನಿರ್ವಹಣೆಯ ಪರಮಾಧಿಕಾರ ಗುರಿಗಳನ್ನು ಸಾಧಿಸಲು ಅನುಸರಿಸುವ ಮತ್ತು ಕಾರ್ಯಗತಗೊಳಿಸುವ ಪ್ರಕ್ರಿಯೆಯಾಗಿದೆ. 2015–16 ರಿಂದ 2019–20ರ ಅವಧಿಯಲ್ಲಿ ಬಾಕಿ ಇರುವ ಸಾಲ ಮತ್ತು ರಾಒಆಉಕ್ಕೆ ಅದರ ಶತಾಂಶವನ್ನು **ನಕ್ಷೆ 2.14** ರಲ್ಲಿ ತೋರಿಸಲಾಗಿದೆ.

**ನಕ್ಷೆ–2.14: 2015–20ರ ಅವಧಿಯಲ್ಲಿ ಬಾಕಿ ಇರುವ ಸಾಲ ಮತ್ತು ರಾಒಆಉಕ್ಕೆ ಅದರ ಶತಾಂಶ**




ಮೇಲಿನ ನಕ್ಷೆಯಲ್ಲಿ ಕಂಡಂತೆ 2015–16ರಿಂದ 2019–20ರ ಅವಧಿಯಲ್ಲಿ ಬಾಕಿಯಿರುವ ಸಾಲ ಮತ್ತು ರಾಒಆಉಕ್ಕೆ ಅದರ ಶತಾಂಶವು ಏರುಮುಖ ಪ್ರವೃತ್ತಿಯಲ್ಲಿದ್ದರೂ ಅವು ಕರ್ನಾಟಕ ವಿತ್ತೀಯ ಸುಧಾರಣಾ ಕಾಯಿದೆಯಲ್ಲಿ ನಿಗದಿಪಡಿಸಿದ (ಶೇಕಡ 25)ಮತ್ತು ಹದಿನಾಲ್ಕನೆಯ ಹಣಕಾಸು ಆಯೋಗವು ನಿಗದಿಪಡಿಸಿದ (ಶೇಕಡ 24.08 ರಿಂದ 26.22) ಗುರಿಯೊಳಗೆ ಇದ್ದಿತು.

### *2.7.1 ಋಣ ವಿಭಾಗಗಳ ಚಿತ್ರಣ*

ರಾಜ್ಯ ಸರ್ಕಾರದ ಒಟ್ಟು ಋಣವು ರಾಜ್ಯದ ಆಂತರಿಕ ಋಣ (ಮಾರುಕಟ್ಟೆ ಸಾಲಗಳು, ಭಾರತೀಯ ರಿಜರ್ವ್ ಬ್ಯಾಂಕಿನ ಅರ್ಥೋಪಾಯ ಮುಂಗಡಗಳು, ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಯಡಿ ನೀಡಿದ ವಿಶೇಷ ಭದ್ರತೆಗಳು, ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳು ಇತ್ಯಾದಿ) ಭಾರತ ಸರ್ಕಾರದಿಂದ ಪಡೆದ ಸಾಲಗಳು ಮತ್ತು ಮುಂಗಡಗಳು, ಸಾರ್ವಜನಿಕ ಲೆಕ್ಕ ಜವಾಬ್ದಾರಿಗಳು ಮತ್ತು ಆಯವ್ಯಯ ಹೊರಗಿನ ಸಾಲಗಳನ್ನು ಒಳಗೊಂಡಿದೆ.

ಋಣಗಳು, ಅವುಗಳ ವೃದ್ಧಿಯ ದರ, ರಾಒಆಉಕ್ಕೆ ಜವಾಬ್ದಾರಿಗಳ ಅನುಪಾತಗಳ ವಿಭಾಗವಾರು ವಿವರಗಳನ್ನು ಕೋಷ್ಟಕ–2.31ರಲ್ಲಿ ತೋರಿಸಲಾಗಿದೆ ಮತ್ತು ರಾಜಸ್ವ ಸ್ವೀಕೃತಿಗಳು ಮತ್ತು ಸ್ವಂತ ಸಂಪನ್ಮೂಲಗಳಿಗೆ ವಿತ್ತೀಯ ಹೊಣೆಗಾರಿಕೆಗಳ ಪ್ಲವನತೆಯನ್ನು ಅನುಬಂಧ–2.2ರಲ್ಲಿ ನೀಡಲಾಗಿದೆ. ರಾಜ್ಯದ ವಿತ್ತೀಯ ಜವಾಬ್ದಾರಿಗಳು 2015–16ರಲ್ಲಿದ್ದ ₹1,83,322 ಕೋಟಿಯಿಂದ 2019–20ರಲ್ಲಿ ₹3,37,520 ಕೋಟಿಗಳಾಗಿ ಶೇಕಡ 84ರಷ್ಟು ಹೆಚ್ಚಾಗಿದೆ. 2019–20ರಲ್ಲಿ ಒಟ್ಟಾರೆ ಋಣ

ಸಂಯೋಜನೆಯನ್ನು **ನಕ್ಷೆ-2.15**ರಲ್ಲಿ ನೀಡಲಾಗಿದೆ ಮತ್ತು 2015-16 ರಿಂದ 2019- 20ರ ಅವಧಿಯಲ್ಲಿ ಪಡೆದ ಆಂತರಿಕ ಋಣ ಮತ್ತು ಸಾಲ ಮರುಪಾವತಿಯ ವಿವರಗಳನ್ನು **ನಕ್ಷೆ-2.16** ರಲ್ಲಿ ನೀಡಲಾಗಿದೆ.

**ಕೋಷ್ಟಕ-2.31: ಭಾಗವಾರು ಋಣ ಪ್ರವೃತ್ತಿಗಳು**

(₹ಕೋಟಿಗಳಲ್ಲಿ)

| | | 2015-16 | 2016-17 | 2017-18 | 2018-19 | 2019-20 |
|---|---|---|---|---|---|---|
| ಬಾಕಿಯಿರುವ ಒಟ್ಟಾರೆ ಋಣ | | 1,83,322 | 2,21,319 | 2,46,231 | 2,85,238 | 3,37,520 |
| ಸಾರ್ವಜನಿಕ ಋಣ | ಆಂತರಿಕ ಋಣ | 1,09,545 | 1,32,489 | 1,48,581 | 1,79,309 | 2,20,337 |
| | ಭಾರತ ಸರ್ಕಾರದ ಸಾಲಗಳು | 13,002 | 13,794 | 14,555 | 14,657 | 13,908 |
| ಸಾರ್ವಜನಿಕ ಲೆಕ್ಕದ ಮೇಲಿನ ಹೊಣೆಗಾರಿಕೆಗಳು | | 53,076 | 64,788 | 69,922 | 76,410 | 85,172 |
| ಆಯವ್ಯಯದ ಹೊರಗಿನ ಸಾಲಗಳು | | 7,699 | 10,248 | 13,173 | 14,862 | 18,103 |
| ಬಾಕಿಯಿರುವ ಋಣದ ವೃದ್ಧಿಯ ದರ (ಶೇಕಡಾವಾರು) | | 11.59 | 20.73 | 11.26 | 15.84 | 18.33 |
| ರಾಒಆಂಉ | | 10,45,168 | 12,09,136 | 13,57,579 | 15,44,399 | 16,99,115 |
| ಋಣ/ರಾಒಆಂಉ(ಶೇಕಡಾವಾರು) | | 17.54 | 18.30 | 18.14 | 18.47 | 19.86 |
| ಒಟ್ಟು ಋಣ ಸ್ವೀಕೃತಿಗಳು | | 21,072 | 31,156 | 25,122 | 41,914 | 50,459 |
| ಒಟ್ಟು ಋಣ ಮರುಪಾವತಿಗಳು | | 4,110 | 7,420 | 8,269 | 11,083 | 10,180 |
| ಲಭ್ಯವಿರುವ ಒಟ್ಟು ಋಣ | | 16,962 | 23,736 | 16,853 | 30,831 | 40,279 |
| ಋಣ ಮರುಪಾವತಿಗಳು/ಋಣ ಸ್ವೀಕೃತಿಗಳು (ಶೇಕಡಾವಾರು) | | 19.50 | 23.82 | 32.92 | 26.44 | 20.17 |

ಆಕರ: ಹಣಕಾಸು ಲೆಕ್ಕಗಳು

- 2019-20ರಲ್ಲಿ ಬಾಕಿಯಿರುವ ಋಣದ ವೃದ್ಧಿಯ ದರವು ಶೇಕಡ 18.33ರಷ್ಟಿದ್ದು ಹಿಂದಿನ ವರ್ಷಕ್ಕಿಂತಲೂ (ಶೇಕಡ 15.84) ಶೇಕಡ 2.49ರಷ್ಟು ಹೆಚ್ಚಾಗಿದೆ;
- 2019-20 ರಲ್ಲಿ ಸಾಲ ಮರುಪಾವತಿ/ ಸಾಲ ಸ್ವೀಕೃತಿಗಳ ಅನುಪಾತದಲ್ಲಿ ಇಳಿಕೆಯಿದ್ದರೂ ಒಟ್ಟು ಋಣ ಸ್ವೀಕೃತಿಯಲ್ಲಿ ₹8,545 ಕೋಟಿಗಳ ಹೆಚ್ಚಳವಿದ್ದು ಇದು ಮಾರುಕಟ್ಟೆ ಸಾಲಗಳಲ್ಲಿನ ಹೆಚ್ಚಳದಿಂದ ಉಂಟಾಗಿದೆ, ಮತ್ತು
- ರಾಜ್ಯದ ಒಟ್ಟು ಋಣ ಲಭ್ಯತೆಯಲ್ಲಿನ ಹೆಚ್ಚಳವು ಮುಖ್ಯವಾಗಿ 2018-19ರಲ್ಲಿ ₹40470 ಕೋಟಿಗಳಷ್ಟಿದ್ದ ಆಂತರಿಕ ಸಾಲವು 2019-20ರಲ್ಲಿ ₹49,473 ಕೋಟಿಗಳಿಗೆ ಏರಿದ್ದು ಮುಖ್ಯ ಕಾರಣವಾಗಿದ್ದು **(ಅನುಬಂಧ-2.2)** ಇದು ಭಾರತ ಸರ್ಕಾರದಿಂದ ಪಡೆದ ಸಾಲಗಳಲ್ಲಿ ₹769 ಕೋಟಿಗಳಷ್ಟು ಕಡಿಮೆಯಾಗಿ ಉತ್ತಾರಗೊಂಡಿದೆ.

**ನಕ್ಷೆ–2.15:2019–20ರ ಆರ್ಥಿಕ ವರ್ಷದ ಕೊನೆಯಲ್ಲಿ ಒಟ್ಟು ಋಣದ ವಿಭಜನೆ**

(₹ ಕೋಟಿಗಳಲ್ಲಿ)




**ನಕ್ಷೆ–2.16: ಸರ್ಕಾರದ ಆಂತರಿಕ ಸಾಲ ಮತ್ತು ಮರುಪಾವತಿ**

(₹ ಕೋಟಿಗಳಲ್ಲಿ)




ಒಟ್ಟು ಬಾಕಿ ಇರುವ ಸಾಲಗಳಲ್ಲಿ ಮಾರುಕಟ್ಟೆ ಸಾಲಗಳು, ನಬಾರ್ಡ್, ಎಲ್ಐಸಿ, ಜಿಐಸಿ ಮತ್ತು ಕೇಂದ್ರ ಸರ್ಕಾರದ ಎನ್ಎಸ್ಎಸ್ಎಫ್ ಗೆ ನೀಡಿದ ವಿಶೇಷ ಭದ್ರತೆಗಳನ್ನು ಒಳಗೊಂಡ ಆಂತರಿಕ ಋಣವು ಶೇಕಡ 65.28ರಷ್ಟಿದೆ (₹220337 ಕೋಟಿ). ಸಾರ್ವಜನಿಕ ಲೆಕ್ಕದ ಹೊಣೆಗಾರಿಕೆಗಳು ಶೇಕಡ 25.24, ಭಾರತ ಸರ್ಕಾರದಿಂದ ಸಾಲಗಳು ಶೇಕಡ 4.12 ಮತ್ತು ಆಯವ್ಯಯದ ಹೊರಗಿನ ಸಾಲಗಳು ಶೇಕಡ 5.36ರಷ್ಟಿವೆ.

ಸಂಚಿತ ನಿಧಿಯ ಹೊಣೆಗಾರಿಕೆಗಳ ಒಂದು ಭಾಗವೇ ಆಗಿರುವ ಆಂತರಿಕ ಋಣವು 2015–16ರಲ್ಲಿ ₹1,09,545 ಕೋಟಿಗಳಷ್ಟಿದ್ದು 2019–20ರಲ್ಲಿ ₹2,20,337 ಕೋಟಿಗಳಾಗಿ ಶೇಕಡ 101ರಷ್ಟು ಹೆಚ್ಚಾಗಿದೆ. ಭಾರತ ಸರ್ಕಾರದಿಂದ ಪಡೆದ ಸಾಲಗಳು 2015–16ರಲ್ಲಿದ್ದ ₹13,002 ಕೋಟಿಗಳಿಂದ 2019–20ರಲ್ಲಿ ₹13,908 ಕೋಟಿಗಳಾಗಿ ಅಂತರ ವರ್ಷ ವ್ಯತ್ಯಯಗಳೊಂದಿಗೆ ಶೇಕಡ ಏಳರಷ್ಟು ಅಧಿಕವಾಗಿದೆ. ಆದರೆ 2019–20ರಲ್ಲಿ ಇದು ಹಿಂದಿನ ವರ್ಷಕ್ಕಿಂತ ₹749 ಕೋಟಿಗಳಷ್ಟು (ಶೇಕಡ ಐದು) ಕಡಿಮೆಯಾಗಿದೆ.

### *2.7.1.1 ಆಯವ್ಯಯದ ಹೊರಗಿನ ಸಾಲಗಳು*

ರಾಜ್ಯ ಸರ್ಕಾರಗಳು ಮಾಡುವ ಸಾಲಗಳನ್ನು ಭಾರತದ ಸಂವಿಧಾನದ ಅನುಚ್ಛೇದ 293(1) ಅಡಿಯಲ್ಲಿ ನಿಯಂತ್ರಿಸಲಾಗುತ್ತದೆ. ಸರ್ಕಾರಿ ಕಂಪನಿಗಳು/ನಿಗಮಗಳು/ಸಂಸ್ಥೆಗಳು ಮಾಡುವ ಸಾಲಗಳಿಗೆ ರಾಜ್ಯ ಸರ್ಕಾರವು ಖಾತರಿ ನೀಡುತ್ತದೆ. ಈ ಕಂಪನಿಗಳು/ನಿಗಮಗಳು/ಸಂಸ್ಥೆಗಳು ಆಯವ್ಯಯದ ಹೊರಗೆ ಪ್ರಕ್ಷೇಪಿಸಲಾದ ಅನೇಕ ರಾಜ್ಯ ಯೋಜನೆಗಳ ಅನುಷ್ಠಾನಕ್ಕೆ ಮಾರುಕಟ್ಟೆ/ಹಣಕಾಸುಸಂಸ್ಥೆಗಳ ಮೂಲಕ ಸಾಲಗಳನ್ನು ಪಡೆಯುತ್ತವೆ. ಈ ರೀತಿ ಪಡೆದ ಸಾಲಗಳು ಅಂತಿಮವಾಗಿ 'ಆಯವ್ಯಯದ ಹೊರಗಿನ ಸಾಲ'ಗಳೆಂದು ಕರೆಯಲ್ಪಡುವ ರಾಜ್ಯ ಸರ್ಕಾರದ ಹೊಣೆಗಾರಿಕೆಗಳಾಗಿ ಪರಿವರ್ತನೆಯಾಗುತ್ತವೆ. ರಾಜ್ಯ ಸರ್ಕಾರವು ಈ ಕಂಪನಿಗಳು/ನಿಗಮಗಳು/ಸಂಸ್ಥೆಗಳು ಪಡೆದ ಸಾಲವನ್ನು ಬಡ್ಡಿಯೊಂದಿಗೆ ಬಂಡವಾಳ ಲೆಕ್ಕದಡಿ ನಿಯತ ಆಯವ್ಯಯ ಅವಕಾಶದಲ್ಲಿ ಮರುಪಾವತಿ ಮಾಡುತ್ತದೆ.

2019–20ರಲ್ಲಿ ₹39,599 ಕೋಟಿಗಳ ಬಂಡವಾಳ ವೆಚ್ಚವು ಆಯವ್ಯಯದ ಹೊರಗಿನ ಸಾಲಗಳ ಅಸಲಿನ ಮರುಪಾವತಿ ₹1,194.23 ಕೋಟಿಗಳನ್ನು ಒಳಗೊಂಡಿದೆ. **ಕೋಷ್ಟಕ–2.32**ರಲ್ಲಿ 2019–20ರ ಅಂತ್ಯಕ್ಕೆ ಸಂಸ್ಥಾವಾರು ಸಾಲದ ಸ್ಥಿತಿಯನ್ನು ನೀಡಲಾಗಿದೆ.

**ಕೋಷ್ಟಕ–2.32: ಸಂಸ್ಥಾವಾರು ಆಯವ್ಯಯದ ಹೊರಗಿನ ಸಾಲಗಳ ಸ್ಥಿತಿ**

(₹ಕೋಟಿಗಳಲ್ಲಿ)

| ಕಂಪನಿ/ನಿಗಮ/ಮಂಡಳಿ | ಬಾಕಿಯಿರುವ ಆಯವ್ಯಯದ ಹೊರಗಿನ ಸಾಲಗಳು | 2019–20ರಲ್ಲಿನ ಸಾಲಗಳು | 2019–20ರಲ್ಲಿ ಮರು ಪಾವತಿಗಳು | | ಅಂತಿಮ ಶಿಲ್ಕು |
|---|---|---|---|---|---|
| | | | ಅಸಲು | ಬಡ್ಡಿ | |
| ಕೃಷ್ಣ ಭಾಗ್ಯ ಜಲ ನಿಗಮ | 7,086.95 | 1,505.49 | 193.04 | 668.92 | 8,399.40 |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 2,988.83 | 1,265.00 | 520.92 | 272.61 | 3,732.91 |
| ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 114.14 | 1.00 | 14.50 | 12.11 | 100.64 |
| ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ | 892.18 | 400.00 | 159.12 | 78.16 | 1,133.06 |
| ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮನಿಯಮಿತ | 5.39 | --- | 3.08 | 0.41 | 2.31 |
| ಕಾವೇರಿ ನೀರಾವರಿ ನಿಗಮ ನಿಯಮಿತ | 2,235.00 | 500.00 | 50.00 | 194.70 | 2,685.00 |
| ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ | 1,539.07 | 764.00 | 253.57 | 156.84 | 2,049.50 |
| ಒಟ್ಟು | **14,861.56** | **4,435.49** | **1,194.23** | **1,383.75** | **18,102.82** |

ರಾಜ್ಯದ ಆಯವ್ಯಯದ ಹೊರಗಿನ ಸಾಲಗಳನ್ನೂ ಪರಿಗಣಿಸಿದಲ್ಲಿ ಮಾರ್ಚ್ 2020ರ ಅಂತ್ಯಕ್ಕೆ ಒಟ್ಟು ಜವಾಬ್ದಾರಿಗಳು ₹3,37,520 ಕೋಟಿಗಳಷ್ಟಿದೆ. ವರ್ಷದ ಕೊನೆಗೆ ರಾಒಆಉಕ್ಕೆ ಬಾಕಿ ಇರುವ ಹೊಣೆಗಾರಿಕೆಗಳ (ಆಯವ್ಯಯದ ಹೊರಗಿನ ಸಾಲಗಳನ್ನೂ ಒಳಗೊಂಡಂತೆ) ದರವು ಶೇಕಡ 19.86ರಷ್ಟಿದೆ.

### *2.7.2 ವಿತ್ತೀಯ ಕೊರತೆಯ ಸಂಯೋಜನೆ ಮತ್ತು ಅದರ ಪೂರೈಕೆಯ ವಿಧಾನ*

**ಕೋಷ್ಟಕ–2.33**ರಲ್ಲಿ ಬಿಂಬಿಸಿದಂತೆ ವಿತ್ತೀಯ ಕೊರತೆಯ ಪೂರೈಕೆಯು ಸಂಯೋಜಿತ ಬದಲಾವಣೆಗೆ ಒಳಗಾಗಿದೆ ಮತ್ತು 2019–20ನೇ ವರ್ಷದ ಸ್ಥಿತಿಯನ್ನೂ **ಕೋಷ್ಟಕ–2.34**ರಲ್ಲಿ ತೋರಿಸಿದೆ. ರಾಜ್ಯವು ತನ್ನ ಆದಾಯ ಮತ್ತು ಋಣೇತರ ಸ್ವೀಕೃತಿಗಳನ್ನು ಮೀರಿದ ತನ್ನ ನಿಧಿ ಅಗತ್ಯತೆಯನ್ನು ಭರಿಸಲು ವಿವಿಧ ಸಾಲಗಳ ಮೊರೆ ಹೋಗುವುದನ್ನು ವಿತ್ತೀಯ ಕೊರತೆಯ ಕುಸಿತವು ತೋರಿಸಿದೆ. **ನಕ್ಷೆ 2.17**ರಲ್ಲಿ ಸಾಲಗಳ ಅಂಶವಾರು ಪ್ರವೃತ್ತಿಯನ್ನು ತೋರಿಸಲಾಗಿದೆ.

**ಕೋಷ್ಟಕ–2.33: ವಿತ್ತೀಯ ಕೊರತೆಯ ಭಾಗಗಳು ಮತ್ತು ಅದರ ಪೂರೈಕೆಯ ವಿಧಾನಗಳು**

(₹ ಕೋಟಿಗಳಲ್ಲಿ)

| | ವಿವರಗಳು | 2015–16 | 2016–17 | 2017–18 | 2018–19 | 2019–20 |
|---|---|---|---|---|---|---|
| ಆರ್ಥಿಕ ಕೊರತೆಯ ಸಂಯೋಜನೆ | | **–19,169** | **–28,664** | **–31,101** | **–38,442** | **–38,166** |
| 1 | ರಾಜಸ್ವ ಹೆಚ್ಚಳ | 1,789 | 1,293 | 4,518 | 679 | 1,185 |
| 2 | ನಿವ್ವಳ ಬಂಡವಾಳ ವೆಚ್ಚ | 20,361 | 28,123 | 30,663 | 34,665 | 35,485 |
| 3 | ನಿವ್ವಳ ಸಾಲಗಳು ಮತ್ತು ಮುಂಗಡಗಳು | 597 | 1,834 | 4,956 | 4,456 | 3,866 |
| ಆರ್ಥಿಕ ಕೊರತೆಯನ್ನು ತುಂಬಿದ ರೀತಿ* | | | | | | |
| 1 | ಮಾರುಕಟ್ಟೆ ಸಾಲಗಳು | 14,914 | 24,026 | 17,348 | 32,183 | 42,499 |
| 2 | ಭಾರತ ಸರ್ಕಾರದಿಂದ ಸಾಲಗಳು | 321 | 791 | 761 | 103 | –749 |
| 3 | ಎನ್‌ಎಸ್‌ಎಸ್‌ಎಫ್‌ಗೆ ನೀಡಿದ ವಿಶೇಷ ಭದ್ರತೆಗಳು | 1,563 | –1,573 | –1,573 | –1,595 | –1,628 |
| 4 | ಹಣಕಾಸು ಸಂಸ್ಥೆಗಳಿಂದ ಸಾಲಗಳು | 164 | 491 | 316 | 141 | 156 |
| 5 | ಸಣ್ಣ ಉಳಿತಾಯಗಳು, ಭವಿಷ್ಯನಿಧಿ, ಮುಂತಾದವುಗಳು | 2,086 | 2,657 | 2,812 | 3,292 | 4,156 |
| 6 | ಠೇವಣಿಗಳು ಮತ್ತು ಮುಂಗಡಗಳು | 284 | 3,041 | 1,833 | 3,068 | 3,174 |
| 7 | ಅಮಾನತ್ತು ಮತ್ತು ಇತರೆ | 990 | 491 | –1,509 | –6,087 | –1,364 |
| 8 | ಇರಸಾಲುಗಳು | –17 | –38 | –76 | –40 | –347 |
| 9 | ಮೀಸಲು ನಿಧಿಗಳು | 2,081 | 6,013 | 3,019 | 3,197 | 4,728 |
| 10 | **ಒಟ್ಟಾರೆ ಕೊರತೆ** | **22,386** | **35,899** | **22,931** | **34,262** | **50,625** |
| 11 | ನಗದು ಶಿಲ್ಕಿನಲ್ಲಿ ಏರಿಕೆ/ಇಳಿಕೆ | –3,217 | –7,235 | 8,170 | 4,180 | –12,459 |
| 12 | **ಒಟ್ಟಾರೆ ವಿತ್ತೀಯ ಕೊರತೆ** | **19,169** | **28,664** | **31,101** | **38,442** | **38,166** |

*ಈ ಎಲ್ಲ ಅಂಕಿಗಳು ಪ್ರಸಕ್ತ ವರ್ಷದ ನಿವ್ವಳ ವಿತರಣೆಗಳು/ಹೊರ ಹರಿವುಗಳು ಆಕರ: ಹಣಕಾಸುಲೆಕ್ಕಗಳು

**ಕೋಷ್ಟಕ–2.34: 2019–20ರಲ್ಲಿ ವಿತ್ತೀಯ ಕೊರತೆಯ ಭಾಗಗಳ ಪೂರೈಕೆಯ ಸ್ವೀಕೃತಿಗಳ ಮತ್ತು ವಿತರಣೆಗಳ ಭಾಗಗಳು**

(₹ಕೋಟಿಗಳಲ್ಲಿ)

| | ವಿವರಗಳು | ಸ್ವೀಕೃತಿಗಳು | ವಿತರಣೆಗಳು | ನಿವ್ವಳ |
|---|---|---|---|---|
| 1 | ಮಾರುಕಟ್ಟೆ ಸಾಲಗಳು | 48,499 | 6,000 | 42,499 |
| 2 | ಭಾರತ ಸರ್ಕಾರದಿಂದ ಸಾಲಗಳು | 675 | 1,424 | –749 |
| 3 | ಎನ್‌ಎಸ್‌ಎಸ್‌ಎಫ್‌ಗೆ ನೀಡಿದ ವಿಶೇಷ ಭದ್ರತೆಗಳು | – | 1,628 | –1,628 |
| 4 | ಆರ್‌ಬಿಐನಿಂದ ಮಾರ್ಗೋಪಾಯ ಮುಂಗಡಗಳು | 310 | 310 | – |
| 5 | ಹಣಕಾಸು ಸಂಸ್ಥೆಗಳಿಂದ ಸಾಲಗಳು | 974 | 818 | 156 |
| 6 | ಸಣ್ಣ ಉಳಿತಾಯಗಳು, ಭವಿಷ್ಯನಿಧಿ ಮುಂತಾದವುಗಳು | 8,331 | 4,175 | 4,156 |
| 7 | ಠೇವಣಿಗಳು ಮತ್ತು ಮುಂಗಡಗಳು | 60,643 | 57,469 | 3,174 |
| 8 | ಅಮಾನತ್ತು ಮತ್ತು ಸಂಕೀರ್ಣ | 1,77,493 | 1,78,857 | –1,364 |
| 9 | ಇರಸಾಲುಗಳು | 46 | 393 | –347 |
| 10 | ಮೀಸಲುನಿಧಿ | 9,126 | 4,398 | 4,728 |
| 11 | **ಒಟ್ಟಾರೆಕೊರತೆ** | **3,06,097** | **2,55,472** | **50,625** |
| 12 | ನಗದು ಶಿಲ್ಕಿನಲ್ಲಿ ಏರಿಕೆ/ಇಳಿಕೆ | 22,004 | 34,463 | –12,459 |
| 13 | **ಒಟ್ಟಾರೆ ವಿತ್ತೀಯ ಕೊರತೆ** | **3,28,101** | **2,89,935** | **38,166** |

**ನಕ್ಷೆ-2.17: ಅಂಶವಾರು ಋಣ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)




| | 2015-16 | 2016-17 | 2017-18 | 2018-19 | 2019-20 |
|---|---|---|---|---|---|
| ಮಾರುಕಟ್ಟೆ ಸಾಲಗಳು | 14,914 | 24,026 | 17,348 | 32,183 | 42,499 |
| ಭಾರತ ಸರ್ಕಾರದಿಂದ ಸಾಲಗಳು | 321 | 791 | 761 | 103 | -749 |
| ಎನ್‌ಎಸ್‌ಎಫ್‌ಎಫ್‌ಗೆ ನೀಡಿದ ವಿಶೇಷ ಭದ್ರತೆಗಳು | 1,563 | -1,573 | -1,573 | -1,595 | -1,628 |
| ಹಣಕಾಸು ಸಂಸ್ಥೆಗಳಿಂದ ಸಾಲಗಳು | 164 | 491 | 316 | 141 | 156 |
| ಸಣ್ಣ ಉಳಿತಾಯಗಳು, ಪಿಎಫ್ ಮುಂತಾದವುಗಳು | 2,086 | 2,657 | 2,812 | 3,292 | 4,156 |
| ಠೇವಣಿಗಳು ಮತ್ತು ಮುಂಗಡಗಳು | 284 | 3,041 | 1,833 | 3,068 | 3,174 |
| ಅಮಾನತ್ತು ಮತ್ತು ಸಂಕೀರ್ಣ | 990 | 491 | -1,509 | -6,087 | -1,364 |
| ಇರಸಾಲುಗಳು | -17 | -38 | -76 | -40 | -347 |
| ಮೀಸಲು ನಿಧಿ | 2,081 | 6,013 | 3,019 | 3,197 | 4,728 |
| ನಗದು ಶಿಲ್ಕಿನಲ್ಲಿ ಏರಿಕೆ/ಇಳಿಕೆ | -3,217 | -7,235 | 8,170 | 4,180 | -12,459 |
| ಒಟ್ಟಾರೆ ಆರ್ಥಿಕ ಕೊರತೆ | 19,169 | 28,664 | 31,101 | 38,442 | 38,166 |

ರಾಜ್ಯವು 2004–05ರಿಂದಲೇ ರಾಜಸ್ವ ಹೆಚ್ಚಳವನ್ನು ಸಾಧಿಸಿದ್ದು, ರಾಜಸ್ವ ಲೆಕ್ಕದಲ್ಲಿನ ಹೆಚ್ಚಳ, ಮಾರುಕಟ್ಟೆ ಸಾಲಗಳು, ಕೇಂದ್ರ ಸರ್ಕಾರದಿಂದ ಸಾಲ ಇತ್ಯಾದಿಗಳು ಬಂಡವಾಳ ವೆಚ್ಚಕ್ಕೆ ಬಳಕೆಯಾಗಿವೆ. 2019–20ರಲ್ಲಿ ಹಣಕಾಸು ಸಂಸ್ಥೆಗಳಿಂದ ಸಾಲ, ಸಣ್ಣ ಉಳಿತಾಯ, ಭವಿಷ್ಯನಿಧಿ ಇತ್ಯಾದಿ, ಠೇವಣಿಗಳು ಮತ್ತು ಮುಂಗಡಗಳು, ಮೀಸಲು ನಿಧಿಗಳು, ಮುಖ್ಯವಾಗಿ ಚೆಕ್ಕುಗಳು ಮತ್ತು ಬಿಲ್ಲುಗಳ ವ್ಯವಹಾರಗಳನ್ನೊಳಗೊಂಡ ಅಮಾನತ್ತು ಮತ್ತು ಇತರೆ ಶಿಲ್ಕುಗಳಲ್ಲಿ ಹಿಂದಿನ ವರ್ಷಕ್ಕಿಂತ ಹೆಚ್ಚಳವಾಗಿದೆ. ಭಾರತ ಸರ್ಕಾರದಿಂದ ಪಡೆದ ಸಾಲಗಳಲ್ಲಿ ಇಳಿಕೆಯಾಗಿದೆ. ಒಟ್ಟು ₹42,499 ಕೋಟಿಗಳ ಮಾರುಕಟ್ಟೆ ಸಾಲಗಳಲ್ಲಿ ₹30,040 ಕೋಟಿಗಳಷ್ಟು ಮೊತ್ತವನ್ನು ಮಾತ್ರ ವಿತ್ತೀಯ ಕೊರತೆಯನ್ನು ತುಂಬಲು ಬಳಸಿಕೊಂಡಿದ್ದು ಉಳಿದ ₹12,459 ಕೋಟಿಗಳು ರಾಜ್ಯದ ನಗದು ಶಿಲ್ಕಿನಲ್ಲಿ ಉಳಿದಿದೆ.

### *2.7.3 ಋಣ ಚಿತ್ರಣ : ಅವಧಿ ಪೂರ್ಣತೆ ಮತ್ತು ಮರುಪಾವತಿ*

ಸಾಲಗಳ ಅವಧಿ ಪೂರ್ಣತೆ ಮತ್ತು ಮರುಪಾವತಿಯ ಚಿತ್ರಣವು ರಾಜ್ಯದ ಸಾಲ ಮರುಪಾವತಿಯ ಅಥವ ಋಣಸೇವೆಯ ಬದ್ಧತೆಯನ್ನು ಸೂಚಿಸುತ್ತದೆ. ಸಾರ್ವಜನಿಕ ಋಣದ ಅವಧಿ ಪೂರ್ಣತೆಯ ಚಿತ್ರಣವನ್ನು**ಕೋಷ್ಟಕ-2.35**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.35: ಸಾರ್ವಜನಿಕ ಋಣದ ಅವಧಿ ಪೂರ್ಣತೆಯ ಚಿತ್ರಣ**

(₹ ಕೋಟಿಗಳಲ್ಲಿ)

| ಅವಧಿ ಪೂರ್ಣಗೊಳ್ಳುವ ವರ್ಷ | ಅವಧಿ | ಮೊತ್ತ | | | ಒಟ್ಟು ಸಾರ್ವಜನಿಕ ಋಣದ ಶೇಕಡಾವಾರು |
|---|---|---|---|---|---|
| | | ಆಂತರಿಕ ಋಣ | ಭಾರತ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು | ಒಟ್ಟು | |
| 2020–21ರೊಳಗೆ | 0–1 ವರ್ಷ | 9,379.96 | 694.53 | 10,074.49 | 4.30 |
| 2021–22 ಮತ್ತು 2022–23ರ ನಡುವೆ | 2–3 ವರ್ಷಗಳು | 25,175.21 | 1,390.82 | 26,566.03 | 11.34 |
| 2023–24 ಮತ್ತು 2024–25ರ ನಡುವೆ | 4–5 ವರ್ಷಗಳು | 38,332.71 | 1,052.32 | 39,385.03 | 16.82 |
| 2025–26 ಮತ್ತು 2026–27ರ ನಡುವೆ | 5–6 ವರ್ಷಗಳು | 51,456.69 | 456.29 | 51,912.98 | 22.16 |
| 2027–28 ಮತ್ತು 2028–29ರ ನಡುವೆ | 6–7 ವರ್ಷಗಳು | 57,148.57 | 316.29 | 57,464.86 | 24.53 |
| 2029–30ರ ನಂತರ | 7 ವರ್ಷಗಳ ಮೇಲೆ | 38,843.78 | 9,998.25 | 48,842.03 | 20.85 |
| ಒಟ್ಟು | | 2,20,336.92 | 13,908.50 | 2,34,245.42 | – |

31 ಮಾರ್ಚ್ 2020 ರಲ್ಲಿದ್ದಂತೆ₹2,34,245.42 ಕೋಟಿ ಬಾಕಿ ಉಳಿದಿರುವ ಸಾರ್ವಜನಿಕ ಋಣದಲ್ಲಿ, ಶೇಕಡಾ 46.69ರಷ್ಟು (₹1,09,377.84 ಕೋಟಿ) 5–7 ವರ್ಷಗಳ ಮತ್ತು ಶೇಕಡಾ 20.85 ರಷ್ಟು (₹48,842.03 ಕೋಟಿ) ಏಳು ವರ್ಷಗಳಿಗಿಂತ ಹೆಚ್ಚಿನ ಅವಧಿ ಪೂರ್ಣತೆಯ ಶ್ರೇಣಿಗೆ ಸೇರಿದೆ ಎಂದು ಸಾರ್ವಜನಿಕ ಋಣದ ಅವಧಿ ಪೂರ್ಣತೆಯ ವಿವರವು ಸೂಚಿಸುವುದರೊಂದಿಗೆ ಇದು ಸಮೀಪದಲ್ಲಿ ವಿಮೋಚನಾ ಒತ್ತಡವಿಲ್ಲದಿರುವುದನ್ನು ಸೂಚಿಸುತ್ತದೆ.

## 2.8 ಋಣ ಸಹಿಷ್ಣುತೆಯ ವಿಶ್ಲೇಷಣೆ

ಪ್ರಸಕ್ತ ಸಂದರ್ಭದಲ್ಲಿ ರಾಜ್ಯವು ತನ್ನ ಋಣವನ್ನು ಪ್ರಸ್ತುತ ಮತ್ತು ಭವಿಷ್ಯದಲ್ಲಿ ಪೂರೈಸುವ ಸ್ಥಿತಿಯಲ್ಲಿದ್ದರೆ ಸಾಲವನ್ನು ಸಹಿಷ್ಣುವೆಂದು ಪರಿಗಣಿಸಲಾಗುತ್ತದೆ. ರಾಜ್ಯ ಸರ್ಕಾರದ ಸಾಲದ ಪರಿಮಾಣವಲ್ಲದೆ, ರಾಜ್ಯದ ಋಣ ಸಹಿಷ್ಣುತೆಯನ್ನು ನಿರ್ಧರಿಸುವ ವಿವಿಧ ಸೂಚಕಗಳನ್ನು ವಿಶ್ಲೇಷಿಸುವುದು ಮುಖ್ಯವಾಗಿದೆ. ಅದಕ್ಕೆ ಅನುಗುಣವಾಗಿ ಋಣ ಸಹಿಷ್ಣುತೆ ಸೂಚಕಗಳು ಮತ್ತು ಸಾಲವನ್ನು ಕಾಲಕಾಲಕ್ಕೆ ಅಸಲು ಮತ್ತು ಬಡ್ಡಿ ಪಾವತಿಗಳನ್ನು ಸಂದಾಯ ಮಾಡಲು ಅಗತ್ಯವಾದ ಪ್ರಸ್ತುತ ಮತ್ತು ನಿಯತ ಆದಾಯದ ಮೂಲಗಳಿಂದ ದ್ರವ್ಯ ಲಭ್ಯತೆಯನ್ನು ಆ ಮೂಲಕ ರಾಜ್ಯದ ವಿಶ್ವಾಸಾರ್ಹತೆಯನ್ನು ಮಾಪನ ಮಾಡಲು ಪ್ರಯತ್ನಿಸುತ್ತವೆ..

ಈ ವಿಭಾಗವು ರಾಜ್ಯ ಸರ್ಕಾರದ ಋಣ ಸಹಿಷ್ಣುತೆಯನ್ನು ಋಣ/ರಾಒಆಂಉದ ಅನುಪಾತ, ವಿತ್ತೀಯ ಕೊರತೆ, ಬಡ್ಡಿ ಪಾವತಿಗಳ ಹೊರೆ (ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಗಳ ಅನುಪಾತದಿಂದ ಅಳೆಯಲಾಗುತ್ತದೆ) ಮತ್ತು ರಾಜ್ಯ ಸರ್ಕಾರದ ಸಾಲದ ಅವಧಿ ಮುಕ್ತಾಯದ ವಿವರಗಳ ಮೂಲಕ ನಿರ್ಣಯಿಸುತ್ತದೆ.

2015–16 ರಿಂದ ಪ್ರಾರಂಭವಾಗುವ ಐದು ವರ್ಷಗಳ ಅವಧಿಗೆ ಈ ಸೂಚಕಗಳ ಪ್ರಕಾರ ರಾಜ್ಯದ ಋಣ ಸಹಿಷ್ಣುತೆಯನ್ನು**ಕೋಷ್ಟಕ–2.36**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.36: ಋಣ ಸಹಿಷ್ಣುತೆಯಸೂಚಕಗಳಲ್ಲಿನ ಪ್ರವೃತ್ತಿಗಳು**

| ಋಣ ಸಹಿಷ್ಣುತೆ ಸೂಚಕಗಳು | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಬಾಕಿಯಿರುವ ಸಾರ್ವಜನಿಕ ಋಣ* (₹ ಕೋಟಿಗಳಲ್ಲಿ) | 1,22,547 | 1,46,283 | 1,63,136 | 1,93,966 | 2,34,245 |
| ಬಾಕಿಯಿರುವ ಸಾರ್ವಜನಿಕ ಋಣದ ವೃದ್ಧಿಯ ದರ (ಶತಾಂಶವಾಗಿ) | 16.06 | 19.37 | 11.52 | 18.90 | 20.77 |
| ರಾಒಆಉ (₹ ಕೋಟಿಗಳಲ್ಲಿ) | 10,45,168 | 12,09,136 | 13,57,579 | 15,44,399 | 16,99,115 |
| ರಾಒಆಉ ದ ವೃದ್ಧಿಯದರ (ಶೇಕಡ) | 14.36 | 15.69 | 12.28 | 13.76 | 10.02 |
| ಋಣ/ರಾಒಆಉ (ಶೇಕಡ) | 11.73 | 12.10 | 12.02 | 12.56 | 13.79 |
| ವಿತ್ತೀಯ ಕೊರತೆ/ರಾಒಆಉ (ಶೇಕಡ) | 1.83 | 2.37 | 2.29 | 2.49 | 2.25 |
| ಬಡ್ಡಿ ಪಾವತಿ (ಶೇಕಡ) | 11,343 | 12,850 | 14,973 | 16,614 | 19,903 |
| ಬಾಕಿಯಿರುವ ಸಾರ್ವಜನಿಕ ಋಣದ ಮೇಲಿನ ಸರಾಸರಿ ಬಡ್ಡಿ ದರ (ಶೇಕಡ) | 9.94 | 9.56 | 9.68 | 9.30 | 9.30 |
| ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಗಳ ಅನುಪಾತ | 9.55 | 9.65 | 10.18 | 10.07 | 11.34 |
| ಋಣ ಸ್ವೀಕೃತಿಗಳಿಗೆ ಋಣ ಮರುಪಾವತಿಯ ಶೇಕಡ | 19.50 | 23.82 | 32.92 | 26.44 | 20.17 |
| ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಋಣ# (₹ಕೋಟಿಗಳಲ್ಲಿ) | 8,060 | 13,609 | 5,005 | 17,766 | 24,510 |
| ಋಣ ಸ್ವೀಕೃತಿಗಳಿಗೆ ಶೇಕಡಾವಾರಾಗಿ ಲಭ್ಯವಿರುವ ನಿವ್ವಳ ಋಣ(ಶೇಕಡ) | 38.25 | 43.68 | 19.92 | 42.39 | 48.57 |
| ಋಣ ಸ್ಥಿರೀಕರಣ (ಪ್ರಮಾಣಹರವು[25] + ಪ್ರಾಥಮಿಕ ಕೊರತೆ) | –2,409 | –6,847 | – 11,886 | – 13,177 | –16,576 |

ಮೂಲ: ಹಣಕಾಸು ಖಾತೆಗಳು

* ಬಾಕಿ ಇರುವ ಸಾರ್ವಜನಿಕ ಋಣ ಎಂದರೆ 6003–ಆಂತರಿಕ ಋಣ ಮತ್ತು 6004– ಭಾರತ ಸರ್ಕಾರದಿಂದ ಸಾಲ ಮತ್ತು ಮುಂಗಡಗಳ ಅಡಿಯಲ್ಲಿ ಬಾಕಿ ಇರುವ ಒಟ್ಟು ಮೊತ್ತ.

\# ರಾಜ್ಯ ಸರ್ಕಾರಕ್ಕೆ ಲಭ್ಯವಿರುವ ನಿವ್ವಳ ಋಣವನ್ನು ಸಾರ್ವಜನಿಕ ಸಾಲ ಮರುಪಾವತಿ ಮತ್ತು ಬಡ್ಡಿ ಪಾವತಿಗಳಿಗೆ ಮೀರಿದ ಸಾರ್ವಜನಿಕ ಋಣ ಸ್ವೀಕೃತಿಯೆಂದು ಲೆಕ್ಕಹಾಕಲಾಗುತ್ತದೆ.

ಋಣ ಸಹಿಷ್ಣುತೆಗೆ ಸಂಬಂಧಿಸಿದಂತೆ 14ನೇ ಹಣಕಾಸು ಆಯೋಗವು ಶಿಫಾರಸು ಮಾಡಿದ ಹಣಕಾಸಿನ ಬಲವರ್ಧನೆಯ ಮಾರ್ಗಸೂಚಿಯು ಕೆಳಗಿನ ಗುರಿಗಳನ್ನು ನಿಗದಿಪಡಿಸಿದೆ –

- ಋಣ – ರಾಒಆಉದ ಅನುಪಾತವು ಶೇಕಡಾ 26.22 ಕ್ಕಿಂತ ಕಡಿಮೆಯಿರಬೇಕು;
- ರಾಒಆಉಕ್ಕೆ ವಿತ್ತೀಯ ಕೊರತೆಯ ಅನುಪಾತವು ಶೇಕಡಾ 3.25 ಕ್ಕಿಂತ ಕಡಿಮೆಯಿರಬೇಕು ಮತ್ತು
- ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿಪಾವತಿಯ ಅನುಪಾತವು ಶೇಕಡಾ 9.15 ಕ್ಕಿಂತ ಕಡಿಮೆಯಿರಬೇಕು.

**ಕೋಷ್ಟಕ–2.36**ರಲ್ಲಿ ತೋರಿಸಲಾದ 2015–16 ರಿಂದ 2019–20ರವರೆಗಿನ ಐದು ವರ್ಷಗಳ ಅವಧಿಯ ವಿಶ್ಲೇಷಣೆಯಿಂದ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ

- ಋಣ/ರಾಒಆಉದ ಅನುಪಾತವು ಸ್ಥಿರವಾಗಿದೆ ಮತ್ತು ಹದಿನಾಲ್ಕನೆಯ ಹಣಕಾಸು ಆಯೋಗವು ಶಿಫಾರಸು ಮಾಡಿದ ಶೇಕಡಾ 26.22 ಕ್ಕಿಂತಲೂ ಕಡಿಮೆಯಾಗಿದೆ ಮತ್ತು ಋಣ ಪ್ರಮಾಣವು ಕೆಎಫ್ಆರ್ಎಯಲ್ಲಿ ನಿಗದಿಪಡಿಸಿದ ಶೇಕಡಾ 25.00ರ ಮಿತಿಗಿಂತ ಕೆಳಗಿದೆ;
- ರಾಒಆಉಕ್ಕೆ ವಿತ್ತೀಯ ಕೊರತೆಯ ಅನುಪಾತವು ಸ್ಥಿರವಾಗಿದೆ ಮತ್ತು 2015–16 ರಿಂದ 2019–20ರ ಅವಧಿಯಲ್ಲಿ 14ನೆಯ ಹಣಕಾಸು ಆಯೋಗವು ಶಿಫಾರಸು ಮಾಡಿದ ಶೇಕಡಾ 3.25 ಕ್ಕಿಂತ ಕಡಿಮೆಯಾಗಿದೆ;
- ರಾಜಸ್ವ ಸ್ವೀಕೃತಿಗಳಿಗೆ ಬಡ್ಡಿ ಪಾವತಿಯ ಹೊರೆಯು 14ನೇಹಣಕಾಸು ಆಯೋಗವು ಶಿಫಾರಸು ಮಾಡಿದ ಪ್ರಮಾಣಕ್ಕಿಂತ ಹೆಚ್ಚಾಗಿದೆ. 2015–16ರಿಂದ 2019–20ರ ಅವಧಿಯಲ್ಲಿ, ಬಡ್ಡಿ ಪಾವತಿ/ರಾಜಸ್ವ ಸ್ವೀಕೃತಿಗಳ ಅನುಪಾತವು 14ನೇ ಹಣಕಾಸು ಆಯೋಗವು ಶಿಫಾರಸು ಮಾಡಿದ ಶೇಕಡಾ 8.62 ರಿಂದ 9.15 ಕ್ಕೆ ಪ್ರತಿಯಾಗಿ 9.55 ರಿಂದ 11.34 ರ ನಡುವೆ ಇದ್ದಿತು;

[25] ಋಣಭಾರದ ಶತಾಂಶವಾಗಿ ಬಡ್ಡಿದರವು ಪ್ರಮಾಣ ಹರವು ಎನಿಸುತ್ತದೆ.ಬಡ್ಡಿ ಹರವು ರಾಒಆಉದ ವೃದ್ಧಿಯ ದರ ಮತ್ತು ಬಾಕಿ ಇರುವ ಸಾರ್ವಜಮಿಕ ಋಣದ ಮೇಲಿನ ಸರಾಸರಿ ಬಡ್ಡಿಯ ದರದ ನಡುವಿನ ವ್ಯತ್ಯಾಸ.

- ಬಾಕಿ ಇರುವ ಸಾರ್ವಜನಿಕ ಋಣದ ವೃದ್ಧಿಯ ದರವು ರಾಒಆಂಉದ ಬೆಳವಣಿಗೆಗಿಂತ ಹೆಚ್ಚಾಗಿದ್ದು, ಇದು ರಾಒಆಂಉ ಅನುಪಾತಕ್ಕಿಂತಹೆಚ್ಚಿನ ಸಾಲವನ್ನು ಸೂಚಿಸುತ್ತದೆ;
- 2015–16 ರಿಂದ 2019–20ರ ಅವಧಿಯಲ್ಲಿ ಸಾರ್ವಜನಿಕ ಋಣ ಸ್ವೀಕೃತಿಗಳಿಗೆ ಸಾರ್ವಜನಿಕ ಋಣ ಮರುಪಾವತಿಯ ಶೇಕಡಾವು 19.50 ಮತ್ತು 32.92 ರ ನಡುವೆ ಇದ್ದಿತು;
- ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಋಣದಲ್ಲಿನ ಹೆಚ್ಚಳವು ಮುಖ್ಯವಾಗಿ ಆಂತರಿಕ ಋಣದ ಅಡಿಯಲ್ಲಿ ಸ್ವೀಕೃತಿಗಳು 2018–19ರಲ್ಲಿದ್ದ ₹40,470 ಕೋಟಿಯಿಂದ 2019–20ರಲ್ಲಿ ₹49,784 ಕೋಟಿಗೆ ಹೆಚ್ಚಿದ್ದರಿಂದ ಉಂಟಾಗಿದ್ದು ಇದು ಕೇಂದ್ರ ಸರಕಾರದಿಂದ ಪಡೆದ ಸಾಲ ಮತ್ತು ಮುಂಗಡಗಳಲ್ಲಿನ ಇಳಿಕೆಯಿಂದಾಗಿ ಉತಾರಗೊಂಡಿದೆ; ಮತ್ತು
- ಋಣ ಪ್ರಮಾಣ ಹರವು ಮತ್ತು ಪ್ರಾಥಮಿಕ ಕೊರತೆಯು ಋಣಾತ್ಮಕ ಮೊತ್ತವನ್ನು ತೋರಿಸಿರುವುದು ಅಸ್ಥಿರ ಸಾಲದತ್ತಣ ಪ್ರವೃತ್ತಿಯನ್ನು ಸೂಚಿಸುತ್ತದೆ.

### *2.8.1 ಸಾಲದ ಮೊತ್ತಗಳ ಬಳಕೆ*

ಸಾಲಗಳಿಂದ ಪಡೆದ ಮೊತ್ತಗಳನ್ನು ಸಾಮಾನ್ಯವಾಗಿ ಬಂಡವಾಳ ಸೃಜನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳಿಗೆ ಮಾತ್ರ ಬಳಸಬೇಕು. ವರ್ತಮಾನ ವೆಚ್ಚಕ್ಕೆ ಹಾಗೂ ಬಾಕಿ ಉಳಿದ ಸಾಲಗಳ ಬಡ್ಡಿ ಮರುಪಾವತಿಗೆ ಸಾಲದ ಮೂಲಕ ಪಡೆದ ಮೊತ್ತವನ್ನು ಬಳಸುವುದು ಸಹಿಷ್ಣುತೆಯಲ್ಲ. 2015–16ರಿಂದ 2019–20ರವರೆಗಿನ ಸಾಲಗಳ ಮೂಲಕ ಪಡೆದ ಮೊತ್ತಗಳ ಬಳಕೆಯನ್ನು **ಕೋಷ್ಟಕ–2.37**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–2.37: ಸಾಲಗಳ ಮೂಲಕ ಪಡೆದ ಮೊತ್ತಗಳ ಬಳಕೆ**

(₹ ಕೋಟಿಗಳಲ್ಲಿ)

| ಕ್ರ.ಸಂ | ವರ್ಷದವಿವರ | 2015–16 | 2016–17 | 2017–18 | 2018–19 | 2019–20 |
|---|---|---|---|---|---|---|
| 1 | ಒಟ್ಟು ಪಡೆದ ಸಾಲ | 21,072 | 31,156 | 25,122 | 41,914 | 50,459 |
| 2 | ಹಿಂದೆ ಪಡೆದ ಸಾಲದ (ಅಸಲು) ಮರುಪಾವತಿ | 4,110 | 7,420 | 9,269 | 11,083 | 10,180 |
| 3 | ನಿವ್ವಳ ಬಂಡವಾಳ ವೆಚ್ಚ | 20,361 | 28.123 | 30,663 | 34,665 | 35,485 |
| 4 | ನಿವ್ವಳ ಸಾಲಗಳು ಮತ್ತು ಮುಂಗಡಗಳು | 597 | 1,834 | 4,956 | 4,456 | 3,866 |
| 5 | ಸಾಲಗಳ ಮೂಲಕ ಪಡೆದ ಮೊತ್ತಗಳ ನಿವ್ವಳ ಉಳಿಕೆ | –3,996 | –6,221 | –18,766 | –8,290 | 928 |

ಮೇಲಿನ ಕೋಷ್ಟಕದಿಂದ, 2015–16ರಿಂದ 2018–19ರವರೆಗಿನ ಬಂಡವಾಳ ವೆಚ್ಚವನ್ನು (ಸಾಲ ಮತ್ತು ಮುಂಗಡಗಳನ್ನೊಳಗೊಂಡು) ಭರಿಸಲು ಪಡೆದ ಸಾಲ ಅಪರ್ಯಾಪ್ತವಾಗಿರುವುದನ್ನು ಗಮನಿಸಲಾಗಿದೆ. 2019–20ರಲ್ಲಿ, ಪಡೆದ ಸಾಲದ ಮೊತ್ತವು ಬಂಡವಾಳ ವೆಚ್ಚ ಭರಿಸುವಲ್ಲಿ ಪರ್ಯಾಪ್ತವಾಗಿತ್ತು. ಇದು ಸರ್ಕಾರವು ಅಗತ್ಯಕ್ಕಿಂತ ಹೆಚ್ಚು ಮೊತ್ತದ ಸಾಲವನ್ನು ಪಡೆಯಲಾಗಿದೆ ಎಂಬುದನ್ನು ಸೂಚಿಸುತ್ತದೆ.

### *2.8.2 ಖಾತರಿಗಳ ಸ್ಥಿತಿ–ಸಾಂದರ್ಭಿಕ ಜವಾಬ್ದಾರಿಗಳು*

ಸರ್ಕಾರವು ಖಾತರಿ ನೀಡಿದ ಸಾಲಗಾರರು ಸಾಲ ತೀರಿಸದಿದ್ದ ಪ್ರಸಂಗಗಳಲ್ಲಿ ಖಾತರಿಗಳು ರಾಜ್ಯದ ಸಾಂದರ್ಭಿಕ ಜವಾಬ್ದಾರಿಗಳಾಗಿ ಪರಿಣಮಿಸುತ್ತವೆ. ಯಾವುದೇ ವರ್ಷದ ಏಪ್ರಿಲ್ ತಿಂಗಳ ಒಂದರಂದು ಇದ್ದಂತೆ ಸರ್ಕಾರವು ನೀಡಿದ ಖಾತರಿ ಶಿಲ್ಕು ಎರಡನೇ ಹಿಂದಿನ ವರ್ಷದ ರಾಜಸ್ವ ಸ್ವೀಕೃತಿಗಳ ಶೇಕಡ 80ರಷ್ಟನ್ನು ಮೀರಬಾರದೆಂದು ಕರ್ನಾಟಕ ಖಾತರಿಗಳ ಮೇಲಿನ ಮಿತಿಯ ಕಾಯಿದೆ 1999 ವಿಧಿಸುತ್ತದೆ. **ಕೋಷ್ಟಕ–2.38**ರಲ್ಲಿ ಹಿಂದಿನ ಐದು ವರ್ಷಗಳ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ–2.38: ರಾಜ್ಯಸರ್ಕಾರವು ನೀಡಿದ ಖಾತರಿಗಳು**

(₹ ಕೋಟಿಗಳಲ್ಲಿ)

| ಖಾತರಿಗಳು | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ವರ್ಷದ 31 ಮಾರ್ಚ್ ಕೊನೆಗೆ ಖಾತರಿ ನೀಡಿದ ಗರಿಷ್ಠ ಮೊತ್ತ | 18,358 | 21,115 | 24,025 | 30,719 | 35,694 |
| ವರ್ಷದ ಕೊನೆಗೆ ಬಡ್ಡಿಯನ್ನು ಒಳಗೊಂಡು ಬಾಕಿಯಿರುವ ಖಾತರಿಗಳ ಮೊತ್ತ | 13,324 | 15,392 | 18,416 | 24,091 | 26,830 |

ಆಕರ: ಹಣಕಾಸು ಖಾತೆಗಳು

ಪ್ರತಿವರ್ಷ ಏಪ್ರಿಲ್ ಒಂದರಂದು ಬಾಕಿ ಇರುವ ಖಾತರಿಗಳ ಮೊತ್ತವು ನಿಗದಿತ ಮಿತಿಯೊಳಗೆ ಇದೆ. 2019–20ರ ಅಂತ್ಯಕ್ಕೆ ಬಾಕಿ ಇರುವ ₹26830 ಕೋಟಿಗಳು (ಅಸಲು+ಬಡ್ಡಿ) ವಿವಿಧ ವಿಭಾಗಗಳಲ್ಲಿನ[26] 161 ಸಂಸ್ಥೆ/ಕಂಪನಿಗಳಿಗೆ ನೀಡಿದ ಖಾತರಿಗಳನ್ನು ಒಳಗೊಂಡಿದೆ.

ರಾಜ್ಯ ಸರ್ಕಾರವು ವರದಿ ಮಾಡಿರುವಂತೆ 2019–20ರಲ್ಲಿ ಪ್ರಕ್ಷೇಪಿಸಿದ್ದ ₹469.49 ಕೋಟಿಗಳ ಖಾತರಿ ಶುಲ್ಕಕ್ಕೆ ಪ್ರತಿಯಾಗಿ ಕೇವಲ ₹205.21 ಕೋಟಿಗಳು ಮಾತ್ರ ಸಂದಾಯವಾಗಿತ್ತು. ವಿವಿಧ ಸಂಸ್ಥೆಗಳು[27]ರಾಜ್ಯ ಸರ್ಕಾರಕ್ಕೆ ಪಾವತಿಸಬೇಕಾಗಿದ್ದ ಖಾತರಿ ಶುಲ್ಕದಲ್ಲಿ ಸಂದಾಯವಾದ ಖಾತರಿ ಶುಲ್ಕವು ಸಂಸ್ಥೆಗಳಿಗೆ ಸಹಾಯಧನ/ಸಹಾಯಾನುದಾನ/ಆರ್ಥಿಕ ಬೆಂಬಲವಾಗಿ ಪುಸ್ತಕ ಹೊಂದಾಣಿಕೆ ಮಾಡಿದ ಮೊತ್ತಗಳನ್ನೂ ಒಳಗೊಂಡಿದೆ.

ಶಾಸಕಾಂಗದ ಮುಂದೆ ಮಂಡಿಸಲಾದ ಮಧ್ಯಮಾವಧಿ ಹಣಕಾಸು ಯೋಜನೆಯಲ್ಲಿ (2016–20) ಖಾತರಿಗಳು ಸಾಂದರ್ಭಿಕ ಹೊಣೆಗಾರಿಕೆಯ ಹೆಚ್ಚಳಕ್ಕೆ ಕಾರಣವಾಗಿದ್ದರಿಂದ, ಇತರ ವಿಷಯಗಳೊಂದಿಗೆ ಸಾಲಗಾರರ ಸಾಲಾರ್ಹತೆ, ಖಾತರಿಯ ವ್ಯಾಪ್ತಿಗೆ ಒಳಪಡುವ ಮೊತ್ತ ಮತ್ತು ಸಂಭಾವ್ಯ ಅಪಾಯಗಳು, ಸಾಲ ಪಡೆಯುವ ನಿಯಮಗಳು, ಸಾಲ ಪಡೆಯಲು ಸಮರ್ಥನೆ ಮತ್ತು ಅದರ ಸಾರ್ವಜನಿಕ ಉದ್ದೇಶ, ಸಂಭವಿಸಬಹುದಾದ ವಿವಿಧ ಬದ್ಧತೆಗಳು ಮತ್ತು ಅಂತಹ ಬದ್ಧತೆಗಳ ಸಂಭವನೀಯ ವೆಚ್ಚಗಳು, ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು ಅವುಗಳನ್ನು ಸಾಲದ ಪ್ರಸ್ತಾಪದಂತೆಯೇ ಪರೀಕ್ಷಿಸಬೇಕು ಎಂದು ಸರ್ಕಾರವು ಹೇಳಿದೆ. ಸಕ್ರಿಯ ಖಾತರಿ ಮೀಸಲು ನಿಧಿ ಮತ್ತು ಖಾತರಿ ಕಾರ್ಯನೀತಿಯನ್ನು ರೂಪಿಸುವ ಉದ್ದೇಶವು ರಾಜ್ಯ ಸರ್ಕಾರದ ಪರಿಗಣನೆಯಲ್ಲಿದೆ.

ಖಾತರಿ ಮೀಸಲು ನಿಧಿಯನ್ನು ನಿರ್ವಹಿಸಲು ಮತ್ತು ಮುಂದುವರಿಸಲು ಸೂಕ್ತ ಪ್ರಯತ್ನಗಳನ್ನು ಮಾಡಬೇಕೆಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು (ಜುಲೈ 2015) ಶಿಫಾರಸು ಮಾಡಿದೆ.

ಖಾತರಿ ಮೀಸಲು ನಿಧಿಯ ಕಾರ್ಯಾಚರಣೆಗಾಗಿ 2020–21ರ ಆಯವ್ಯಯದಲ್ಲಿ ಸರ್ಕಾರವು ₹50.00 ಕೋಟಿಗಳ ಅವಕಾಶವನ್ನು ಕಲ್ಪಿಸಿದೆ.

[26] ನೀರಾವರಿ (₹16,866 ಕೋಟಿ), ಸಹಕಾರ (₹1,342 ಕೋಟಿ), ಆರ್ಥಿಕ (₹1,362 ಕೋಟಿ), ವಿದ್ಯುತ್ (₹4,075 ಕೋಟಿ), ವಸತಿ (₹2,189 ಕೋಟಿ), ಸಾರಿಗೆ (₹310 ಕೋಟಿ) ಮತ್ತು ಇತರೆ ವಿಭಾಗಗಳು (₹686 ಕೋಟಿ).

[27] ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (₹10.24 ಕೋಟಿ), ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (₹2.54 ಕೋಟಿ, ಕರ್ನಾಟಕ ವಿದ್ಯುತ್ ಕಂಪನಿ ನಿಯಮಿತ (₹37.46 ಕೋಟಿ) ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ (₹12.01 ಕೋಟಿ), ಕರ್ನಾಟಕ ನೀರಾವರಿ ನಿಗಮ ನಿಯಮಿತ (₹18.52 ಕೋಟಿ), ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (₹10.36 ಕೋಟಿ), ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಒಕ್ಕೂಟ ನಿಯಮಿತ (₹8.12 ಕೋಟಿ) ಮತ್ತು ಕಿಯೋನಿಕ್ಸ್ (₹2.03 ಕೋಟಿ).

### *2.8.2.1 ಖಾತರಿ ಶುಲ್ಕದ ಅಧ್ಯಯನ*

ಕರ್ನಾಟಕ ಸರ್ಕಾರಿ ಖಾತರಿ ಮಿತಿ ಕಾಯ್ದೆ 1999ರ ಅನ್ವಯ ವರ್ಷದ ಅಂತ್ಯದಲ್ಲಿ ಬಾಕಿ ಉಳಿದಿರುವ ಖಾತರಿ ಮೊತ್ತದ ಕನಿಷ್ಠ ಶೇಕಡ ಒಂದರಷ್ಟು ಮೊತ್ತವನ್ನು ಖಾತರಿ ಶುಲ್ಕವಾಗಿ ವಿಧಿಸಬೇಕೆಂದು ಮತ್ತು ಅದನ್ನು ಯಾವುದೇ ಸಂದರ್ಭದಲ್ಲೂ ಮನ್ನಾ ಮಾಡಲಾಗುವುದಿಲ್ಲ ಎಂದು ಸರ್ಕಾರವು ವಿಧಿಸಿದೆ. ಸಹಕಾರಿ, ವಸತಿ ಮತ್ತು ನಗರಾಭಿವೃದ್ಧಿ ಈ ಮೂರು ಇಲಾಖೆಗಳಿಗೆ ಸಂಬಂಧಿಸಿದಂತೆ 2014–15ರಿಂದ 2019–20ರ ಅವಧಿಯಲ್ಲಿ ಖಾತರಿ ಶುಲ್ಕದ ಬಾಕಿ ಮತ್ತು ಅದರ ಮೇಲ್ವಿಚಾರಣೆಯ ಸಮೀಕ್ಷೆಯನ್ನು ನಡೆಸಲಾಯಿತು. ಸಮೀಕ್ಷೆಯಲ್ಲಿ ಗಮನಿಸಿದ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ತರಲಾಗಿದೆ.

- ***ಖಾತರಿಗಳ ದತ್ತಾಂಶ ಸಂಗ್ರಹವನ್ನು ಪರಿಷ್ಕರಿಸದಿರುವುದು***

ಖಾತರಿಗಳ ಬಗ್ಗೆ ಸಂಪೂರ್ಣ ದತ್ತಸಂಗ್ರಹದ ಅಸ್ತಿತ್ವವು ಖಾತರಿಗಳ ಪರಿಣಾಮಕಾರಿ ಮೇಲ್ವಿಚಾರಣೆಗೆ ಪೂರ್ವಾಪೇಕ್ಷಿತವಾಗಿದೆ. ಪಿಂಚಣಿ, ಸಣ್ಣ ಉಳಿತಾಯ ನಿರ್ದೇಶನಾಲಯದ ಆಸ್ತಿ ಹೊಣೆಗಾರಿಕೆ ಉಸ್ತುವಾರಿ ವಿಭಾಗವು (ಎಎಲ್ಎಂ) ಖಾತರಿಗಳ ದತ್ತಾಂಶ ಸಂಗ್ರಹವನ್ನು ನಿರ್ವಹಿಸುತ್ತದೆ. ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ ಸಂಖ್ಯೆ 9 ಅನ್ನು ತಯಾರಿಸುವಾಗ ಈ ದತ್ತಸಂಚಯದಿಂದ ಮಾಹಿತಿಯನ್ನು ಆರ್ಥಿಕ ಇಲಾಖೆಗೆ ನೀಡಲಾಗುತ್ತದೆ. ಆದರೆ ಖಾತರಿಗಳನ್ನು ಮಂಜೂರು ಮಾಡುವ ಸರ್ಕಾರಿ ಆದೇಶಗಳನ್ನು ವೆಚ್ಚ ವಿಭಾಗಗಳು ಮತ್ತು ಹೂಡಿಕೆ ವಿಭಾಗಗಳು ಎಎಲ್ಎಂ ವಿಭಾಗಕ್ಕೆ ಕಳುಹಿಸುತ್ತಿಲ್ಲವಾದ್ದರಿಂದ ದತ್ತಾಂಶ ಸಂಗ್ರಹವನ್ನು ಪರಿಷ್ಕರಿಸಲಾಗಿಲ್ಲ. ಎಎಲ್ಎಂ ವಿಭಾಗವು ನಿರ್ವಹಿಸಿದ ದಾಖಲೆಗಳಲ್ಲಿ ವರ್ಷವಾರು ರದ್ದಾದ/ಹಿಂಪಡೆದ/ಅವಧಿ ಮುಗಿದ ಖಾತರಿಗಳ ಬಗ್ಗೆ ಯಾವುದೇ ಲೆಕ್ಕ ಇರಲಿಲ್ಲ, ಇದು ಎಎಲ್ಎಂ ವಿಭಾಗದಲ್ಲಿ ಪೂರ್ಣ ಮತ್ತು ಪರಿಷ್ಕೃತ ಮಾಹಿತಿಯ ಕೊರತೆಗೆ ಕಾರಣವಾಯಿತು.

- ***ಆಸ್ತಿ ಮತ್ತು ಹೊಣೆಗಾರಿಕೆ ಉಸ್ತುವಾರಿ (ಎಎಲ್ಎಂ) ವಿಭಾಗದ ಕಾರ್ಯ***

ಆಸ್ತಿ ಮತ್ತು ಹೊಣೆಗಾರಿಕೆ ಉಸ್ತುವಾರಿ ವಿಭಾಗ (ಎಎಲ್ಎಂ) ವನ್ನು ಕರ್ನಾಟಕ ಸರ್ಕಾರವು 21 ಏಪ್ರಿಲ್ 2010ರ ದಿನಾಂಕದ ಸರ್ಕಾರಿ ಆದೇಶದನ್ವಯ ಖಾತರಿಗಳು ಸೇರಿದಂತೆ ಸರ್ಕಾರಿ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳನ್ನು ನಿರ್ವಹಿಸಲು ರಚಿಸಿತು. ಈ ವಿಭಾಗವು ಹಾನಿ ಸಂಭವ ಖಾತರಿಗಳ ವರ್ಗೀಕರಣಕ್ಕೆ ಒಂದು ಮಾದರಿಯನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿಯನ್ನು ಹೊಂದಿದೆ. ಈ ಕಾರ್ಯಕ್ಕೆ ವಿವಿಧ ಹಣಕಾಸು ನಿಯತಾಂಕಗಳ ನಡುವಿನ ಸಂಬಂಧಗಳನ್ನು ಗುರುತಿಸಲು ಮತ್ತು ವಿಶ್ಲೇಷಿಸಲು ಪರಿಣತಿಯ ಅಗತ್ಯವಿದೆ. ಸರ್ಕಾರವು ಖಾತರಿ ನೀಡಿದ ಸಾಲಗಳ ಮರುಪಾವತಿಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸಾಲಗಾರರು ಸುಸ್ತಿದಾರರಾದ ಸಂದರ್ಭಗಳಲ್ಲಿ ಸೂಕ್ತ ಪರಿಹಾರ ಕ್ರಮ ಕೈಗೊಳ್ಳುವುದು ಸಹ ಇದರ ಜವಾಬ್ದಾರಿಯಾಗಿದೆ. ಋಣಸೇವೆ ವಹಿವಾಟುಗಳು ಸಂಭವಿಸಿದಾಗ ವಿವರಗಳನ್ನು ಎಎಲ್ಎಂ ವಿಭಾಗಕ್ಕೆ ಮಾಹಿತಿ ಸಲ್ಲಿಸಲು ಸಾಲಗಾರರನ್ನು ನಿರ್ದೇಶಿಸಲು ಯಾವುದೇ ಕಾರ್ಯ ವಿಧಾನವಿಲ್ಲ.

ವರ್ಷದಲ್ಲಿ ಹೊಸ ಗ್ಯಾರಂಟಿ ನೀಡುವ ಅಂಶವು ವರ್ಷದ ಅಂತ್ಯದವರೆಗೆ ಎಎಲ್ಎಂ ವಿಭಾಗಕ್ಕೆ ತಿಳಿದಿರುವುದಿಲ್ಲ. ಬಾಕಿ ಇರುವ ಅಸಲು ಮತ್ತು ಬಡ್ಡಿ, ವರ್ಷದಲ್ಲಿ ಮಾಡಿದ ಪಾವತಿಗಳು ಮತ್ತು ಸಾಲಗಾರರು ವರ್ಷದಲ್ಲಿ ಪಾವತಿಸಿದ ಖಾತರಿ ಶುಲ್ಕದ ಬಗ್ಗೆ ಹಣಕಾಸು ವಿವರಣಾ ಪಟ್ಟಿ ಸಂಖ್ಯೆ 9ಕ್ಕೆ ಮಾಹಿತಿ ಸಂಗ್ರಹಿಸುವ ವಾರ್ಷಿಕ ಪ್ರಯತ್ನದ ಭಾಗವಾಗುವವರೆಗೂ ವಿವರಗಳು ಎಎಲ್ಎಂ ವಿಭಾಗದ ಗಮನಕ್ಕೆ ಬರುವುದಿಲ್ಲ. ವರ್ಷಕ್ಕೊಮ್ಮೆ ಎಎಲ್ಎಂ ನಿರ್ದೇಶನಾಲಯದಲ್ಲಿ ಬಾಕಿ ಇರುವ ಖಾತರಿ ಶುಲ್ಕ ವಿವರಗಳನ್ನು ಕ್ರೋಢೀಕರಿಸಲಾಗುತ್ತದೆ ಮತ್ತು ಆಡಳಿತ ಇಲಾಖೆಗಳು ಒದಗಿಸಿದ ವಿವರಗಳನ್ನು ಪರಿಶೀಲಿಸಲು ಯಾವುದೇ ಮೇಲ್ವಿಚಾರಣಾ ಕಾರ್ಯ ವಿಧಾನವಿಲ್ಲ. ಇದರಿಂದಾಗಿ ಋಣಸೇವೆಯಲ್ಲಿ ಸುಸ್ತಿಯಾದ ಅಥವಾ ಖಾತರಿ ಶುಲ್ಕವನ್ನು ಪಾವತಿಸುವಲ್ಲಿನ ವೈಫಲ್ಯವು ವರ್ಷದ ಅಂತ್ಯದವರೆಗೆ ಎಎಲ್ಎಂ ವಿಭಾಗದ ಗಮನಕ್ಕೆ ಬರುವುದಿಲ್ಲ

- ***ಖಾತರಿ ನೀಡಿದ ಸಾಲಗಳ ವಿವರಗಳನ್ನು ಒದಗಿಸದಿರುವುದು***

26 ಫೆಬ್ರವರಿ 2018ರ ಆರ್ಥಿಕ ಇಲಾಖೆಯ ಸರ್ಕಾರದ ಆದೇಶದ ಪ್ರಕಾರ, ಎಲ್ಲಾ ಕಂಪನಿಗಳು, ಸಹಕಾರಿ ಸಂಸ್ಥೆಗಳು, ಮಂಡಳಿಗಳು ಮತ್ತು ನಿಗಮಗಳು ಸರ್ಕಾರದ ಖಾತರಿ ಅಡಿಯಲ್ಲಿ ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳು, ಬಾಕಿ ಉಳಿದಿರುವ ಖಾತರಿ ಸಾಲಗಳು ಮತ್ತು ಖಾತರಿ ಶುಲ್ಕದ ಬಾಕಿ ಮತ್ತು ಖಾತರಿ ವಿಲೇಖ ಮತ್ತು ಒಪ್ಪಂದ ಪತ್ರಗಳಪ್ರತಿಗಳು ಸೇರಿದಂತೆ ಸಂಬಂಧಿತ ಇತರ ಎಲ್ಲ ವಿವರಗಳನ್ನು ಪ್ರತಿ ವರ್ಷವೂ ಪಿಂಚಣಿ, ಸಣ್ಣ ಉಳಿತಾಯ, ನಿರ್ದೇಶನಾಲಯದ ಎಎಲ್ಎಂ ವಿಭಾಗಕ್ಕೆ ಒದಗಿಸಬೇಕಾಗುತ್ತದೆ. ಈ ಎಲ್ಲ ಮಾಹಿತಿಗಳನ್ನೂ ರಾಜ್ಯದ ಹಣಕಾಸು ಲೆಕ್ಕಗಳ ಮತ್ತು ಆಯವ್ಯಯ ದಸ್ತಾವೇಜುಗಳಲ್ಲಿ ಸೇರಿಸಲಾಗುತ್ತದೆ. ಆದರೆ ಇವಾವುದನ್ನೂ ಮಾಡಲಾಗುತ್ತಿಲ್ಲ.

- ***ಬ್ಯಾಂಕಿಗೆ ತಪ್ಪಿಸಬಹುದಾಗಿದ್ದ ಹೆಚ್ಚುವರಿ ಬಡ್ಡಿಯ ಪಾವತಿ – ₹0.53 ಕೋಟಿ***

ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಒಕ್ಕೂಟ ನಿಯಮಿತಕ್ಕೆ (ಕೆಎಸ್‌ಸಿಒಎಂಎಫ್) ಬ್ಯಾಂಕರ್ ಆದ ಬ್ಯಾಂಕ್ ಆಫ್ ಇಂಡಿಯಾ ಸಂಸ್ಥೆಯ ಖಾತರಿ ಪಡಿಸಿದ ಸಾಲಗಳ ಸಾಲಖಾತೆಯಲ್ಲಿ 1 ಏಪ್ರಿಲ್ 2019 ರಂದು ₹300.00 ಕೋಟಿ (ಕಡಿಮೆ ಮಾಡಿದ ಮೊತ್ತ) ಯಷ್ಟು ಮಾತ್ರ ಬಾಕಿ ಉಳಿಸಬೇಕೆಂದು ನಿಗದಿಪಡಿಸಿತ್ತು. ಆದರೆ ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಒಕ್ಕೂಟ ನಿಯಮಿತವು ಆ ದಿನಾಂಕದಂದು ಬಾಕಿ ಇರಿಸಿದ ಮೊತ್ತವು ₹378.00 ಕೋಟಿಗಳಷ್ಟಿತ್ತು. ಇದರ ಪರಿಣಾಮವಾಗಿ ಮಾರ್ಚ್ 2020ರಲ್ಲಿ ನಿಗದಿತ ಬಾಕಿಗಿಂತ ಹೆಚ್ಚಿನ ಮೊತ್ತಕ್ಕೆ ಬ್ಯಾಂಕ್₹0.53 ಕೋಟಿ ಹೆಚ್ಚುವರಿ ಬಡ್ಡಿ ವಿಧಿಸಿದೆ. ನಿಗದಿತ ಬಾಕಿ ಮೊತ್ತವನ್ನು ಕಾಯ್ದು ಕೊಳ್ಳುವಲ್ಲಿ ಬ್ಯಾಂಕ್ ವಿಧಿಸಿದ ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸದಿರುವುದು ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಒಕ್ಕೂಟ ನಿಯಮಿತಕ್ಕೆ ಬ್ಯಾಂಕ್ ಹೆಚ್ಚುವರಿ ಬಡ್ಡಿ ವಿಧಿಸುವುದರಲ್ಲಿ ಪರ್ಯವಸಾನವಾಯಿತು. ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸಿದ್ದರೆ ಇದನ್ನು ತಪ್ಪಿಸಬಹುದಿತ್ತು.

- ***ಖಾತರಿ ಶುಲ್ಕ ಬಾಕಿಗಳನ್ನು ಕಡಿಮೆ/ಅಧಿಕವಾಗಿ ಹೇಳಿರುವುದು***

ಕೆಳಗಿನ ಪ್ರಕರಣಗಳಲ್ಲಿ **(ಕೋಷ್ಟಕ–2.39)** 31 ಮಾರ್ಚ್ 2020ರಲ್ಲಿ ಇದ್ದಂತೆ ಸಂಸ್ಥೆಗಳು ಒದಗಿಸಿರುವ ಖಾತರಿ ಶುಲ್ಕದ ಬಾಕಿಗಳಲ್ಲಿ ಮತ್ತು ಆರ್ಥಿಕ ಇಲಾಖೆ/ಎಎಲ್ಎಂ ವಿಭಾಗದ ವಿವರಗಳಲ್ಲಿ ವ್ಯತ್ಯಾಸಗಳಿರುವುದನ್ನು ಗಮನಿಸಲಾಗಿದೆ.

**ಕೋಷ್ಟಕ–2.39: ಬಾಕಿ ಇರುವ ಖಾತರಿ ಶುಲ್ಕದಲ್ಲಿ ವ್ಯತ್ಯಾಸಗಳು**

**(₹ ಕೋಟಿಗಳಲ್ಲಿ)**

| ಸಂಸ್ಥೆಯ ಹೆಸರು | ಸಂಸ್ಥೆಯು ನೀಡಿದಂತೆ | ಆರ್ಥಿಕ ಇಲಾಖೆ/ಎಎಲ್ಎಮ್ ಅನುಭಾಗದ ಪ್ರಕಾರ | ವ್ಯತ್ಯಾಸ |
|---|---|---|---|
| ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿಯಮಿತ (ಕೆಎಸ್ ಸಿಎಆರ್‌ಡಿಬಿ) | 130.29 | 118.56 | 11.73 |
| ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಂಡಳಿ ನಿಯಮಿತ (ಕೆಎಸ್‌ಸಿಒಎಮ್‌ಎಫ್) | 13.63 | 11.87 | 1.76 |
| ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ | 12.52 | – | 12.52 |
| ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 24.41 | 21.41 | 2.80 |

ಸಂಬಂಧಿಸಿದ ಸಂಸ್ಥೆಗಳು, ಆರ್ಥಿಕ ಇಲಾಖೆ/ಎಎಲ್ಎಮ್‌ನ ನಿರ್ದೇಶನಾಲಯದ ನಡುವೆ ಖಾತರಿ ನೀಡಿದ ಸಾಲಗಳ ಮತ್ತು ಖಾತರಿ ಶುಲ್ಕದ ಬಾಕಿಗಳ ಅಂಕಿಅಂಶಗಳ ಲೆಕ್ಕ ಹೊಂದಾಣಿಕೆ ಆಗದಿರುವುದರಿಂದ ಹಣಕಾಸು ಲೆಕ್ಕಗಳಲ್ಲಿ ಇವುಗಳನ್ನು ಕಡಿಮೆ/ಅಧಿಕವಾಗಿ ಹೇಳಿರುವ ಸಂಭವವಿದೆ.

- ***ಪಾವತಿ ನಿಯಮಗಳಿಗೆ ಬದ್ಧವಾಗಿಲ್ಲದಿರುವಿಕೆ***

ಆರ್ಥಿಕ ಇಲಾಖೆಯ 17 ಸೆಪ್ಟೆಂಬರ್ 2002 ರ ಸರ್ಕಾರಿ ಆದೇಶದಲ್ಲಿ ಸೂಚಿಸಿರುವಂತೆ ಖಾತರಿ ಶುಲ್ಕದ ಬಾಕಿಗಳನ್ನು ಪ್ರತಿ ತಿಂಗಳು ಬಾಕಿ ಇರುವ ಅಸಲು ಮತ್ತು ಬಡ್ಡಿಗಳ ಮೊತ್ತದ ಮೇಲೆ ಲೆಕ್ಕ ಹಾಕುತ್ತಿಲ್ಲ. ಖಾತರಿ ನೀಡಿದ ಸಾಲಗಳ ಅಸಲು ಮತ್ತು ಬಡ್ಡಿಗಳ ಮುಕ್ತಾಯದ ಮಾಸವಾರು ಅಂತಿಮ ಶಿಲ್ಕು ಒದಗಿಸದಿದ್ದ ಸಂದರ್ಭದಲ್ಲಿ, ಎಎಲ್‌ಎಂ ವಿಭಾಗವು ವರ್ಷವಾರು ಅಂತಿಮ ಶಿಲ್ಕಿನ ಖಾತರಿ ಶುಲ್ಕವನ್ನು ಒದಗಿಸುತ್ತದೆ. ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿಯಮಿತ ಹಾಗೂ ಸರ್ಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಖಾತರಿ ನೀಡಿದ ಸಾಲಗಳ ಮಾಸವಾರು ಅಂತಿಮ ಶಿಲ್ಕಿನ ವಿವರಗಳು ಲೆಕ್ಕಪರಿಶೋಧನೆಗೆ ಲಭ್ಯವಿರಲಿಲ್ಲ.

ಖಾತರಿ ಶುಲ್ಕದ ಪಾವತಿಯನ್ನು ಪ್ರತಿ ಆರು ತಿಂಗಳಿಗೊಮ್ಮೆ ಮಾಡಬೇಕೆಂದು ಸರ್ಕಾರಿ ಆದೇಶವು ಷರತ್ತು ವಿಧಿಸಿದೆ. ಆದರೆ ಪರಿಶೀಲಿಸಿದ ವಿಭಾಗಗಳಲ್ಲಿನ ಯಾವುದೇ ಸಂಸ್ಥೆಗಳು ನಿಗದಿತ ಪಾವತಿ ನಿಯಮಗಳಿಗೆ ಬದ್ಧವಾಗಿಲ್ಲ. ಆಡಳಿತ ಇಲಾಖೆಗಳು ಮತ್ತು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಹೊಣೆಗಾರಿಕೆ ಉಸ್ತುವಾರಿ (ಎಎಲ್‌ಎಂ) ನಿರ್ದೇಶನಾಲಯವು ಪ್ರತಿ ಸಂಸ್ಥೆಯಿಂದ ಬಾಕಿ ಇರುವ ವಿವರಗಳನ್ನು ಮೇಲ್ವಿಚಾರಣೆ ಮಾಡಲು ಬೇಡಿಕೆ ಸಂಗ್ರಹ ಬಾಕಿ (ಡಿಸಿಬಿ) ವಹಿಯನ್ನು ನಿರ್ವಹಿಸಿಲ್ಲ ಮತ್ತು ನಿಯತ ಕಾಲಿಕವಾಗಿ ಬೇಡಿಕೆ ಸೂಚನೆಗಳನ್ನು ನೀಡಿಲ್ಲ. ಈ ರೀತಿಯ ಮೇಲ್ವಿಚಾರಣಾ ಕೊರತೆಯು ಭಾರಿ ಮೊತ್ತದ ಖಾತರಿ ಶುಲ್ಕ ಬಾಕಿಗಳಿಗೆ ಕಾರಣವಾಗಿದೆ (ಎಎಲ್‌ಎಂ ದಾಖಲೆಗಳ ಪ್ರಕಾರ 31 ಮಾರ್ಚ್ 2020ರಲ್ಲಿದ್ದಂತೆ ₹264.28 ಕೋಟಿ ಖಾತರಿ ಶುಲ್ಕ ಬಾಕಿ ಇದೆ).

- **ತೀರ್ಮಾನಗಳು**

- ಖಾತರಿಗಳನ್ನು ಅಂತಿಮಗೊಳಿಸುವ ಸಮಯದಲ್ಲಿ ಆಡಳಿತ ಇಲಾಖೆಗಳು/ಆರ್ಥಿಕ ಇಲಾಖೆಗೆ ಮಾರ್ಗದರ್ಶನಕ್ಕಾಗಿ ಯಾವುದೇ ಮಾನದಂಡಗಳನ್ನು ಸೂಚಿಸಲಾಗಿಲ್ಲ.
- ಸರ್ಕಾರದ ಖಾತರಿಗಳು ಮತ್ತು ಕಾರ್ಯಗತಗೊಳಿಸುವ ಕಾರ್ಯ ವಿಧಾನಗಳ ನೀತಿಯ ಅನುಪಸ್ಥಿತಿಯು ಖಾತರಿಗಳನ್ನು ನೀಡುವಲ್ಲಿ ಜವಾಬ್ದಾರಿಯ ಕೊರತೆ ಮತ್ತು ಖಾತರಿ ಶುಲ್ಕ ಸಂಗ್ರಹ ನಿರ್ವಹಣೆಯಲ್ಲಿ ಅಸಂಗತತೆಗಳನ್ನು ಉಂಟುಮಾಡಿದೆ.
- ಆರ್ಥಿಕ ಇಲಾಖೆಯ ವಿವಿಧ ಶಾಖೆಗಳು ಮತ್ತು ಆಡಳಿತಾತ್ಮಕ ಇಲಾಖೆಗಳ ನಡುವೆ ಮಾಹಿತಿಗಳ ನಿಷ್ಪರಿಣಾಮಕಾರಿ ವಿನಿಮಯವು ಸಾಂದರ್ಭಿಕ ತಿಳಿವಿನ (ಉಸ್ತುವಾರಿ ದತ್ತಾಂಶ ಸಂಗ್ರಹ) ಮೇಲೆ ಪರಿಣಾಮ ಬೀರಿರುವುದರೊಂದಿಗೆ ಖಾತರಿಗಳ ಬಗ್ಗೆ ಮಾಹಿತಿಗಳ ನಿಖರತೆಯ ಮೇಲೂ ಪ್ರಭಾವವುಂಟು ಮಾಡಿದೆ.

- **ಶಿಫಾರಸುಗಳು**

- ಖಾತರಿಗಳ ನೀಡುವಿಕೆಯನ್ನು ಕುರಿತು ಸರ್ಕಾರವು ಕಾರ್ಯನೀತಿಗಳನ್ನು ಪ್ರಕಟಿಸಬಹುದು.
- ಖಾತರಿ ನೀಡಿದ ಸಾಲಗಳ ವಿಳಂಬವಿಲ್ಲದ ಮರುಪಾವತಿ ಮತ್ತು ನಿಗದಿತ ಮಧ್ಯಂತರಗಳಲ್ಲಿ ಖಾತರಿ ಶುಲ್ಕಗಳ ಬಾಕಿಗಳನ್ನು ಪಾವತಿಸುವುದನ್ನು ಖಚಿತ ಪಡಿಸಿಕೊಳ್ಳಲು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೊಳಿಸಬಹುದು.
- ಖಾತರಿಗಳ ಮೇಲಿನ ದತ್ತಾಂಶ ಸಂಗ್ರಹವನ್ನು ನಿಯಮಿತ ಮಧ್ಯಂತರದಲ್ಲಿ ಪರಿಷ್ಕರಿಸಬಹುದು ಮತ್ತು ಹಣಕಾಸು ವಿವರಣಾ ಪಟ್ಟಿಗಳನ್ನು ಅಂತಿಮಗೊಳಿಸುವ ಸಮಯದಲ್ಲಿ ಇತರ ಮಾಹಿತಿಗಳೊಂದಿಗೆ ಪರಿಶೀಲಿಸಬಹುದು. ಮೂಲ ದಾಖಲೆಗಳನ್ನು ಪರಿಶೀಲಿಸಲು ಮತ್ತು ಒದಗಿಸಿದ ವಿವರಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಎಎಲ್‌ಎಂಗೆ ಅಧಿಕಾರ ನೀಡಬಹುದು.
- ಖಾತರಿಗಳನ್ನು ಪ್ರಕ್ರಿಯೆಗೊಳಿಸುವ ಸಮಯದಲ್ಲಿ ಆಡಳಿತ ಇಲಾಖೆಗಳ ಮಾರ್ಗದರ್ಶನಕ್ಕಾಗಿ ಮಾನದಂಡಗಳನ್ನು ಸೂಚಿಸುವ ಅಗತ್ಯವಿದೆ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಫೆಬ್ರವರಿ 2021) ಆಸ್ತಿ ಮತ್ತು ಹೊಣೆಗಾರಿಕೆ ಉಸ್ತುವಾರಿ ವಿಭಾಗವು ಖಾತರಿಗಳ ದತ್ತಾಂಶವನ್ನು ನವೀಕರಿಸಲು ಬೇಕಾದ ಅಗತ್ಯಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ ಎಂದು ಹೇಳಿದೆ.

### *2.8.3 ನಗದು ಶಿಲ್ಕು ನಿರ್ವಹಣೆ*

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೊಂದಿಗಿನ ಒಪ್ಪಂದದ ಪ್ರಕಾರ, ರಾಜ್ಯ ಸರ್ಕಾರಗಳು ಬ್ಯಾಂಕಿನೊಂದಿಗೆ ಕನಿಷ್ಠ ದೈನಂದಿನ ನಗದು ಶಿಲ್ಕನ್ನು ಕಾಯ್ದುಕೊಳ್ಳಬೇಕು. ಯಾವುದೇ ದಿನದಲ್ಲಿ ಶಿಲ್ಕಿನ ಮೊತ್ತವು ಒಪ್ಪಂದದ ಕನಿಷ್ಠಕ್ಕಿಂತ ಕಡಿಮೆಯಿದ್ದರೆ, ಕಾಲ ಕಾಲಕ್ಕೆ ಸಾಮಾನ್ಯ ಅರ್ಥೋಪಾಯ ಮುಂಗಡಗಳು (ಡಬ್ಲ್ಯುಎಂಎ)/ವಿಶೇಷ ಅರ್ಥೋಪಾಯ ಮುಂಗಡಗಳು (ಎಸ್‌ಡಬ್ಲ್ಯೂಎಂಎ)/ಓವರ್ ಡ್ರಾಫ್ಟ್ (ಒಡಿ) ತೆಗೆದುಕೊಳ್ಳುವ ಮೂಲಕ ಕೊರತೆಯನ್ನು ತುಂಬಲಾಗುತ್ತದೆ. ರಾಜ್ಯಸ ರ್ಕಾರಕ್ಕೆ ಸಾಮಾನ್ಯ ಅರ್ಥೋಪಾಯ ಮುಂಗಡಗಳಿಗೆ ಮಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕ್ಕಾಲಕಾಲಕ್ಕೆ ಪರಿಷ್ಕರಿಸುತ್ತದೆ.

- ಭಾರತೀಯ ರಿಸರ್ವ್ ಬ್ಯಾಂಕ್ ಸಾಮಾನ್ಯ ಮತ್ತು ವಿಶೇಷ ಅರ್ಥೋಪಾಯಮುಂಗಡಗಳನ್ನು ನೀಡುತ್ತದೆ. ಸಾಮಾನ್ಯ ಅರ್ಥೋಪಾಯ ಮುಂಗಡಗಳ ಮಿತಿಯನ್ನು ಏಪ್ರಿಲ್ 2015ರಲ್ಲಿದ್ದ ₹937.50 ಕೋಟಿಯಿಂದ 01 ಫೆಬ್ರವರಿ 2016ರಿಂದ ಜಾರಿಗೆ ಬರುವಂತೆ ₹1,985 ಕೋಟಿಗೆ ಏರಿಸಲಾಗಿದೆ. ಮಾರ್ಚ್ 1999 ರಿಂದ, ರಾಜ್ಯ ಸರ್ಕಾರದ ವಿಶೇಷ ಅರ್ಥೋಪಾಯ ಮುಂಗಡಗಳ ಮಿತಿಯನ್ನು ಅದು ಹೊಂದಿರುವ ಭಾರತ ಸರ್ಕಾರದ ಭದ್ರತೆಗಳಿಗೆ ಸಂಬಂಧಗೊಳಿಸಲಾಗಿದೆ. ಈ ಮುಂಗಡಗಳು ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿ ಪಡಿಸಿದ ದರಗಳಲ್ಲಿ ಬಡ್ಡಿಯನ್ನು ಹೊಂದಿರುತ್ತವೆ.
- 2019-20ರ ಅವಧಿಯಲ್ಲಿ, ರಾಜ್ಯ ಸರ್ಕಾರವು ಜುಲೈ 2019 ರಲ್ಲಿ ಎರಡು ದಿನಗಳಿಗೆ ₹310.49 ಕೋಟಿ ಮೊತ್ತದ ವಿಶೇಷ ಅರ್ಥೋಪಾಯ ಮುಂಗಡಗಳನ್ನು ಪಡೆದುಕೊಂಡಿದೆ, ಮತ್ತು ಅದನ್ನು ಮರುಪಾವತಿಸಲಾಗಿದೆ. ಸರ್ಕಾರವು ಪಡೆದ ವಿಶೇಷ ಅರ್ಥೋಪಾಯ ಮುಂಗಡಗಳಿಗೆ ₹0.05 ಕೋಟಿ ಬಡ್ಡಿಯನ್ನು ಆಗಸ್ಟ್ 2019ರಲ್ಲಿ ಆರ್‌ಬಿಐ ವಸೂಲಿಮಾಡಿದೆ.

ದೊಡ್ಡ ಪ್ರಮಾಣದ ನಗದು ಶಿಲ್ಕನ್ನು ಹೊಂದಿದ್ದರೂ ಸಹ ರಾಜ್ಯಸರ್ಕಾರವು ಮಾರುಕಟ್ಟೆ ಸಾಲಗಳಿಗೆ ಅವಲಂಬನೆಗೊಂಡದ್ದು ಉತ್ಪಾದಕ ಬಳಕೆಗೆ ಬಾರದ ನಗದು ಶಿಲ್ಕುಗಳನ್ನು ಹೆಚ್ಚಿಸಲು ಕಾರಣವಾಯಿತು. **ಕೋಷ್ಟಕ-2.40**ರಲ್ಲಿ 2019-20ರ ಅವಧಿಯಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು ಮತ್ತು ಹೂಡಿಕೆಗಳನ್ನು ನೀಡಲಾಗಿದೆ.

**ಕೋಷ್ಟಕ-2.40ನಗದು ಶಿಲ್ಕು ಮತ್ತು ಅವುಗಳ ಹೂಡಿಕೆ**

(₹ ಕೋಟಿಗಳಲ್ಲಿ)

| | 1 ಏಪ್ರಿಲ್ 2019ರಲ್ಲಿದ್ದಂತೆ ಪ್ರಾರಂಭಿಕ ಶಿಲ್ಕು | 31 ಮಾರ್ಚ್ 2020 ರಲ್ಲಿದ್ದಂತೆ ಅಂತಿಮ ಶಿಲ್ಕು |
|---|---|---|
| ಎ. ಸಾಮಾನ್ಯ ನಗದು ಶಿಲ್ಕು | | |
| ಖಜಾನೆಗಳಲ್ಲಿನ ನಗದು | - | |
| ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಠೇವಣಿಗಳು | 989.96 | 1,659.20 |
| ಇತರೆ ಬ್ಯಾಂಕ್‌ಗಳಲ್ಲಿ ಠೇವಣಿಗಳು | - | - |
| ಸಾಗಣೆಯಲ್ಲಿರುವ ಹಣ ರವಾನೆಗಳು-ಸ್ಥಳೀಯ | 0.01 | 0.01 |
| ಉಪ ಮೊತ್ತ | **989.97** | **1,659.21** |
| ನಗದು ಶಿಲ್ಕು ಹೂಡಿಕೆ ಲೆಕ್ಕದಲ್ಲಿರುವ ಹೂಡಿಕೆಗಳು | 5,139.28 | 13,634.21 |
| ಒಟ್ಟು (ಎ) | **6,129.25** | **15,293.42** |
| ಬಿ. ಇತರೆ ನಗದು ಶಿಲ್ಕುಗಳು ಮತ್ತು ಹೂಡಿಕೆಗಳು | | |
| ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖಾ ಅಧಿಕಾರಿಗಳು, ಅರಣ್ಯ ಇಲಾಖೆ, ಜಿಲ್ಲಾಧಿಕಾರಿಗಳು ಮುಂತಾದ ಇಲಾಖಾ ಅಧಿಕಾರಿಗಳಲ್ಲಿರುವ ನಗದು | 2.09 | 2.09 |

| | 1 ಏಪ್ರಿಲ್ 2019ರಲ್ಲಿದ್ದಂತೆ ಪ್ರಾರಂಭಿಕ ಶಿಲ್ಕು | 31 ಮಾರ್ಚ್ 2020 ರಲ್ಲಿದ್ದಂತೆ ಅಂತಿಮ ಶಿಲ್ಕು |
|---|---|---|
| ಇಲಾಖಾ ಅಧಿಕಾರಿಗಳೊಂದಿಗಿನ ಸಾದಿಲ್ವಾರು ವೆಚ್ಚಕ್ಕಾಗಿನ ಶಾಶ್ವತ ಮುಂಗಡಗಳು | 1.87 | 2.18 |
| ಮೀಸಲು ನಿಧಿಗಳ ಹೂಡಿಕೆ | 15,870.66 | 19,165.44 |
| ಒಟ್ಟು (ಬಿ) | **15,874.62** | **19,169.71** |
| ಒಟ್ಟು (ಎ+ಬಿ) | **22,003.87** | **34,463.13** |
| ಗಳಿಸಿದ ಬಡ್ಡಿ | **936.47** | **535.10** |

ಆಧಾರ: ಹಣಕಾಸು ಲೆಕ್ಕಗಳು

ವರ್ಷದ ಕೊನೆಯಲ್ಲಿ ರಾಜ್ಯದ ನಗದು ಶಿಲ್ಕು₹34,463 ಕೋಟಿ. ಇದ್ದಿತು. ನಗದು ಹೆಚ್ಚಳವು ಹಿಂದಿನ ವರ್ಷಕ್ಕಿಂತ ಶೇಕಡಾ 57 ರಷ್ಟಿತ್ತು. ಪ್ರಸಕ್ತ ವರ್ಷದ ಕೊನೆಯಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು 2018–19ರಲ್ಲಿದ್ದ ₹22,003.87 ಕೋಟಿಯಿಂದ 2019–20ರಲ್ಲಿ ₹34,463.13 ಕೋಟಿಗೆ ಏರಿ ₹12,459 ಕೋಟಿಗಳಷ್ಟು ಗಣನೀಯವಾಗಿ ಹೆಚ್ಚಾಗಿದೆ. ಹೆಚ್ಚುವರಿ ನಗದು ಶಿಲ್ಕು ಮುಖ್ಯವಾಗಿ 2019–20ರ ಅವಧಿಯಲ್ಲಿನ ₹48,499 ಕೋಟಿಗಳ ಮಾರುಕಟ್ಟೆ ಸಾಲಗಳ ದೆಸೆಯಿಂದ ಉಂಟಾಗಿದೆ.

ರಾಜ್ಯ ಸರ್ಕಾರವು ತನ್ನ ಹೆಚ್ಚುವರಿ ನಗದು ಶಿಲ್ಕನ್ನು ಅಲ್ಪ ಮತ್ತು ದೀರ್ಘಾವಧಿಯ ಭಾರತದ ಭದ್ರತೆ ಮತ್ತು ಖಜಾನೆ ಬಿಲ್ಲುಗಳಲ್ಲಿ ಹೂಡಿಕೆ ಮಾಡುತ್ತದೆ. ಅಂತಹ ಹೂಡಿಕೆಗಳಿಂದ ಪಡೆದ ಲಾಭವನ್ನು '0049–ಬಡ್ಡಿ ಸ್ವೀಕೃತಿಗಳು' ಎಂಬ ಶೀರ್ಷಿಕೆಯಡಿಯಲ್ಲಿ ಆದಾಯವಾಗಿ ಲೆಕ್ಕ ಮಾಡಲಾಗುತ್ತದೆ. ರಾಜ್ಯ ಸರ್ಕಾರವು 2019–20ರಲ್ಲಿ ಸರಾಸರಿ ಶೇಕಡ 2.31ರ ಬಡ್ಡಿ ದರದ 14 ದಿನಗಳ ಖಜಾನೆ ಬಿಲ್ಲುಗಳಲ್ಲಿ ಮತ್ತು ಶೇಕಡ 5.42ರ ಬಡ್ಡಿ ದರದ 91 ದಿನಗಳ ಖಜಾನೆ ಬಿಲ್ಲುಗಳಲ್ಲಿನ ಹೂಡಿಕೆಯಿಂದ ₹535 ಕೋಟಿ ಬಡ್ಡಿಯನ್ನು ಗಳಿಸಿದೆ. ಇದಕ್ಕೆ ಪ್ರತಿಯಾಗಿ ವಾರ್ಷಿಕ ಸರಾಸರಿ ಶೇಕಡಾ 6.38ರ ಬಡ್ಡಿ ದರದಲ್ಲಿ ಸಾಲವನ್ನು ಮಾಡಿದೆ.

ಸರ್ಕಾರವು ಖಜಾನೆ ಬಿಲ್ಲುಗಳ ಜೊತೆಗೆ, ನಗದು ಶಿಲ್ಕು ಮೊತ್ತವನ್ನು ಮೀಸಲು ನಿಧಿಗಳಾದ ಕ್ರೋಢೀಕೃತ ಋಣ ಪರಿಹಾರ ನಿಧಿ, ಅಭಿವೃದ್ಧಿ ಮತ್ತು ಕಲ್ಯಾಣ ನಿಧಿ ಇತ್ಯಾದಿಗಳಲ್ಲಿಯೂ ಹೂಡಿಕೆಮಾಡುತ್ತದೆ. ₹19,165 ಕೋಟಿಗಳ ಮೀಸಲು ನಿಧಿ ಮೊತ್ತದಲ್ಲಿ ಕ್ರೋಢೀಕೃತ ಋಣ ಪರಿಹಾರನಿಧಿಯಲ್ಲಿ ₹3,119 ಕೋಟಿಗಳನ್ನು, ಅಭಿವೃದ್ಧಿ ಮತ್ತು ಕಲ್ಯಾಣನಿಧಿಗಳಲ್ಲಿ ₹16,021 ಕೋಟಿಗಳನ್ನು, ಮತ್ತು ಉಳಿದ ಮೊತ್ತವನ್ನು (₹25 ಕೋಟಿ) ಸಾಮಾನ್ಯ ಮತ್ತು ಇತರ ಮೀಸಲು ನಿಧಿಗಳಲ್ಲಿ ಹೂಡಿಕೆ ಮಾಡಲಾಗಿದೆ. 2015–16 ರಿಂದ 2019–20ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ನಗದು ಶಿಲ್ಕು ಹೂಡಿಕೆಗಳನ್ನು**ಕೋಷ್ಟಕ–2.41**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.41 : ನಗದು ಶಿಲ್ಕು ಹೂಡಿಕೆ ಲೆಕ್ಕ (ಪ್ರಧಾನ ಲೆಕ್ಕಶೀರ್ಷಿಕೆ–8673)**

(₹ ಕೋಟಿಗಳಲ್ಲಿ)

| ವರ್ಷ | ಪ್ರಾರಂಭಿಕ ಶಿಲ್ಕು | ಅಂತಿಮ ಶಿಲ್ಕು | ಏರಿಕೆ (+)/ ಇಳಿಕೆ(–) | ಗಳಿಸಿದ ಬಡ್ಡಿ |
|---|---|---|---|---|
| **2015–16** | 17,962.31 | 16,917.13 | (–)1,045.18 | 1,028.15 |
| **2016–17** | 16,917.13 | 23,977.48 | 7,060.35 | 1,054.16 |
| **2017–18** | 23,977.48 | 12,655.49 | (–)11,321.99 | 1,078.30 |
| **2018–19** | 12,655.49 | 5,139.28 | (–)7,516.21 | 936.47 |
| **2019–20** | 5,139.28 | 13,634.21 | 8,494.93 | 535.10 |

ಆಕರ :ಹಣಕಾಸು ಲೆಕ್ಕಗಳು

2015–20ರ ಅವಧಿಯಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು ಹೂಡಿಕೆ ಪ್ರವೃತ್ತಿಯ ವಿಶ್ಲೇಷಣೆಯಿಂದ 2016–17 ಮತ್ತು 2019–20ರ ಅವಧಿಯಲ್ಲಿ ಹೂಡಿಕೆಯು ಗಮನಾರ್ಹವಾಗಿ ಹೆಚ್ಚಾಗಿದೆ ಎಂಬುದು ತಿಳಿಯುತ್ತದೆ.

**ನಕ್ಷೆ–2.18**ರಲ್ಲಿ ನಗದು ಶಿಲ್ಕು ಹೂಡಿಕೆ ಖಾತೆಯಲ್ಲಿ ಲಭ್ಯವಿರುವ ಶಿಲ್ಕುಗಳನ್ನು ಮತ್ತು 2015–20ರ ಅವಧಿಯಲ್ಲಿ ರಾಜ್ಯವು ತೆಗೆದುಕೊಂಡ ಮಾರುಕಟ್ಟೆಸಾಲಗಳನ್ನು ಹೋಲಿಕೆ ಮಾಡಲಾಗಿದೆ. ಮಾರುಕಟ್ಟೆ ಸಾಲಗಳನ್ನು ಹೆಚ್ಚಿನ ಬಡ್ಡಿದರದಲ್ಲಿ ತೆಗೆದುಕೊಳ್ಳಲಾಗಿದ್ದರೆ, ಖಜಾನೆ ಬಿಲ್ಲುಗಳಲ್ಲಿನ ಹೂಡಿಕೆಯು ಕಡಿಮೆದರದಲ್ಲಿ ಬಡ್ಡಿಯನ್ನು ನೀಡುತ್ತದೆ.

**ನಕ್ಷೆ–2.18: ಮಾರುಕಟ್ಟೆ ಸಾಲಗಳು ಮತ್ತು ನಗದು ಶಿಲ್ಕು ಹೂಡಿಕೆ**




**ನಕ್ಷೆ–2.19**ರಲ್ಲಿ ಮಾಸಾವಾರು ನಗದು ಶಿಲ್ಕು ಹೂಡಿಕೆ ಲೆಕ್ಕವನ್ನು ರಾಜ್ಯವು ಪಡೆದ ಮಾರುಕಟ್ಟೆ ಸಾಲಗಳೊಂದಿಗೆ ಹೋಲಿಸಲಾಗಿದೆ. **ನಕ್ಷೆ–2.20**ರಲ್ಲಿ ಪ್ರಸಕ್ತ ವರ್ಷದಲ್ಲಿ ಮಾಸಾವಾರು ನಗದು ಶಿಲ್ಕಿನ ಹರಿವು ಮತ್ತು ನಿವ್ವಳ ನಗದು ಶಿಲ್ಕಿನ ಹೂಡಿಕೆಗಳನ್ನು ಹೋಲಿಸಲಾಗಿದೆ.

**ನಕ್ಷೆ–2.19: 2019–20ರಲ್ಲಿ ಮಾಸಾವಾರು ನಗದು ಶಿಲ್ಕು ಹೂಡಿಕೆ ಲೆಕ್ಕ ಮತ್ತು ಮಾರುಕಟ್ಟೆ ಸಾಲಗಳು**

**(₹ ಕೋಟಿಗಳಲ್ಲಿ)**



**ನಕ್ಷೆ–2.20: ಪ್ರಸಕ್ತ ವರ್ಷದ ಮಾಸಾವಾರು ನಗದು ಶಿಲ್ಕಿನ ಹರಿವು ಮತ್ತು ನಿವ್ವಳ ನಗದು ಶಿಲ್ಕಿನ ಹೂಡಿಕೆಗಳು**

(₹ ಕೋಟಿಗಳಲ್ಲಿ)




ರಾಜ್ಯ ಸರ್ಕಾರವು ಅಧಿಕ ಪ್ರಮಾಣದ ನಗದು ಶಿಲ್ಕು ಹೊಂದಿದ್ದರೂ ಸಹ ವರ್ಷದ ಹಲವಾರು ಸಂದರ್ಭಗಳಲ್ಲಿ ಮಾರುಕಟ್ಟೆ ಸಾಲಗಳನ್ನು ಪಡೆದುಕೊಂಡಿದೆ ಮತ್ತು ಅದನ್ನು ಉತ್ಪಾದಕ ಬಳಕೆಗೆ ಒಳಪಡಿಸದೆ ನಗದು ಶಿಲ್ಕುಗಳು ಹೆಚ್ಚಾಗಲು ಕಾರಣವಾಗಿದೆ ಎಂಬುದನ್ನು ಹಿಂದಿನ ನಕ್ಷೆಸೂಚಿಸುತ್ತದೆ. 2019–20ರ ಅವಧಿಯಲ್ಲಿ ರಾಜ್ಯ ಸರ್ಕಾರವು ಮಾರುಕಟ್ಟೆಯಿಂದ ₹48,499 ಕೋಟಿಗಳನ್ನು ಪಡೆದುಕೊಂಡಿದೆ. ಅದೇ ಸಮಯದಲ್ಲಿ, ನಗದು ಶಿಲ್ಕು ₹5,139 ಕೋಟಿಯಿಂದ ₹13,634 ಕೋಟಿಗೆ ಗಮನಾರ್ಹವಾಗಿ ಹೆಚ್ಚಾಗಿದೆ, ಇದು ಬಹು ಪಾಲು ಸಾಲವನ್ನು ತಪ್ಪಿಸಬಹುದಾಗಿತ್ತು ಎಂದು ಸೂಚಿಸುತ್ತದೆ.

ಇದಲ್ಲದೆ, ಸಾಮಾನ್ಯವಾಗಿ ಬಂಡವಾಳ ಯೋಜನೆಗಳಲ್ಲಿ ಹೂಡಿಕೆ ಮಾಡಲು ಮತ್ತು ಸ್ವತ್ತುಗಳ ಸೃಷ್ಟಿಗೆ ಸಾಲಗಳನ್ನು ಆಶ್ರಯಿಸಲಾಗುತ್ತದೆ. ಕಂಡಿಕೆ–2.4.3ರಲ್ಲಿ ಚರ್ಚಿಸಿದಂತೆ ಹಿಂದಿನ ವರ್ಷಗಳಿಗೆ ಹೋಲಿಸಿದರೆ 2019–20ರ ಅವಧಿಯಲ್ಲಿ ರಾಜ್ಯದ ಬಂಡವಾಳ ವೆಚ್ಚದಲ್ಲಿ ಹೆಚ್ಚಿನ ಏರಿಕೆ ಕಂಡು ಬಂದಿಲ್ಲ. ಆದ್ದರಿಂದ, ಹೆಚ್ಚಿನ ಬಡ್ಡಿದರದಲ್ಲಿ ಸಾಲ ಪಡೆಯಲು ಯಾವುದೇ ತಾರ್ಕಿಕ ಕಾರಣವಿಲ್ಲ ಎಂದು ತೋರುತ್ತದೆ, ಇದಲ್ಲದೆ, ಸರ್ಕಾರವು ವರ್ಷದ ಕೊನೆಯಲ್ಲಿ, ಶೇಕಡ 60ರಷ್ಟು ನಗದು ಶಿಲ್ಕನ್ನು ಭಾರತೀಯ ರಿಸರ್ವ್ ಬ್ಯಾಂಕ್ನ ಮೀಸಲು ನಿಧಿಯಲ್ಲಿ ತೊಡಗಿಸಿದೆ. ಈ ಶೇಕಡ 60 ಭಾಗದ ಹೂಡಿಕೆಯನ್ನು ತೂಗಿಸಲು ರಾಜ್ಯ ಸರ್ಕಾರದ ಮಾಸಿಕ ನಗದು ಶಿಲ್ಕು ಸಮಾಧಾನಕರವಾಗಿದ್ದರಿಂದ ಹೆಚ್ಚಿನ ಸಾಲಗಳಿಗೆ ಮೊರೆ ಹೋಗುವ ಅಗತ್ಯವಿರಲಿಲ್ಲ. ಆದ್ದರಿಂದ ಸಾಲ ಅದರಲ್ಲೂ ಮಾರುಕಟ್ಟೆ ಸಾಲವನ್ನು ಮತ್ತು ಅದರ ಮೇಲಿನ ಬಡ್ಡಿಯ ಹೊರೆಯನ್ನು ತಪ್ಪಿಸಬಹುದಾಗಿತ್ತು.

ಹೊಸ ಸಾಲಗಳನ್ನು ಮಾಡುವ ಮೊದಲು ತಮ್ಮ ನಗದು ಶಿಲ್ಕನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವ ಮತ್ತು ತಮ್ಮ ವಶದಲ್ಲಿರುವ ನಗದು ಶಿಲ್ಕುಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಪ್ರಯತ್ನಗಳು ನಡೆಯಬೇಕು ಎಂದು ಸತತ ಹಣಕಾಸು ಆಯೋಗಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಪುನರುಚ್ಚರಿಸಿವೆ.

ಆರ್ಥಿಕ ಇಲಾಖೆಯು ನಿರ್ಗಮನ ಸಭೆಯಲ್ಲಿ (ಫೆಬ್ರವರಿ 2021), ಮಾರ್ಚ್ 2020ರ ಅಂತ್ಯಕ್ಕೆ ನಗದು ಶಿಲ್ಕು ₹13,654 ಕೋಟಿಗಳಷ್ಟಿದ್ದು, ₹34,464 ಕೋಟಿಯಷ್ಟಲ್ಲವೆಂದು ತಿಳಿಸಿದೆ. ಹಣಕಾಸು ಲೆಕ್ಕಗಳ ಪ್ರಕಾರ ನಗದು ಶಿಲ್ಕು ₹34,464 ಕೋಟಿಗಳಾಗಿದ್ದು, ಇದು ಹಿಂದಿನ ಎಲ್ಲಾ ರಾಜ್ಯ ಹಣಕಾಸು ವರದಿಗಳಲ್ಲಿ ತಿಳಿಸಿರುವಂತೆ ಮೀಸಲು ನಿಧಿಗಳಲ್ಲಿನ ಹೂಡಿಕೆ ಮತ್ತು ಇತರ ಬಾಬ್ತನ್ನು ಒಳಗೊಂಡಿದೆ. ನಗದು ಶಿಲ್ಕುಗಳಲ್ಲಿನ ಹೂಡಿಕೆಯು ₹5,139.28 ಕೋಟಿಗಳಿಂದ ₹13,634 ಕೋಟಿಗಳಾಗಿರುವುದನ್ನು (ಶೇಕಡ 165) ಲೆಕ್ಕ ಪರಿಶೋಧನೆಯು ಗಮನಿಸಿದೆ. ರಾಜ್ಯ ಸರ್ಕಾರವು 2019–20ರಲ್ಲಿ ಹೂಡಿಕೆಗಳಿಂದ ಸರಾಸರಿ ಶೇಕಡ 2.31 ರಂತೆ ₹535 ಕೋಟಿಗಳ ಬಡ್ಡಿಯನ್ನು 14 ದಿನಗಳ ಖಜಾನೆ ಬಿಲ್ಲುಗಳಿಂದ ಗಳಿಸಿದ್ದು, ಸರಾಸರಿ ಶೇಕಡ 6.38ರ ದರದಲ್ಲಿ ₹19,903 ಕೋಟಿಗಳ ಬಡ್ಡಿಯನ್ನು ಪಾವತಿಸಿದೆ. ಆದ್ದರಿಂದ, ರಾಜ್ಯ ಸರ್ಕಾರವು ಅಧಿಕ ನಗದು ಶಿಲ್ಕನ್ನು ಹೊಂದಿದ್ದರೂ, ಹೆಚ್ಚಿನ ಸಾಲಕ್ಕೆ ಮೊರೆ ಹೋಗಿರುವುದು ಗಮನಿಸಬೇಕಾದ ಅಂಶವಾಗಿದೆ. ಮುಂದುವರೆದು, ಆರ್ಥಿಕ ಇಲಾಖೆಯು ಏಪ್ರಿಲ್ ಹಾಗೂ ಮೇ 2020ರಲ್ಲಿ ಕೋವಿಡ್–19 ಲಾಕ್ ಡೌನ್ ಕಾರಣದಿಂದ ಕಡಿಮೆ ರಾಜಸ್ವವನ್ನು ನಿರೀಕ್ಷಿಸಲಾಗಿದ್ದರಿಂದ, 2019–20ರ ಕೊನೆಯ ತ್ರೈಮಾಸಿಕದಲ್ಲಿ ಸಾಲದ ಸಹಾಯ ಪಡೆಯಲಾಯಿತು ಎಂದು ತಿಳಿಸಿದೆ.

## 2.9 ತೀರ್ಮಾನ ಮತ್ತು ಶಿಫಾರಸುಗಳು

### *ರಾಜ್ಯದ ಸ್ವಂತ ಸಂಪನ್ಮೂಲಗಳು*

2019–20ರಲ್ಲಿ ರಾಜ್ಯ ಸರ್ಕಾರವು ತನ್ನ ರಾಜಸ್ವ ಸ್ವೀಕೃತಿಗಳಲ್ಲಿ ಶೇಕಡ 6.34 ರಷ್ಟು ಹೆಚ್ಚಳವನ್ನು ದಾಖಲಿಸಿದ್ದರೂ 2015–16ರಿಂದ 2019–20ರ ಅವಧಿಯಲ್ಲಿ ರಾಜಸ್ವ ಸ್ವೀಕೃತಿಗಳ ಬೆಳವಣಿಗೆಯ ದರವು ಕುಸಿಯುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ. ರಾಜ್ಯದ ಸ್ವಂತ ತೆರಿಗೆ ಆದಾಯವು ರಾಜಸ್ವ ಸ್ವೀಕೃತಿಗಳ ಪ್ರಮುಖ ಭಾಗವಾಗಿದೆ (ಶೇಕಡ 58). ಆದಾಗ್ಯೂ, ರಾಒಆಂಉಕ್ಕೆ ರಾಜ್ಯದ ತೆರಿಗೆ ಆದಾಯದ ಅನುಪಾತವು ಕ್ಷೀಣಿಸುತ್ತಿರುವ ಪ್ರವೃತ್ತಿಯನ್ನು ತೋರಿಸಿದೆ. ಅಲ್ಲದೆ, ರಾಒಆಂಉಕ್ಕೆ ತೆರಿಗೆಯೇತರ ಆದಾಯದ ಅನುಪಾತದಲ್ಲಿ ಯಾವುದೇ ಸುಧಾರಣೆ ಕಂಡು ಬಂದಿಲ್ಲ ಮತ್ತು ಇದು 2015–16ರಿಂದ 2019–20ರ ಅವಧಿಯಲ್ಲಿ ರಾಒಆಂಉದ ಶೇಕಡಾ ಒಂದಕ್ಕಿಂತ ಕಡಿಮೆ ಇದ್ದಿತು.

ಶಿಫಾರಸು: ವೆಚ್ಚ ಸುಧಾರಣಾ ಆಯೋಗ ಮತ್ತು ವಿತ್ತೀಯ ನಿರ್ವಹಣಾ ಸುಧಾರಣಾ ಸಮಿತಿಯು (ಎಂಟಿಎಫ್‌ಪಿ 2020–24) ಶಿಫಾರಸು ಮಾಡಿರುವಂತೆ ಬಳಕೆದಾರರ ಶುಲ್ಕಗಳನ್ನು ಪರಿಷ್ಕರಿಸುವುದರ ಮೂಲಕ ಮತ್ತು ಬಡ್ಡಿ ಸ್ವೀಕೃತಿಗಳನ್ನು ವಾಸ್ತವಿಕವಾಗಿ ಅಂದಾಜು ಮಾಡುವ ಮೂಲಕ ತೆರಿಗೆಯೇತರ ಆದಾಯಗಳ ತರ್ಕಬದ್ಧ ಸುಧಾರಣೆಯತ್ತ ಗಮನ ಹರಿಸುವುದು ಅಗತ್ಯವಾಗಿದೆ.

### *ರಾಜಸ್ವ ವೆಚ್ಚ*

2019–20ರಲ್ಲಿ ಹಿಂದಿನ ವರ್ಷಕ್ಕಿಂತ ಸಾಮಾಜಿಕ ವಿಭಾಗದ ಬೆಳವಣಿಗೆಯಲ್ಲಿ ಕುಸಿತ ಕಂಡು ಬಂದಿದೆ (ಶೇಕಡ ಎರಡು) ಮತ್ತು ಒಟ್ಟು ರಾಜಸ್ವ ವೆಚ್ಚಗಳಿಗೆ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚದ ಪಾಲು ಸಹ 2018–19ರಲ್ಲಿದ್ದ ಶೇಕಡ 41ರಿಂದ 2019ರಲ್ಲಿ ಶೇಕಡ 38ಕ್ಕೆ ಇಳಿದಿದೆ. 2019–20ರಲ್ಲಿ ಆರ್ಥಿಕ ಸೇವೆಗಳ ಮೇಲಿನ ವೆಚ್ಚದ ಬೆಳವಣಿಗೆ ಸ್ವಲ್ಪ ಮಟ್ಟಿಗೆ ಶೇಕಡಾ ಒಂಭತ್ತರಷ್ಟು ಹೆಚ್ಚಾಗಿದೆ.

ರಾಜಸ್ವ ವೆಚ್ಚದ ಶೇಕಡಾ 81ರಷ್ಟು ಭಾಗವು ಸಂಬಳ, ಬಡ್ಡಿ ಪಾವತಿ, ಪಿಂಚಣಿ, ಸಹಾಯಧನಗಳು, ಸಹಾಯಾನುದಾನ ಮತ್ತು ಹಣಕಾಸಿನ ನೆರವು, ಆಡಳಿತಾತ್ಮಕ ವೆಚ್ಚ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮುಂತಾದ ಬದ್ಧವೆಚ್ಚಗಳನ್ನು ಒಳಗೊಂಡಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ 2019–20ರಲ್ಲಿ ಆರೋಗ್ಯ ಕ್ಷೇತ್ರದ ವೆಚ್ಚವು ಕಡಿಮೆಯಾಗಿದೆ.

ಶಿಫಾರಸುಗಳು: ಸಂಬಳ, ಪಿಂಚಣಿ ಮತ್ತು ಬಡ್ಡಿ ಪಾವತಿಯ ವೆಚ್ಚಗಳು ಅನಮ್ಯವಾದ ಕಾರಣ, ತಥ್ಯ ಫಲಾನುಭವಿಗಳನ್ನು ಗುರುತಿಸುವ ಮೂಲಕ ಸ್ಥಿರವಾಗಿ ಹೆಚ್ಚಾಗುತ್ತಿರುವ ಸಹಾಯಧನಗಳ ವೆಚ್ಚ ಮತ್ತು

ಸ್ಥಳೀಯ ಸಂಸ್ಥೆಗಳನ್ನು ಹೊರತು ಪಡಿಸಿ ಸಹಾಯಾನುದಾನಗಳ ವೆಚ್ಚದ ಕಡೆಗೆ ರಾಜ್ಯ ಸರ್ಕಾರವು ಹೆಚ್ಚಿನ ಗಮನ ಹರಿಸಬೇಕಾಗುತ್ತದೆ.

***ವೆಚ್ಚದ ಗುಣಮಟ್ಟ***

ಪ್ರಸಕ್ತ ವರ್ಷದಲ್ಲಿ ಒಟ್ಟು ವೆಚ್ಚದಲ್ಲಿ ಬಂಡವಾಳ ವೆಚ್ಚದ ಪಾಲು ಶೇಕಡ 19ರಲ್ಲಿ ಉಳಿದಿದೆ. ಒಟ್ಟು ವೆಚ್ಚದಲ್ಲಿ ಅಭಿವೃದ್ಧಿ ವೆಚ್ಚದ ಶೇಕಡಾವಾರು ಪ್ರಮಾಣವು 2018–19ರಲ್ಲಿದ್ದ ಶೇಕಡ 76ರಿಂದ 2019–20ರಲ್ಲಿ ಶೇಕಡ 74ಕ್ಕೆ ಇಳಿದಿದೆ. 2019–20ರ ಕೊನೆಯಲ್ಲಿ ಅಪೂರ್ಣ ಯೋಜನೆಗಳಲ್ಲಿ ತೊಡಗಿಸಿರುವ ₹2,332 ಕೋಟಿ ಮೊತ್ತವು ನಿರ್ಬಂಧಿತವಾಗಿದೆ.

ಕಂಪನಿಗಳು / ನಿಗಮಗಳಲ್ಲಿ 31 ಮಾರ್ಚ್ 2020 ರಲ್ಲಿದ್ದಂತೆ ಹೂಡಿರುವ ₹67,817 ಕೋಟಿಯ ಮೇಲಿನ ಪ್ರತಿಫಲವು ಅತ್ಯಲ್ಪವಾಗಿದೆ (₹53.64 ಕೋಟಿ). ಹೂಡಿಕೆಯು ನಿರಂತರ ನಷ್ಟದಲ್ಲಿರುವ ಕಂಪನಿಗಳು/ನಿಗಮಗಳಲ್ಲಿ ಹೂಡಿರುವ ₹41,989 ಕೋಟಿಗಳನ್ನು (ಶೇಕಡ 62) ಒಳಗೊಂಡಿದೆ.

ಶಿಫಾರಸುಗಳು: ಅಪೂರ್ಣ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ರಾಜ್ಯ ಸರ್ಕಾರವು ಮಾರ್ಗಸೂಚಿಗಳನ್ನು ರೂಪಿಸಬೇಕು ಸಮಯ ಮತ್ತು ವೆಚ್ಚವನ್ನು ಮೀರುವ ಕಾರಣಗಳನ್ನು ಕಟ್ಟುನಿಟ್ಟಾಗಿ ಪರಿಶೀಲನೆ ಮಾಡಿ ಸರಿಪಡಿಸುವ ಕ್ರಮವನ್ನು ತೆಗೆದುಕೊಳ್ಳಬೇಕು. ಜೊತೆಗೆ, ಇದು ಪೂರ್ಣಗೊಳ್ಳುವ ಹಂತದಲ್ಲಿರುವ ಕಾಮಗಾರಿಗಳಿಗೆ ಆದ್ಯತೆ ನೀಡಬೇಕು.

ಭಾರಿ ನಷ್ಟವನ್ನು ಅನುಭವಿಸುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ರಾಜ್ಯ ಸರ್ಕಾರ ಪರಿಶೀಲಿಸಬೇಕು ಮತ್ತು ಹೂಡಿಕೆ ಹಿಂಪಡೆತ/ಪುನಶ್ಚೇತನ/ಮುಚ್ಚುವಿಕೆಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

**ನಿಧಿಗಳು ಮತ್ತು ಇತರ ಹೊಣೆಗಾರಿಕೆಗಳು**

ರಾಜ್ಯದ ಮೀಸಲು ನಿಧಿ, ಖಾತರಿ ವಿಮೋಚನಾ ನಿಧಿಯ ಮೂಲ ಧನವನ್ನು ಕಲ್ಪಿಸಲಾಗಿಲ್ಲ. ಪ್ರಸಕ್ತ ವರ್ಷದಲ್ಲಿ, ₹14.55 ಕೋಟಿಗಳ ಹಸಿರು ತೆರಿಗೆ ಸಂಗ್ರಹವನ್ನು ನಿಧಿ ಲೆಕ್ಕಕ್ಕೆ ವರ್ಗಾಯಿಸಲಾಗಿಲ್ಲ.

ಶಿಫಾರಸುಗಳು: ವಿವಿಧ ಮೀಸಲು ನಿಧಿಗಳ ನಿರ್ವಹಣೆ ಮತ್ತು ಹೂಡಿಕೆ ಮಾದರಿಗೆ ಸಂಬಂಧಿಸಿದ ನಿಯಮಗಳನ್ನು ರೂಪಿಸುವ ಅಗತ್ಯವಿದೆ.

***ಋಣ ಸಹಿಷ್ಣುತೆ***

ರಾಜ್ಯದ ಒಟ್ಟು ಹಣಕಾಸಿನ ಹೊಣೆಗಾರಿಕೆಗಳಲ್ಲಿ ಮುಕ್ತ ಮಾರುಕಟ್ಟೆ ಸಾಲಗಳು ಪ್ರಮುಖ ಪಾಲನ್ನು ಹೊಂದಿವೆ (ಶೇಕಡ 59). ರಾಜಸ್ವ ಸ್ವೀಕೃತಿ/ ಬಡ್ಡಿ ಪಾವತಿಯ ಅನುಪಾತದ ಮೂಲಕ ಅಳೆಯುವ ಬಡ್ಡಿ ಪಾವತಿಗಳ ಹೊರೆಯು 2017–18 ರಿಂದ 2019–20ರ ಅವಧಿಯಲ್ಲಿ ಶೇಕಡ 10.07 ರಿಂದ 11.34ರ ನಡುವೆ ಇದ್ದು ಹದಿನಾಲ್ಕನೆಯ ಹಣಕಾಸು ಆಯೋಗವು ನಿಗದಿಪಡಿಸಿದ್ದ ಶೇಕಡ 9.15ರ ಗುರಿಯನ್ನು ಮೀರಿದೆ. 2019–20ರ ಅವಧಿಯಲ್ಲಿ ರಾಜ್ಯಕ್ಕೆ ಲಭ್ಯವಿರುವ ನಿವ್ವಳ ಸಾಲವು (₹24,510 ಕೋಟಿ) ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 38ರಷ್ಟು ಹೆಚ್ಚಾಗಿದೆ.

ಶಿಫಾರಸುಗಳು: ರಾಜ್ಯ ಸರ್ಕಾರವು ಬದ್ಧವೆಚ್ಚಗಳನ್ನು ಮಿತಗೊಳಿಸಲು ವೆಚ್ಚ ಭಾಗದಲ್ಲಿ ಮಧ್ಯಂತರ ತಿದ್ದುಪಡಿಗಳನ್ನು ಮಾಡಬೇಕಾಗಿದೆ.

***ನಗದು ಶಿಲ್ಕು ಸ್ಥಿತಿ***

ಹೆಚ್ಚುವರಿ ಮಾರುಕಟ್ಟೆ ಸಾಲಗಳಿಂದಾಗಿ ವರ್ಷದ ನಗದು ಶಿಲ್ಕು ಹಿಂದಿನ ವರ್ಷಕ್ಕಿಂತ ಶೇಕಡಾ 57ರಷ್ಟು ಹೆಚ್ಚಾಗಿದೆ.

ಶಿಫಾರಸುಗಳು: ನಿರರ್ಥಕ ನಗದು ಶಿಲ್ಕನ್ನು ಇಟ್ಟುಕೊಳ್ಳುವುದು ವಿವೇಕಯುತ ನಗದು ನಿರ್ವಹಣೆ ಅಲ್ಲ. ಆದ್ದರಿಂದ, ಸರ್ಕಾರವು ಮಾರುಕಟ್ಟೆಯ ಸಾಲಗಳನ್ನು ಅದರ ಅವಶ್ಯಕತೆಗೆ ಸೀಮಿತಗೊಳಿಸುವ ಅಗತ್ಯವಿದೆ.

# ಅಧ್ಯಾಯ – 3

# ಆಯವ್ಯಯ ನಿರ್ವಹಣೆ

# ಅಧ್ಯಾಯ 3 – ಆಯವ್ಯಯ ನಿರ್ವಹಣೆ

## 3.1 ಪೀಠಿಕೆ

ಈ ಅಧ್ಯಾಯವು ರಾಜ್ಯದ ಧನವಿನಿಯೋಗ ಲೆಕ್ಕಗಳ ಪರಿಶೋಧನೆಯನ್ನು ಆಧರಿಸಿದೆ. ಇದು ಸರ್ಕಾರದ ಸಂಪನ್ಮೂಲಗಳ ಹಂಚಿಕೆಗಳ ಆದ್ಯತೆಗಳನ್ನು ಪರಿಶೀಲಿಸುವುದಲ್ಲದೆ ಸಂವಿಧಾನದ ವಿಧಿಗಳ ಉಲ್ಲಂಘನೆಯ ಮತ್ತು ಪಾರದರ್ಶಕತೆಯನ್ನು ಬಾಧಿಸುವ ಅಂಶಗಳನ್ನು ವರದಿ ಮಾಡುತ್ತದೆ. ಅಲ್ಲದೆ, ಇದು ಮಹಿಳಾ ಉದ್ದೇಶಿತ ಆಯವ್ಯಯದ ವಿವರವಾದ ವಿಶ್ಲೇಷಣೆಯನ್ನು ಒಳಗೊಂಡಿದೆ.

## 3.2 ಆಯವ್ಯಯ ಪ್ರಕ್ರಿಯೆ

ಕರ್ನಾಟಕ ಆಯವ್ಯಯ ಕೈಪಿಡಿಯು ಆಯವ್ಯಯವನ್ನು ಸಿದ್ಧಪಡಿಸಲು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಸಂಬಂಧಿಸಿದ ವೆಚ್ಚವನ್ನು ಅಧಿಕರಿಸಲು ಅನುಸರಿಸಬೇಕಾದ ಕ್ರಮಗಳನ್ನು ನಿಗದಿಪಡಿಸುತ್ತದೆ. ಇಲಾಖೆಗಳ ಮುಖ್ಯಸ್ಥರಿಂದ ಸ್ವೀಕರಿಸಿದ ಆಯವ್ಯಯ ಪ್ರಸ್ತಾವನೆಗಳನ್ನು ಆಧರಿಸಿ, ಆರ್ಥಿಕ ಇಲಾಖೆಯು ಆಯವ್ಯಯವನ್ನು ತಯಾರಿಸುತ್ತದೆ. ಆರ್ಥಿಕ ಇಲಾಖೆಯು ಸರ್ಕಾರದ ನಿರ್ಧಾರಗಳನ್ನು ಅಳವಡಿಸಿ ಅಂದಾಜುಗಳನ್ನು ಕ್ರೋಢೀಕರಿಸುತ್ತದೆ ಮತ್ತು

(ಅ) ಆಯವ್ಯಯ ವರ್ಷದಲ್ಲಿ ರಾಜ್ಯದ ಆರ್ಥಿಕ ಸ್ಥಿತಿಯ ಸಾರಾಂಶ ಪಟ್ಟಿ;

(ಆ) ಸ್ವೀಕೃತಿಗಳ ಸವಿಸ್ತಾರ ಅಂದಾಜುಗಳು; ಮತ್ತು

(ಇ) ಅನುದಾನಗಳ ಕೋರಿಕೆಯ ಪಟ್ಟಿ ಮತ್ತು ಅದಕ್ಕನುಗುಣವಾಗಿ ಸವಿಸ್ತಾರ ವೆಚ್ಚಗಳ ಅಂದಾಜುಗಳುಗಳನ್ನು ತಯಾರಿಸುತ್ತದೆ.

ಈ ಅಂದಾಜುಗಳು ರಾಜ್ಯದ ಸಂಚಿತ ನಿಧಿಯಿಂದ ಭರಿಸಬೇಕಾದ ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳನ್ನು ಒಳಗೊಂಡಿರುತ್ತವೆ. ಪ್ರತಿವರ್ಷವೂ ಹಣಕಾಸು ಮಂತ್ರಿಗಳು ಆರ್ಥಿಕ ವರ್ಷದ ಆಯವ್ಯಯವನ್ನು ರಾಜ್ಯ ಉಭಯ ಸದನಗಳಲ್ಲೂ ಮಂಡಿಸುತ್ತಾರೆ.

**ನಕ್ಷೆ 3.1**ರಲ್ಲಿ, 2019–20ನೇ ಸಾಲಿನಲ್ಲಿ ರಾಜ್ಯ ಶಾಸಕಾಂಗದಲ್ಲಿ ಅನುಮೋದನೆಗೊಂಡ ಮೂಲ ಹಾಗೂ ಪೂರಕ ಅವಕಾಶಗಳು, ವೆಚ್ಚ ಮತ್ತು ಉಳಿತಾಯಗಳ ಒಟ್ಟು ಮೊತ್ತವನ್ನು ತೋರಿಸಲಾಗಿದೆ.

**ನಕ್ಷೆ 3.1 ಕರ್ನಾಟಕ ರಾಜ್ಯದ 2019–20ರ ಆಯವ್ಯಯ ಮತ್ತು ವೆಚ್ಚದ ಸಾರಾಂಶ**

(₹ ಕೋಟಿಗಳಲ್ಲಿ)




ಆಕರ: ಧನವಿನಿಯೋಗ ಲೆಕ್ಕಗಳು.

## 3.3 ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ಸಮೀಕ್ಷೆ

### *3.3.1 ಪೀಠಿಕೆ*

ಮಹಿಳಾ ಉದ್ದೇಶಿತ ಆಯವ್ಯಯವು, ಆಯವ್ಯಯ ಸಂಪನ್ಮೂಲಗಳ ಹಂಚಿಕೆಗಳ ದೃಷ್ಟಿಯಲ್ಲಿ ಮಾತ್ರವಲ್ಲದೆ ಸಮಗ್ರ ಕಾರ್ಯವಿಧಾನಗಳಾದ ಶಾಸನ ರಚನೆ, ಕಾರ್ಯನೀತಿಗಳು, ಯೋಜನೆಗಳು, ಕಾರ್ಯಕ್ರಮಗಳು, ವ್ಯವಸ್ಥೆಗಳನ್ನು ರೂಪಿಸುವುದು ಮತ್ತು ಅದರ ಪರಿಪಾಲನೆ, ಅನುಷ್ಠಾನ, ಮೇಲ್ವಿಚಾರಣೆ, ಸಮೀಕ್ಷೆ, ಲೆಕ್ಕ ಪರಿಶೋದನೆ ಮತ್ತು ಕೈಗೊಂಡ ಯೋಜನೆ ಮತ್ತು ಕಾರ್ಯಕ್ರಮಗಳ ಪ್ರಭಾವಗಳನ್ನು ಲಿಂಗಾಧಾರಿತ ದೃಷ್ಟಿಕೋನದಿಂದ ಪರಿಶೀಲಿಸುತ್ತದೆ.

### *3.3.2 ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ*

2005–06ರಲ್ಲಿ ಭಾರತ ಸರ್ಕಾರದ ವೆಚ್ಚಗಳ ಆಯವ್ಯಯದ[26] ಒಂದು ಭಾಗವಾಗಿ ಮಹಿಳಾ ಉದ್ದೇಶಿತ ಆಯವ್ಯಯ ವಿವರಣಾ ಪಟ್ಟಿಯನ್ನು ಪರಿಚಯಿಸಲಾಯಿತು. ಕರ್ನಾಟಕ ಸರ್ಕಾರವು 2007–08ರಿಂದ ಮಹಿಳಾ ಉದ್ದೇಶಿತ ಆಯವ್ಯಯವನ್ನು ಶಾಸಕಾಂಗದಲ್ಲಿ ಮಂಡಿಸುತ್ತಿದೆ. ವಿತ್ತೀಯ ಕಾರ್ಯನೀತಿ ಸಂಸ್ಥೆಯ ಮಹಿಳಾ ಆಯವ್ಯಯ ಕೋಶವು, ಇತರ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳ ಹಾಗೂ ಪರಿಣಿತರ ಸಹಯೋಗದೊಂದಿಗೆ ಮಹಿಳಾ ಉದ್ದೇಶಿತ ಆಯವ್ಯಯವನ್ನು ತಯಾರಿಸುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನೋಡಲ್ ಏಜೆನ್ಸಿಯಾಗಿದ್ದು, ಯೋಜನಾ ಇಲಾಖೆಯ ಸಹಯೋಗದೊಂದಿಗೆ ಮಹಿಳಾ ಉದ್ದೇಶಿತ ಆಯವ್ಯಯದ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುತ್ತದೆ.

ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಯು ಯೋಜನೆಗಳನ್ನು 'ಎ', 'ಬಿ' ಮತ್ತು 'ಸಿ' ವರ್ಗಗಳಾಗಿ ವಿಂಗಡಿಸಿದೆ.

(ಅ) 'ಎ' ವರ್ಗದಲ್ಲಿ ಹಂಚಿಕೆಯ ಶೇಕಡ 100ರಷ್ಟು ಮಹಿಳೆಯರ ಕೇಂದ್ರೀಕೃತ ಯೋಜನೆಗಳು;

(ಆ) 'ಬಿ' ವರ್ಗದಲ್ಲಿ ಮಹಿಳೆಯರ ಪರ ಯೋಜನೆಗಳಿಗೆ ಹಂಚಿಕೆಯ ಶೇಕಡ 30 ರಿಂದ 100ರಷ್ಟು ಹಂಚಿಕೆ; ಮತ್ತು

(ಇ) 'ಸಿ' ವರ್ಗದಲ್ಲಿ ಹಂಚಿಕೆಯ ಶೇಕಡ 30ಕ್ಕಿಂತ ಕಡಿಮೆ ಇರುವ ಲಿಂಗಾಧಾರಿತವಲ್ಲದ ಯೋಜನೆಗಳು.

ಮಹಿಳಾ ಉದ್ದೇಶಿತ ಆಯವ್ಯಯವು, ಯೋಜನೆಗಳನ್ನು ಫಲಾನುಭವಿ ಉದ್ದೇಶಿತ[27] ಮತ್ತು ಫಲಾನುಭವಿ ಉದ್ದೇಶಿತವಲ್ಲದ[28] ಕಾರ್ಯಕ್ರಮಗಳೆಂದು ವಿಭಜಿಸುತ್ತದೆ.

2009–10ರಿಂದ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ವರದಿಯು ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ ಯೋಜನೆಗಳ ವಾಸ್ತವಿಕ ವರ್ಗೀಕರಣದ ಅಗತ್ಯತೆ, ಪ್ರತ್ಯೇಕಿಸಿದ ಮಹಿಳಾ ಉದ್ದೇಶಿತ ಮಾಹಿತಿಗಳ ಕೊರತೆ ಮತ್ತು ಮೇಲ್ವಿಚಾರಣಾ ಕಾರ್ಯಗತಿಗಳಲ್ಲಿ ಸುಧಾರಣೆಗಳನ್ನು ಕುರಿತ ಅವಲೋಕನಗಳನ್ನು ಒಳಗೊಂಡಿದೆ. ಸಾರ್ವಜನಿಕ ಲೆಕ್ಕ ಸಮಿತಿಯು, ರಾಜ್ಯ ಹಣಕಾಸಿನ ವ್ಯವಹಾರಗಳ

[26] 2001ರಲ್ಲಿ ಮಹಿಳಾ ಸಬಲೀಕರಣಕ್ಕಾಗಿ ರಾಷ್ಟ್ರೀಯ ನೀತಿಯನ್ನು ರೂಪಿಸಿದ ನಂತರ, ಹಣಕಾಸು ಸಚಿವಾಲಯವು ಸರ್ಕಾರಿ ವಹಿವಾಟುಗಳ ವರ್ಗೀಕರಣದ ಬಗ್ಗೆ ತಜ್ಞರ ಗುಂಪನ್ನು ರಚಿಸಿತು (2003), ಇದನ್ನು ಅಶೋಕ್ ಲಹಿರಿ ಸಮಿತಿ ಎಂದೂ ಕರೆಯಲಾಯಿತು. ಕಾರ್ಯಸಾಧ್ಯತೆಯನ್ನು ಪರಿಶೀಲಿಸುವುದು ಮತ್ತು ಮಹಿಳಾ ಉದ್ದೇಶಿತ ಆಯವ್ಯಯಕ್ಕೆ ಸಾಮಾನ್ಯ ವಿಧಾನವನ್ನು ಸೂಚಿಸುವುದು ಉಲ್ಲೇಖದ ನಿಯಮಗಳಲ್ಲಿ ಒಂದಾಗಿತ್ತು. ಈ ಸಮಿತಿಯು ಮಹಿಳಾ ಉದ್ದೇಶಿತ ಆಯವ್ಯಯದ ಚೌಕಟ್ಟಿನ ಕೆಲಸವನ್ನು ಸಿದ್ಧಪಡಿಸಲು ಉಪ–ಗುಂಪನ್ನು ರಚಿಸಿತು (ಸೆಪ್ಟೆಂಬರ್ 2003).

[27] ಇವುಗಳು ವೈಯಕ್ತಿಕ ಮತ್ತು ಗೃಹಾಧಾರಿತ ಯೋಜನೆಗಳಾಗಿದ್ದು, ಮಹಿಳೆಯರಿಗೆ ಅಥವಾ ಹುಡುಗಿಯರಿಗೆ ನೇರವಾಗಿ ಪ್ರಯೋಜನವನ್ನು ನೀಡುತ್ತದೆ ಮತ್ತು ಒಟ್ಟು ಫಲಾನುಭವಿಗಳಿಗೆ ಮಹಿಳೆಯರು/ಹುಡುಗಿಯರ ಫಲಾನುಭವಿಗಳ ಶೇಕಡಾವಾರು ವ್ಯಾಪ್ತಿಯಾಗಿ ಅಳೆಯಲಾಗುತ್ತದೆ

[28] ಇವು ಗೃಹ ಮತ್ತು ಸಮುದಾಯ ಆಧಾರಿತ ಯೋಜನೆಗಳಾಗಿವೆ ಮತ್ತು ಉದ್ದೇಶಿತ ಪ್ರದೇಶದ ಒಟ್ಟು ಜನಸಂಖ್ಯೆಗೆ ಪ್ರತಿಯಾಗಿ ಮಹಿಳೆಯರ ಶೇಕಡಾವಾರು ಪ್ರಮಾಣವನ್ನು ಅಳೆಯಲಾಗುತ್ತದೆ.

2009–10ರ ವರದಿಯನ್ನು ಕುರಿತ ತನ್ನ 13ನೇ ವರದಿಯಲ್ಲಿ (ಡಿಸೆಂಬರ್ 2011) ಮಹಿಳಾ ಆಯವ್ಯಯ ಕೋಶವನ್ನು ಬಲಪಡಿಸುವ ಅಗತ್ಯತೆ, ಎಲ್ಲಾ ಇಲಾಖೆಗಳಿಂದ ಸಂಗ್ರಹಿಸಲಾದ ಮಾಹಿತಿಗಳ ವಿಶ್ಲೇಷಣೆಗೆ ಆದ್ಯತೆ ಮತ್ತು 'ಎ' ಮತ್ತು 'ಬಿ' ವರ್ಗದ ಯೋಜನೆಗಳ ಸರಿಯಾದ ಗುರುತಿಸುವಿಕೆಗೆ ಶಿಫಾರಸು ಮಾಡಿದೆ.

### *3.3.3 ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವನ್ನು ಕುರಿತು ಲೆಕ್ಕಪರಿಶೋಧನೆಯ ಫಲಿತಾಂಶಗಳು*

ಪ್ರಸ್ತುತ ಅಧ್ಯಯನಕ್ಕೆ ಮಹಿಳಾ ಉದ್ದೇಶಿತ ಆಯವ್ಯಯಕ್ಕೆ ಸಂಬಂಧಿಸಿದ ವಿತ್ತೀಯ ಕಾರ್ಯನೀತಿ ಸಂಸ್ಥೆಯ ದಾಖಲೆಗಳು, ಮಹಿಳಾ ಆಯವ್ಯಯ ದಾಖಲೆಗಳು, ಹಾಗೂ ಕಾರ್ಮಿಕ ಮತ್ತು ಕೌಶಲ್ಯಾಭಿವೃದ್ಧಿ ಇಲಾಖೆಯ 2015–16ರಿಂದ 2019–20ರವರೆಗಿನ ಐದು ವರ್ಷಗಳ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿದೆ. ಈ ಅಧ್ಯಯನವು

- ಯೋಜನೆ ಮತ್ತು ಕಾರ್ಯನೀತಿಗಳನ್ನು ರೂಪಿಸುವುದು
- ಮಹಿಳಾ ಉದ್ದೇಶಿತ ಆಯವ್ಯಯದ ಪರಿಶೀಲನೆ ನಡೆಸುವುದು
- ಕಾರ್ಮಿಕ ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ಕಾರ್ಯವಿಧಾನಗಳು

ಇವುಗಳ ಮೇಲೆ ಕೇಂದ್ರೀಕೃತವಾಗಿದೆ. ಈ ವಿಷಯಗಳ ಅವಲೋಕನಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

#### *(i) ಯೋಜನೆ ಮತ್ತು ಕಾರ್ಯನೀತಿಗಳನ್ನು ರೂಪಿಸುವುದು*

#### *(ಅ) ಮಹಿಳಾ ಉದ್ದೇಶಿತ ಆಯವ್ಯಯದ ತಯಾರಿಕೆಯ ಕಾರ್ಯವಿಧಾನ*

ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಾಲಯದಿಂದ ಹೊರಡಿಸಲಾದ (ಅಕ್ಟೋಬರ್ 2015) ಮಹಿಳಾ ಉದ್ದೇಶಿತ ಆಯವ್ಯಯದ ಕೈಪಿಡಿಯು ಡೆಬ್ಬಿ ಬಡ್ಲೆಂಡರ್‌ರವರ ಐದು ಹಂತದ ಕಾರ್ಯವಿಧಾನವನ್ನು ಮಹಿಳಾ ಉದ್ದೇಶಿತ ಆಯವ್ಯಯದ ಅನುಷ್ಠಾನಕ್ಕೆ ಸಾಧನವನ್ನಾಗಿ ಬಳಸಲು ಶಿಫಾರಸು ಮಾಡಿದೆ. (ಅಂಕಣ – 1)

**ಅಂಕಣ – 1 ಮಹಿಳಾ ಉದ್ದೇಶಿತ ಆಯವ್ಯಯಕ್ಕಾಗಿ ಐದು ಹಂತದ ಕಾರ್ಯವಿಧಾನ**

ಹಂತ–1: ಗುರುತಿಸಿದ ವಿಭಾಗದಲ್ಲಿ ಮಹಿಳೆಯರು, ಪುರುಷರು, ಬಾಲಕಿಯರು ಮತ್ತು ಬಾಲಕರ ಪರಿಸ್ಥಿತಿಗಳ ವಿಶ್ಲೇಷಣೆ

ಹಂತ–2: ಮೊದಲನೆ ಹಂತದಲ್ಲಿ ವಿವರಿಸಿರುವ ಕಾರ್ಯನೀತಿಗಳು ಮಹಿಳೆಯರ ಉದ್ದೇಶಿತ ವಿಷಯಗಳನ್ನು ಮತ್ತು ಕೊರತೆಗಳನ್ನು ಎಷ್ಟರಮಟ್ಟಿಗೆ ಪ್ರತಿಬಿಂಬಿಸುತ್ತದೆ ಎಂಬ ನಿರ್ಧಾರ

ಹಂತ–3: ಹಂತ –2ರಲ್ಲಿ ಗುರುತಿಸಲಾದ ಮಹಿಳೆಯರ ಉದ್ದೇಶಿತ ಕಾರ್ಯನೀತಿಗಳ ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಬೇಕಾದ ಆಯವ್ಯಯ ಹಂಚಿಕೆಗಳ ನಿರ್ಧಾರ

ಹಂತ–4: ಉದ್ದೇಶಿತ ರೀತಿಯಲ್ಲಿ ಹಣದ ಬಳಕೆಯಾಗಿದೆಯೇ, ಯಾರಿಗೆ ಮತ್ತು ಎಷ್ಟು ಮೊತ್ತ ಕೊಡಲಾಗಿದೆ ಎಂಬ ಮೇಲ್ವಿಚಾರಣೆ

ಹಂತ–5: ಕಾರ್ಯನೀತಿ/ಕಾರ್ಯಕ್ರಮ/ಯೋಜನೆಗಳ ಮೇಲೆ ಆದ ಪರಿಣಾಮ ಮತ್ತು ಮೊದಲನೇ ಹಂತದಲ್ಲಿ ವಿವರಿಸಿದ ಸ್ಥಿತಿಗಿಂತ ಹೇಗೆ ಭಿನ್ನವಾಗಿದೆ ಎಂಬ ವಿವೇಚನೆ

*ಆಕರ: ಮಹಿಳಾ ಉದ್ದೇಶಿತ ಆಯವ್ಯಯ ಕೈಪಿಡಿ (ಅಕ್ಟೋಬರ್ 2015)*

ಆದರೆ, ರಾಜ್ಯವು ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ ಈ ಐದು ಹಂತದ ಕಾರ್ಯವಿಧಾನವನ್ನು ಅಳವಡಿಸಿಕೊಂಡಿರುವ ಬಗ್ಗೆ ಪುರಾವೆಗಳಿಲ್ಲ. **ನಕ್ಷೆ 3.2**ರಲ್ಲಿ ರಾಜ್ಯ ಸರ್ಕಾರದ ಕಾರ್ಯವಿಧಾನವನ್ನು ತೋರಿಸಲಾಗಿದೆ.

**ನಕ್ಷೆ 3.2. ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ಕಾರ್ಯವಿಧಾನ**




*ಆಕರ: ಮಹಿಳಾ ಉದ್ದೇಶಿತ ಆಯವ್ಯಯದ ಲೆಕ್ಕಪರಿಶೋಧನೆಯ ದಾಖಲೆಗಳು, ಎಫ್‌ಪಿಐನಿಂದ ಲೆಕ್ಕಪರೀಕ್ಷಕರಿಗೆ, ಕಲಿಕರಿಗೆ ಮತ್ತು ಸಂಶೋಧಕರಿಗೆ ಕೈಪಿಡಿ*

ಆರ್ಥಿಕ ಇಲಾಖೆಯು ಪ್ರತಿ ವರ್ಷವೂ ಹೊರಡಿಸುವ ಸುತ್ತೋಲೆಯಲ್ಲಿ, ಎಲ್ಲಾ ಆಡಳಿತ ಇಲಾಖೆಗಳೂ ಹಿಂದಿನ ವರ್ಷದ ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಯ 'ಎ' ಮತ್ತು 'ಬಿ' ವರ್ಗದಲ್ಲಿ ಪಟ್ಟಿ ಮಾಡಲಾದ ಎಲ್ಲಾ ಯೋಜನೆಗಳ ವಿವರಗಳೊಂದಿಗೆ ಪ್ರತಿ ಯೋಜನೆಯಡಿ ಪುರುಷ ಮತ್ತು ಮಹಿಳಾ ಫಲಾನುಭವಿಗಳ ಸಂಖ್ಯೆಗಳನ್ನು ತಿಳಿಸುವಂತೆ ನಿಗದಿಸಲಾಗಿದೆ. ಈ ನಮೂನೆಯು, ಯೋಜನೆಯ ವ್ಯಾಪ್ತಿ, ಹಿಂದಿನ ವರ್ಷದ ಆಯವ್ಯಯ ಹಂಚಿಕೆ ಮತ್ತು ವೆಚ್ಚ, ಯೋಜನೆಯ ಸೌಲಭ್ಯವನ್ನು ಪಡೆದ ಫಲಾನುಭವಿಗಳ ಸಂಖ್ಯೆ ಮುಂತಾದವುಗಳನ್ನು ಒಳಗೊಂಡ ಕಾರ್ಯ ನಿರ್ವಹಣೆಯ ಸಂಕ್ಷಿಪ್ತ ವರದಿಯನ್ನು ಅಡಕಗೊಂಡಿರುತ್ತದೆ. ಆದ್ದರಿಂದ, ಕರ್ನಾಟಕದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯವು ಐದು ಹಂತಗಳ ಕಾರ್ಯಕ್ರಮದಲ್ಲಿ ಮೂರನೇ ಹಂತದಿಂದ ಪ್ರಾರಂಭವಾಗುತ್ತದೆ. ಮುಂದುವರೆದು, **ಕಂಡಿಕೆ 3.3.3 (ii)**(ಡ)ಯಲ್ಲಿ ಚರ್ಚಿಸಿರುವಂತೆ ಹಂತ–4 ಮತ್ತು 5ರ ಕಾರ್ಯವಿಧಾನವನ್ನು ಕರ್ನಾಟಕ ರಾಜ್ಯದಲ್ಲಿ ಅನುಸರಿಸಿಲ್ಲ.

ಇದು ಇಲಾಖೆಗಳು, ಮಹಿಳೆಯರ ಅಗತ್ಯತೆಗಳು ಹಾಗೂ ಆದ್ಯತೆಗಳನ್ನು ತಿಳಿಯಲು ಯಾವುದೇ ಪ್ರಯತ್ನ ಮಾಡಿಲ್ಲದಿರುವುದನ್ನು, ವಿಭಾಗದ ಕಾರ್ಯನೀತಿಗಳು ಎಷ್ಟರಮಟ್ಟಿಗೆ ಮಹಿಳೆಯರ ವಿಷಯ ಅಥವಾ ಅಂತರವನ್ನು ಸಂಬೋಧಿಸಿದ್ದವು, ಈ ಅಂತರವನ್ನು ಕಡಿಮೆಗೊಳಿಸಲು ಹೊಸ ಚಟುವಟಿಕೆಗಳ ಅಗತ್ಯತೆ, ಮುಂತಾದ ವಿಷಯಗಳ ಕುರಿತು ಸೂಚಿಸುತ್ತದೆ. ಹೀಗೆ, ಮಹಿಳಾ ಉದ್ದೇಶಿತ ಆಯವ್ಯಯವು ಕೇವಲ ಹಂಚಿಕೆಯ ಕಸರತ್ತಾಗಿ ಉಳಿದಿದೆ.

### *(ಆ) ಅಸಮಗ್ರ ಮಹಿಳಾ ಉದ್ದೇಶಿತ ದತ್ತಾಂಶ*

ಪ್ರತ್ಯೇಕ ಮಹಿಳಾ ಉದ್ದೇಶಿತ ಮಾಹಿತಿಗಳು[29] ಪುರುಷರ ಮತ್ತು ಮಹಿಳೆಯರ ಸ್ಥಿತಿಗತಿಗಳ ನಡುವಿನ ವ್ಯತ್ಯಾಸವನ್ನು ಅರಿಯುವಲ್ಲಿ ಮತ್ತು ಅವರಲ್ಲಿನ ಬದಲಾವಣೆಗಳನ್ನು ತಿಳಿಸುವಲ್ಲಿ ಸಹಕಾರಿಯಾಗುತ್ತದೆ. ಈ ಮಾಹಿತಿಯು, ಕಾರ್ಯನೀತಿ ರೂಪಿಸುವಲ್ಲಿ, ಯೋಜನೆ ತಯಾರಿಸುವಲ್ಲಿ, ಮೇಲ್ವಿಚಾರಣೆ ಮಾಡುವಲ್ಲಿ ಮತ್ತು ದಕ್ಷತೆಯ ಮೌಲ್ಯಮಾಪನ ಮಾಡುವಲ್ಲಿ ಅಗತ್ಯವಾಗಿರುತ್ತದೆ. ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ ಪ್ರತ್ಯೇಕಿಸದ ಮಹಿಳಾ ಉದ್ದೇಶಿತ ಮಾಹಿತಿಗಳು 'ಬಿ' ವರ್ಗದ ಶೇಕಡ 75ರಷ್ಟು ಯೋಜನೆಗಳಿಗೆ

[29] ಮಹಿಳೆಯರು ಮತ್ತು ಪುರುಷರಿಗಾಗಿ ಪ್ರತ್ಯೇಕವಾಗಿ ದತ್ತಾಂಶವನ್ನು ಸಂಗ್ರಹಿಸಿತ ಪಟ್ಟಿಮಾಡಲಾಗಿದೆ. ಮಹಿಳಾ ಉದ್ದೇಶಿತ ಅಂಕಿಅಂಶಗಳು ಮಹಿಳೆಯರು ಮತ್ತು ಪುರುಷರ ನಡುವಿನ ವ್ಯತ್ಯಾಸವನ್ನು ವಿವಿಧ ಸಾಮಾಜಿಕ ಮತ್ತು ಆರ್ಥಿಕ ಆಯಾಮಗಳಲ್ಲಿ ಅಳೆಯಲು ಅನುವು ಮಾಡಿಕೊಡುತ್ತದೆ. ಉದಾಹರಣೆಗೆ ಇದು ಕೃಷಿ ಮನೆಯ ಸಮೀಕ್ಷೆಯಲ್ಲಿ "ಯಾರು" ಪ್ರಶ್ನೆಗಳನ್ನು ಕೇಳುವುದನ್ನು ಒಳಗೊಂಡಿರುತ್ತದೆ: ಯಾರು ಶ್ರಮವನ್ನು ಒದಗಿಸುತ್ತಾರೆ, ಯಾರು ನಿರ್ಧಾರ ತೆಗೆದುಕೊಳ್ಳುತ್ತಾರೆ, ಯಾರು ಭೂಮಿ ಮತ್ತು ಇತರ ಸಂಪನ್ಮೂಲಗಳನ್ನು ಹೊಂದಿದ್ದಾರೆ ಮತ್ತು ನಿಯಂತ್ರಿಸುತ್ತಾರೆ.

ಲಭ್ಯವಿಲ್ಲದಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಯಿತು. ಇದು ಮಹಿಳೆಯರಿಗಾಗಿ ಮಾಡಬೇಕಾದ ವೆಚ್ಚದ ಮೇಲೆ ವ್ಯತಿರಿಕ್ತ ಪ್ರಭಾವ ಹಾಗೂ ಸಂಪೂರ್ಣ ಮೌಲ್ಯಮಾಪನದ ಮೇಲೆ ಪ್ರಭಾವ ಬೀರುತ್ತದೆ.

ಶಿಫಾರಸು: ಇಲಾಖೆಗಳು ಕ್ಷೇತ್ರ ಮಟ್ಟದ ಅಗತ್ಯತೆಗೆ ತಕ್ಕಂತೆ ಯೋಜನೆಗಳನ್ನು ರೂಪಿಸಬೇಕು. ಮುಂದುವರೆದು, ಪ್ರತ್ಯೇಕಿಸಲಾದ ಮಹಿಳಾ ಉದ್ದೇಶಿತ ಮಾಹಿತಿಗಳನ್ನು ತಯಾರಿಸಿ, ಮಹಿಳಾ ಉದ್ದೇಶಿತ ಆಯವ್ಯಯದ ಕಾರ್ಯನೀತಿ ರೂಪಿಸುವವರಿಗೆ ಇದನ್ನು ಒಂದು ಸಾಧನವನ್ನಾಗಿ ಮಾಡುವ ಅಗತ್ಯವಿದೆ.

### ii) *ಮಹಿಳಾ ಉದ್ದೇಶಿತ ಆಯವ್ಯಯದ ವಿಶ್ಲೇಷಣೆ*

2015–16ರಿಂದ 2019–20ರ ವರೆಗಿನ ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಗಳ ಪರಿವಿಶ್ಲೇಷಣೆಯಿಂದ ತಪ್ಪಾದ ಕಾರ್ಯವಿಧಾನಗಳಿರುವುದು ಕಂಡು ಬಂದಿದೆ. ಅವುಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

#### *(ಅ) ಮಹಿಳಾ ಉದ್ದೇಶಿತ ಆಯವ್ಯಯ ಹಂಚಿಕೆ*

ವಿವಿಧ ಇಲಾಖೆಗಳಲ್ಲಿ ಮಹಿಳೆಯರಿಗಾಗಿ ಹಂಚಿಕೆಯ ಮೊತ್ತವನ್ನು ಪರಿಮಾಣಿಸುವ ಒಂದೇ ಒಂದು ದಾಖಲೆಯೆಂದರೆ ಅದು ಮಹಿಳಾ ಉದ್ದೇಶಿತ ಆಯವ್ಯಯ ಮಾತ್ರ. 'ಎ' ಮತ್ತು 'ಬಿ' ವರ್ಗದ ಯೋಜನೆಗಳಡಿಯಲ್ಲಿ ಒಟ್ಟು ಹಂಚಿಕೆಯಾದ ಮೊತ್ತವನ್ನು **ಕೋಷ್ಟಕ 3.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.1: 2015–16 ರಿಂದ 2019–20ರವರೆಗಿನ ವರ್ಗವಾರು ಹಂಚಿಕೆ**

**(₹ ಕೋಟಿಗಳಲ್ಲಿ)**

| ವರ್ಷ | ವರ್ಷದ ಒಟ್ಟು ಹಂಚಿಕೆ | 'ಎ' ವರ್ಗದ ಒಟ್ಟು ಹಂಚಿಕೆ | 'ಬಿ' ವರ್ಗದ ಒಟ್ಟು ಹಂಚಿಕೆ | 'ಬಿ' ವರ್ಗದ 30% ಹಂಚಿಕೆ | ಒಟ್ಟು ಹಂಚಿಕೆಯಲ್ಲಿ 'ಎ' ವರ್ಗದ ಹಂಚಿಕೆಯ ಶತಾಂಶ | ಒಟ್ಟು ಹಂಚಿಕೆಯಲ್ಲಿ 'ಬಿ' ವರ್ಗದ ಹಂಚಿಕೆಯ (30%) ಶತಾಂಶ |
|---|---|---|---|---|---|---|
| 2015–16 | 1,47,963.84 | 5,617.10 | 55,834.26 | 16,750.28 | 3.79 | 11.32 |
| 2016–17 | 1,72,097.16 | 5,047.45 | 61,066.96 | 18,320.09 | 2.93 | 10.64 |
| 2017–18 | 1,94,917.19 | 5,901.83 | 82,156.54 | 24,646.96 | 3.02 | 12.64 |
| 2018–19 (ಜುಲೈ 2018) | 2,24,110.77 | 6,049.41 | 95,975.37 | 28,792.61 | 2.70 | 12.84 |
| 2019–20 | 2,40,745.86 | 5,100.95 | 1,20,868.97 | 36,260.69 | 2.11 | 15.06 |

ಆಕರ: 2016–17 ರಿಂದ 2020–21ರ ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಗಳು

ಮೇಲಿನ ಕೋಷ್ಟಕದಿಂದ 'ಎ' ವರ್ಗದಡಿಯಲ್ಲಿ ಮಾಡಿದ ಒಟ್ಟು ಹಂಚಿಕೆಗಳಲ್ಲಿ, ಸಂಪೂರ್ಣ ಮೊತ್ತ ಮತ್ತು ಒಟ್ಟು ಹಂಚಿಕೆಯ ಶತಾಂಶ ಈ ಎರಡೂ ಭಾಗದಲ್ಲಿ, ಹಂಚಿಕೆಗಳು 2017–18ರಲ್ಲಿ ಸ್ವಲ್ಪ ಏರಿಕೆಯನ್ನು ಹೊರತುಪಡಿಸಿ ಇಳಿಕೆಯಾಗಿರುವುದು ಕಂಡು ಬಂದಿದೆ.

ಮುಂದುವರೆದ ವಿಶ್ಲೇಷಣೆಯಿಂದ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ

- ಆರೋಗ್ಯ, ಶಿಕ್ಷಣ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಈ ಮೂರು ಪ್ರಮುಖ ಇಲಾಖೆಗಳಲ್ಲಿ/ ವಿಭಾಗಗಳಲ್ಲಿ ಆಯವ್ಯಯ ಹಂಚಿಕೆಗಳನ್ನು **ನಕ್ಷೆ 3.3**ರಲ್ಲಿ ನೀಡಲಾಗಿದೆ.

**ನಕ್ಷೆ 3.3 : ಮೂರು ಇಲಾಖೆಗಳಲ್ಲಿ 'ಎ' ವರ್ಗದ ಆಯವ್ಯಯ ಹಂಚಿಕೆ ಮತ್ತು ವೆಚ್ಚ**

(₹ ಕೋಟಿಗಳಲ್ಲಿ)




ಆಕರ: ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಗಳು

- 2016–17ರಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಹಂಚಿಕೆಯು ಏರಿಕೆಯಾಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ 2019–20ರಲ್ಲಿ ಸ್ವಲ್ಪ ಇಳಿಕೆ ಕಂಡಿದೆ. ಆದರೆ, 2015–16ರ ಅವಧಿಯನ್ನು ಹೊರತುಪಡಿಸಿ, ವಾಸ್ತವಿಕ ವೆಚ್ಚವು ಎಲ್ಲಾ ವರ್ಷಗಳ ಹಂಚಿಕೆಗಿಂತ ಕಡಿಮೆ ಇರುವುದು ಕಂಡುಬಂದಿದೆ. 2018–19 ಮತ್ತು 2019–20ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ 'ಎ' ವರ್ಗದಡಿಯಲ್ಲಿನ ಹಂಚಿಕೆಗೆ ಪ್ರತಿಯಾಗಿ ವೆಚ್ಚವು ಕ್ರಮಗಾಗಿ ಶೇಕಡ 53 ಮತ್ತು 65ರಷ್ಟಿದ್ದಿತು. ಶಿಕ್ಷಣ ಮತ್ತು ಆರೋಗ್ಯ ವಿಭಾಗಗಳಲ್ಲಿ, ಕಳೆದ ಐದು ವರ್ಷಗಳಿಂದ ಮಹಿಳೆಯರಿಗಾಗಿದ್ದ ನಿರ್ದಿಷ್ಟ ಯೋಜನೆಗಳಡಿಯಲ್ಲಿ ಹಂಚಿಕೆಯನ್ನು ಹೆಚ್ಚಿಸಿರಲಿಲ್ಲ. ಮೇಲೆ ಕಾಣಿಸಿದ ಮಾಹಿತಿಯನ್ನು ಕೆಳಗಿನ ಪರಿಸ್ಥಿತಿಯ ಹಿನ್ನಲೆಯಲ್ಲಿ ನೋಡಬೇಕಿದೆ.

  (ಅ) 2011ರ ಜನಗಣತಿಯಂತೆ, ಕರ್ನಾಟಕದ ಲಿಂಗಾನುಪಾತ 973 (ಒಂದು ದಶಕಕ್ಕೆ ಶೇಕಡ 0.8 ಬೆಳವಣಿಗೆ) ಮತ್ತು 2012ರಿಂದ 2016ರ ವರೆಗಿನ ಜನನದ ನೋಂದಣಿಯಂತೆ ಲಿಂಗಾನುಪಾತದಲ್ಲಿ 971ರಿಂದ 896ಕ್ಕೆ ನಿರಂತರ ಇಳಿಕೆ,

  (ಆ) 2001ರಿಂದ 2017ರವರೆಗಿನ ಮಾತೃ ಸಂಬಂಧ ಮರಣ[30] ಪ್ರಮಾಣವು ಇಳಿಕೆಯ ಪ್ರವೃತಿ ತೋರಿಸಿದ್ದು, ಅದು 2015–17ರ ಅವಧಿಯಲ್ಲಿ 97ರಷ್ಟಿತ್ತು.

  (ಇ) 15 ರಿಂದ 49 ವಯಸ್ಸಿನ ಮಹಿಳೆಯರಲ್ಲಿ ಶೇಕಡ 45ರಷ್ಟು ಮಂದಿಗೆ ರಕ್ತಹೀನತೆ ಇತ್ತು.

ಜುಲೈ 2018ರಲ್ಲಿ ಕರ್ನಾಟಕದ ಮಹಿಳೆಯರಲ್ಲಿ ಸಾಕ್ಷರತಾ ಪ್ರಮಾಣ ಶೇಕಡ 70.5ರಷ್ಟಿತ್ತು ಮತ್ತು ಸಾಕ್ಷರತಾ ಪ್ರಮಾಣ[31]ದಲ್ಲಿ ಲಿಂಗಬೇಧವು ಶೇಕಡ 12.9ರಷ್ಟಿತ್ತು.

- ಕಳೆದ ಸಾಲಿಗೆ ಹೋಲಿಸಿದರೆ 2019–20ರಲ್ಲಿ ಮಹಿಳೆಯರಿಗಾಗಿ ಮೀಸಲಾದ ಯೋಜನೆಗಳ ಆಯವ್ಯಯ ಹಂಚಿಕೆಗಳಲ್ಲಿ ಇಳಿಕೆಯಾಗಿದೆ. **ಕೋಷ್ಟಕ 3.2**ರಲ್ಲಿ ಹಂಚಿಕೆಯು ಗಣನೀಯವಾಗಿ ಇಳಿಕೆಯಾಗಿರುವ ಕೆಲವು ಯೋಜನೆಗಳ ವಿವರವನ್ನು ನೀಡಲಾಗಿದೆ. ಈ ಪ್ರಕರಣಗಳಲ್ಲಿ ಕಳೆದ

[30] ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಹೊರಡಿಸಿದ ಭಾರತದಲ್ಲಿ ಪುರುಷರು ಮತ್ತು ಮಹಿಳೆಯರು, 2019.

[31] ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಹೊರಡಿಸಿದ ಭಾರತದಲ್ಲಿ ಪುರುಷರು ಮತ್ತು ಮಹಿಳೆಯರು, 2019.

ಸಾಲಿನ ವೆಚ್ಚಕ್ಕಿಂತ ಹಂಚಿಕೆಯಲ್ಲಿ ಇಳಿಕೆಯಾಗಿದೆ. ಅಲ್ಲದೆ, 2019–20ರ ವೆಚ್ಚವು ಹಂಚಿಕೆಗೆ ಸಮನಾಗಿ ಅಥವಾ ಅದಕ್ಕಿಂತ ಹೆಚ್ಚಾಗಿರುವುದನ್ನು ಗಮನಿಸಲಾಗಿದೆ.

**ಕೋಷ್ಟಕ 3.2: ಮಹಿಳೆಯರಿಗಾಗಿ ಮೀಸಲಾದ ಯೋಜನೆಗಳ ಹಂಚಿಕೆಗಳಲ್ಲಿ ಕಡಿಮೆಯಾದ ಪ್ರಕರಣಗಳು**

(₹ ಕೋಟಿಗಳಲ್ಲಿ)

| ಯೋಜನೆಗಳು | ಹಂಚಿಕೆ | | ಶೇಕಡವಾರು ಇಳಿಕೆ |
|---|---|---|---|
| | 2018–19 | 2019–20 | |
| ಅಂಗನವಾಡಿ ಕಾರ್ಯಕರ್ತರಿಗೆ ಹೊಸ ಪಿಂಚಣಿ ಯೋಜನೆ | 15.12 | 10.00 | 34 |
| ಸುರಕ್ಷಾ ಯೋಜನೆ | 0.50 | 0.01 | 98 |
| ಉಜ್ವಲ ಯೋಜನೆ | 3.78 | 1.00 | 74 |
| ಕೆಎಸ್ ಎಫ್ ಸಿ ಯ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯಧನ | 32.94 | 10.00 | 70 |
| ಅಂಗನವಾಡಿ ಕಾರ್ಯಕರ್ತರಿಗೆ ತರಬೇತಿ | 10.00 | 1.00 | 90 |
| ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆ | 100.00 | 10.00 | 90 |

*ಆಕರ: ಮಹಿಳಾ ಉದ್ದೇಶಿತ ಆಯವ್ಯಯ*

- ಮಹಿಳಾ ಉದ್ದೇಶಿತ ಆಯವ್ಯಯದ ಮುಂದುವರೆದ ವಿಶ್ಲೇಷಣೆಯಲ್ಲಿ ತಿಳಿದು ಬಂದ ಅಂಶವೆಂದರೆ, ಅಧಿಕ ಹಂಚಿಕೆಯು ಯಾವಾಗಲೂ ಮಹಿಳೆಯರಿಗಾಗಿ ಮಾಡಲಾದ ಅಧಿಕ ವೆಚ್ಚವನ್ನು ಖಾತರಿಪಡಿಸುವುದಿಲ್ಲ. ಉದಾಹರಣೆಗೆ, 'ಸಬಲ' ಯೋಜನೆಯಡಿ (ಅಪ್ರಾಪ್ತ ಬಾಲಕಿಯರ ಸಬಲೀಕರಣಕ್ಕಾಗಿರುವ ಯೋಜನೆ) 2018–19ರಲ್ಲಿನ ಹಂಚಿಕೆಯಾದ ₹4.23 ಕೋಟಿಯಿಂದ 2019–20ರಲ್ಲಿನ ಹಂಚಿಕೆಯು ₹9.00 ಕೋಟಿಗಳಿಗೆ ಹೆಚ್ಚಿಸಿದ್ದರೂ ಸಹ ಪ್ರಸಕ್ತ ಸಾಲಿನಲ್ಲಿ ಕೇವಲ ₹0.76 ಕೋಟಿಗಳ ವೆಚ್ಚವನ್ನು (ಶೇಕಡ 8.44) ಮಾಡಲಾಗಿದೆ. ಇದೇ ರೀತಿ, ಮಾತೃಶ್ರೀ ಯೋಜನೆಯಡಿ (ಹಾಲುಣಿಸುವ ಮಾತೆಯರಿಗಾಗಿ ಮತ್ತು ಗರ್ಭಿಣಿ ಸ್ತ್ರೀಯರ ಆರೋಗ್ಯ ಸುಧಾರಣೆಯ ಗುರಿ ಹೊಂದಿರುವ ಯೋಜನೆ) ಹಂಚಿಕೆಯು 2018–19ರಲ್ಲಿನ ₹350 ಕೋಟಿಗಳಿಂದ 2019–20ರಲ್ಲಿ ₹450 ಕೋಟಿಗಳಿಗೆ ಹೆಚ್ಚಿಸಿದ್ದರೂ, 2019–20ರಲ್ಲಿ ₹78.24 ಕೋಟಿಗಳ (ಶೇಕಡ 16.64) ವೆಚ್ಚವನ್ನು ಮಾಡಲಾಗಿದೆ. ಸರ್ಕಾರವು ಮಹಿಳೆಯರಿಗಾಗಿ ಮೀಸಲಾದ ಎಲ್ಲಾ ಯೋಜನೆಗಳ ಅನುಷ್ಠಾನದ ಪರಿಶೀಲನೆ ಮತ್ತು ಅವುಗಳ ಪ್ರಭಾವವನ್ನು ಪರಿಶೀಲಿಸಬೇಕಾಗಿದೆ.
- ಒಟ್ಟು 29 ಅನುದಾನಗಳ ಪೈಕಿ 6 ಅನುದಾನಗಳಾದ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕಂದಾಯ, ವಸತಿ ಮತ್ತು ಶಿಕ್ಷಣ ಅನುದಾನಗಳ 'ಎ' ವರ್ಗದ ಯೋಜನೆಗಳಲ್ಲಿ ಶೇಕಡ 99ರಷ್ಟು ಹಂಚಿಕೆಗಳನ್ನು ಮಾಡಲಾಗಿದೆ. ಇದನ್ನು **ಕೋಷ್ಟಕ 3.3**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ 3.3 : 'ಎ'ವರ್ಗದ ಆರು ಅನುದಾನಗಳಡಿಯಲ್ಲಿ ವರ್ಷಾವಾರು ಹಂಚಿಕೆ**

(₹ ಕೋಟಿಗಳಲ್ಲಿ)

| ಅನುದಾನ | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಸಮಾಜ ಕಲ್ಯಾಣ | 127.00 | 141.00 | 334.00 | 213.97 | 90.75 |
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 705.45 | 642.72 | 778.08 | 1,011.36 | 1,004.33 |
| ಕಂದಾಯ | 957.57 | 1,098.55 | 1,098.06 | 1,320.04 | 1,385.73 |
| ವಸತಿ | 3554.83 | 2795.44 | 3392.35 | 3114.20 | 2237.44 |
| ಶಿಕ್ಷಣ | 52.87 | 135.28 | 41.20 | 114.53 | 109.15 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 211.49 | 208.15 | 231.77 | 258.36 | 253.68 |
| ಒಟ್ಟು | **5,609.21** | **5,021.14** | **5,875.46** | **6,032.46** | **5,081.07** |
| 'ಎ' ವರ್ಗದಡಿ ಒಟ್ಟು ಹಂಚಿಕೆ | **5,617.10** | **5,047.45** | **5,901.83** | **6,049.41** | **5,100.95** |
| ಒಟ್ಟು ಹಂಚಿಕೆಯ ಶೇಕಡವಾರು | 99.85 | 99.47 | 99.55 | 99.71 | 99.61 |

*ಆಕರ: ಮಹಿಳಾ ಉದ್ದೇಶಿತ ಆಯವ್ಯಯ*

ಕೃಷಿ, ಜವಳಿ ಮತ್ತು ಆಹಾರ ಕೈಗಾರಿಕೆಗಳು, ಪೊಲೀಸ್, ಸಾರಿಗೆ ಮುಂತಾದ ವಿಭಾಗಗಳಲ್ಲಿ ಮಹಿಳೆಯರನ್ನು ನಿಯೋಜಿಸಿದ್ದರೂ ಸಹ ಮಹಿಳೆಯರಿಗಾಗಿ ಯಾವ ನಿರ್ದಿಷ್ಟ ಯೋಜನೆಗಳನ್ನು ರೂಪಿಸಿರಲಿಲ್ಲ.

- ಭಾರತ ಸರ್ಕಾರವು ರಚಿಸಿದ (2003) ತಜ್ಞರ ತಂಡವು ಮಹಿಳಾ ಉದ್ದೇಶಿತ ಆಯವ್ಯಯಕ್ಕೆ ಅಗತ್ಯವಾದ ಮಾಹಿತಿಗಳನ್ನು ಕಾರ್ಯಕ್ರಮಗಳ ಸ್ವಭಾವ ಹಾಗೂ ಉದ್ದೇಶಗಳ ಆಧಾರದ ಮೇಲೆ ನಾಲ್ಕು ಸಮೂಹಗಳಾದ ರಕ್ಷಣೆ, ಕ್ರಮಬದ್ಧ, ಆರ್ಥಿಕ ಹಾಗೂ ಸಾಮಾಜಿಕ ಸೇವಾ ವಲಯಗಳಿಂದ ಸಂಗ್ರಹಿಸಬೇಕೆಂದು ಸಲಹೆ ಮಾಡಿದೆ. ಆದರೆ, ಈ ಸಲಹೆಯನ್ನು ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಿಲ್ಲ.

- 'ಬಿ' ವರ್ಗದಡಿಯ ಯೋಜನೆಗಳಿಗೆ ನಿಖರವಾದ ಪ್ರಮಾಣದ ಹಂಚಿಕೆಯ ವಿವರಗಳು ದೊರೆತಿಲ್ಲದಿರುವ ಕಾರಣ ಲೇಖಾಪರೀಕ್ಷೆಯನ್ನು 'ಎ' ವರ್ಗದ ಯೋಜನೆಗಳ ಹಂಚಿಕೆಗಳ ಪ್ರಮಾಣವನ್ನು ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ವಲಯಗಳಲ್ಲಿ ಹೋಲಿಕೆ ಮಾಡಲಾಗಿದ್ದು ಇದನ್ನು **ಕೋಷ್ಟಕ 3.4**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 3.4: 'ಎ'ವರ್ಗದ ಯೋಜನೆಗಳಡಿ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಹಂಚಿಕೆ**

(₹ ಕೋಟಿಗಳಲ್ಲಿ)

| ವರ್ಷ | ವಿಭಾಗವಾರು ಹಂಚಿಕೆ (ಆವರಣ ಚಿಹ್ನೆಯಲ್ಲಿ ಶತಾಂಶ) | |
|---|---|---|
| | ಸಾಮಾಜಿಕ ಸೇವೆಗಳು | ಆರ್ಥಿಕ ಸೇವೆಗಳು |
| 2015–16 | 5,609.21 (99.85) | 7.89 (0.15) |
| 2016–17 | 5,021.14 (99.47) | 26.31 (0.53) |
| 2017–18 | 5,875.46 (99.55) | 26.37 (0.45) |
| 2018–19 | 6,032.46 (99.71) | 16.95 (0.29) |
| 2019–20 | 5,081.07 (99.61) | 19.88(0.39) |

*ಆಕರ: ಮಹಿಳಾ ಉದ್ದೇಶಿತ ಆಯವ್ಯಯ*

ಸಾಮಾಜಿಕ ಸೇವೆಗಳಡಿಯಲ್ಲಿ 'ಎ' ವರ್ಗದ ಯೋಜನೆಗಳಿಗೆ ಹಂಚಿಕೆಯಾದ ಮೊತ್ತವು ಒಟ್ಟು ಹಂಚಿಕೆಯ ಶೇಕಡ 99ಕ್ಕಿಂತ ಅಧಿಕವಾಗಿದ್ದು, ಆರ್ಥಿಕ ಸೇವೆಗಳಡಿ ಇದು ಶೇಕಡ ಒಂದಕ್ಕಿಂತ ಕಡಿಮೆ ಇದೆ. ಇದು ಮಹಿಳೆಯರ ಸ್ವಾವಲಂಬನೆ ಮತ್ತು ಸ್ವಾಯತ್ತತೆಗೆ ಮಹತ್ವದ ಯೋಜನೆಗಳಾದ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ, ಸಾಲ, ಮೂಲಸೌಕರ್ಯ ಮತ್ತು ಮಾರ್ಕೆಟಿಂಗ್‌ಗಳಿಗೆ ಸಾಕಷ್ಟು ಗಮನ ಹರಿಸಿರಲಿಲ್ಲವೆಂದು ಸೂಚಿಸುತ್ತದೆ.

### *(ಆ) ಯೋಜನೆಗಳ ವರ್ಗೀಕರಣ*

**ಕಂಡಿಕೆ** 3.3.2ರಲ್ಲಿ ಚರ್ಚಿಸಿರುವಂತೆ, ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಗಳಲ್ಲಿ ಯೋಜನೆ/ಕಾರ್ಯಕ್ರಮಗಳನ್ನು ನಿರ್ದಿಷ್ಟವಾಗಿ ಮಹಿಳೆಯರಿಗಾಗಿ ರೂಪಿಸಿರುವ ಯೋಜನೆಗಳು, ಮಹಿಳೆಯರ ಪರವಾದ ಯೋಜನೆಗಳು ಮತ್ತು ಲಿಂಗಭೇದವಿಲ್ಲದ ಯೋಜನೆಗಳೆಂದು ವಿಂಗಡಿಸಲಾಗಿದೆ. ವರ್ಗೀಕರಣದ ವಿಶ್ಲೇಷಣೆಯನ್ನು ಈ ಕೆಳಗೆ ಮಾಡಲಾಗಿದೆ.

- ನಿರ್ದಿಷ್ಟವಾಗಿ ಮಹಿಳೆಯರಿಗಾಗಿ ಅಲ್ಲದ ಯೋಜನೆಗಳು 'ಎ' ವರ್ಗದಡಿ ಸೇರಿವೆ. ಉದಾ: 'ಪ್ರಧಾನಮಂತ್ರಿ ಆವಾಸ್ ಯೋಜನೆ' – ನಗರ, ಇದು ಪುರುಷ ಮತ್ತು ಮಹಿಳೆಯರಿಬ್ಬರಿಗೂ ಅನ್ವಯಿಸುವ ಯೋಜನೆ, ಸರಳವಿವಾಹಕ್ಕಾಗಿ ದಂಪತಿಗಳಿಗೆ ನಗದು ಪ್ರೋತ್ಸಾಹಧನ ನೀಡುವ ಯೋಜನೆ, ಸಾಮೂಹಿಕ ವಿವಾಹ (ಆದರ್ಶ ವಿವಾಹ ಯೋಜನೆ) ಗಳು ಮುಂತಾದ ಮಹಿಳೆಯರ

ಹಿತಕ್ಕಾಗಿ ಮಾತ್ರ ಇರುವ ಯೋಜನೆಗಳಲ್ಲದಿದ್ದರೂ ಸಹ ಅವುಗಳನ್ನು 'ಎ' ವರ್ಗದ ಯೋಜನೆಗಳನ್ನಾಗಿ ಸೇರಿಸಲಾಗಿದೆ.

- ಕೆಲವು ಯೋಜನೆಗಳು, ಮಹಿಳೆಯರ ಸಾಮಾಜಿಕ ಸ್ಥಿತಿ, ಸ್ವಾಯತ್ತತೆ ಹಾಗೂ ಆರ್ಥಿಕ ಸ್ವತಂತ್ರ್ಯಗಳ ಮೇಲೆ ಯಾವುದೇ ಪ್ರಭಾವ ಬೀರದಿದ್ದರೂ ಸಹ ಅಂಥಹ ಯೋಜನೆಗಳನ್ನು 'ಎ'ವರ್ಗದ ಯೋಜನೆಗಳಡಿ ಸೇರಿಸಲಾಗಿದೆ. ಉದಾ: ಶಿಕ್ಷಣ ಇಲಾಖೆಯ ಮಹಿಳಾ ಕಾಲೇಜುಗಳು, ವಿಜಯಪುರ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ ಮುಂತಾದವುಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಾಜ್ಯ ವಸತಿ ಮತ್ತು ಸತ್ಕಾರ ಕೇಂದ್ರಗಳು, ಕೃಷಿ ಇಲಾಖೆಯಲ್ಲಿ ಮಹಿಳೆ ಮತ್ತು ಯುವಜನಾಂಗಕ್ಕಾಗಿ ತೋಟಗಾರಿಕೆಯಲ್ಲಿ ವ್ಯವಸಾಯ ತರಬೇತಿಗಳು. ಈ ಇಲಾಖೆಗಳಡಿಯ ಹಂಚಿಕೆಗಳು ಭೋದನಾ ಮತ್ತು ಭೋದನೇತರ ಸಿಬ್ಬಂದಿಗಳ ವೇತನ ವೆಚ್ಚಗಳಾಗಿದ್ದವು.
- ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ 'ಎ' ಮತ್ತು 'ಬಿ' ವರ್ಗದ ಯೋಜನೆಗಳನ್ನು ಫಲಾನುಭವಿ ಉದ್ದೇಶಿತ ಕಾರ್ಯಕ್ರಮ ಮತ್ತು ಫಲಾನುಭವಿ ಉದ್ದೇಶಿತವಲ್ಲದ ಕಾರ್ಯಕ್ರಮವೆಂದು ಸಮಂಜಸವಾಗಿ ವರ್ಗೀಕರಣ ಮಾಡಿಲ್ಲದಿರುವುದು ಕಂಡುಬಂದಿದೆ. 2019–20ರ ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ 'ಅಂಗವಿಕಲ ಮಹಿಳೆಯರಿಗೆ ವಸತಿ ನಿಲಯ' ಯೋಜನೆಯು 'ಎ' ವರ್ಗದಲ್ಲಿ ಫಲಾನುಭವಿ ಉದ್ದೇಶಿತ ಕಾರ್ಯಕ್ರಮವಾಗಿ ವರ್ಗೀಕರಣಗೊಂಡಿದ್ದರೆ, ದುಡಿಯುವ ಮಹಿಳೆಯರ ವಸತಿ ನಿಲಯ ಯೋಜನೆಯನ್ನು ಫಲಾನುಭವಿ ಉದ್ದೇಶಿತವಲ್ಲದ ಯೋಜನೆಯೆಂದು ವರ್ಗೀಕರಿಸಲಾಗಿದೆ. ಅದೇ ರೀತಿ, 'ಬಿ' ವರ್ಗದ ಯೋಜನೆಯಡಿ ಆಯುಷ್ ನಿರ್ದೇಶನಾಲಯವು 'ಎ' ವರ್ಗದ ಫಲಾನುಭವಿ ಉದ್ದೇಶಿತ ಯೋಜನೆಯಾಗಿ ವರ್ಗೀಕರಣವಾಗಿದ್ದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯವು ಫಲಾನುಭವಿ ಉದ್ದೇಶಿತವಲ್ಲದ ಯೋಜನೆಯೆಂದು ವರ್ಗೀಕರಣಗೊಂಡಿದೆ.
- ಮಹಿಳಾ ಉದ್ದೇಶಿತ ಆಯವ್ಯಯದ ದಾಖಲೆಗಳಲ್ಲಿ ಯೋಜನೆಗಳು ಯಾವ ಸಮರ್ಥನೆಯೂ ಇಲ್ಲದೆ ಬದಲಾಗಿರುವ ಕಾರಣ, ವರ್ಗೀಕರಣಗೊಂಡ ಯೋಜನೆಗಳನ್ನು ಕಾಲದಿಂದ ಕಾಲಕ್ಕೆ ಹೋಲಿಕೆ ಮಾಡಲು ಸಾಧ್ಯವಾಗಿಲ್ಲ. ಉದಾಹಾರಣೆಗೆ, 2018–19ರಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) ಗಳನ್ನು 'ಬಿ' ವರ್ಗದ ಯೋಜನೆಗಳಾಗಿ ವರ್ಗೀಕರಿಸಿದ್ದರೆ, 2019–20ರ ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ ಈ ಯೋಜನೆಗಳನ್ನು 'ಎ' ವರ್ಗದ ಯೋಜನೆಗಳಾಗಿ ವರ್ಗೀಕರಿಸಲಾಗಿದೆ. ಇದೇ ರೀತಿ, 2019–20ರಲ್ಲಿ ಕುಟುಂಬ ಪಿಂಚಣಿ, ಕರ್ನಾಟಕದ ನಿವೃತ್ತಿದಾರರಿಗೆ ಪಿಂಚಣಿಗಳು ಮುಂತಾದ ಫಲಾನುಭವಿ ಉದ್ದೇಶಿತ ಯೋಜನೆಗಳನ್ನು ಅನುದಾನ 3 – ಆರ್ಥಿಕದಡಿ 'ಬಿ' ವರ್ಗದ ವರ್ಗೀಕರಣದಿಂದ 2020–21ರ ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ ಫಲಾನುಭವಿ ಉದ್ದೇಶಿತವಲ್ಲದ ಯೋಜನೆಗಳೆಂದು ಪರಿವರ್ತಿಸಲಾಗಿದೆ.

### *(ಇ) ತಪ್ಪಾದ ವರದಿ*

- ಮಹಿಳಾ ಉದ್ದೇಶಿತ ವಿಭಜಿತ ಮಾಹಿತಿ ಲಭ್ಯವಿಲ್ಲದ ಕಾರಣ, 'ಬಿ' ವರ್ಗದ ಯೋಜನೆಗಳಲ್ಲಿ ಮಹಿಳೆಯರ ಉದ್ದೇಶಕ್ಕಾಗಿ ಮಾಡಿದ ಹಂಚಿಕೆಗಳಿಗೆ ಬದಲಾಗಿ ಒಟ್ಟು ಹಂಚಿಕೆಗಳನ್ನು ಒಳಗೊಂಡಿದ್ದವು. ಇದರ ಪರಿಣಾಮ ಮಹಿಳಾ ಉದ್ದೇಶಿತ ಆಯವ್ಯಯದ ದಾಖಲೆಗಳಲ್ಲಿನ ಹಂಚಿಕೆಗಳು 'ಬಿ'ವರ್ಗದ ಹಂಚಿಕೆಗಳನ್ನು ಹೆಚ್ಚಾಗಿ ತೋರಿಸಿದಂತಾಗಿತ್ತು.
- ಮುಂದುವರೆದು, ತಜ್ಞರ ಸಮಿತಿಯು 'ಎ' ಮತ್ತು 'ಬಿ' ವರ್ಗಗಳ ಯೋಜನೆಗಳ ಮಹಿಳಾ ಉದ್ದೇಶಿತ ನಿರ್ದಿಷ್ಟ ವೆಚ್ಚಗಳ ಸರಣಿಗಳ ಆರ್ಥಿಕ ವರ್ಗೀಕರಣವನ್ನು ಸರಿದೂಗಿಸುವುದರಿಂದ ಮಹಿಳಾ ಉದ್ದೇಶಿತ ನಿರ್ದಿಷ್ಟ ಕಾರ್ಯಕ್ರಮಗಳ ಅರಿವು ಮೂಡುವುದರಲ್ಲಿ ಸಹಾಯಕಾರಿಯಾಗುತ್ತವೆ ಎಂದು ಶಿಫಾರಸು ಮಾಡಿತ್ತು. ಅಂದರೆ, ಹಂಚಿಕೆಯ ಪ್ರಮುಖ ಭಾಗವು

ಬದ್ಧವೆಚ್ಚಗಳಾದ ವೇತನ, ಕೂಲಿಗಳ ರೂಪದಲ್ಲಿದೆಯೇ ಅಥವಾ ಇದು ಒಂದು ವಿವೇಚನೆಯ ಅಂಶವಾಗಿ ಉಳಿದಿದೆಯೇ ಎಂದು ತಿಳಿದುಕೊಳ್ಳುವುದಾಗಿದೆ.

ಯೋಜನೆ/ಕಾರ್ಯಕ್ರಮದಲ್ಲಿ ವಿವಿಧ ಅಂಶಗಳಾದ ಆಡಳಿತ ವೆಚ್ಚ ಹಾಗೂ ಮಹಿಳೆಯರ ಸೌಲಭ್ಯಕ್ಕೆ ಅಗತ್ಯವಾದ ಸಾಧನ ಸಾಮಗ್ರಿಗಳ ಉಪಸ್ಥಿತಿ ಇದ್ದರೂ ಸಹ ರಾಜ್ಯ ಸರ್ಕಾರವು ಈ ಅಂಶಗಳ ಮಾಹಿತಿ ಸಂಗ್ರಹಣೆ ಮತ್ತು ಅವುಗಳನ್ನು ಆಯವ್ಯಯದಲ್ಲಿ ಅಳವಡಿಸಿಕೊಂಡಿರಲಿಲ್ಲ ಎಂದು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. ಲೆಕ್ಕ ಶೀರ್ಷಿಕೆಗಳಲ್ಲಿ ವೆಚ್ಚಗಳ ವಿಂಗಡಣೆಗಳ ವಿವರಗಳ ಕೊರತೆಯಿಂದ, ಆಡಳಿತಾತ್ಮಕ ವೆಚ್ಚವನ್ನು ಒಳಗೊಂಡು, ಎಲ್ಲಾ ವೆಚ್ಚವನ್ನು ಮಹಿಳಾ ಉದ್ದೇಶಿತ ಫಲಾನುಭವಿ ವೆಚ್ಚಗಳೆಂದು ತೋರಿಸಲಾಗಿದೆ. ಇದು ಮಹಿಳೆಯರ ಏಳಿಗೆಗೆ ಹೆಚ್ಚು ಅನುಕೂಲಕಾರಿ ಎಂಬ ತಪ್ಪಾದ ಚಿತ್ರಣವನ್ನು ಮೂಡಿಸಿದಂತಾಗಿದೆ.

### *(ಈ) ಮೇಲ್ವಿಚಾರಣಾ ವ್ಯವಸ್ಥೆ*

ಮಹಿಳಾ ಉದ್ದೇಶಿತ ಆಯವ್ಯಯ ಅನುಷ್ಠಾನದಲ್ಲಿನ ಸವಾಲುಗಳು ಮತ್ತು ಮಿತಿಗಳನ್ನು ಗುರುತಿಸುವುದು, ಈ ಆಯವ್ಯಯದಲ್ಲಿನ ಅಂತರಗಳನ್ನು ಅರಿಯುವ ಅಭ್ಯಾಸವನ್ನು ಪರಿಶೀಲಿಸುವುದು, ಮಾಹಿತಿಗಳ ಪರಿಶೀಲನೆಗೆ ಪರ್ಯಾಯ ಮಾರ್ಗಗಳನ್ನು ಸೂಚಿಸುವುದು ಮತ್ತು ಇದರ ಸುಧಾರಣೆಗಳಿಗೆ ಶಿಫಾರಸುಗಳನ್ನು ಒದಗಿಸುವುದು ಮುಂತಾದ ವಿಷಯಗಳ ಪರಿಶೀಲನೆಗೆ ಸರ್ಕಾರವು ಜೂನ್ 2013ರಲ್ಲಿ ವಿಶೇಷ ಕಾರ್ಯಪಡೆ ಒಂದನ್ನು ಸ್ಥಾಪಿಸಿತು (ಸೆಪ್ಟೆಂಬರ್ 2015ರಲ್ಲಿ ಇದು ಮರು ಸ್ಥಾಪನೆಯಾಗಿದೆ). ಈ ಪಡೆ ಮಹಿಳಾ ಉದ್ದೇಶಿತ ಆಯವ್ಯಯದ ಮೇಲ್ವಿಚಾರಣೆ ಮತ್ತು ಬೆಳವಣಿಗೆ ಹಾಗೂ ಅನುಷ್ಠಾನಗಳ ಕುರಿತು ಸಲಹೆಗಳನ್ನು ಒದಗಿಸುತ್ತದೆ. ಆದರೆ, 2015–16ರಿಂದ 2019–20ರ ಅವಧಿಯಲ್ಲಿ ಕೇವಲ ಎರಡು ಬಾರಿ[32] ಮಾತ್ರ ಸಭೆ ಸೇರಿದೆ. ಮುಂದುವರೆದು, ಕಾರ್ಯಪಡೆಯು ನಿರೀಕ್ಷಿತ ಮಹಿಳಾ ಉದ್ದೇಶಿತ ಆಯವ್ಯಯದ ವಿಷಯಗಳಿಗಾಗಿ ವಿವಿಧ ಇಲಾಖೆಗಳ ವಾರ್ಷಿಕ ಯೋಜನೆಗಳನ್ನು ಪರಿಶೀಲಿಸಬೇಕಾಗುತ್ತದೆ. ಆದರೆ, 2015–16 ರಿಂದ 2019–20ರ ಅವಧಿಯ ಯಾವುದೇ ವಾರ್ಷಿಕ ಯೋಜನೆಗಳನ್ನು ಇದು ಪರಿಶೀಲಿಸಿಲ್ಲ.

ವಿಶೇಷ ಕಾರ್ಯಪಡೆ ಸಮಿತಿಯ ಸಭೆಯಲ್ಲಿ (ದಿ:13.06.2017), ಮಹಿಳಾ ಉದ್ದೇಶಿತ ಆಯವ್ಯಯದ ಎಲ್ಲಾ 'ಎ' ಮತ್ತು 'ಬಿ' ವರ್ಗಗಳ ಫಲಾನುಭವಿ ಯೋಜನೆಗಳನ್ನು ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ರಾಜ್ಯಮಟ್ಟದ ಸಭೆಯಲ್ಲಿ ಪರಿಶೀಲಿಸಬೇಕೆಂದು ನಿರ್ಧರಿಸಲಾಗಿತ್ತು. ಆ ಸಭೆಗಳ ನಡವಳಿಕೆಗಳ ಪರಿಶೀಲನೆಗಳಿಂದ, ಅಂಥಹ ಸಭೆಗಳು ಯೋಜನೆಗಳ ಎಲ್ಲಾ ಫಲಿತಾಂಶ/ಪ್ರಭಾವಗಳ ಮೇಲೆ ಕೇಂದ್ರೀಕೃತವಾಗಿರುವ ಬದಲು ವೆಚ್ಚಗಳ ಪ್ರಗತಿಯ ಮೇಲೆ ಹೆಚ್ಚು ಗಮನ ಹರಿಸಿರುವುದು ತಿಳಿದು ಬಂದಿದೆ. ಫಲಾನುಭವಿ ಸಂಗತಿಗಳ ವಿಶ್ಲೇಷಣೆ ಕೈಗೊಂಡಿರುವ ಬಗ್ಗೆ ಯಾವ ಪುರಾವೆಗಳೂ ಇರಲಿಲ್ಲ.

ಅಲ್ಲದೆ, ಪರಿಣಿತರ ಸಮಿತಿಯಿಂದ ಸ್ಥಾಪಿಸಲ್ಪಟ್ಟ ಉಪ–ಸಮಿತಿಯೂ ಸಹ ಪ್ರಗತಿಯನ್ನು, ಸರ್ಕಾರದ ಯೋಜನೆಗಳ ಕಾರ್ಯನೀತಿಗಳ ಹಾಗೂ ಕಾರ್ಯಕ್ರಮಗಳ ಪ್ರಗತಿಯನ್ನು, ಲಿಂಗಾಧಾರಿತ ಲೆಕ್ಕಪರಿಶೋಧನೆಗಳನ್ನು ಕಾಲಾನುಕಾಲಕ್ಕೆ ನಡೆಸಬೇಕೆಂದು ಶಿಫಾರಸು ಮಾಡಿತ್ತು (ಅಕ್ಟೋಬರ್ 2003). ಆದರೆ, ಸರ್ಕಾರವು ಕಾರ್ಯನೀತಿ ಮತ್ತು ಕಾರ್ಯಕ್ರಮಗಳ ಲಿಂಗಾಧಾರಿತ ಲೆಕ್ಕ ಪರಿಶೋಧನೆ ನಡೆಸಲು ಇನ್ನೂ ಕ್ರಮ ಕೈಗೊಳ್ಳಬೇಕಾಗಿದೆ. (ಫೆಬ್ರವರಿ 2020).

ಲಿಂಗಾಧಾರಿತ ಲೆಕ್ಕ ಪರಿಶೋಧನೆಯು ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ ಪ್ರಾಥಮಿಕ ಮಟ್ಟದ ಹಂಚಿಕೆಗಳ ಫಲಿತಾಂಶವನ್ನು ತಿಳಿಯಲು ಒಂದು ಹೊಸ ಸಾಧನವಾಗಿದೆಯೆಂದು ನಿರ್ದೇಶಕರು, ಆರ್ಥಿಕ ನೀತಿ ಸಂಸ್ಥೆ ತಿಳಿಸಿದೆ (ಮಾರ್ಚ್ 2020). ಈ ಸಂಸ್ಥೆಯು ಕಳೆದ ಸಾಲಿನಲ್ಲಿ ವಿಶ್ವ ಸಂಸ್ಥೆ ಮಹಿಳೆಯರ ಆರ್ಥಿಕ ಸಹಾಯದೊಂದಿಗೆ ಲಿಂಗಾಧಾರಿತ ಲೆಕ್ಕಪರಿಶೋಧನೆಯ ಕಿಟ್ಟೊಂದನ್ನು ಅಭಿವೃದ್ಧಿಪಡಿಸಲು

[32] 11.05.2017 ಮತ್ತು 13.06.2017

ಒಂದು ಪ್ರಾಯೋಜನೆಯನ್ನು ಅಂತ್ಯಗೊಳಿಸಿದ್ದು, ಅದು ಇನ್ನೂ ಅನುಷ್ಠಾನಗೊಳ್ಳಬೇಕಾಗಿದೆ. ಆದ್ದರಿಂದ ಐದು ಹಂತದ ಚೌಕಟ್ಟಿನಲ್ಲಿ, ನಾಲ್ಕು ಮತ್ತು ಐದರ ಹಂತಗಳು ರಾಜ್ಯದಲ್ಲಿ ಅನುಷ್ಠಾನಗೊಂಡಿಲ್ಲ.

### (iii) *ಅನುದಾನ 23 – ಕಾರ್ಮಿಕ ಮತ್ತು ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ಕಾರ್ಯವಿಧಾನ*

ಅನುದಾನ 23 – ಕಾರ್ಮಿಕ ಮತ್ತು ಕೌಶಲ್ಯಾಭಿವೃದ್ಧಿ ಅನುದಾನವು ಕಾರ್ಮಿಕ ಇಲಾಖೆ, ಕೈಗಾರಿಕಾ ತರಬೇತಿ ಮತ್ತು **ಉದ್ಯೋಗ,** ಕೌಶಲ್ಯಾಭಿವೃದ್ಧಿ, ಉದ್ಯಮಶೀಲ ಮತ್ತು ಜೀವನೋಪಾಯ ಈ ಮೂರು ಇಲಾಖೆಗಳನ್ನು ಒಳಗೊಂಡಿದೆ. ಕಾರ್ಮಿಕರ ಹಕ್ಕು ರಕ್ಷಣೆ ಮತ್ತು ಲಾಭದಾಯಕ ಉದ್ಯೋಗ ಕಲ್ಪಿಸುವುದು ಈ ಇಲಾಖೆಗಳ ಹೊಣೆಗಾರಿಕೆಯಾಗಿದೆ. ಕಾರ್ಯಕ್ಷೇತ್ರದಲ್ಲಿ ಸ್ವಚ್ಛ, ಸೌಹಾರ್ದಯುತ ವಾತಾವರಣ ಹಾಗೂ ಮಹಿಳೆಯರ ವಿಶೇಷ ಅಗತ್ಯಗಳನ್ನು ಪೂರೈಸುವುದು ಕಾರ್ಮಿಕ ಇಲಾಖೆಯ ಒಂದು ಮುಖ್ಯ ಉದ್ದೇಶವಾಗಿದೆ.

2015–16 **ರಿಂದ** 2019–20ರ ಅವಧಿಯ ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಗಳ ಪರಿಶೀಲನೆಯಲ್ಲಿ ಈ ಇಲಾಖೆಗಳು ಮಹಿಳೆಯರಿಗಾಗಿ ನಿರ್ದಿಷ್ಟ ಕಾರ್ಯನೀತಿಗಳನ್ನು ರೂಪಿಸಿರಲಿಲ್ಲವೆಂದು ತಿಳಿದು ಬಂದಿದೆ. **ಕೋಷ್ಟಕ 3.5**ರಲ್ಲಿ 'ಬಿ' ವರ್ಗದ ಮಹಿಳೆಯರ ಪರ ಯೋಜನೆಗಳ ಸಂಖ್ಯೆಗಳ (ಶೂನ್ಯ ಹಂಚಿಕೆಗಳನ್ನು ಹೊರತುಪಡಿಸಿ) ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ 3.5: ಅನುದಾನ 23ರಡಿಯ 'ಬಿ'ವರ್ಗದ ಯೋಜನೆಗಳ ಹಾಗೂ ಹಂಚಿಕೆಗಳ ವಿವರಗಳು**

**(₹ ಕೋಟಿಗಳಲ್ಲಿ)**

| ವರ್ಷ | ಯೋಜನೆಗಳ ಸಂಖ್ಯೆ | | ಹಂಚಿಕೆಗಳು | |
|---|---|---|---|---|
| | ಫಲಾನುಭವಿ ಉದ್ದೇಶಿತ | ಫಲಾನುಭವಿ ಉದ್ದೇಶಿತವಲ್ಲದ[33] | ಫಲಾನುಭವಿ ಉದ್ದೇಶಿತ | ಫಲಾನುಭವಿ ಉದ್ದೇಶಿತವಲ್ಲದ |
| **2015–16** | 12 | 9 | 504.85 | 385.05 |
| **2016–17** | 10 | 8 | 390.26 | 362.70 |
| **2017–18** | 14 | 13 | 758.77 | 941.86 |
| **2018–19** | 14 | 19 | 376.29 | 807.29 |
| **2019–20** | 16 | 16 | 792.56 | 469.56 |

*ಆಕರ: ಮಹಿಳಾ ಉದ್ದೇಶಿತ ಆಯವ್ಯಯ 2016–17ರಿಂದ 2020–21*

ಮೇಲಿನ ಕೋಷ್ಟಕದಿಂದ, 2017–18ಕ್ಕೆ ಹೋಲಿಸಿದರೆ, 2018–19 ಮತ್ತು 2019–20ರ ಅವಧಿಯಲ್ಲಿ 'ಬಿ' ವರ್ಗದ ಯೋಜನೆಗಳ ಹಂಚಿಕೆಗಳಲ್ಲಿ ಇಳಿಕೆಯಾಗಿರುವುದು ಕಂಡು ಬರುತ್ತದೆ. ಮಹಿಳಾ ಉದ್ದೇಶಿತ ಆಯವ್ಯಯದ ಲೆಕ್ಕ ಪರಿಶೀಲನೆಯಲ್ಲಿ 'ಬಿ' ವರ್ಗದ 18 ಯೋಜನೆಗಳನ್ನು (**ಅನುಬಂಧ 3.1**) ಮಹಿಳಾ ಉದ್ದೇಶಿತ ಆಯವ್ಯಯದಲ್ಲಿನ ಹಂಚಿಕೆಯ ಪ್ರಮಾಣದ ಮೇಲೆ ಆರಿಸಿಕೊಳ್ಳಲಾಗಿದ್ದು, ಈ ಕುರಿತ ಅವಲೋಕನಗಳು ಕೆಳಕಂಡಂತಿವೆ.

- ಐದು ಹಂತದ ಚೌಕಟ್ಟಿನಲ್ಲಿ ಯಾವುದೇ ಹಂತವು ಈ ಇಲಾಖೆಯಲ್ಲಿ ಅನ್ವಯಿಸಿಲ್ಲ.
- ಲೆಕ್ಕ ಪರಿಶೀಲನೆಯಲ್ಲಿ ಪರೀಕ್ಷಾ ತನಿಖೆ ಮಾಡಲಾದ 19 ಯೋಜನೆಗಳಲ್ಲಿ, ಎರಡು ಯೋಜನೆಗಳನ್ನು ಹೊರತುಪಡಿಸಿ, ಮಹಿಳಾ ಉದ್ದೇಶಿತ ಆಯವ್ಯದ 'ಬಿ'ವರ್ಗದ ಯೋಜನೆಗಳು ಪ್ರಶ್ನಾರ್ಹವಾಗಿದ್ದು ವೆಚ್ಚವು ಆಡಳಿತಾತ್ಮಕ ವೆಚ್ಚವಾಗಿದ್ದು ಅಥವಾ ಮಹಿಳೆಯರ ಸಬಲೀಕರಣಾಕ್ಕಾಗಿ ಮಾಡಿದ ವೆಚ್ಚವಾಗಿರಲಿಲ್ಲ. ಇವುಗಳ ವಿವರಗಳನ್ನು **ನಕ್ಷೆ 3.4**ರಲ್ಲಿ ನೀಡಲಾಗಿದೆ.

---

[33] ಮೂರನೇ ವರ್ಗೀಕರಣದಡಿಯ ಯೋಜನೆಗಳ "ಫಲಾನುಭವಿ ಮತ್ತು ಫಲಾನುಭವಿ ಉದ್ದೇಶಿತವಲ್ಲದ ಯೋಜನೆಗಳಲ್ಲಿ" 'ಎ' ಮತ್ತು 'ಬಿ' ವರ್ಗದ ಯೋಜನೆಗಳನ್ನು ಫಲಾನುಭವಿ ಉದ್ದೇಶಿತವಲ್ಲದ ಯೋಜನೆಗಳಲ್ಲಿ ಸೇರಿಸಲಾಗಿದೆ.




ಮೇಲಿನ ನಕ್ಷೆಯ ಪ್ರಕಾರ ಶೇಕಡ 11ರಷ್ಟು ಯೋಜನೆಗಳು ಮಾತ್ರ ಮಹಿಳೆಯರ ಪರವಾದ ಯೋಜನೆಗಳಾಗಿದ್ದು ಪ್ರಧಾನಮಂತ್ರಿ ಕೌಶಲ್ಯ ವಿಕಾಸಯೋಜನೆ, ಕೌಶಲ್ಯ ಅಭಿವೃದ್ಧಿ ಮಿಷನ್ ಇತ್ಯಾದಿಗಳು ಮಾತ್ರ ಮಹಿಳೆಯರಿಗೆ ಸೌಲಭ್ಯವನ್ನು ತಲುಪಿಸಿವೆ.

- ಅಸಂಘಟಿತ ವಿಭಾಗದಲ್ಲಿ ಮಹಿಳೆಯರ ಕೊಡುಗೆ ಅಧಿಕವಾಗಿದ್ದರೂ ಸಹ ಇಲಾಖೆಯು ಮಹಿಳಾ ಕೇಂದ್ರೀಕೃತ ಕಳಕಳಿಗಳಾದ ಉಡುಪು ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗಾಗಿ ಶಿಶುಪಾಲನಾ ಕೇಂದ್ರವನ್ನು ಸ್ಥಾಪಿಸುವುದು, ಮಹಿಳೆಯರಿಗೆ ಪ್ರತ್ಯೇಕವಾದ ಶೌಚಾಲಯಗಳು, ಅಗರಬತ್ತಿ/ಆಹಾರ ಸಂಸ್ಕರಣಾ ಕೈಗಾರಿಕೆಗಳಲ್ಲಿ ಕೆಲಸಮಾಡುವವರಿಗೆ ವಿಮಾ ಯೋಜನೆ ಮುಂತಾದವು ಅವರ ಕೌಶಲ್ಯಗಳ ಮೇಲಿನ ಹೂಡಿಕೆ, ಹೊಸ ತಂತ್ರಜ್ಞಾನಗಳಿಗೆ ಪ್ರವೇಶ ಒದಗಿಸುವುದು ಮುಂತಾದವುಗಳಿಗೆ ಸಂಬಂಧಿಸಿದ ಯಾವುದೇ ಕೇಂದ್ರೀಕೃತ ಪ್ರಯತ್ನಗಳನ್ನು ಮಾಡಿರಲಿಲ್ಲ. ಆದರೆ, ಸಂಪೂರ್ಣ ಆಯವ್ಯಯವನ್ನು 'ಬಿ' ವರ್ಗದ ಯೋಜನೆಗಳಿಗೆ ಹಂಚಿಕೆಗಳನ್ನು ಮಾಡಲಾಗಿತ್ತು.
- ಖಾಸಗಿ ಕೈಗಾರಿಕೆಗಳು/ಕಂಪನಿಗಳಲ್ಲಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ಉದ್ಯೋಗಾವಕಾಶ ಹಾಗೂ ಸಾಮಾಜಿಕ ನ್ಯಾಯ ಕಲ್ಪಿಸುವ ಸಲುವಾಗಿ 'ಆಶಾದೀಪ'ಎಂಬ ಯೋಜನೆಯನ್ನು (2017–18) ಅನುಷ್ಠಾನಗೊಳಿಸಲಾಯಿತು. 2017–18 ಮತ್ತು 2018–19ನೇ ವರ್ಷದಲ್ಲಿ ಕ್ರಮವಾಗಿ ₹ 40 ಕೋಟಿ ಹಾಗೂ ₹ 3.25 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, 2018–19ರಲ್ಲಿ ಕೇವಲ ₹ 0.10 ಕೋಟಿಗಳ ವಾಸ್ತವಿಕ ವೆಚ್ಚವನ್ನು ಭರಿಸಲಾಗಿದೆ. ಈ ವೆಚ್ಚವನ್ನು ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ (IEC) ಚಟುವಟಿಕೆಗಳಿಗೆ ಭರಿಸಲಾಗಿದೆ. ಆದರೆ, ಮಹಿಳಾ ಉದ್ದೇಶಿತ ಆಯವ್ಯಯದಲ್ಲಿ ಸಂಪೂರ್ಣ ಬಿಡುಗಡೆಯನ್ನು ವೆಚ್ಚವಾದಂತೆ ತೋರಿಸಲಾಗಿದೆ. 2019–20ರಲ್ಲಿ ಈ ಯೋಜನೆಗೆ ₹4.33 ಕೋಟಿ ಬಿಡುಗಡೆ ಮಾಡಲಾಗಿದ್ದು ₹ 15.21 ಕೋಟಿ ವಾಸ್ತವಿಕ ವೆಚ್ಚ ಭರಿಸಿಲಾಗಿದೆ. ಹೀಗೆ, ಒಟ್ಟು ₹47.48 ಕೋಟಿ ಈ ಯೋಜನೆಗೆ ಬಿಡುಗಡೆ ಮಾಡಲಾಗಿದ್ದು ವಾಸ್ತವ ವೆಚ್ಚ ₹15.31 ಕೋಟಿಗಳಾಗಿದೆ. ಈ ಮೊತ್ತದಲ್ಲಿ ₹ 0.36 ಕೋಟಿಗಳನ್ನು ಫಲಾನುಭವಿ ಮಹಿಳೆಯರಿಗಾಗಿ ಶಿಷ್ಯವೇತನ, ಕಾರ್ಮಿಕರ ರಾಜ್ಯ ವಿಮಾ/ಕಾರ್ಮಿಕರ ಭವಿಷ್ಯ ನಿಧಿಗಳಿಗಾಗಿ ವೆಚ್ಚ ಮಾಡಲಾಗಿದೆ. ಇದು ಒಟ್ಟು ಮೊತ್ತದಲ್ಲಿ ಶೇಕಡ ಎರಡರಷ್ಟು ಇದೆ. ಹೀಗೆ, 'ಬಿ' ವರ್ಗದಲ್ಲಿ ಅಂಥಹ ಯೋಜನೆಗಳನ್ನು ಒಳಗೊಂಡಿರುವುದು ಸಮರ್ಥನೀಯವಲ್ಲ.

- ಕೌಶಲ್ಯಾಭಿವೃದ್ಧಿಗೆ ಸಾಂಸ್ಥಿಕ ಯಂತ್ರೀಕರಣವನ್ನು ಬಲಪಡಿಸಲು ಹಾಗೂ ದೇಶದ ಯುವ ಜನಾಂಗಕ್ಕೆ ಗುಣಮಟ್ಟದ ಪ್ರವೇಶಾವಕಾಶ ಮತ್ತು ಮಾರುಕಟ್ಟೆ ತರಬೇತಿಯನ್ನು ಬಲಪಡಿಸಲು 'ಸಂಕಲ್ಪ' ಎಂಬ ಯೋಜನೆಯನ್ನು ಜನವರಿ 2018ರಿಂದ ಪ್ರಾರಂಭಿಸಲಾಯಿತು. 2019–20ನೇ ವರ್ಷದಿಂದ ಈ ಯೋಜನೆಯನ್ನು ಮಹಿಳಾ ಉದ್ದೇಶಿತ ಆಯವ್ಯಯ 'ಬಿ' ವರ್ಗದಲ್ಲಿ ಪರಿಚಯಿಸಲಾಯಿತು. ಆದರೆ, ಈ ಮೊತ್ತವನ್ನು ಬಿಡುಗಡೆ ಮಾಡಿಲ್ಲ.

ಅನುದಾನ –23ರಡಿಯಲ್ಲಿ ಮಹಿಳಾ ಉದ್ದೇಶಿತ ಆಯವ್ಯಯ ದಾಖಲೆಗಳ 'ಬಿ' ವರ್ಗದಡಿ ಹಂಚಿಕೆಗಳು ವರ್ಷಾನುವರ್ಷ ಅಧಿಕವಾಗಿದ್ದರೂ ಸಹ ಇವು ಮಹಿಳಾ ಕೇಂದ್ರೀಕೃತ ಯೋಜನೆಗಳನ್ನು ಗುರುತಿಸದ ಕಾರಣ ಅವರಿಗಾಗಿ ಹೆಚ್ಚಿನ ಹೂಡಿಕೆಯಾಗಿ ಪರಿವರ್ತಿತವಾಗಿಲ್ಲ. ಮಹಿಳೆಯರ ಅಗತ್ಯಗಳನ್ನು ಪೂರೈಸುವ ಹಾಗೂ ಒಳ್ಳೆಯ ವಾತಾವರಣ ಕಲ್ಪಿಸುವ ಉದ್ದೇಶ ಹೊಂದಲು ಇಲಾಖೆಯು ತನ್ನ ಕಾರ್ಯನೀತಿ ಮತ್ತು ಯೋಜನೆಗಳ ಕಡೆ ಗಮನ ಹರಿಸಿರಲಿಲ್ಲ. ಜೊತೆಗೆ ಆಡಳಿತಾತ್ಮಕ ವೆಚ್ಚವನ್ನು ಸೇರಿಸಿದಂತೆ ಒಟ್ಟು ವೆಚ್ಚವನ್ನು ತೋರಿಸಿರುವುದು ಹಾದಿ ತಪ್ಪಿಸಿದಂತಾಗಿದೆ.

### (iv) ನಿರ್ಣಯ

ಈ ಅಧ್ಯಯನವು ಕರ್ನಾಟಕ ಆಯವ್ಯಯದಲ್ಲಿ ಮಹಿಳಾ ಉದ್ದೇಶಿತ ಆಯವ್ಯಯಕ್ಕಾಗಿ ಪ್ರತಿ ವರ್ಷದ ಹಂಚಿಕೆಯಲ್ಲಿ ಏರಿಕೆಯಾಗುತ್ತಿರುವುದನ್ನು ಗಮನಿಸಿದ್ದು ಇದು ಒಳ್ಳೆಯ ಸೂಚನೆಯಾಗಿದೆ. ಲಿಂಗಾಧಾರಿತ ಅಂತರಗಳಲ್ಲಿ, ಆರೋಗ್ಯ, ಸಾಕ್ಷರತಾ ಪ್ರಮಾಣ ಮತ್ತು ಮಹಿಳೆಯರ ಸಮಗ್ರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಆಧರಿಸಿ ರಾಜ್ಯ ಸರ್ಕಾರವು ಆಯವ್ಯಯ ಹಂಚಿಕೆಯನ್ನು ಹೆಚ್ಚಿಸುವುದು ಮಾತ್ರವಲ್ಲದೆ ಮಹಿಳೆಯರ ಸಮಗ್ರ ಸಬಲೀಕರಣಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕಾಗಿದೆ. 2009–10ರಿಂದ 2018–19ರ ರಾಜ್ಯ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೋಧನಾ ವರದಿ ಹಾಗೂ ಸಾರ್ವಜನಿಕ ಲೆಕ್ಕ ಸಮಿತಿ (ಡಿಸೆಂಬರ್ 2011) ಯ ಶಿಫಾರಸುಗಳು ಈ ವಿಷಯಗಳ ಬಗ್ಗೆ ಗಮನ ಸೆಳೆದಿದ್ದರೂ ಸಹ ಲಿಂಗಾಧಾರಿತ ಆಯವ್ಯಯ ಕಾರ್ಯವಿಧಾನದಲ್ಲಿ ಸಮಗ್ರ ವಿಶ್ಲೇಷಣೆ, ಲಿಂಗಾಧಾರಿತ ವಿಭಜಿತ ಮಾಹಿತಿ ಹಾಗೂ ಮೇಲ್ವಿಚಾರಣಾ ವ್ಯವಸ್ಥೆಗಳ ಕೊರತೆಯಿತ್ತು. ಸರ್ಕಾರದ ಪ್ರಯತ್ನಗಳು ಮಹಿಳಾ ಉದ್ದೇಶಿತ ಆಯವ್ಯಯದ ದಾಖಲೆಗಳಲ್ಲಿ ಮಹಿಳೆ ಮತ್ತು ಹೆಣ್ಣುಮಕ್ಕಳಿಗಾಗಿ ವಿವಿಧ ಇಲಾಖೆಗಳ ಆಯವ್ಯಯದಲ್ಲಿ ಹಂಚಿಕೆಗಳ ಪ್ರಮಾಣವನ್ನು ಗುರುತಿಸುವುದರಲ್ಲಿ ಮಾತ್ರ ಸೀಮಿತವಾಗಿತ್ತು. ಕಾರ್ಯನೀತಿಗಳ ಪ್ರಭಾವ ಹಾಗೂ ಅವುಗಳನ್ನು ರೂಪಿಸುವ ಅಗತ್ಯತೆಯನ್ನು ತಿಳಿಯುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಲಿಂಗಾಧಾರಿತ ವಿಭಜಿತ ಮಾಹಿತಿಗಳನ್ನು ಕ್ರೋಡೀಕರಿಸುವ ಅಗತ್ಯವಿದೆ. ಅಲ್ಲದೆ, ಕಾರ್ಯನೀತಿಗಳ ಮೌಲ್ಯಮಾಪನ ಮತ್ತು ವಿವಿಧ ಯೋಜನೆ/ಕಾರ್ಯಯೋಜನೆಗಳಲ್ಲಿ ಮಾಡಿದ ಹಂಚಿಕೆಗಳ ಫಲ, ಅವುಗಳ ಪ್ರಗತಿಯನ್ನು ತಿಳಿಯಲು ರಾಜ್ಯಸರ್ಕಾರಕ್ಕೆ ಲಿಂಗಾಧಾರಿತ ವಿಭಜಿತ ಮಾಹಿತಿಗಳ ಅಗತ್ಯವಿದೆ. ಮುಂದುವರೆದು, ಮಹಿಳಾ ಉದ್ದೇಶಿತ ಆಯವ್ಯಯ ತಯಾರಿಕೆಯಲ್ಲಿ ಸತತ ಅಸಮರ್ಪಕತೆಗಳಿದ್ದು, ಈ ಆಯವ್ಯಯವನ್ನು ಕಾರ್ಯನೀತಿ ರೂಪಿಸುವ ಸಾಧನವನ್ನಾಗಿ ಮಾಡಲು ಅವುಗಳನ್ನು ಸರಿಪಡಿಸುವ ಅಗತ್ಯತೆಯಿದೆ.

ಆರ್ಥಿಕ ಇಲಾಖೆಯು ನಿರ್ಗಮನ ಸಭೆಯಲ್ಲಿ (ಫೆಬ್ರವರಿ 2021) ಈ ವರದಿಯಲ್ಲಿ ಹೊರತರಲಾಗಿರುವ ವಿಷಯಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದೆ.

## 3.4 ಆಯವ್ಯಯ ಪ್ರಮುಖ ಕಾರ್ಯನೀತಿ ಘೋಷಣೆಗಳು ಮತ್ತು ಅವುಗಳ ಅನುಷ್ಠಾನವನ್ನು ಖಾತ್ರಿಪಡಿಸಲು ಒದಗಿಸಿದ ವಾಸ್ತವ ವೆಚ್ಚಗಳು

2019–20ರ ಆಯವ್ಯಯದಲ್ಲಿ ಸರ್ಕಾರವು ಪ್ರಮುಖ ಕಾರ್ಯನೀತಿ ಉಪಕ್ರಮಗಳನ್ನು ಘೋಷಿಸಿತು (ಫೆಬ್ರವರಿ 2019). 2020–21ರಲ್ಲಿ, ಆಯವ್ಯಯ ದಾಖಲೆಗಳೊಂದಿಗೆ ಕ್ರಮ ಕೈಗೊಂಡ ವರದಿಯನ್ನು ಮಂಡಿಸಲಾಯಿತು.

ರಾಜ್ಯ ಸರ್ಕಾರವು ಒಟ್ಟು 32 ಹೊಸ ಕಾರ್ಯನೀತಿಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು, ಪ್ರವಾಸೋದ್ಯಮ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಗಳಲ್ಲಿ ಉಪಕ್ರಮಿಸಿತು. ಈ ಇಲಾಖೆಗಳಲ್ಲಿ ಸರ್ಕಾರವು ಕೈಗೊಂಡ 28 ಉಪಕ್ರಮಗಳನ್ನು ಕುರಿತು ಲೆಕ್ಕಪರಿಶೋಧನೆ ನಡೆಸಲಾಯಿತು. ಪ್ರಮುಖ ಕಾರ್ಯನೀತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಕೈಗೊಂಡ ಕ್ರಮಗಳ ಸಾರಾಂಶವನ್ನು **ಅನುಬಂಧ – 3.2**ರಲ್ಲಿ ನೀಡಲಾಗಿದೆ.

28 ಉಪಕ್ರಮಗಳಲ್ಲಿ, 9 ಉಪಕ್ರಮಗಳು ಇನ್ನೂ ಪ್ರಾರಂಭಿಕ ಹಂತದಲ್ಲಿದ್ದವು. ಒಂದು ಉಪಕ್ರಮವನ್ನು ಕೈಬಿಡಲಾಗಿದ್ದು, 13 ಉಪಕ್ರಮಗಳ ಬಗ್ಗೆ ಇನ್ನೂ ಕ್ರಮ ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಕೇವಲ ಐದು ಉಪಕ್ರಮಗಳಲ್ಲಿ ಪ್ರಗತಿಯಾಗಿತ್ತು.

ಪ್ರಾಮುಖ್ಯತೆ/ಮಹತ್ವದ ಆಧಾರದ ಮೇಲೆ ಅನುಷ್ಠಾನಗೊಳಿಸಬಹುದಾಗಿದ್ದ ಪ್ರಾರಂಭಿಕ ಹಂತದಲ್ಲಿರುವ ಕೆಲವು ಉಪಕ್ರಮಗಳ ವಿವರಗಳನ್ನು **ಕೋಷ್ಟಕ 3.6**ರಲ್ಲಿ ನೀಡಲಾಗಿದೆ.

**ಕೋಷ್ಟಕ 3.6: ಕ್ರಮ ತೆಗೆದುಕೊಳ್ಳಬೇಕಾಗಿರುವ ಪ್ರಮುಖ ಉಪಕ್ರಮಗಳು**

| ಕ್ರ.ಸಂ. | ಆಯವ್ಯಯ ಉಪಕ್ರಮಗಳು | ತೆಗೆದುಕೊಂಡ ಕ್ರಮ |
|---|---|---|
| 1 | ಕೃತಕ ಅಂಗಗಳ ಹೊಂದಾಣಿಕೆ ಮತ್ತು ಆರ್ಥೋಟಿಕ್ಸ್ ಪಠ್ಯಗಳ ಪ್ರಮಾಣೀಕರಣದ ತರಬೇತಿ ಕೇಂದ್ರಗಳ ಸ್ಥಾಪನೆಯ ಪ್ರಸ್ತಾಪ | ಸರ್ಕಾರವು 2020–21ರಿಂದ ಕೋರ್ಸ್ ಪ್ರಾರಂಭಿಸಲು ಆಡಳಿತಾತ್ಮಕ ಒಪ್ಪಿಗೆಯನ್ನು ಮೇ 2020ರಲ್ಲಿ ನೀಡಿದೆ. |
| 2 | ಕ್ಷೀರ ಭಾಗ್ಯ ಯೋಜನೆಯಡಿ ಶಾಲೆಗೆ ಹೋಗುವ ಎಲ್ಲಾ ಮಕ್ಕಳಿಗೆ ಪೋಷ್ಟಿಕಾಂಶದ ಪ್ರಮಾಣ ಹೆಚ್ಚಿಸಲು ಹಾಲು ಪೂರೈಸಲು ಪ್ರಸ್ತಾಪ | ಪ್ರಸ್ತಾಪಕ್ಕೆ ಇನ್ನೂ ಒಪ್ಪಿಗೆ ದೊರೆಯಬೇಕಾಗಿದೆ. |
| 3 | ನಿರಂತರ ಶಬ್ದದ ಗುಣಮಟ್ಟವನ್ನು ಗಮನಿಸುವ ಕೇಂದ್ರಗಳನ್ನು 10 ನಗರಸಭಾ ಪ್ರದೇಶಗಳಲ್ಲಿ ಸ್ಥಾಪಿಸಲು (ಬೆಂಗಳೂರನ್ನು ಹೊರತುಪಡಿಸಿ) ಪ್ರಸ್ತಾಪ | ಪ್ರಸ್ತಾಪ ಅನುಷ್ಠಾನಗೊಳ್ಳಬೇಕಾಗಿದೆ. |
| 4 | ಕ್ಯಾಸನೂರ್ ಅರಣ್ಯ ರೋಗಗಳ ಲಸಿಕೆಗಳನ್ನು ಉತ್ಪಾದಿಸಲು ಸಹಕಾರ ನೀಡಲು ಪ್ರಸ್ತಾಪ | ಪ್ರಸ್ತಾಪ ಇನ್ನೂ ಪ್ರಾರಂಭಿಕ ಹಂತದಲ್ಲಿದೆ. |

## 3.5 ಧನವಿನಿಯೋಗ ಲೆಕ್ಕಗಳು

ಧನವಿನಿಯೋಗ ಲೆಕ್ಕಗಳು ಭಾರತ ಸಂವಿಧಾನದ ಅನುಚ್ಛೇದ 204 ಮತ್ತು 205ರಡಿಯಲ್ಲಿ ಶಾಸಕಾಂಗವು ಅಂಗೀಕರಿಸಿದ ಪ್ರತಿ ಆರ್ಥಿಕ ವರ್ಷದ ಧನವಿನಿಯೋಗ ಅಧಿನಿಯಮಗಳಿಗೆ ಸಹಬಂಧಗೊಳಿಸಿದ ಅನುಸೂಚಿಗಳಲ್ಲಿ ನಿಗದಿಪಡಿಸಲಾದ ಮೊತ್ತಗಳಿಗೆ ಹೋಲಿಸಿದ ಸರ್ಕಾರದ ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳ ಲೆಕ್ಕಗಳಾಗಿವೆ. ಧನವಿನಿಯೋಗ ಲೆಕ್ಕಗಳು ಒಟ್ಟು ವೆಚ್ಚವನ್ನು ಆಧರಿಸಿದೆ. ಈ ಲೆಕ್ಕಗಳು ಮೂಲ ಆಯವ್ಯಯ ಅಂದಾಜುಗಳು, ಪೂರಕ ಅನುದಾನಗಳು, ಅಧ್ಯರ್ಪಣೆಗಳು ಮತ್ತು ಪುನರ್ವಿನಿಯೋಗಗಳನ್ನು ಸ್ಪಷ್ಟವಾಗಿ ಪಟ್ಟಿ ಮಾಡಿ, ಧನವಿನಿಯೋಗ ಕಾಯ್ದೆಗಳಡಿಯಲ್ಲಿ ಅಧಿಕೃತಗೊಳಿಸಿದ ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳ ಆಯವ್ಯಯಗಳ ಬಾಬ್ತುಗಳಿಗೆ ಪ್ರತಿಯಾಗಿ ವಿವಿಧ ನಿರ್ದಿಷ್ಟ ಸೇವೆಗಳ ಮೇಲಿನ ವಾಸ್ತವ ಬಂಡವಾಳ ಮತ್ತು ರಾಜಸ್ವ ವೆಚ್ಚಗಳನ್ನು ಸೂಚಿಸುತ್ತವೆ. ಹೀಗೆ, ಧನವಿನಿಯೋಗ ಲೆಕ್ಕಗಳು ಅನುದಾನಗಳ ಬಳಕೆ, ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ಅವಕಾಶಗಳ ಗಮನಿಸುವಿಕೆಗಳನ್ನು ಅರ್ಥೈಸಿಕೊಳ್ಳಲು ಅನುಕೂಲವಾಗಿದೆಯಲ್ಲದೆ ಹಣಕಾಸು ಲೆಕ್ಕಗಳಿಗೆ[34] ಪರಿಪೂರಕವಾಗಿವೆ.

### *3.5.1 2019–20ರ ಒಟ್ಟು ಅವಕಾಶಗಳು, ವಾಸ್ತವ ವೆಚ್ಚ ಹಾಗೂ ಉಳಿತಾಯಗಳ ಸಾರಾಂಶ*

2019–20ರಲ್ಲಿ, ಪೂರಕ ಅಂದಾಜುಗಳೂ ಸೇರಿದಂತೆ 29 ಅನುದಾನ/ವಿನಿಯೋಗಗಳಿಗೆ ಪ್ರತಿಯಾಗಿ ವಾಸ್ತವ ವೆಚ್ಚ ಹಾಗೂ ಉಳಿಕೆ/ಹೆಚ್ಚುವರಿಗಳು, ರಾಜಸ್ವ/ಬಂಡವಾಳ ಹಾಗೂ ಪುರಸ್ಕೃತ ಮತ್ತು ಪ್ರಭೃತಗಳ ವಿಂಗಡಣೆಗಳ ಸಂಕ್ಷಿಪ್ತ ಸ್ಥಿತಿಯನ್ನು **ಕೋಷ್ಟಕ 3.7**ರಲ್ಲಿ ನೀಡಲಾಗಿದೆ.

[34] ಹಣಕಾಸು ಲೆಕ್ಕವು ಕರ್ನಾಟಕ ಸರ್ಕಾರದ ಆರ್ಥಿಕ ವರ್ಷದ ಹಣಕಾಸು ವ್ಯವಹಾರಗಳ ವಿಸ್ತಾರ ದೃಷ್ಟಿಕೋನವನ್ನು ಒದಗಿಸುತ್ತದೆ. ಇದನ್ನು ಈ ವರದಿಯ ಅಧ್ಯಾಯ 1 ಮತ್ತು 2ರಲ್ಲಿ ವಿವರಿಸಲಾಗಿದೆ.

### ಕೋಷ್ಟಕ 3.7 : ಮೂಲ/ಪೂರಕ ಅವಕಾಶಗಳಿಗೆ ಪ್ರತಿಯಾಗಿ ವಾಸ್ತವಿಕ ವೆಚ್ಚದ ಸಂಕ್ಷಿಪ್ತ ಸ್ಥಿತಿ

(₹ ಕೋಟಿಗಳಲ್ಲಿ)

| ವೆಚ್ಚದ ಸ್ವರೂಪ | | ಮೂಲ ಅನುದಾನ/ ವಿನಿಯೋಗ | ಪೂರಕ ಅನುದಾನ/ ವಿನಿಯೋಗ | ಒಟ್ಟು | ವಾಸ್ತವ ವೆಚ್ಚ | ಬಳಕೆಯಾಗದ ಅವಕಾಶ(–)/ ಅವಕಾಶಕ್ಕಿಂತ ಅಧಿಕ ವೆಚ್ಚ(+) | ಅಧ್ಯರ್ಪಣೆ ಮಾಡಿದ ಮೊತ್ತ | ಮಾರ್ಚ್ 31ರಂದು ಅಧ್ಯರ್ಪಣೆ ಮಾಡಿದ ಮೊತ್ತ | ಮಾರ್ಚ್ 31ರಂದು (ಶೇಕಡವಾರು) ಉಳಿಕೆಯ ಅಧ್ಯರ್ಪಣೆ |
|---|---|---|---|---|---|---|---|---|---|
| ಪುರಸ್ಕೃತ | I ರಾಜಸ್ವ | 1,62,464.81 | 15,628.45 | 1,78,093.26 | 1,60,084.08 | 18,009.18 | 10,134.67 | 10,134.67 | 100 |
| | II ಬಂಡವಾಳ | 40,034.82 | 4,184.14 | 44,218.96 | 36,374.94 | 7,844.02 | 2,601.47 | 2,601.47 | 100 |
| | III ಸಾಲಗಳು ಮತ್ತು ಮುಂಗಡಗಳು | 4,898.26 | 2,532.37 | 7,430.63 | 5,463.87 | 1,966.76 | 0.60 | 0.60 | 100 |
| ಒಟ್ಟು ಪುರಸ್ಕೃತ | | **2,07,397.89** | **22,344.96** | **2,29,742.85** | **2,01,922.89** | **27,819.96** | **12,736.74** | **12,736.74** | **100** |
| ಪ್ರಭೃತ | *IV* ರಾಜಸ್ವ | *22,184.69* | *403.00* | *22,587.69* | *2,0678.70* | *1,908.99* | *1,653.68* | *1653.68* | *100* |
| | *V* ಸಾರ್ವಜನಿಕ ಋಣ ಪಾವತಿ | *1,198.92* | *0.36* | *1,199.28* | *1,194.85* | *4.43* | *0.03* | *0.03* | *100* |
| | *VI* ಬಂಡವಾಳ | *9,964.36* | *310.49* | *10,274.85* | *10,181.79* | *93.06* | *94.25* | *94.25* | *100* |
| ಒಟ್ಟು ಪ್ರಭೃತ | | ***33,347.97*** | ***713.85*** | ***34,061.82*** | ***32,055.34*** | ***2,006.48*** | ***1,747.96*** | ***1,747.96*** | ***100*** |
| ಒಟ್ಟು ಮೊತ್ತ | | **2,40,745.86** | **23,058.81** | **2,63,804.67** | **2,33,978.23** | **29,826.44** | **14,484.70** | **14,484.70** | ***100*** |

*ಆಕರ: ಧನವಿನಿಯೋಗ ಲೆಕ್ಕಗಳು*

2019–20ರಲ್ಲಿ, 29 ಅನುದಾನ/ವಿನಿಯೋಗಗಳಲ್ಲಿ ₹2,63,804.67 ಕೋಟಿಗಳ ಅವಕಾಶಕ್ಕೆ ಪ್ರತಿಯಾಗಿ ₹2,33,978.23 ಕೋಟಿಗಳ ವೆಚ್ಚವನ್ನು ಭರಿಸಲಾಗಿದ್ದು, ಇದು ₹29,826.44 (ಶೇಕಡ 11) ಕೋಟಿಗಳ ಅವಕಾಶವು ಬಳಕೆಯಾಗದೆ ಉಳಿಯುವಲ್ಲಿ ಪರಿಣಮಿಸಿತು.

### *3.5.2 ಪುರಸ್ಕೃತ ಮತ್ತು ಪ್ರಭೃತ ವಿತರಣೆಗಳು*

2015–16ರಿಂದ 2019–20ರವರೆಗಿನ ಪುರಸ್ಕೃತ ಮತ್ತು ಪ್ರಭೃತ ಬಟವಾಡೆಗಳ ಸಂಕ್ಷಿಪ್ತ ಸ್ಥಿತಿಯನ್ನು **ಕೋಷ್ಟಕ–3.8**ರಲ್ಲಿ ನೀಡಲಾಗಿದೆ.

### ಕೋಷ್ಟಕ–3.8: 2015–16ರಿಂದ 2019–20ರವರೆಗಿನ ಪುರಸ್ಕೃತ ಮತ್ತು ಪ್ರಭೃತ ಬಡವಾಡೆಗಳು

(₹ ಕೋಟಿಗಳಲ್ಲಿ)

| ವರ್ಷ | ಬಟವಾಡೆಗಳು | | ಉಳಿತಾಯ (ಶತಾಂಶದಲ್ಲಿ) | |
|---|---|---|---|---|
| | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| **2015–16** | 1,31,707.53 | *17,542.30* | 10,863.92(8) | *6,558.11(37)* |
| **2016–17** | 1,51,848.04 | *21,196.98* | 11,750.35(8) | *1,256.97(6)* |
| **2017–18** | 1,67,845.36 | *24,474.88* | 16,547.66(10) | *611.60(2)* |
| **2018–19** | 1,89,840.99 | *30,693.11* | 23,265.27(12) | *1,873.70(6)* |
| **2019–20** | 2,01,922.89 | *32,055.34* | 27,819.96(14) | *2,006.48(6)* |

*ಆಕರ: ಧನವಿನಿಯೋಗ ಲೆಕ್ಕಗಳು*

2015–16ರಿಂದ 2019–20ರ ಅವಧಿಯಲ್ಲಿ ಬಳಕೆಯಾಗದ ಅವಕಾಶವು ಪುರಸ್ಕೃತ ವಿಭಾಗದಲ್ಲಿ ಶೇಕಡ 8 ರಿಂದ 14ರ ವ್ಯಾಪ್ತಿಯಲ್ಲಿದ್ದು, ಪ್ರಭೃತ ವಿಭಾಗದಲ್ಲಿ ಇದು ಶೇಕಡ ಎರಡರಿಂದ ಆರರಷ್ಟಿದ್ದು 31 ಮಾರ್ಚ್ 2016ರ ರಾಜ್ಯ ಹಣಕಾಸು ವರದಿಯಲ್ಲಿ ತಿಳಿಸಿರುವಂತೆ 2015–16ನೇ ಸಾಲಿನಲ್ಲಿ ಮಾತ್ರ ಆಯವ್ಯಯದಲ್ಲಿನ ಪುರಸ್ಕೃತ ಮತ್ತು ಪ್ರಭೃತಗಳ ನಡುವಿನ ದೋಷದ ಪರಿಣಾಮ ಇದು ಶೇಕಡ 37ರಷ್ಟಿತ್ತು.

## 3.6 ಧನವಿನಿಯೋಗಗಳ ಲೆಕ್ಕಪರಿಶೋಧನೆ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನಡೆಸಲ್ಪಡುವ ಧನವಿನಿಯೋಗದ ಲೆಕ್ಕ ಪರಿಶೋಧನೆಯು ವಿವಿಧ ಅನುದಾನಗಳಡಿ ಮಾಡಿದ ವಾಸ್ತವ ವೆಚ್ಚವು ಧನವಿನಿಯೋಗ ಅಧಿನಿಯಮದಡಿ

ನೀಡಿದ ಅಧಿಕಾರದ ಪರಿಮಿತಿಯೊಳಗೆ ಇದೆಯೇ ಮತ್ತು ಸಂವಿಧಾನದ ಉಪಬಂಧಗಳ (ಅನುಚ್ಛೇಧ 202) ಮತ್ತು ವಿಧಾನಸಭೆಯ ವಿವಿಧ ಶಾಸನಗಳ ಅಡಿಯಲ್ಲಿ ಪ್ರಭೃತಗೊಳಿಸಬೇಕಾದ ವೆಚ್ಚವನ್ನು ಹಾಗೆ ಪ್ರಭೃತಗೊಳಿಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಬಯಸುತ್ತದೆ. ಅಲ್ಲದೆ, ಭರಿಸಿದ ವೆಚ್ಚವು ಸಂಬಂಧಿಸಿದ ಕಾನೂನು, ನಿಯಮಗಳು, ನಿಬಂಧನೆಗಳು ಮತ್ತು ನಿರ್ದೇಶನಗಳಿಗೆ ಅನುಗುಣವಾಗಿದೆಯೇ ಎಂಬುದನ್ನು ಸಹ ಖಚಿತಪಡಿಸಿಕೊಳ್ಳುತ್ತದೆ.

### *3.6.1 ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ಸಮೀಕ್ಷೆ*

#### *3.6.1.1 ಆಯವ್ಯಯದಲ್ಲಿನ ದೋಷಗಳು*

ಪುರಸ್ಕೃತ ಮತ್ತು ಪ್ರಭೃತಗಳ ಮೇಲಿನ ವಹಿವಾಟುಗಳ ತಪ್ಪಾದ ವರ್ಗೀಕರಣವು ಸಂಬಂಧಪಟ್ಟ ಶೀರ್ಷಿಕೆಗಳಡಿಗಲ್ಲಿ ವಹಿವಾಟುಗಳ ವರ್ಗೀಕರಣದ ನಿಯಮಗಳ ಅನ್ವಯದಲ್ಲಿನ ಕೊರತೆಯನ್ನು ಸೂಚಿಸುತ್ತದೆ. ಅಲ್ಲದೆ, ವೆಚ್ಚದ ಸ್ವರೂಪ ಮತ್ತು ಭವಿಷ್ಯದ ಆಯವ್ಯಯ ತಯಾರಿಕೆಗೆ ವಹಿವಾಟುಗಳನ್ನು ಸರಿಯಾದ ಉದ್ದೇಶ ಶೀರ್ಷಿಕೆಯಡಿ ವರ್ಗೀಕರಿಸುವುದು ಅವಶ್ಯಕವಾಗಿದೆ.

#### *(ಎ) ಪುರಸ್ಕೃತ ಮತ್ತು ಪ್ರಭೃತಗಳ ವಿಭಾಗಗಳ ನಡುವೆ ತಪ್ಪು ವರ್ಗೀಕರಣ*

2019–20ರಲ್ಲಿ, ಈ ಕೆಳಕಂಡ ಪ್ರಕರಣಗಳಲ್ಲಿ ಪುರಸ್ಕೃತ/ಪ್ರಭೃತ ವಿಭಾಗಗಳಿಗೆ ಬದಲಾಗಿ ಪ್ರಭೃತ/ಪುರಸ್ಕೃತಗಳಡಿ ತಪ್ಪಾಗಿ ವರ್ಗೀಕರಿಸಲಾಗಿರುವುದನ್ನು **ಕೋಷ್ಟಕ–3.9**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–3.9 : ಪುರಸ್ಕೃತ/ಪ್ರಭೃತ ವಿಭಾಗಗಳಲ್ಲಿ ಆಯವ್ಯಯ ದೋಷಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಅನುದಾನ ಸಂಖ್ಯೆ | ಲೆಕ್ಕ ಶೀರ್ಷಿಕೆ | ಅವಕಾಶ/ ವೆಚ್ಚ | ಅಭಿಪ್ರಾಯಗಳು |
|---|---|---|---|---|
| 1 | ಅನುದಾನ ಸಂಖ್ಯೆ. 3 –ಆರ್ಥಿಕ | 2071–01–104–2–06–240 ಋಣಸೇವೆಗಳು (ಪ್ರ) | *1.53* | ಕರ್ನಾಟಕ ಸರ್ಕಾರದ ಋಣಸೇವೆಗಳಿಗೆ ರಾಜ್ಯದ ಖಾತರಿಯಿದೆ ಎಂದು ಪರಿಗಣಿಸಲಾಗುತ್ತದೆ. ಆದುದರಿಂದ, ಅವುಗಳನ್ನು ಪ್ರಭೃತವೆಂದು ಪರಿಗಣಿಸಬೇಕು. ಆದರೆ, ಕೋಷ್ಟಕದಲ್ಲಿನ ಋಣ ಸೇವೆಗಳು ಪುರಸಭೆಗಳಿಗೆ ಉಪದಾನ ಮತ್ತು ನೆರವಿಗೆ ಸಂಬಂಧಿಸಿವೆ. ಹೀಗಾಗಿ ವೆಚ್ಚವು ಪುರಸ್ಕೃತದ ರೂಪದಲ್ಲಿದೆ. |
| 2 | ಅನುದಾನ ಸಂಖ್ಯೆ 19 – ನಗರಾಭಿವೃದ್ಧಿ | 3604–00–191–1–51–240 ಋಣಸೇವೆಗಳು (ಪ್ರ) | *675.91* | |

*ಆಕರ: ಧನವಿನಿಯೋಗ ಲೆಕ್ಕಗಳು*

ಆರ್ಥಿಕ ಇಲಾಖೆಯು (ಮಾರ್ಚ್ 2020), 2019–20ರ ಆಯವ್ಯಯದಲ್ಲಿ ಈ ತಪ್ಪು ವರ್ಗೀಕರಣವನ್ನು ಸರಿಪಡಿಸಲಾಗಿದೆ ಎಂದು ತಿಳಿಸಿತ್ತು. ಆದರೆ, 2019–20ರಲ್ಲಿ ಕೂಡ ಈ ತಪ್ಪು ವರ್ಗೀಕರಣವು ಮುಂದುವರೆದಿದೆ.

ಆರ್ಥಿಕ ಇಲಾಖೆಯು (ಫೆಬ್ರವರಿ 2021) ಹಣಕಾಸು ವರ್ಷ 2020–21ರಲ್ಲಿ ಇದನ್ನು ಸರಿಪಡಿಸಲಾಗಿದೆ ಎಂದು ತಿಳಿಸಿದೆ.

#### *(ಬಿ) ಪ್ರಧಾನ ಶೀರ್ಷಿಕೆ 2049 – ಬಡ್ಡಿ ಪಾವತಿಗಳಡಿಯಲ್ಲಿ ಮಾಡಿದ ತಪ್ಪು ಅವಕಾಶ*

ಪ್ರಧಾನ ಮತ್ತು ಒಳಶೀರ್ಷಿಕೆಗಳ ಪಟ್ಟಿಯಲ್ಲಿ ಪ್ರಧಾನ ಶೀರ್ಷಿಕೆ 6003 ಅಡಿಯಲ್ಲಿನ ಟಿಪ್ಪಣಿ (3)ರಲ್ಲಿನ ಸೂಚನೆಗಳ ಅನ್ವಯ ಕೋರಿಕೆ ಬಾರದ ಪರಿಹಾರ ಮತ್ತು ಇತರ ಬಾಂಡ್‌ಗಳ ಶಿಲ್ಕುಗಳನ್ನು ಸಾಮಾನ್ಯವಾಗಿ ಅವುಗಳ ಅವಧಿ ಮುಕ್ತಾಯ ದಿನದಿಂದ 20 ವರ್ಷಗಳವರೆಗೆ ಸರ್ಕಾರದ ಲೆಕ್ಕಗಳಲ್ಲಿ ಉಳಿಸಿಕೊಳ್ಳಲಾಗುತ್ತದೆ. ನಂತರ ಶಿಲ್ಕುಗಳನ್ನು '0075–ಇತರೆ ಸಾಮಾನ್ಯ ಸೇವೆಗಳು–ಇತರೆ ಸ್ವೀಕೃತಿಗಳು' ಶೀರ್ಷಿಕೆಗೆ ಜಮೆ

ಮಾಡುವ ಮೂಲಕ ರಾಜಸ್ವಕ್ಕೆ ವರ್ಗಾವಣೆ ಮಾಡಲಾಗುತ್ತದೆ. ಆ ನಂತರ ಬೇಡಿಕೆ ಬಂದ ಈ ಮೊತ್ತಗಳ ಮರುಪಾವತಿಗಳನ್ನು 2075–ಇತರೆ ಸಾಮಾನ್ಯ ಸೇವೆಗಳು–ಇತರೆ ವೆಚ್ಚಗಳು' ಶೀರ್ಷಿಕೆಗೆ ಖರ್ಚು ಹಾಕಬೇಕು.

ಅಂತಹ ಕೋರಿಕೆಗಳಿಗಾಗಿ 2019–20ರ ಅವಧಿಯಲ್ಲಿ '2049–ಬಡ್ಡಿ ಪಾವತಿಗಳು' ಅಡಿಯಲ್ಲಿ ₹0.10 ಕೋಟಿಯ ಅವಕಾಶವನ್ನು ಮಾಡಿರುವುದು ಸರಿಯಲ್ಲ.

### *(ಸಿ) ತಪ್ಪಾದ ಆಯವ್ಯಯ ತಯಾರಿಕೆ*

2019–20ರಲ್ಲಿ ಅನುದಾನ 5 – ಗೃಹ ಮತ್ತು ಸಾರಿಗೆಯಡಿಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಲೆಕ್ಕಶೀರ್ಷಿಕೆ 3055–00–190–0–03–240 ಋಣಸೇವೆಗಳಡಿ 1500 ಬಸ್ಸುಗಳ ಖರೀದಿಯ ಸಾಲದ ಮರುಪಾವತಿ ಹಾಗೂ ಬಡ್ಡಿ ಪಾವತಿಗಾಗಿ ₹80.97 ಕೋಟಿಗಳ ಅವಕಾಶ/ವೆಚ್ಚ ಮಾಡಲಾಗಿದೆ. ಇದಕ್ಕಾಗಿ 2019–20ರಲ್ಲಿ **ಕೋಷ್ಟಕ–3.10ರಲ್ಲಿ** ತಿಳಿಸಿರುವಂತೆ ಹಣ ಬಿಡುಗಡೆ ಆದೇಶಗಳನ್ನು ಹೊರಡಿಸಲಾಗಿದೆ.

**ಕೋಷ್ಟಕ–3.10: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಬಿಡುಗಡೆ ಮಾಡಿದ ಮೊತ್ತ**

(₹ ಕೋಟಿಗಳಲ್ಲಿ)

| ಕಂತಿನ ಸಂಖ್ಯೆ | ಸರ್ಕಾರಿ ಆದೇಶದ ಸಂ. ಮತ್ತು ದಿನಾಂಕ | ಮೊತ್ತ |
|---|---|---|
| 1 | ಟಿಡಿ 41 ಟಿಸಿಬಿ 2019 ಬೆಂಗಳೂರು ದಿನಾಂಕ: 11.07.2019 | 20.24 |
| 2 | ಟಿಡಿ 41 ಟಿಸಿಬಿ 2019 ಬೆಂಗಳೂರು ದಿನಾಂಕ: 20.11.2019 | 6.23 |
| 3 | ಟಿಡಿ 41 ಟಿಸಿಬಿ 2019 ಬೆಂಗಳೂರು ದಿನಾಂಕ: 30.12.2019 | 18.02 |
| 4 | ಟಿಡಿ 41 ಟಿಸಿಬಿ 2019 ಬೆಂಗಳೂರು ದಿನಾಂಕ: 25.02.2020 | 17.75 |
| ಒಟ್ಟು | | **62.24** |

ಹೀಗೆ, ಸರ್ಕಾರದಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಬಿಡುಗಡೆಯಾದ ₹80.97 ಕೋಟಿಗಳಲ್ಲಿ ₹62.24 ಕೋಟಿ ಋಣಸೇವೆಗೆ ಸಂಬಂಧಿಸಿದ್ದು. ₹18.73 ಕೋಟಿಗಳ ಮೊತ್ತವನ್ನು ಅಧಿಕವಾಗಿ ಬಿಡುಗಡೆ ಮಾಡಲಾಗಿದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ (ಮೇ 2019) ತಂದಾಗ, ಸರ್ಕಾರವು ಆದೇಶ ಸಂಖ್ಯೆ ಟಿಡಿ 01 ಟಿಸಿಬಿ 2020ರಲ್ಲಿ ಉದ್ದೇಶ ಶೀರ್ಷಿಕೆ '240 – ಋಣಸೇವೆ'ಗಳಡಿ ಭರಿಸಲಾದ ₹80.97 ಕೋಟಿಗಳಲ್ಲಿ ₹18.73 ಕೋಟಿಗಳನ್ನು ಸಹಾಯಧನವಾಗಿ ನೀಡಲಾಗಿದೆ ಎಂದು ತಿಳಿಸಿದೆ. ಋಣಸೇವೆಯಡಿ ಬಿಡುಗಡೆ ಮಾಡಿದ ಮೊತ್ತವು ಪ್ರಭೃತ ವೆಚ್ಚವಾಗಿರುವುದರಿಂದ ಇದು ತಪ್ಪಾಗಿದೆ. ₹18.73 ಕೋಟಿಗಳನ್ನು ಸಹಾಯಧನವಾಗಿ ವಿನಿಯೋಗಿಸಲು ಶಾಸಕಾಂಗದ ಅನುಮೋದನೆ ಅಗತ್ಯವಾಗಿರುವುದರಿಂದ ಇದು ತಪ್ಪು ವರ್ಗೀಕರಣವಾಗಿ ಪರಿಣಮಿಸಿದೆಯಲ್ಲದೆ, ನಿಗಮದ ಸಾಲಗಳಿಗೆ ಸರ್ಕಾರವು ಖಾತರಿ ನೀಡಿಲ್ಲವಾದ್ದರಿಂದ, ಬಿಡುಗಡೆಗೊಳಿಸಿದ ಮೊತ್ತವನ್ನು ಉದ್ದೇಶ ಶೀರ್ಷಿಕೆ '240–ಋಣಸೇವೆಗಳು' ಇದರ ಬದಲು '103 – ಸಹಾಯಾನುದಾನ – ಸಾಮಾನ್ಯ'ದಡಿಯಲ್ಲಿ ಭರಿಸಬಹುದಾಗಿತ್ತು.

ಇಲಾಖೆಯು ಆಕ್ಷೇಪಣೆಯನ್ನು ಒಪ್ಪಿಕೊಳ್ಳುತ್ತ (ಸೆಪ್ಟೆಂಬರ್ 2020), 2019–20ರಲ್ಲಿ ನಿಗಮಕ್ಕೆ ಬಿಡುಗಡೆಯಾದ ಸಹಾಯಧನದಲ್ಲಿ ಕಡಿತವಾಗಿದ್ದರಿಂದ ಹಾಗೂ ನಿಗಮವು ಹೆಚ್ಚಿನ ಸಂಖ್ಯೆಯಲ್ಲಿ ರಿಯಾಯಿತಿ/ಉಚಿತ ಬಸ್ ಪಾಸ್ ಗಳನ್ನು ವಿತರಿಸಿದ ಕಾರಣ ಹೆಚ್ಚುವರಿ ಮೊತ್ತಕ್ಕಾಗಿ ಬೇಡಿಕೆ ಸಲ್ಲಿಸಿದ್ದರಿಂದ ₹18.73 ಕೋಟಿಗಳನ್ನು ಸಹಾಯಧನವಾಗಿ ಪರಿಗಣಿಸುವಂತೆ ಆದೇಶ ಹೊರಡಿಸಲಾಗಿದೆ. ಅಲ್ಲದೆ, ಪುರಸ್ಕೃತ ಮತ್ತು ಪ್ರಭೃತಗಳ ನಡುವೆ ಪುನರ್ವಿನಿಯೋಗಕ್ಕೆ ಅವಕಾಶ ಇಲ್ಲದಿರುವುದರಿಂದ ಹಾಗೂ ಹೆಚ್ಚುವರಿ ಮೊತ್ತವನ್ನು ಅಧ್ಯರ್ಪಿಸಿ, ಪೂರಕ ಅವಕಾಶ ಪಡೆಯಲು ಸಮಯದ ಅಭಾವದಿಂದ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದೆ. ಅಲ್ಲದೆ 2020–21ರಲ್ಲಿ ಲೆಕ್ಕಶೀರ್ಷಿಕೆ 5055–00–190–0–00–211 ನಿಗಮದಲ್ಲಿ ಹೂಡಿಕೆ–ಅಡಿ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದೆ.

ಜಂಟಿ ಪ್ರವೇಶ ಸಮಾಲೋಚನಾ ಸಭೆಯಲ್ಲಿ (ಡಿಸೆಂಬರ್ 2020) ಆರ್ಥಿಕ ಇಲಾಖೆಯು ಈ ತಪ್ಪನ್ನು ಒಪ್ಪಿಕೊಂಡಿದ್ದು ₹18.73 ಕೋಟಿಗಳನ್ನು ಉದ್ದೇಶ ಶೀರ್ಷಿಕೆ 240 –ಋಣಸೇವೆಯಡಿ ಬಿಡುಗಡೆ ಮಾಡಿದ್ದು ಸರಿಯಲ್ಲ ಮತ್ತು ಮುಂದೆ ಇಂತಹ ತಪ್ಪುಗಳಾಗಲು ಅವಕಾಶ ನೀಡುವುದಿಲ್ಲ ಎಂದು ಹೇಳಿದೆ.

### *3.6.2 ಆಯವ್ಯಯ ಸಮಗ್ರತೆ ಹಾಗೂ ಲೆಕ್ಕಪ್ರಕ್ರಿಯೆ ಮೇಲಿನ ವ್ಯಾಖ್ಯಾನಗಳು*

#### *3.6.2.1 ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆಯಾದ ಹೆಚ್ಚುವರಿ ಮೊತ್ತ*

ಸಂವಿಧಾನದ 204 ಮತ್ತು 205ನೇ ವಿಧಿಗಳಡಿಯಲ್ಲಿನ ಸಂಬಂಧಿತ ಧನವಿನಿಯೋಗ ಕಾಯಿದೆಗಳಡಿಯಲ್ಲಿ ಶಾಸಕಾಂಗದಿಂದ ಅನುಮೋದಿತವಾಗದ ಹೊರತು ರಾಜ್ಯದ ಸಂಚಿತ ನಿಧಿಯಿಂದ ಹಣ ಸೆಳೆಯುವುದನ್ನು ಭಾರತದ ಸಂವಿಧಾನದ 266(3)ನೇ ವಿಧಿಯು ನಿಷೇಧಿಸುತ್ತದೆ.

2019–20ರಲ್ಲಿ 19 ಅನುದಾನಗಳ ರಾಜಸ್ವ/ಬಂಡವಾಳ ವರ್ಗಗಳಡಿಯಲ್ಲಿ ₹3,518.84 ಕೋಟಿಗಳನ್ನು (ಇವು ಕೇವಲ ಉದಾಹರಣೆಯಾಗಿ ಮಾತ್ರ) 78 ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆ ಮಾಡಿ ನಂತರ ಪೂರಕ ಅಂದಾಜುಗಳ ಮೂಲಕ ಸಕ್ರಮಗೊಳಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (**ಅನುಬಂಧ 3.3**). ಈ ಹೆಚ್ಚುವರಿಗಳ ಮೂಲಕ ಮಾಡಿದ ವೆಚ್ಚವನ್ನು ಭಾರಿ ಕಾಮಗಾರಿಗಳು, ಇತರೆ ವೆಚ್ಚಗಳು, ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳು, ಸಾರಿಗೆ ವೆಚ್ಚಗಳು, ಮುಂಗಡಗಳು, ಸಹಾಯಾನುದಾನ ಮುಂತಾದ ನಿತ್ಯದ ಬಾಬ್ತುಗಳ ಮೇಲೆ ಮಾಡಿರುವುದನ್ನು ಗಮನಿಸಲಾಯಿತು ಮತ್ತು ಈ ವೆಚ್ಚಗಳು ತುರ್ತು/ಅನಿರೀಕ್ಷಿತ ವೆಚ್ಚಗಳೆಂದು ಪರಿಗಣಿಸಲು ಅರ್ಹವಾಗಿರಲಿಲ್ಲ ಹಾಗೂ ಇದಕ್ಕಾಗಿ ಪೂರಕ ಬೇಡಿಕೆಗಳ ಸಲ್ಲಿಸುವಿಕೆಗಾಗಿ ನಿರೀಕ್ಷೆ ಮಾಡಬಹುದಾಗಿತ್ತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ತನ್ನ ಐದನೇ ವರದಿಯಲ್ಲಿ (ಹದಿನಾಲ್ಕನೇ ವಿಧಾನಸಭೆ) ಕಾರ್ಯನಿರ್ವಾಹಕ ಆದೇಶಗಳ ಮೂಲಕ ಹೆಚ್ಚುವರಿ ಮೊತ್ತವನ್ನು ಮಂಜೂರು ಮಾಡುವುದನ್ನು ತತ್ಕಾಲದ ಪ್ರಕರಣಗಳಿಗೆ ಮಾತ್ರ ಸೀಮಿತಗೊಳಿಸಬೇಕು ಎಂದು ಶಿಫಾರಸು ಮಾಡಿತ್ತು (ಜುಲೈ 2015). ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸಿನ ಹೊರತಾಗಿಯೂ ಶಾಸಕಾಂಗದ ಅನುಮೋದನೆಯಿಲ್ಲದೆ ಆದೇಶಗಳ ಮೂಲಕ ವೆಚ್ಚವನ್ನು ಭರಿಸಿರುವುದನ್ನು ಗಮನಿಸಲಾಯಿತು.

2017–18ರಿಂದ 2019–20ರವರೆಗಿನ ಕಾರ್ಯಕಾರಿ ಆದೇಶಗಳ ಮೂಲಕ ಬಿಡುಗಡೆ ಮಾಡಿದ ಹೆಚ್ಚುವರಿ ಮೊತ್ತದ ವಿವರಗಳನ್ನು **ಕೋಷ್ಟಕ–3.11**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–3.11: 2017–20ರಲ್ಲಿ ಕಾರ್ಯನಿರ್ವಾಹಕ ಆದೇಶಗಳ ಮೂಲಕ ಬಿಡುಗಡೆ ಮಾಡಿದ ಹೆಚ್ಚುವರಿ ಮೊತ್ತಗಳು**

(₹ ಕೋಟಿಗಳಲ್ಲಿ)

| ವರ್ಷ | ಅನುದಾನಗಳ ಸಂಖ್ಯೆ | ಪ್ರಕರಣಗಳ ಸಂಖ್ಯೆ | ಮೊತ್ತ |
|---|---|---|---|
| **2017–18** | 20 | 128 | 3,747.77 |
| **2018–19** | 19 | 77 | 3,940.35 |
| **2019–20** | 19 | 78 | 3,518.84 |

ಆಕರ: ಧನವಿನಿಯೋಗ ಲೆಕ್ಕಗಳು

#### *3.6.2.2 ರಾಜಸ್ವ ಮತ್ತು ಬಂಡವಾಳ ವೆಚ್ಚದಡಿ ತಪ್ಪು ವರ್ಗೀಕರಣ*

ರಾಜಸ್ವ ಮತ್ತು ಬಂಡವಾಳಗಳ ತಪ್ಪಾದ ವರ್ಗೀಕರಣವು ವಿತ್ತೀಯ ಸೂಚಕಗಳಾದ, ರಾಜಸ್ವ ಹೆಚ್ಚಳದ ಮೇಲೆ ಪರಿಣಾಮ ಬೀರುತ್ತದೆ. 2019–20ರಲ್ಲಿ, ಅನುದಾನ 25 – ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಲೆಕ್ಕಶೀರ್ಷಿಕೆ 4202–04–800–1–08–101 – ಸಹಾಯಾನುದಾನ ವೇತನಗಳು ಮತ್ತು 103 – ಸಹಾಯಾನುದಾನ ಸಾಮಾನ್ಯ ದಡಿಯಲ್ಲಿ ₹28.73 ಕೋಟಿಗಳ ಅವಕಾಶವನ್ನು ರಾಜಸ್ವ ವರ್ಗದಡಿ ಮಾಡುವ

ಬದಲು ತಪ್ಪಾಗಿ ಬಂಡವಾಳ ವರ್ಗದಡಿ ಮಾಡಲಾಗಿದೆ. ಇದು ರಾಜಸ್ವ ಹೆಚ್ಚಳವನ್ನು ಸಹ ಅಧಿಕವಾಗಿ ತೋರಿಸುವಲ್ಲಿ ಪರಿಣಮಿಸಿದೆ.

ಆರ್ಥಿಕ ಇಲಾಖೆಯು ನಿರ್ಗಮನ ಸಭೆಯಲ್ಲಿ (ಫೆಬ್ರವರಿ 2021) ಲೆಕ್ಕ ಪರಿಶೋಧನೆಯ ಆಕ್ಷೇಪಣೆಯನ್ನು ಒಪ್ಪಿಕೊಳ್ಳುತ್ತಾ 2020–21ರ ಹಣಕಾಸು ವರ್ಷದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿದ ಅನುದಾನವನ್ನು ಬಂಡವಾಳದಡಿ ಮಾಡಿಲ್ಲವೆಂದು ತಿಳಿಸಿದೆ.

### *3.6.2.3 ಅನವಶ್ಯಕವಾದ/ಅಧಿಕ/ಅಪರ್ಯಾಪ್ತ ಪೂರಕ ಅವಕಾಶಗಳು*

**ನಕ್ಷೆ–3.5**ರಲ್ಲಿ ವಿವರಿಸಿರುವಂತೆ ಕೆಲವು ಪರೀಕ್ಷಾ ತನಿಖೆ ಪ್ರಕರಣಗಳಲ್ಲಿ ಪೂರಕ ಅವಕಾಶಗಳು (₹5 ಕೋಟಿಗಳಿಗಿಂತ ಅಧಿಕ) ಅನವಶ್ಯಕ/ಅಧಿಕ/ಅಪರ್ಯಾಪ್ತವಾಗಿದ್ದವು ಎಂಬುದನ್ನು ವಿಶದಪಡಿಸುತ್ತದೆ **(ಅನುಬಂಧ 3.4, ಅನುಬಂಧ 3.5 ಮತ್ತು ಅನುಬಂಧ 3.6)**

**ನಕ್ಷೆ 3.5: ಅನವಶ್ಯಕ/ಅಧಿಕ/ಸಾಕಷ್ಟಿಲ್ಲದ ಪೂರಕ ಅವಕಾಶಗಳು**




ಆಕರ: ಧನವಿನಿಯೋಗ ಲೆಕ್ಕಗಳು

ಪೂರಕ ಅವಕಾಶವನ್ನು ಹೆಚ್ಚು ವಾಸ್ತವಿಕವಾಗಿ ಹಾಗೂ ಅಗತ್ಯತೆಗೆ ತಕ್ಕಂತೆ, ಅನವಶ್ಯಕ/ಅಧಿಕ ಅವಕಾಶಗಳನ್ನು ತಪ್ಪಿಸುವಂತೆ ತಯಾರಿಸಬೇಕು.

### *3.6.2.4 ಮೊತ್ತಗಳ ಪುನರ್‌ವಿನಿಯೋಗಗಳು*

ವಿತರಣೆಗೆ ಬೇಕಾದ ಅನುದಾನ ಅಥವಾ ವಿನಿಯೋಗಗಳು ಆಯಾ ಲೆಕ್ಕಗಳಡಿಯಲ್ಲಿನ ಕ್ರಿಯಾಶೀರ್ಷಿಕೆ/ ಉಪಶೀರ್ಷಿಕೆ/ಸವಿವರಶೀರ್ಷಿಕೆ/ಉದ್ದೇಶಶೀರ್ಷಿಕೆಗಳ ಪ್ರಕಾರ ಹಂಚಿಕೆಯಾಗಿರುತ್ತದೆ. ಸಕ್ಷಮ ಕಾರ್ಯಪಾಲಕ ಅಧಿಕಾರಿಗಳು ಸಂಬಂಧಿಸಿದ ಹಣಕಾಸು ವರ್ಷದ ಅಂತ್ಯದೊಳಗೆ, ಆಯಾ ಅನುದಾನ ಅಥವಾ ವಿನಿಯೋಗದೊಳಗೆ, ವಿನಿಯೋಗದ ಪ್ರಾಥಮಿಕ ಘಟಕಗಳ ನಡುವೆ ಮೊತ್ತಗಳ

ಪುನರ್ವಿನಿಯೋಗಕ್ಕೆ ಅನುಮೋದನೆ ನೀಡಬಹುದಾಗಿದೆ. ಸಕ್ಷಮ ಅಧಿಕಾರಿಯು ಒಂದು ಅನುದಾನ/ ವಿನಿಯೋಗದ ಒಂದು ಘಟಕದಲ್ಲಿನ ಉಳಿಕೆಯನ್ನು ಅದೇ ಪುರಸ್ಕೃತ ಅನುದಾನ ಅಥವಾ ಪ್ರಭೃತ ವಿನಿಯೋಗದಲ್ಲಿನ ಮತ್ತೊಂದು ಘಟಕದಲ್ಲಿನ ಹೆಚ್ಚಳವನ್ನು ಭರಿಸಲು ವರ್ಗಾವಣೆ ಮಾಡುವುದು ಪುನರ್ವಿನಿಯೋಗವೆನಿಸುತ್ತದೆ. ಅನುದಾನದ ಯಾವ ಘಟಕದಿಂದ ಮೊತ್ತಗಳನ್ನು ವರ್ಗಾವಣೆ ಮಾಡಲಾಗುವುದೋ ಆ ಘಟಕದಲ್ಲಿನ ಮೊತ್ತಗಳು ಪೂರ್ಣವಾಗಿ ಬಳಕೆಯಾಗುವುದಿಲ್ಲ ಅಥವಾ ಅದು ಉಳಿತಾಯದಲ್ಲಿ ಪರಿಣಮಿಸುತ್ತದೆ ಎಂದು ನಿರೀಕ್ಷಿಸಿದ್ದರೆ ಅಥವಾ ತಿಳಿದಿದ್ದರೆ ಮಾತ್ರ ಮೊತ್ತಗಳ ಪುನರ್ವಿನಿಯೋಗವನ್ನು ಮಾಡಬಹುದಾಗಿದೆ.

2018–19ರಲ್ಲಿ ₹9,611.05 ಕೋಟಿ ಮೊತ್ತಕ್ಕೆ ಹೊರಡಿಸಲಾಗಿದ್ದ 350 ಪುರ್ನವಿನಿಯೋಗ ಆದೇಶಗಳಿಗೆ ಪ್ರತಿಯಾಗಿ 2019–20ರಲ್ಲಿ ₹9,015.59 ಕೋಟಿ ಮೊತ್ತಕ್ಕೆ 512 ಪುರ್ನವಿನಿಯೋಗ ಆದೇಶಗಳನ್ನು ಹೊರಡಿಸಲಾಗಿದೆ. ಆದೇಶಗಳ ಸಮೀಕ್ಷೆಯಿಂದ ಕೆಳಕಂಡ ಅಂಶಗಳು ತಿಳಿದು ಬಂದಿದೆ.

### (ಅ) ಅನಗತ್ಯ/ಅಧಿಕ/ಅಪರ್ಯಾಪ್ತ ಮೊತ್ತದ ಪುರ್ನವಿನಿಯೋಗಗಳು

2019–20ರ ಪುನರ್ವಿನಿಯೋಗ ಪ್ರಕರಣಗಳ ತನಿಖಾ ಪರೀಕ್ಷೆಯಲ್ಲಿ ಅನಗತ್ಯ/ಅಧಿಕ/ಅಸಮರ್ಪಕ ಮೊತ್ತದ ಈ ಕೆಳಕಂಡ ಪ್ರಕರಣಗಳನ್ನು ಗಮನಿಸಲಾಗಿದೆ (ಅನುಬಂಧ 3.7).

- 11 ಅನುದಾನಗಳ 20 ಪ್ರಕರಣಗಳಲ್ಲಿ ₹336.35 ಕೋಟಿಗಳನ್ನು ಪುರ್ನವಿನಿಯೋಗದ (₹2 ಕೋಟಿಗೂ ಹೆಚ್ಚಿನ ಮೊತ್ತದ ಪ್ರಕರಣಗಳು) ಮೂಲಕ ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಒದಗಿಸಲಾಗಿದ್ದು, ಇದು ₹585.34 ಕೋಟಿ (₹2 ಕೋಟಿ ಮೊತ್ತಗಳ ಹೆಚ್ಚಿನ ಪ್ರಕರಣಗಳು) ಬಳಕೆಯಾಗದೆ ಉಳಿತಾಯವಾಗುವಲ್ಲಿ ಪರಿಣಮಿಸಿತು.
- 8 ಅನುದಾನಗಳ 19 ಪ್ರಕರಣಗಳಲ್ಲಿ ಪುರ್ನವಿನಿಯೋಗದ (₹5 ಕೋಟಿಗೂ ಹೆಚ್ಚಿನ ಮೊತ್ತದ ಪ್ರಕರಣಗಳು) ಮೂಲಕ ₹1,549.24 ಕೋಟಿಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿದ್ದು, ಇದು ಒಟ್ಟಾರೆ ₹276.45 ಕೋಟಿ ಬಳಕೆಯಾಗದೆ ಉಳಿದ ಅವಕಾಶದಲ್ಲಿ (₹2 ಕೋಟಿಗೂ ಹೆಚ್ಚಿನ ಪ್ರಕರಣಗಳು) ಪರಿಣಮಿಸಿತು.
- ನಾಲ್ಕು ಅನುದಾನಗಳ ನಾಲ್ಕು ಪ್ರಕರಣಗಳಲ್ಲಿ ಹೆಚ್ಚುವರಿ ಪುನರ್ವಿನಿಯೋಗದ (₹2 ಕೋಟಿಗೂ ಹೆಚ್ಚಿನ ಪ್ರಕರಣಗಳು) ಮೂಲಕ ಒದಗಿಸಲಾದ ₹333.50 ಕೋಟಿಗಳು ಸಾಲದಾಗಿ ಒಟ್ಟಾರೆ ₹141.15 ಕೋಟಿ ಆಧಿಕ ವೆಚ್ಚವಾಗುವಲ್ಲಿ (₹1 ಕೋಟಿಗಿಂತ ಹೆಚ್ಚಿನ ಪ್ರಕರಣಗಳು) ಪರಿಣಮಿಸಿತು.
- ನಾಲ್ಕು ಅನುದಾನಗಳ ಐದು ಪ್ರಕರಣಗಳಲ್ಲಿ ಹಿಂಪಡೆದ ₹167.20 ಕೋಟಿಗಳ ಪುನರ್ವಿನಿಯೋಗವು (₹0.45 ಕೋಟಿಗೂ ಹೆಚ್ಚಿನ ಪ್ರಕರಣಗಳು) ಒಟ್ಟಾರೆ ₹163.77 ಕೋಟಿಗಳ (₹0.50 ಕೋಟಿಗೂ ಹೆಚ್ಚು ಪ್ರಕರಣಗಳು) ಅಧಿಕ ವೆಚ್ಚದಲ್ಲಿ ಪರಿಣಮಿಸಿತು.

### *(ಆ) ದೋಷಪೂರ್ಣ ಪುನರ್ವಿನಿಯೋಗಗಳು*

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 309, 312 ಹಾಗೂ 315(ಎ)ರ ಉಪಬಂಧಗಳಲ್ಲಿ ಪುನರ್ವಿನಿಯೋಗವು ಸ್ವಯಂ ಸಮತೋಲನ ಹೊಂದಿಲ್ಲದಿದ್ದರೆ ಹಾಗೂ ನಿಗದಿತ ನಮೂನೆಯಲ್ಲಿ (ನಮೂನೆ ಸಂ.22ಎ – ಕ.ಆ.ಸಂ.) ಇರದಿದ್ದಲ್ಲಿ, ಶಾಸನಸಭೆ ಅನುಮೋದಿಸಿರುವ ಒಂದು ಪುರಸ್ಕೃತ ಅನುದಾನದಿಂದ ಮತ್ತೊಂದು ಅನುದಾನಕ್ಕೆ, ಪುರಸ್ಕೃತ ವೆಚ್ಚ ಬಾಬ್ತುಗಳಿಂದ ಪ್ರಭೃತ ವೆಚ್ಚ ಬಾಬ್ತುಗಳಿಗೆ, ಬಂಡವಾಳದಿಂದ ರಾಜಸ್ವಕ್ಕೆ, ರಾಜಸ್ವದಿಂದ ಬಂಡವಾಳಕ್ಕೆ, ಹಾಗೂ ಪುನರ್ವಿನಿಯೋಗ ವಿವರಣಾ ಪಟ್ಟಿಯು ಸಮತೋಲನವಾಗದಿದ್ದರೆ, ಪುರ್ನವಿನಿಯೋಗ ಮಾಡದಂತೆ ನಿಯಮಗಳನ್ನು ವಿಧಿಸಿರುತ್ತದೆ. 2019–20ರಲ್ಲಿ ₹6.84 ಕೋಟಿ ಮೊತ್ತದ 24 ಪುನರ್ವಿನಿಯೋಗ ಆದೇಶಗಳನ್ನು ಪ್ರಧಾನ ಮಹಾಲೇಖಾಪಾಲರು (ಲೆ.ಮತ್ತು ಹ) **ಅನುಬಂಧ 3.8**ರಲ್ಲಿ ನೀಡಿರುವ ಕಾರಣಗಳಿಗಾಗಿ ಒಪ್ಪಿಕೊಂಡಿಲ್ಲ.

### *3.6.2.5. ಹಂಚಿಕೆಗೆ ಪ್ರತಿಯಾಗಿ ಬಳಕೆಯಾಗದ ಅವಕಾಶಗಳು/ಅಧಿಕ ಮೊತ್ತದ ಉಳಿತಾಯಗಳು/ ಅಧ್ಯರ್ಪಣೆಗಳು*

#### *(ಅ) 2019–20ರಲ್ಲಿ ಅಧಿಕ ಮೊತ್ತದ (₹100 ಕೋಟಿಗೂ ಹೆಚ್ಚು) ಉಳಿತಾಯಗಳನ್ನೊಳಗೊಂಡ ಅನುದಾನಗಳು*

21 ಅನುದಾನ/ವಿನಿಯೋಗಗಳಲ್ಲಿನ 33 ಪ್ರಕರಣಗಳಲ್ಲಿ ಪ್ರತಿ ಪ್ರಕರಣದಲ್ಲೂ ₹100 ಕೋಟಿ ಮತ್ತು ಅದಕ್ಕಿಂತ ಹೆಚ್ಚು ಮೊತ್ತವು ಬಳಕೆಯಾಗದೆ ಉಳಿದ್ದಿದ್ದವು. ಇದರ ಮೊತ್ತವು ₹28,725.63 ಕೋಟಿಗಳಷ್ಟಿತ್ತು. ಅಧಿಕ ಮೊತ್ತದ (₹1,000 ಕೋಟಿಗಳಿಗೂ ಅಧಿಕವಾದ) ಬಳಕೆಯಾಗದ ಅವಕಾಶಗಳು **ಅನುಬಂಧ 3.9**ರಲ್ಲಿ ತೋರಿಸಿರುವಂತೆ, ಕೃಷಿ ಮತ್ತು ತೋಟಗಾರಿಕೆ, ಆರ್ಥಿಕ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್, ಸಮಾಜ ಕಲ್ಯಾಣ, ಲೋಕೋಪಯೋಗಿ ಕಾಮಗಾರಿಗಳು ಮತ್ತು ಜಲಸಂಪನ್ಮೂಲ ಕ್ಷೇತ್ರದ ಅನುದಾನಗಳಲ್ಲಿದ್ದಿತು.

ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ 264ರ ಅನ್ವಯ ನಿಯಂತ್ರಣಾಧಿಕಾರಿಗಳಿಂದ ನಿರೀಕ್ಷಿಸಲ್ಪಟ್ಟ ಎಲ್ಲಾ ಉಳಿತಾಯಗಳನ್ನು ಕೂಡಲೇ ಪೂರ್ಣ ವಿವರ ಮತ್ತು ಕಾರಣಗಳೊಂದಿಗೆ ಆರ್ಥಿಕ ಇಲಾಖೆಗೆ ವರದಿ ಮಾಡಬೇಕು. ಆದರೆ, ಇಲಾಖೆಗಳು ಕಾರಣಗಳನ್ನು ಸೂಕ್ತವಾಗಿ ವಿವರಿಸಿಲ್ಲದಿರುವುದನ್ನು ಅಥವಾ ಸಲ್ಲಿಸದಿರುವುದನ್ನು ಗಮನಿಸಲಾಯಿತು.

#### *(ಆ) ಬಳಕೆಯಾಗದ ಅವಕಾಶಗಳ ಅಧ್ಯರ್ಪಣೆ*

ಇಲಾಖೆಗಳು ತಮ್ಮ ನಿಯಂತ್ರಣದಲ್ಲಿರುವ ಅನುದಾನಗಳು/ವಿನಿಯೋಗಗಳಲ್ಲಿ ಗಮನಿಸಿದ ನಿರೀಕ್ಷೆ ಮಾಡಿದ ಎಲ್ಲ ಬಳಕೆಯಾಗದ ಅವಕಾಶಗಳನ್ನು ನಿರ್ದಿಷ್ಟ ದಿನಾಂಕದೊಳಗೆ ಆರ್ಥಿಕ ಇಲಾಖೆಗೆ ಅಧ್ಯರ್ಪಣೆ ಮಾಡಬೇಕೆಂದು ಸಾಮಾನ್ಯ ಹಣಕಾಸು ನಿಯಮ, 2017ರ ನಿಯಮ 66(1) ತಿಳಿಸುತ್ತದೆ. 2019–20ರಲ್ಲಿ ₹29,826.44 ಕೋಟಿಗಳಷ್ಟು ಬಳಕೆ ಮಾಡದ ಅವಕಾಶಗಳಿದ್ದವು ಮತ್ತು ಅವು ಒಟ್ಟು ಅವಕಾಶದ ಶೇಕಡ 11ರಷ್ಟಿತ್ತು. ಬಳಕೆ ಮಾಡದ ಅವಕಾಶಗಳ ಪೈಕಿ ₹14,484.69 ಕೋಟಿಗಳನ್ನು (ಶೇಕಡ 49) ಅಧ್ಯರ್ಪಿಸಲಾಗಿತ್ತು. ಉಳಿದ ₹15,341.75 ಕೋಟಿಗಳನ್ನು (ಶೇಕಡ 51) ಅಧ್ಯರ್ಪಣೆ ಮಾಡಿರಲಿಲ್ಲ.

12 ಅನುದಾನ/ವಿನಿಯೋಗಗಳಲ್ಲಿ, ಬಳಕೆಯಾಗದ ಸಂಪೂರ್ಣ ಮೊತ್ತವಾದ ₹5,369.27 ಕೋಟಿಗಳನ್ನು ಅಧ್ಯರ್ಪಿಸಿರಲಿಲ್ಲ (ಅನುಬಂಧ 3.10). ಅಲ್ಲದೆ, 28 ಅನುದಾನ/ವಿನಿಯೋಗಗಳಲ್ಲಿನ 49 ಪ್ರಕರಣಗಳಲ್ಲಿ ಕೇವಲ ಭಾಗಶ: ಅಧ್ಯರ್ಪಣೆಯನ್ನು ಮಾಡಲಾಗಿತ್ತು ಮತ್ತು ಬಳಕೆಯಾಗದೆ ಉಳಿದ ಒಟ್ಟು ಅವಕಾಶದಲ್ಲಿ (₹24,457.10 ಕೋಟಿ) ಶೇಕಡ 41ರಷ್ಟನ್ನು (₹9,986.90 ಕೋಟಿ) ಅಧ್ಯರ್ಪಣೆ ಮಾಡಿರಲಿಲ್ಲ (**ಅನುಬಂಧ 3.11**). ಮೇಲಿನ ಪ್ರಕರಣಗಳಲ್ಲಿ ಅಧ್ಯರ್ಪಣೆಗಳು ಗಣನೀಯವಾಗಿದ್ದು, ಶೇಕಡ 50ರಷ್ಟು ಬಳಕೆಯಾಗದ ಅವಕಾಶವನ್ನು ಅಧ್ಯರ್ಪಿಸಲಾಗಿದೆ ಮತ್ತು 23 ಪ್ರಕರಣಗಳಲ್ಲಿ (₹2,653.60 ಕೋಟಿ) (**ಅನುಬಂಧ 3.12**) ಅಧ್ಯರ್ಪಣೆಯು ಶೇಕಡ 100ರಷ್ಟನ್ನು ಒಳಗೊಂಡಿದೆ. ಇದಲ್ಲದೆ, ಅಧ್ಯರ್ಪಣೆಯ ಮೊತ್ತವು ₹5 ಕೋಟಿಗೂ ಅಧಿಕವಾಗಿದ್ದ 18 ಅನುದಾನಗಳಲ್ಲಿ ₹11,374.87 ಕೋಟಿಗಳನ್ನು ಆರ್ಥಿಕ ವರ್ಷದ ಕೊನೆಯ ಎರಡು ದಿನಗಳಲ್ಲಿ ಅಧ್ಯರ್ಪಿಸಲಾಗಿದೆ (**ಅನುಬಂಧ 3.13**). ಇದು ಅಸಮರ್ಪಕ ಹಣಕಾಸು ನಿಯಂತ್ರಣವನ್ನು ಸೂಚಿಸುತ್ತದೆ.

### *3.6.2.6 ಸಕ್ರಮೀಕರಣದ ಅಗತ್ಯವಿರುವ ಅಧಿಕ ವೆಚ್ಚಗಳು*

ಭಾರತ ಸಂವಿಧಾನದ 204 ವಿಧಿಯಡಿಯಲ್ಲಿನ ಸಂಬಂಧಿತ ಧನವಿನಿಯೋಗ ಕಾಯಿದೆಯಡಿಯಲ್ಲಿ ಶಾಸಕಾಂಗದಿಂದ ಅನುಮೋದಿತವಾಗದ ಹೊರತು ರಾಜ್ಯದ ಸಂಚಿತ ನಿಧಿಯಿಂದ ಹಣ ಸೆಳೆಯುವಂತಿಲ್ಲ ಮತ್ತು 205ನೇ ವಿಧಿಯು ಅನುದಾನ/ವಿನಿಯೋಗದ ಮೇಲಿನ ಅಧಿಕವನ್ನು ರಾಜ್ಯ ಶಾಸಕಾಂಗದಿಂದ ಸಕ್ರಮಗೊಳಿಸಬೇಕೆಂದು ಕಡ್ಡಾಯವಾಗಿ ವಿಧಿಸುತ್ತದೆ. ವಿಧಿಯ ಅಡಿಯಲ್ಲಿ ವೆಚ್ಚದ ಸಕ್ರಮೀಕರಣಕ್ಕೆ ಯಾವುದೇ ಸಮಯದ ಚೌಕಟ್ಟನ್ನು ನಿಗದಿಪಡಿಸಿರದಿದ್ದರೂ ಸಹ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ

ಧನವಿನಿಯೋಗ ಲೆಕ್ಕಗಳ ಚರ್ಚೆಯು ಪೂರ್ಣಗೊಂಡ ನಂತರ ಅಧಿಕ ವೆಚ್ಚದ ಸಕ್ರಮೀಕರಣವನ್ನು ಮಾಡಲಾಗುತ್ತದೆ. 2019–20ರ ವರ್ಷದಲ್ಲಿ ಸಕ್ರಮೀಕರಣದ ಅಗತ್ಯವಿರುವ ಅವಕಾಶಗಳನ್ನು ಮೀರಿದ ವೆಚ್ಚಗಳನ್ನು ಒಳಗೊಂಡ ಯಾವುದೇ ಅನುದಾನಗಳು/ವಿನಿಯೊಗದ ಪ್ರಕರಣಗಳಿರಲಿಲ್ಲ.

**ಅನುಬಂಧ 3.14**ರಲ್ಲಿ ತೋರಿಸಿರುವಂತೆ, 2012–13ರಿಂದ 2017–18ರ ಅವಧಿಯ ₹2,409.53 ಕೋಟಿಗಳಷ್ಟು ಒಟ್ಟು ಅಧಿಕ ವೆಚ್ಚವನ್ನು ಇನ್ನೂ ಸಕ್ರಮೀಕರಣಗೊಳಿಸಬೇಕಿದೆ. 2018–19 ಹಾಗೂ 2019–20ರಲ್ಲಿ ಅನುದಾನ/ವಿನಿಯೋಗಗಳಲ್ಲಿ ಅಧಿಕ ವೆಚ್ಚವಾಗಿಲ್ಲದಿರುವುದನ್ನು ಗಮನಿಸಲಾಗಿದೆ ಮತ್ತು ಇದು ಅಧಿಕ ವೆಚ್ಚವನ್ನು ತಪ್ಪಿಸುವುದರಲ್ಲಿ ಸರ್ಕಾರವು ತೆಗೆದುಕೊಂಡ ಕಟ್ಟುನಿಟ್ಟಾದ ಕ್ರಮವನ್ನು ಸೂಚಿಸುತ್ತದೆ.

ಆರ್ಥಿಕ ಇಲಾಖೆಯು (ಫೆಬ್ರವರಿ 2021) ಜೂನ್ 2020ರಲ್ಲಿ ಸಂಬಂಧಪಟ್ಟ ಇಲಾಖೆಗಳಿಂದ ಅಧಿಕ ವೆಚ್ಚದ ಸಕ್ರಮೀಕರಣದ ವಿವರವನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ. ಈ ವಿವರಗಳ ಸ್ವೀಕೃತಿಯ ನಂತರ ಸಂಬಂಧ ಪಟ್ಟ ಆರ್ಥಿಕ ವರ್ಷಗಳ ಅಧಿಕ ವೆಚ್ಚದ ಸಕ್ರಮೀಕರಣವನ್ನು ನಿಗದಿತ ಮಾರ್ಗದ ಮೂಲಕ ಮಾಡಲಾಗುವುದು ಎಂದು ತಿಳಿಸಿದೆ.

### *3.6.3 ಪರಿಣಾಮಕಾರಿ ಆಯವ್ಯಯ ತಯಾರಿಕೆ ಹಾಗೂ ಲೆಕ್ಕ ವಿಧಾನದ ಮೇಲಿನ ವ್ಯಾಖ್ಯಾನಗಳು*

#### *3.6.3.1 ಆಯವ್ಯಯದಲ್ಲಿನ ವ್ಯತ್ಯಾಸಗಳಿಗೆ ವಿವರಣೆಗಳಿಲ್ಲದಿರುವುದು/ಅಪೂರ್ಣವಿವರಣೆಗಳು*

ಧನವಿನಿಯೋಗ ಲೆಕ್ಕವು ಅನುಮೋದಿತ ಆಯವ್ಯಯ ಅವಕಾಶಗಳಿಗೆ ಅನುಗುಣವಾಗಿ ಆದ ವೆಚ್ಚಗಳ ವಿವರಗಳನ್ನು ತೋರಿಸುವುದಲ್ಲದೆ, ಪೂರಕ ಅವಕಾಶಗಳನ್ನೂ ಒಳಗೊಂಡ ಒಟ್ಟು ಆಯವ್ಯಯ ಅವಕಾಶಗಳಿಗಿಂತ ಮಹತ್ವವಾಗಿ ಭಿನ್ನವಾಗಿರುವ ವೆಚ್ಚಗಳ ಬಾಬ್ತುಗಳಿಗೆ ವಿವರಣೆಗಳನ್ನು ಒದಗಿಸುತ್ತದೆ.

ಸಾರ್ವಜನಿಕ ಲೆಕ್ಕ ಸಮಿತಿಯ ಅನುಮೋದಿಸಿದ ಪ್ರಾರಂಭಿಕ ಮಟ್ಟದ ಮಿತಿಗಳಿಗೆ ಅನುಗುಣವಾಗಿ ಸವಿಸ್ತಾರ ವ್ಯಾಖ್ಯಾನಗಳನ್ನು ಧನವಿನಿಯೋಗ ಲೆಕ್ಕಗಳಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ಈ ಪ್ರಮಾಣವು 1983–84ನೇ ಆರ್ಥಿಕ ವರ್ಷದಿಂದ ಜಾರಿಗೆ ಬಂದಿದೆ.

ಧನವಿನಿಯೋಗ ಲೆಕ್ಕಗಳಲ್ಲಿ ವಿವರವಾಗಿ ವ್ಯಾಖ್ಯಾನಿಸಲು ಹಾಗೂ ಉಪಶೀರ್ಷಿಕೆ ಮಟ್ಟದಲ್ಲಿ ವ್ಯಾಖ್ಯಾನವನ್ನು ನೀಡಲು ಅನುಮೋದಿಸಲಾದ ಪ್ರಮಾಣವನ್ನು ಈ ಕೆಳಗಿನ ಕೋಷ್ಟಕ 3.12ರಲ್ಲಿ ನೀಡಲಾಗಿದೆ.

**ಕೋಷ್ಟಕ 3.12: ಧನವಿನಿಯೋಗ ಲೆಕ್ಕಗಳಲ್ಲಿ ವ್ಯಾಖ್ಯಾನ ಮಾಡಲು ಆಯ್ಕೆಗೆ ಗೊತ್ತಾದ ಪ್ರಮಾಣ**

| | |
|---|---|
| **ಉಳಿತಾಯ** | **ಒಟ್ಟು ಉಳಿತಾಯವು ಅನುದಾನ/ವಿನಿಯೋಗದ ಶೇಕಡ ಎರಡಕ್ಕಿಂತ ಹೆಚ್ಚು ಇದ್ದರೆ ಹಾಗೂ ಯಾವುದೇ ಉಪಶೀರ್ಷಿಕೆಯಲ್ಲಿ ಉಳಿತಾಯವು ಶೇಕಡ 10ಕ್ಕಿಂತ ಅಧಿಕವಾಗಿದ್ದರೆ, ಅವುಗಳನ್ನು ವ್ಯಾಖ್ಯಾನಿಸಲಾಗುತ್ತದೆ.** |
| **ಅಧಿಕ ವೆಚ್ಚ** | ಒಟ್ಟು ವೆಚ್ಚವು ಅನುದಾನ/ವಿನಿಯೋಗಗಳ ಶೇಕಡ 10ಕ್ಕಿಂತ ಅಧಿಕವಾಗಿದ್ದರೆ ಮತ್ತು ಯಾವುದೇ ಉಪಶೀರ್ಷಿಕೆಯಲ್ಲಿ ವೆಚ್ಚವು ₹2 ಕೋಟಿಗಳಿಗೂ ಅಧಿಕವಾಗಿದ್ದರೆ, ಅವುಗಳನ್ನು ವ್ಯಾಖ್ಯಾನಿಸಲಾಗುತ್ತದೆ. |

ಆಕರ: ಧನವಿನಿಯೋಗ ಲೆಕ್ಕಗಳು

2019–20ರ ಧನವಿನಿಯೋಗ ಲೆಕ್ಕಗಳಲ್ಲಿ ನಿಯಂತ್ರಣ ಅಧಿಕಾರಿಗಳು ಆಯವ್ಯಯ ಅವಕಾಶಗಳಿಗಿಂತ ಮಹತ್ವವಾಗಿ ಭಿನ್ನವಾಗಿರುವ ವೆಚ್ಚಗಳ ಬಾಬ್ತುಗಳಿಗೆ ವಿವರಣೆ/ನಿರ್ದಿಷ್ಟ ವಿವರಣೆಗಳನ್ನು ಶೇಕಡ 46ರಷ್ಟು ಮೊತ್ತಗಳಿಗೆ ನೀಡಿರುವುದಿಲ್ಲ. 29 ಅನುದಾನ/ವಿನಿಯೋಗಗಳ ಪೈಕಿ, 27 ಅನುದಾನ/ವಿನಿಯೋಗಗಳಲ್ಲಿ ₹13,811.08 ಕೋಟಿಗಳ ಉಳಿತಾಯಗಳಿಗೆ ನಿರ್ದಿಷ್ಟ ಕಾರಣಗಳನ್ನು ವಿವರಿಸಿಲ್ಲ. ಈ ಅನುದಾನಗಳ ವಿವರಗಳನ್ನು **ಅನುಬಂಧ–3.15**ರಲ್ಲಿ ನೀಡಲಾಗಿದೆ.

### *3.6.3.2 2019–20ರಲ್ಲಿ ವೆಚ್ಚಗಳ ಒತ್ತಡ*

2019–20ರಲ್ಲಿ ಸರ್ಕಾರದ ಬೊಕ್ಕಸಕ್ಕೆ ಮಾಸಿಕ ಸ್ವೀಕೃತಿಗಳ ಹರಿಯುವಿಕೆ ಮತ್ತು ವೆಚ್ಚಗಳ ವಿವರಗಳನ್ನು **ನಕ್ಷೆ–3.6**ರಲ್ಲಿ ನೀಡಲಾಗಿದೆ.

**ನಕ್ಷೆ–3.6: 2019–20ರ ಮಾಸಿಕ ಸ್ವೀಕೃತಿಗಳು ಮತ್ತು ವೆಚ್ಚಗಳ ವಿವರಗಳು (₹ ಕೋಟಿಗಳಲ್ಲಿ)**




ಆಕರ: ಮಾಸಿಕ ಸಿವಿಲ್ ಲೆಕ್ಕಗಳು 2019–20

ರಾಜ್ಯ ಸರ್ಕಾರವು ಮಾರ್ಚ್ 2020ರ ತಿಂಗಳೊಂದರಲ್ಲೇ ಒಟ್ಟು ವೆಚ್ಚದ (₹2,20,167 ಕೋಟಿ) ಶೇಕಡ 16ರಷ್ಟು (₹35,811 ಕೋಟಿ) (ಸಾರ್ವಜನಿಕ ಋಣಗಳನ್ನು ಒಳಗೊಂಡು) ವೆಚ್ಚ ಭರಿಸಿರುವುದನ್ನು ಗಮನಿಸಲಾಯಿತು.

2020ರ ಮಾರ್ಚ್ ತಿಂಗಳಲ್ಲಿಯೇ ಶೇಕಡ 50ಕ್ಕಿಂತ ಅಧಿಕ ವೆಚ್ಚದ ಪ್ರಮುಖ ಪ್ರಕರಣಗಳನ್ನು **ಕೋಷ್ಟಕ–3.13**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.13: ಮಾರ್ಚ್ ತಿಂಗಳಿನಲ್ಲಿ ವೆಚ್ಚದ ಪ್ರಮಾಣ**

(₹ ಕೋಟಿಗಳಲ್ಲಿ)

| ಪ್ರಧಾನ ಲೆಕ್ಕಶೀರ್ಷಿಕೆ/ವಿವರಣೆ | 1ನೇ ತ್ರೈಮಾಸಿಕ | 2ನೇ ತ್ರೈಮಾಸಿಕ | 3ನೇ ತ್ರೈಮಾಸಿಕ | 4ನೇ ತ್ರೈಮಾಸಿಕ | ಒಟ್ಟು ವೆಚ್ಚ | ಮಾರ್ಚ್ ತಿಂಗಳ ವೆಚ್ಚ | ಒಟ್ಟು ವೆಚ್ಚಕ್ಕೆ ಮಾರ್ಚ್ ತಿಂಗಳ ವೆಚ್ಚದ ಶತಾಂಶ |
|---|---|---|---|---|---|---|---|
| **4220–ವಾರ್ತಾ ಮತ್ತು ಪ್ರಚಾರದ ಮೇಲಣ ಬಂಡವಾಳ ವೆಚ್ಚ** | 0.00 | 0.00 | 0.73 | 3.16 | 3.89 | 2.92 | 75 |
| **4402–ಮಣ್ಣು ಮತ್ತು ನೀರಿನ ಸಂರಕ್ಷಣೆಯ ಮೇಲಣ ಬಂಡವಾಳ ವೆಚ್ಚ** | 0.00 | 0.00 | 0.00 | 23.69 | 23.69 | 19.45 | 82 |
| **4705–ಜಲಾಧೀನ ಪ್ರದೇಶ ಅಭಿವೃದ್ಧಿ ಮೇಲಣ ಬಂಡವಾಳ ವೆಚ್ಚ** | 3.62 | 21.00 | 17.28 | 71.57 | 113.47 | 65.46 | 58 |
| **4711–ಪ್ರವಾಹ ನಿಯಂತ್ರಣ ಯೋಜನೆಗಳ ಮೇಲಣ ಬಂಡವಾಳ ವೆಚ್ಚ** | 3.80 | 5.37 | 12.40 | 76.60 | 98.19 | 69.29 | 71 |
| **5452–ಪ್ರವಾಸೋದ್ಯಮ ಮೇಲಣ ಬಂಡವಾಳ ವೆಚ್ಚ** | 2.70 | 40.44 | 49.46 | 189.58 | 283.18 | 148.49 | 52 |
| **5465–ಸಾಮಾನ್ಯ ಹಣಕಾಸು ಹಾಗೂ ವ್ಯಾಪಾರ ಸಂಸ್ಥೆಗಳಲ್ಲಿ ತೊಡಗಿಸುವಿಕೆ** | 43.69 | 29.41 | 45.02 | 417.82 | 535.94 | 266.65 | 50 |
| **6801–ವಿದ್ಯುತ್ಶಕ್ತಿ ಯೋಜನೆಗಳಿಗೆ ಸಾಲಗಳು** | 0.00 | 0.00 | 0.00 | 2,500.00 | 2,500.00 | 2,500.00 | 100 |

ಆಕರ: ಮಾಸಿಕ ಸಿವಿಲ್ ಲೆಕ್ಕಗಳು 2019–20

ಸರ್ಕಾರವು, ವರ್ಷದ ಕೊನೆಯಲ್ಲಿ ಗಣನಾರ್ಹ ಪ್ರಮಾಣದ ವೆಚ್ಚವನ್ನು ಭರಿಸಿರುವುದು ಮೇಲಿನ ಕೋಷ್ಟಕದಿಂದ ತಿಳಿದು ಬರುತ್ತದೆ. ವರ್ಷದ ಕೊನೆಯಲ್ಲಿ ಬಿಡುಗಡೆಯಾದ ಮೊತ್ತಗಳು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಕೆಯಾಗಿದೆ ಎಂಬುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

## 3.7 ಆಯ್ದ ಅನುದಾನಗಳ ಸಮೀಕ್ಷೆಯ ಫಲಿತಾಂಶಗಳು

ಆಯ್ದ ಎರಡು ಅನುದಾನಗಳಿಗೆ ಸಂಬಂಧಿಸಿದಂತೆ 2017–18 ರಿಂದ 2019–20ರವರೆಗಿನ ಮೂರು ವರ್ಷಗಳ ಅವಧಿಯಲ್ಲಿ ಆಯವ್ಯಯ ವಿಧಾನ ಹಾಗೂ ವೆಚ್ಚ ನಿಯಂತ್ರಣ ಸಮೀಕ್ಷೆಯಲ್ಲಿ ಕೆಳಗಿನ ಅಂಶಗಳನ್ನು ಗಮನಿಸಲಾಯಿತು.

### *3.7.1 ಅನುದಾನ ಸಂಖ್ಯೆ 18 – ವಾಣಿಜ್ಯ ಮತ್ತು ಕೈಗಾರಿಕೋದ್ಯಮಗಳು*

#### *3.7.1.1 ಪೀಠಿಕೆ*

ರಾಜ್ಯದ ಭಾರಿ ಮತ್ತು ಬೃಹತ್ ಕೈಗಾರಿಕೆಗಳು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಲ್ಲಿ ಹೂಡಿಕೆಗಳನ್ನು ಉತ್ತೇಜಿಸಲು ಅವಶ್ಯಕವಾದ ಅನುಕೂಲತೆಗಳು, ಪ್ರೋತ್ಸಾಹ, ರಿಯಾಯಿತಿಗಳು, ತಾಂತ್ರಿಕ ಸಹಾಯ, ಕೌಶಲ್ಯಾಭಿವೃದ್ಧಿ, ಮಾರುಕಟ್ಟೆಗಳ ಅವಶ್ಯಕತೆ ಮುಂತಾದವುಗಳನ್ನು ಒದಗಿಸುವುದು ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಇಲಾಖೆಯ ಮುಖ್ಯ ಉದ್ದೇಶಗಳಾಗಿವೆ. ಈ ಉದ್ದೇಶಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಕರ್ನಾಟಕ ಕೈಗಾರಿಕೋದ್ಯಮ ಪ್ರದೇಶ ಅಭಿವೃದ್ಧಿ ಮಂಡಳಿ, ತಾಂತ್ರಿಕ ಸಮಾಲೋಚನಾ ಸೇವಾ ಕೇಂದ್ರ ಮುಂತಾದ ವಿವಿಧ ಯೋಜನೆ/ಕಾರ್ಯಕ್ರಮಗಳ ಮೂಲಕ ಜಾರಿಗೊಳಿಸಲಾಗುತ್ತದೆ. ಅನುದಾನ – 18 ಈ ಕೆಳಗಿನ ಪ್ರಧಾನ ಶೀರ್ಷಿಕೆಗಳನ್ನು ಒಳಗೊಂಡಿದೆ.

| | |
|---|---|
| **2851** | ಗ್ರಾಮೀಣ ಮತ್ತು ಸಣ್ಣ ಉದ್ಯಮಗಳು |
| **2852** | ಕೈಗಾರಿಕೆಗಳು |
| **2853** | ಕಬ್ಬಿಣೇತರ ಗಣಿ ಮತ್ತು ಲೋಹಗಳ ಉದ್ಯಮಗಳು |
| **4851** | ಗ್ರಾಮೀಣ ಮತ್ತು ಸಣ್ಣ ಉದ್ಯಮಗಳ ಮೇಲಣ ಬಂಡವಾಳ ವೆಚ್ಚ |
| **4852** | ಕಬ್ಬಿಣ ಮತ್ತು ಉಕ್ಕು ಉದ್ಯಮಗಳ ಮೇಲಣ ಬಂಡವಾಳ ವೆಚ್ಚ |
| **4860** | ಗ್ರಾಹಕ ವಸ್ತುಗಳ ಉದ್ಯಮಗಳ ಮೇಲಣ ಬಂಡವಾಳ ವೆಚ್ಚ |
| **6851** | ಗ್ರಾಮೀಣ ಮತ್ತು ಸಣ್ಣ ಉದ್ಯಮಗಳಿಗೆ ಸಾಲಗಳು |
| **6852** | ಕಬ್ಬಿಣ ಮತ್ತು ಉಕ್ಕು ಉದ್ಯಮಗಳಿಗೆ ಸಾಲ |
| **6860** | ಗ್ರಾಹಕ ವಸ್ತುಗಳ ಉದ್ಯಮಗಳಿಗೆ ಸಾಲಗಳು |
| **6885** | ಖನಿಜ ಮತ್ತು ಇತರೆ ಉದ್ಯಮಗಳಿಗೆ ಇತರೆ ಸಾಲಗಳು |

#### *3.7.1.2 ಆಯವ್ಯಯ ಮತ್ತು ವೆಚ್ಚ*

ಈ ಅನುದಾನದಡಿಯಲ್ಲಿ ಕಳೆದ ಮೂರು ವರ್ಷಗಳ (2017–18 ರಿಂದ 2019–20) ಆಯವ್ಯಯ ಅವಕಾಶಗಳು ವಾಸ್ತವಿಕ ವಿತರಣೆ ಹಾಗೂ ಉಳಿತಾಯಗಳ ಸಮಗ್ರ ಸ್ಥಿತಿಗಳನ್ನು **ಕೋಷ್ಟಕ–3.14** ರಲ್ಲಿ ನೀಡಲಾಗಿದೆ.

**ಕೋಷ್ಟಕ–3.14: ಆಯವ್ಯಯ ಮತ್ತು ವೆಚ್ಚ**

(₹ ಕೋಟಿಗಳಲ್ಲಿ)

| ವರ್ಷ | ವಿಭಾಗ | ಆಯವ್ಯಯ ಅವಕಾಶ | ಒಟ್ಟು | ವೆಚ್ಚ | ಬಳಕೆಯಾಗದ ಅವಕಾಶ ಮತ್ತು ಅದರ ಶತಾಂಶ |
|---|---|---|---|---|---|
| 2017–18 | ರಾಜಸ್ವ–ಮೂಲ(ಪುರಸ್ಕೃತ) | 828.96 | 1,008.08 | 874.61 | 133.47 (13) |
| | ಪೂರಕ | 179.12 | | | |
| | ಬಂಡವಾಳ–ಮೂಲ (ಪುರಸ್ಕೃತ) | 920.99 | 1,059.69 | 1,018.54 | 41.15(4) |
| | ಪೂರಕ | 138.70 | | | |
| 2018–19 | ರಾಜಸ್ವ–ಮೂಲ (ಪುರಸ್ಕೃತ) | 835.87 | 1,188.87 | 1,056.74 | 132.13(11) |
| | ಪೂರಕ | 353.00 | | | |
| | ಬಂಡವಾಳ–ಮೂಲ (ಪುರಸ್ಕೃತ) | 1,462.51 | 1,505.91 | 929.63 | 576.28(38) |
| | ಪೂರಕ | 43.40 | | | |
| 2019–20 | ರಾಜಸ್ವ–ಮೂಲ (ಪುರಸ್ಕೃತ) | 1,094.02 | 1,302.79 | 1,063.14 | 239.65(18) |
| | ಪೂರಕ | 208.77 | | | |
| | ಬಂಡವಾಳ–ಮೂಲ (ಪುರಸ್ಕೃತ) | 1,088.00 | 1,113.77 | 697.59 | 416.18(37) |
| | ಪೂರಕ | 25.77 | | | |

*ಆಕರ: ಧನವಿನಿಯೋಗ ಲೆಕ್ಕಗಳು*

2017–18ರಿಂದ 2019–20ರ ಅವಧಿಯಲ್ಲಿ ರಾಜಸ್ವ ವಿಭಾಗದಲ್ಲಿ ಬಳಕೆ ಮಾಡದ ಅವಕಾಶವು ಒಟ್ಟು ಅವಕಾಶಗಳ ಶೇಕಡ 11 ಮತ್ತು 18ರ ನಡುವಿನ ವ್ಯಾಪ್ತಿಯಲ್ಲಿ ಮತ್ತು ಬಂಡವಾಳ ವಿಭಾಗದಲ್ಲಿ ಇದು ಶೇಕಡ 4ರಿಂದ 38ರ ನಡುವೆ ಇದ್ದಿತು.

### *3.7.1.3 ನಿರಂತರ ಉಳಿತಾಯಗಳು*

2017–18ರಿಂದ 2019–20ರ ವರ್ಷಗಳ ಧನವಿನಿಯೋಗ ಲೆಕ್ಕಗಳ ಪರಿಶೀಲನೆಯಲ್ಲಿ ಮೂರು ಲೆಕ್ಕಶೀರ್ಷಿಕೆಗಳಡಿಯಲ್ಲಿ ನಿರಂತರ ಉಳಿತಾಯಗಳನ್ನು ಗಮನಿಸಲಾಗಿದ್ದು, ಇವು ಅಪರ್ಯಾಪ್ತ ಆಯವ್ಯಯ ಮೇಲ್ವಿಚಾರಣೆ ಮತ್ತು ಕಾರ್ಯನಿರ್ವಹಣೆಯಲ್ಲಿನ ಕೊರತೆ ಅಥವಾ ಎರಡನ್ನೂ ಸೂಚಿಸುತ್ತದೆ.

ಆಯವ್ಯಯ ಹಂಚಿಕೆಗಳು ಪ್ರತಿವರ್ಷವೂ ಬಳಕೆಯಾಗದೆ ಇರುವುದನ್ನು ಗಮನಿಸಲಾಗಿದ್ದು ಇದು ಸಂಬಂಧಿತ ವರ್ಷದಲ್ಲಿ ಪ್ರಕ್ಷೇಪಿತ ವಿತ್ತೀಯ ಗುರಿಗಳನ್ನು ಸಾಧಿಸದಿರುವುದನ್ನು ಸೂಚಿಸುತ್ತದೆ. ಕರ್ನಾಟಕ ಆಯವ್ಯಯ ಕೈಪಿಡಿಯ 110ನೇ ನಿಯಮದ ಅನುಸಾರ ಹಿಂದಿನ ವರ್ಷದ ವೆಚ್ಚವನ್ನು ಪರಿಗಣಿಸದೆ, ಆಯವ್ಯಯ ಹಂಚಿಕೆಗಳನ್ನು ಮಾಡಿರುವುದು, ನಿರಂತರ ಉಳಿತಾಯವಾಗುವಲ್ಲಿ ಪರಿಣಮಿಸಿರುವುದನ್ನು **ಕೋಷ್ಟಕ–3.15**ರಲ್ಲಿ ತೋರಿಸಿದೆ.

**ಕೋಷ್ಟಕ–3.15: ನಿರಂತರ ಉಳಿತಾಯಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಉಳಿತಾಯ | | |
|---|---|---|---|---|
| | | 2017–18 | 2018–19 | 2019–20 |
| 1 | 2853–02–102–0–15–059 – ಇತರೆ ವೆಚ್ಚಗಳು | 56.55 | 19.47 | 14.23 |
| 2 | 4851–00–104–0–05–211 – ಹೂಡಿಕೆ | 0.90 | 0.50 | 1.00 |
| 3 | 6852–02–190–4–02–394 – ಸಾಲಗಳು | 5.00 | 3.50 | 5.00 |

ಆಕರ: ಅನುದಾನ ವಹಿ

ಕ್ರಮಸಂಖ್ಯೆ 2ರ ಪ್ರಕರಣಕ್ಕೆ ಉತ್ತರವಾಗಿ ಇಲಾಖೆಯು (ಸೆಪ್ಟೆಂಬರ್ 2020) ಮೊಕದ್ದಮೆಯ ಕಾರಣ ಕಲಾಗ್ರಾಮ ನಿರ್ಮಾಣಕ್ಕೆ ಸ್ಥಳವನ್ನು ಗುರುತಿಸುವ ಕಾರ್ಯ ತಡವಾದ್ದರಿಂದ, ಅವಕಾಶವನ್ನು

ಹಿಂಪಡೆಯಲು ಸರ್ಕಾರಕ್ಕೆ ಪ್ರಸ್ತಾಪನೆಯನ್ನು ಸಲ್ಲಿಸಲಾಯಿತು ಎಂದು ತಿಳಿಸಿದೆ. ಕ್ರಮಸಂಖ್ಯೆ –1 ಮತ್ತು 3ಕ್ಕೆ ಸಂಬಂಧಿಸಿದಂತೆ ಉತ್ತರ ಬಂದಿಲ್ಲ.

### *3.7.1.4 ಸರ್ಕಾರದ ಹಣವನ್ನು ಸರ್ಕಾರದ ಲೆಕ್ಕಗಳಿಂದ ಹೊರಗೆ ನಿರ್ಬಂಧಿಸಿರುವುದು*

ವಾಸ್ತವವಾಗಿ ಅಗತ್ಯತೆಯಿಲ್ಲದೆ, ರಾಜ್ಯದ ಸಂಚಿತ ನಿಧಿಯಿಂದ ಹಣ ತೆಗೆಯುವುದು ವಿವೇಚನಾಯುಕ್ತ ವಿತ್ತೀಯ ಕ್ರಮವಲ್ಲ. ಬಿಡುಗಡೆಯಾದ ಉದ್ದೇಶಕ್ಕೆ ವಾಸ್ತವವಾಗಿ ಹಣವನ್ನು ಉಪಯೋಗಿಸದೆ ಅದನ್ನು ವೆಚ್ಚವೆಂದು ತೋರಿಸುವುದು ಸಂಬಂಧಿತ ವರ್ಷಗಳಲ್ಲಿ ವಿತ್ತೀಯ ಸೂಚಕಗಳನ್ನು ವಿರೂಪನಗೊಳಿಸುವಲ್ಲಿ ಪರಿಣಮಿಸುತ್ತದೆ.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು, ವಿವಿಧ ಸಂಸ್ಥೆಗಳು/ಮಂಡಳಿಗಳು ಮುಂತಾದ ಅನುಷ್ಠಾನ ಏಜೆನ್ಸಿಗಳ ಅನೇಕ ಯೋಜನೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುತ್ತದೆ.

2017–18 ರಿಂದ 2019–20ರ ಅವಧಿಯಲ್ಲಿ ಎರಡು ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಅನುದಾನ ಮತ್ತು ವೆಚ್ಚಗಳ ಪರಿಶೀಲನೆಯಲ್ಲಿ, ಸಂಚಿತ ನಿಧಿಯಿಂದ ₹ 151.74 ಕೋಟಿಗಳ ವೆಚ್ಚವನ್ನು ತೋರಿಸಿದ್ದು ₹ 91.77 ಕೋಟಿ ಬಳಕೆಯಾಗದೆ ಉಳಿದು ಇದನ್ನು ಅನುಷ್ಠಾನ ಏಜೆನ್ಸಿಗಳ ಉಳಿತಾಯ ಖಾತೆಗಳಲ್ಲಿ ಇರಿಸಿರುವುದನ್ನು ಗಮನಿಸಲಾಗಿದೆ. ಇದು ವೆಚ್ಚವನ್ನು ₹ 91.77 ಕೋಟಿ ಅಧಿಕವಾಗಿ ತೋರಿಸಿದಂತಾಗಿದೆ. ಪ್ರತ್ಯೇಕ ಅವಲೋಕನಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

#### *(ಎ) ಕರ್ನಾಟಕ ಚರ್ಮ ತಂತ್ರಶಾಸ್ತ್ರದ ಸಂಸ್ಥೆ*

1983–84 ರಲ್ಲಿ ಕರ್ನಾಟಕ ಚರ್ಮ ತಂತ್ರಶಾಸ್ತ್ರದ ಸಂಸ್ಥೆಯನ್ನು (ಕೆಐಎಲ್‌ಟಿ) ಉದ್ಯೋಗ ಸೃಷ್ಟಿಸುವ ಉದ್ದೇಶದ ಮೂಲಕ ರಾಜ್ಯ ಚರ್ಮ ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗಿ ಮತ್ತು ಚರ್ಮ ಕೈಗಾರಿಕೆಗಳಿಗೆ ಹೆಚ್ಚಿನ ಕೌಶಲ್ಯವುಳ್ಳ ಮಾನವ ಸಂಪನ್ಮೂಲಗಳನ್ನು ಒದಗಿಸುವ ಸಲುವಾಗಿ ಸ್ಥಾಪಿಸಲಾಯಿತು. ಈ ಉದ್ದೇಶವನ್ನು ನೆರವೇರಿಸಲು ಸಂಸ್ಥೆಯು ಚರ್ಮ ಮತ್ತು ಫ್ಯಾಶನ್ ತಂತ್ರಜ್ಞಾನದಲ್ಲಿ ದೀರ್ಘ ಮತ್ತು ಕಿರು ಅವಧಿಗಳ ತರಬೇತಿ ಕೋರ್ಸ್‌ಗಳನ್ನು ನಡೆಸುತ್ತದೆ.

2017–18ರಿಂದ 2019–20ರ ಅವಧಿಯಲ್ಲಿ ಕಟ್ಟಡ ನಿರ್ಮಾಣ, ತರಬೇತಿ ಚಟುವಟಿಕೆಗಳು ಮುಂತಾದವುಗಳಿಗೆ ₹9.39 ಕೋಟಿಗಳನ್ನು ವಿವಿಧ ಶೀರ್ಷಿಕೆಗಳಲ್ಲಿ ಬಿಡುಗಡೆಗೊಳಿಸಲಾಗಿದೆ. ಇದಕ್ಕೆ ಪ್ರತಿಯಾಗಿ ₹7.30 ಕೋಟಿಗಳ ವೆಚ್ಚವನ್ನು ಭರಿಸಲಾಗಿದ್ದು, ₹2.09 ಕೋಟಿ ಬಾಕಿ ಇತ್ತು. 2017–18ರಲ್ಲಿನ ಪ್ರಾರಂಭಿಕ ಶಿಲ್ಕು ₹1.76 ಕೋಟಿಗಳಿದ್ದು, 2017–18 ರಿಂದ 2019–20ರವರೆಗಿನ ಬಡ್ಡಿ ₹0.17 ಕೋಟಿಯನ್ನು ಸೇರಿ ಸಂಸ್ಥೆಯ ಅಂತಿಮ ಶಿಲ್ಕು ₹4.02 ಕೋಟಿಗಳಾಗಿದ್ದವು. ಬಳಕೆಯಾಗದೆ ಉಳಿದ ಹಣವನ್ನು ಉಳಿತಾಯ ಖಾತೆಯಲ್ಲಿ ಇಡಲಾಗಿದ್ದು ಇದು ಸರ್ಕಾರದ ಹಣವನ್ನು ನಿರ್ಬಂಧಗೊಳಿಸಿದಂತಾಗಿದೆ. ಅಲ್ಲದೆ, ಸಂಸ್ಥೆಯು ₹0.02 ಕೋಟಿ ಆದಾಯ ತೆರಿಗೆಯನ್ನು ಬಡ್ಡಿಯ ಹಣದಿಂದ ಪಾವತಿಸಿರುವುದನ್ನು ಗಮನಿಸಲಾಗಿದೆ.

ಇದಕ್ಕೆ ಉತ್ತರವಾಗಿ ಇಲಾಖೆಯು (ಸೆಪ್ಟೆಂಬರ್ 2020) ಯೋಜನೆಯನ್ನು ಅನುಷ್ಠಾನಗೊಳಿಸುವುದು ತಡವಾದ್ದರಿಂದ ಆಡಳಿತ ಪರಿಷತ್ತಿನ ಸಲಹೆಯ (ಜುಲೈ 2019) ಮೇರೆಗೆ ಉಳಿತಾಯದ ಹಣವನ್ನು ನಿಗದಿತ ಠೇವಣಿಯಲ್ಲಿ ಇಟ್ಟಿರುವುದಾಗಿ ತಿಳಿಸಿತು. ಮುಂದುವರೆದು, 2019–20ರ ಆದಾಯ ತೆರಿಗೆ ಸಲ್ಲಿಕೆಯ ವೇಳೆ ಟಿಡಿಎಸ್ ಕ್ಲೈಮ್ ಮಾಡಲಾಗುವುದು ಎಂದೂ ತಿಳಿಸಿತು.

#### *(ಬಿ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ*

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (KSSIDC)ವು ಕರ್ನಾಟಕ ರಾಜ್ಯದ ಹೂಡಿಕೆ ಮತ್ತು ಉತ್ತೇಜನಾ ಏಜೆನ್ಸಿಯಾಗಿದ್ದು ರಾಜ್ಯದ ಸಣ್ಣ ವರ್ಗದ ಕೈಗಾರಿಕೆಗಳ ಉತ್ತೇಜನ ಮತ್ತು ಕೈಗಾರಿಕಾ ಅಭಿವೃದ್ಧಿಯ ಉದ್ದೇಶವನ್ನು ಹೊಂದಿದೆ.

2017–18 ರಿಂದ 2019–20ರ ಅವಧಿಯಲ್ಲಿ ಒಟ್ಟು ₹186.29 ಕೋಟಿಗಳ ಬಿಡುಗಡೆಗೆ ಪ್ರತಿಯಾಗಿ ₹147.44 ಕೋಟಿಗಳನ್ನು ಸಹಾಯಾನುದಾನ, ಮೂಲಭೂತ ಸೌಲಭ್ಯಗಳಿಗಾಗಿ ಭರಿಸಲಾಗಿದೆ. ಉಳಿದ ಶಿಲ್ಕಾದ ₹38.85 ಕೋಟಿಗಳೊಂದಿಗೆ 2017–18ರ ಆರಂಭಿಕ ಶಿಲ್ಕಾದ ₹48.90 ಕೋಟಿಗಳನ್ನು ಕಾರ್ಪೋರೇಷನ್ ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಇಡಲಾಗಿದೆ. ಇದು ಸರ್ಕಾರದ ಹಣವನ್ನು ನಿರ್ಬಂಧಗೊಳಿಸುವಲ್ಲಿ ಪರಿಣಮಿಸಿದೆ.

### *3.7.1.5 ವೆಚ್ಚದ ಒತ್ತಡ*

ಆರ್ಥಿಕ ವರ್ಷದ ಕೊನೆಯ ತಿಂಗಳಿನಲ್ಲಿ ಆಗುವ ವೆಚ್ಚದ ಒತ್ತಡಗಳು ಆರ್ಥಿಕ ಔಚಿತ್ಯದ ಉಲ್ಲಂಘನೆಯಾಗಿರುವುದರಿಂದ ಇದನ್ನು ತಪ್ಪಿಸಬೇಕೆಂದು ನಿಯಮ 62(3)ರ ಸಾಮಾನ್ಯ ಆರ್ಥಿಕ ನಿಯಮ 2017 ತಿಳಿಸುತ್ತದೆ. ಮೊತ್ತಗಳ ಬಿಡುಗಡೆ, ಸೆಳೆತ ಮತ್ತು ಲೆಕ್ಕ ವಿಧಾನಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ಜಾರಿ ಮಾಡಿದ 9 ಸೆಪ್ಟೆಂಬರ್ 2004ರ ಆದೇಶದ ಕಂಡಿಕೆ 6ರಂತೆ, ಆಡಳಿತ ಇಲಾಖಾ ಮುಖ್ಯಸ್ಥರು ಆರ್ಥಿಕ ವರ್ಷದ ಉಳಿದ ಭಾಗಕ್ಕೆ ಬೇಕಾದ ವೆಚ್ಚವನ್ನು ಎಚ್ಚರಿಕೆಯಿಂದ ಮತ್ತು ಉಳಿದಿರುವ ಅನುದಾನಗಳ ಬಳಕೆಯನ್ನು ಯೋಜಿಸಬೇಕಾಗಿದೆ. ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಆಗಬಹುದಾದ ವೆಚ್ಚಗಳಿಗೆ, ಸೂಕ್ತ ಮಟ್ಟದ ಅಧಿಕಾರಿಯಿಂದ ಅಗತ್ಯವಾದ ಅನುಮೋದನೆ ಪಡೆದು ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿಯೇ ಹೊರಡಿಸಬೇಕು. ಆದರೆ, 2019–20ರಲ್ಲಿ ಮಾರ್ಚ್ ತಿಂಗಳಿನಲ್ಲಿ ವೆಚ್ಚವು ಶೇಕಡ 32ರಿಂದ 100ರಷ್ಟಿದ್ದು, ಕೊನೆಯ ತ್ರೈಮಾಸಿಕದಲ್ಲಿ ಅದು ಶೇಕಡ 50 ರಿಂದ 100ರಷ್ಟಿರುವುದನ್ನು ಗಮನಿಸಲಾಗಿದೆ. ಲೆಕ್ಕ ಶೀರ್ಷಿಕಾವಾರು ವಿವರವನ್ನು **ಕೋಷ್ಟಕ–3.16**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.16: ವೆಚ್ಚದ ಒತ್ತಡ**

(₹ ಕೋಟಿಗಳಲ್ಲಿ)

| ಲೆಕ್ಕ ಶೀರ್ಷಿಕೆ | ಒಟ್ಟು ವೆಚ್ಚ | ಕೊನೆಯ ತ್ರೈಮಾಸದ ವೆಚ್ಚ ಹಾಗೂ ಅದರ ಶತಾಂಶ | ಮಾರ್ಚ್ ತಿಂಗಳಿನ ವೆಚ್ಚ ಮತ್ತು ಅದರ ಶತಾಂಶ |
|---|---|---|---|
| 2851–00–102–0–84–102–ಸಹಾಯಾನುದಾನ ಆಸ್ತಿ ಸೃಜನೆ | 2.50 | 2.50 (100) | 1.09 (44) |
| 2851–00–102–0–85–102–ಸಹಾಯಾನುದಾನ ಆಸ್ತಿ ಸೃಜನೆ | 1.35 | 1.35 (100) | 1.35(100) |
| 2851–00–103–0–62–422–ಪರಿಶಿಷ್ಟ ಜಾತಿ ಉಪ ಯೋಜನೆ | 21.90 | 15.04 (69) | 11.53 (53) |
| 2851–00–103–0–62–423–ಪರಿಶಿಷ್ಟ ಪಂಗಡದ ಉಪ ಯೋಜನೆ | 13.22 | 10.31 (78) | 8.97 (68) |
| 2851–00–104–0–19–106–ಸಹಾಯಧನ | 1.15 | 1.15 (100) | 0.90 (78) |
| 2852–80–102–0–04–059–ಇತರೆ ವೆಚ್ಚಗಳು | 5.00 | 2.50 (50) | 2.50 (50) |
| 2853–02–102–0–14–059– ಇತರೆ ವೆಚ್ಚಗಳು | 0.20 | 0.20 (100) | 0.20 (100) |
| 2853–02–102–0–15–059– ಇತರೆ ವೆಚ್ಚಗಳು | 28.05 | 27.51 (98) | 17.51 (62) |
| 4851–00–102–0–19–132–ಬಂಡವಾಳ ವೆಚ್ಚಗಳು | 2.40 | 1.90 (79) | 0.90 (38) |
| 4851–00–190–0–20–211–ಹೂಡಿಕೆ | 54.94 | 54.94 (100) | 17.47 (32) |

*ಆಕರ: ಅನುದಾನ ವಹಿ*

ಆರ್ಥಿಕ ಇಲಾಖೆಯು (ಫೆಬ್ರವರಿ 2021) ವರ್ಷಾಂತ್ಯದಲ್ಲಿ ವೆಚ್ಚದ ಒತ್ತಡವನ್ನು ತಪ್ಪಿಸಲು ಸಮತೋಲನ ವೆಚ್ಚವನ್ನು ಯೋಜಿಸುವಂತೆ ಎಲ್ಲಾ ಇಲಾಖೆಗಳಿಗೆ ಸೂಚಿಸಿರುವುದಾಗಿ ತಿಳಿಸಿದೆ. ಆದರೆ, ವರ್ಷಾಂತ್ಯದಲ್ಲಿ ಹೆಚ್ಚು ವೆಚ್ಚ ಮಾಡುವುದನ್ನು ಇಲಾಖೆಗಳು ಮುಂದುವರೆಸಿವೆ.

ಆರ್ಥಿಕ ಇಲಾಖೆಯು ವೆಚ್ಚದ ರೀತಿಯನ್ನು ಪರಿಶೀಲಿಸಿ ಆರ್ಥಿಕ ವರ್ಷಾಂತ್ಯದಲ್ಲಿ ವೆಚ್ಚದ ಒತ್ತಡವನ್ನು ತಪ್ಪಿಸಲು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕು.

### *3.7.2 ಅನುದಾನ ಸಂಖ್ಯೆ 21 – ಜಲಸಂಪನ್ಮೂಲಗಳು*

#### *3.7.2.1 ಪೀಠಿಕೆ*

ಅನುದಾನ ಸಂಖ್ಯೆ 21 – ಜಲಸಂಪನ್ಮೂಲ ಇಲಾಖೆಯ ಆಯವ್ಯಯ ಮತ್ತು ವೆಚ್ಚಗಳಿಗೆ ಸಂಬಂಧಿಸಿದುದಲ್ಲದೆ, ಕುಡಿಯುವ ನೀರಿನ ಪೂರೈಕೆ ಮತ್ತು ಕರ್ನಾಟಕ ರಾಜ್ಯದ ರೈತರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಹೊಂದಿರುವ ಸಣ್ಣ ನೀರಾವರಿ ಇಲಾಖೆಯನ್ನೊಳಗೊಂಡಿದೆ.

#### *3.7.2.2 ಆಯವ್ಯಯ ಮತ್ತು ವೆಚ್ಚ*

ಈ ಅನುದಾನದ 2017–18ರಿಂದ 2019–20ರವರೆಗಿನ ಮೂರು ವರ್ಷಗಳ ಆಯವ್ಯಯ, ವಾಸ್ತವಿಕ ವೆಚ್ಚ ಹಾಗೂ ಉಳಿತಾಯಗಳ ಸಮಗ್ರ ವಿವರಗಳನ್ನು **ಕೋಷ್ಟಕ–3.17**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.17: ಆಯವ್ಯಯ ಮತ್ತು ವೆಚ್ಚ**

(₹ ಕೋಟಿಗಳಲ್ಲಿ)

| ವರ್ಷ | ವಿಭಾಗ | ಆಯವ್ಯಯ ಅವಕಾಶ | ಒಟ್ಟು | ವೆಚ್ಚ | ಬಳಕೆಯಾಗದ ಅವಕಾಶ ಮತ್ತು ಅದರ ಶತಾಂಶ |
|---|---|---|---|---|---|
| 2017–18 | ರಾಜಸ್ವ–ಮೂಲ (ಪುರಸ್ಕೃತ) | 1,081.88 | 1,081.88 | 911.99 | 169.89 |
| | ಪೂರಕ | 0.00 | | | (16) |
| | ರಾಜಸ್ವ–ಮೂಲ (ಪ್ರಭೃತ) | 952.97 | 952.97 | 933.47 | 19.50 |
| | ಪೂರಕ | 0.00 | | | (2) |
| | ಬಂಡವಾಳ–ಮೂಲ (ಪುರಸ್ಕೃತ) | 12,072.87 | 12,588.74 | 9,950.54 | 2,638.20 |
| | ಪೂರಕ | 515.87 | | | (21) |
| | ಬಂಡವಾಳ–ಮೂಲ (ಪ್ರಭೃತ) | 345.34 | 345.34 | 345.34 | 0.00 |
| | ಪೂರಕ | 0.00 | | | |
| 2018–19 | ರಾಜಸ್ವ–ಮೂಲ (ಪುರಸ್ಕೃತ) | 1,032.98 | 1,039.03 | 913.72 | 125.31 |
| | ಪೂರಕ | 6.05 | | | (12) |
| | ರಾಜಸ್ವ–ಮೂಲ (ಪ್ರಭೃತ) | 1,291.39 | 1,291.39 | 1,152.87 | 138.52 |
| | ಪೂರಕ | 0.00 | | | (11) |
| | ಬಂಡವಾಳ–ಮೂಲ (ಪುರಸ್ಕೃತ) | 10,979.69 | 11,453.92 | 10,906.46 | 547.46 |
| | ಪೂರಕ | 474.23 | | | (5) |
| | ಬಂಡವಾಳ–ಮೂಲ (ಪ್ರಭೃತ) | 1,235.28 | 1,235.28 | 1,148.71 | 86.57 |
| | ಪೂರಕ | 0.00 | | | (7) |
| 2019–20 | ರಾಜಸ್ವ–ಮೂಲ (ಪುರಸ್ಕೃತ) | 1,077.07 | 1,090.40 | 799.87 | 290.53 |
| | ಪೂರಕ | 13.33 | | | (27) |
| | ರಾಜಸ್ವ–ಮೂಲ (ಪ್ರಭೃತ) | 1,498.19 | 1,498.19 | 1,317.19 | 181.00 |
| | ಪೂರಕ | 0.00 | | | (12) |
| | ಬಂಡವಾಳ–ಮೂಲ (ಪುರಸ್ಕೃತ) | 12,065.70 | 13,402.32 | 12,291.48 | 1,110.84 |
| | ಪೂರಕ | 1,336.62 | | | (8) |
| | ಬಂಡವಾಳ–ಮೂಲ (ಪ್ರಭೃತ) | 1,017.27 | 1,017.63 | 1,017.26 | 0.37 |
| | ಪೂರಕ | 0.36 | | | (0) |

ಆಕರ: ಧನವಿನಿಯೋಗ ಲೆಕ್ಕಗಳು

2017–18 ರಿಂದ 2019–20ರ ಅವಧಿಯಲ್ಲಿ ಬಳಕೆಯಾಗದ ಉಳಿತಾಯವು ರಾಜಸ್ವ ಪುರಸ್ಕೃತ ವಿಭಾಗದಲ್ಲಿ ಶೇಕಡ 12ರಿಂದ ಶೇಕಡ 27ರ ನಡುವೆ ಮತ್ತು ಪ್ರಭೃತ ವಿಭಾಗದಲ್ಲಿ ಶೇಕಡ 2ರಿಂದ 12ರ ನಡುವೆ ಇದ್ದಿತು. ಬಂಡವಾಳ ಪುರಸ್ಕೃತ ವಿಭಾಗದಲ್ಲಿ ಬಳಕೆಯಾಗದ ಅವಕಾಶವು ಶೇಕಡ 5 ರಿಂದ ಶೇಕಡ 21ರ ನಡುವೆ ಮತ್ತು ಬಂಡವಾಳ ಪ್ರಭೃತ ವಿಭಾಗದಲ್ಲಿ ಇದು ಶೇಕಡ 7ರವರೆಗೆ ಇದ್ದಿತು.

### *3.7.2.3 ಆಂತರಿಕ ಆರ್ಥಿಕ ಸಲಹೆಗಾರರನ್ನು ನೇಮಕ ಮಾಡದಿರುವುದು*

ಸರ್ಕಾರವು ಆರ್ಥಿಕ ಇಲಾಖೆಯ ಸಲಹೆಯ ಮೇರೆಗೆ ಒಂದು ಇಲಾಖೆಗೆ ಅಥವಾ ಗುಂಪು ಇಲಾಖೆಗಳಿಗೆ ಒಬ್ಬ ಆಂತರಿಕ ಆರ್ಥಿಕ ಸಲಹೆಗಾರರನ್ನು ನೇಮಿಸುತ್ತದೆ. ಜುಲೈ 1982ರಲ್ಲಿ ಕರ್ನಾಟಕ ಸರ್ಕಾರ ಹೊರಡಿಸಿರುವ ಅಧಿಸೂಚನೆಯ ಅನ್ವಯ, ಆಂತರಿಕ ಆರ್ಥಿಕ ಸಲಹೆಗಾರರು, ಆಯವ್ಯಯ ಅಂದಾಜುಗಳನ್ನು ಸೂಕ್ತವಾಗಿ ರೂಪಿಸುವುದು, ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವುದು, ಹೊಸ ಯೋಜನೆಗಳಿಗೆ, ಹೊಸ ವೆಚ್ಚ, ಇತ್ಯಾದಿಗಳನ್ನು ಪರಿಶೀಲಿಸಿ ಸಲಹೆ ನೀಡುವುದು. 2019-20ರಲ್ಲಿ ಜಲಸಂಪನ್ಮೂಲ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆಗಳ ದಾಖಲೆಗಳ ಸಮೀಕ್ಷೆಯಲ್ಲಿ ಇಲಾಖೆಯು ಆಂತರಿಕ ಆರ್ಥಿಕ ಸಲಹೆಗಾರರಿಲ್ಲದೆ ಕಾರ್ಯ ನಿರ್ವಹಿಸುತ್ತಿರುವುದು ಗಮನಿಸಲಾಗಿದೆ.

ಇಲಾಖೆಯು (ಫೆಬ್ರವರಿ 2021) ಆಂತರಿಕ ಆರ್ಥಿಕ ಸಲಹೆಗಾರರು ಇಲ್ಲದಿರುವುದರಿಂದ ಒಬ್ಬ ಆಂತರಿಕ ಆರ್ಥಿಕ ಸಲಹೆಗಾರರ ಹುದ್ದೆಯನ್ನು ಸೃಷ್ಟಿಸಬೇಕೆಂದು ಪ್ರಸ್ತಾವವನ್ನು ಸಲ್ಲಿಸಲಾಗಿದೆ (ಸೆಪ್ಟೆಂಬರ್ 2015) ಎಂದು ತಿಳಿಸಿದೆ. ಆದರೆ, ಇದರ ಬಗ್ಗೆ ಕ್ರಮ ಇನ್ನೂ ಕೈಗೊಂಡಿಲ್ಲ.

### *3.7.2.4 ಆಯವ್ಯಯ ಪ್ರಸ್ತಾಪನೆಯನ್ನು ನಿವೇದಿಸುವುದರಲ್ಲಿ ವಿಳಂಬ*

ಆಯವ್ಯಯ ಅಂದಾಜುಗಳ ತಯಾರಿಕೆಗೆ ಸಂಬಂಧಪಟ್ಟ ಅಧಿಕಾರಿಗಳು ಆಯವ್ಯಯ ಪ್ರಸ್ತಾಪನೆಗಳನ್ನು ಕಳುಹಿಸಲು ನಿಗದಿತ ದಿನಾಂಕವನ್ನು ಆಯವ್ಯಯ ಸುತ್ತೋಲೆಗಳಲ್ಲಿ ಸೂಚಿಸಲಾಗಿರುತ್ತದೆ. 2017-18ರಿಂದ 2019-20ರಲ್ಲಿ ಸಂಬಂಧ ಪಟ್ಟ ಇಲಾಖೆಗಳು ಈ ನಿಗದಿತ ದಿನಾಂಕವನ್ನು ಅನುಸರಿಸದಿರುವುದನ್ನು ಗಮನಿಸಲಾಗಿದೆ. ಸಂಬಂಧಪಟ್ಟ ಇಲಾಖೆಗಳ ಆಯವ್ಯಯ ಪ್ರಸ್ತಾಪನೆ ಸಲ್ಲಿಕೆಗಳ ವಿವರಗಳನ್ನು ಕೋಷ್ಟಕ 3.18ರಲ್ಲಿ ನೀಡಲಾಗಿದೆ.

**ಕೋಷ್ಟಕ 3.18: ಆಯವ್ಯಯ ಪ್ರಸ್ತಾಪನಾ ನಿವೇದನೆಗಳ ವಿಳಂಬ**

| ವರ್ಷ | ಸಲ್ಲಿಸಬೇಕಾದ ನಿಗದಿತ ದಿನಾಂಕ | ಜಲಸಂಪನ್ಮೂಲ ಇಲಾಖೆ | | ಸಣ್ಣ ನೀರಾವರಿ ಇಲಾಖೆ | |
|---|---|---|---|---|---|
| | | ಸಲ್ಲಿಸಿದ ದಿನಾಂಕ | ವಿಳಂಬ (ದಿನಗಳಲ್ಲಿ) | ಸಲ್ಲಿಸಿದ ದಿನಾಂಕ | ವಿಳಂಬ (ದಿನಗಳಲ್ಲಿ) |
| 2017-18 | 30-11-2016 | 28-02-2017 | 89 | 28-02-2017 | 89 |
| 2018-19 | 30-11-2017 | 22-01-2018 | 52 | 22-01-2018 | 52 |
| 2019-20 | 30-11-2018 | 21-01-2019 | 50 | 21-01-2019 | 50 |

ಮೇಲಿನ ಕೋಷ್ಟಕದಿಂದ ಜಲಸಂಪನ್ಮೂಲ ಮತ್ತು ಸಣ್ಣ ನೀರಾವರಿ ಇಲಾಖೆಗಳಿಂದ ಆಯವ್ಯಯ ಪ್ರಸ್ತಾವನೆಗಳ ಸಲ್ಲಿಸುವಲ್ಲಿ ಗಣನೀಯ ವಿಳಂಬವಾಗಿರುವುದು ಕಂಡು ಬಂದಿದೆ. ನಿಗದಿತ ದಿನಾಂಕದ ಒಳಗೆ ಆಯವ್ಯಯ ಪ್ರಸ್ತಾಪನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸುವುದರಿಂದ ಆಯವ್ಯಯ ಅಂದಾಜುಗಳ ಸೂಕ್ತ ಪರಿಶೀಲನೆ ಸಾಧ್ಯವಾಗುತ್ತದೆ. ನಿಗದಿತ ದಿನಾಂಕಗಳಲ್ಲಿ ಪ್ರಸ್ತಾವನೆ ಸಲ್ಲಿಸದಿರುವುದು ಆಯವ್ಯಯ ಕಾರ್ಯವನ್ನು ಕುಂಠಿತಗೊಳಿಸುತ್ತದೆಯಲ್ಲದೆ ಒಂದು ಬಾಬ್ತಿಗೆ ಅಸಮರ್ಪಕ ಅವಕಾಶ ಅಥವಾ ಅವಕಾಶವನ್ನೇ ಮಾಡದಿರಬಹುದಾದ ಸಾಧ್ಯತೆಗಳಿರುತ್ತವೆ.

### *3.7.2.5 ನಿರೀಕ್ಷಿತ ಉಳಿತಾಯವನ್ನು ಅಧ್ಯರ್ಪಿಸದುರುವುದು/ಭಾಗಶಃ ಅಧ್ಯರ್ಪಣೆ*

ಕರ್ನಾಟಕ ಆಯವ್ಯಯ ಕೈಪಿಡಿ 1975ರ ಕಂಡಿಕೆ 264ರ ಪ್ರಕಾರ ಇಲಾಖೆಗಳು ಅನುದಾನ/ ವಿನಿಯೋಗಗಳಲ್ಲಿನ ನಿರೀಕ್ಷಿತ ಉಳಿತಾಯವನ್ನು ಅಥವಾ ಅದರ ಭಾಗವನ್ನು ಆರ್ಥಿಕ ಇಲಾಖೆಗೆ ಅಧ್ಯರ್ಪಿಸಬೇಕು. ಅಲ್ಲದೆ, ಉಳಿತಾಯವು ಕಂಡ ಕೂಡಲೇ ಇವುಗಳನ್ನು ವರ್ಷಾಂತ್ಯಕ್ಕೆ ಕಾಯದೇ ಅಧ್ಯರ್ಪಿಸುವುದರಿಂದ ಆರ್ಥಿಕ ಇಲಾಖೆಯು ಅವಶ್ಯವಿರುವ ಇತರೆ ಯೋಜನೆಗಳಿಗೆ ಸಮರ್ಥವಾಗಿ ಈ ಮೊತ್ತವನ್ನು ಬಳಸಲು ಸಹಕಾರಿಯಾಗುತ್ತದೆ. 2017-18ರಿಂದ 2019-20ರವರೆಗಿನ ಅಂತಿಮ ಹಂತದಲ್ಲಿ ಒಟ್ಟು ಉಳಿತಾಯವಾದ ₹5,308.19 ಕೋಟಿಗಳ ಪೈಕಿ ₹372.09 ಕೋಟಿ ಅಧ್ಯರ್ಪಿಸಿರುವುದು ಉಳಿದ

₹4,936.10 ಕೋಟಿಗಳು ಅಧ್ಯರ್ಪಣೆ ಆಗದೆ ಉಳಿಯುವಲ್ಲಿ ಪರಿಣಮಿಸಿದೆ (₹5,308.19 ಕೋಟಿಗಳ ಶೇಕಡ 93 ಭಾಗ). ಇದರ ವಿವರಗಳನ್ನು **ಕೋಷ್ಟಕ–3.19**ರಲ್ಲಿ ನೀಡಲಾಗಿದೆ.

**ಕೋಷ್ಟಕ–3.19: ನಿರೀಕ್ಷಿಸಿದ ಉಳಿತಾಯವನ್ನು ಅಧ್ಯರ್ಪಿಸದಿರುವುದು/ಭಾಗಶ: ಅಧ್ಯರ್ಪಣೆ ರಾಜಸ್ವ**

**(₹ ಕೋಟಿಗಳಲ್ಲಿ)**

| ವರ್ಷ | ಉಳಿತಾಯ | | | ಅಧ್ಯರ್ಪಿಸದ ಮೊತ್ತ | | |
|---|---|---|---|---|---|---|
| | ಪುರಸ್ಕೃತ | ಪ್ರಭೃತ | ಒಟ್ಟು | ಪುರಸ್ಕೃತ | ಪ್ರಭೃತ | ಒಟ್ಟು |
| 2017–18 | 169.89 | 19.50 | 189.39 | 10.60 | 0.00 | 10.60 |
| 2018–19 | 125.31 | 138.52 | 263.83 | 15.21 | 0.00 | 15.21 |
| 2019–20 | 290.53 | 181.00 | 471.53 | 19.05 | 0.00 | 19.05 |
| **ಒಟ್ಟು** | **585.73** | **339.02** | **924.75** | **44.86** | **0.00** | **44.86** |

**ಬಂಡವಾಳ**

**(₹ ಕೋಟಿಗಳಲ್ಲಿ)**

| ವರ್ಷ | ಉಳಿತಾಯ | | | ಅಧ್ಯರ್ಪಿಸದ ಮೊತ್ತ | | |
|---|---|---|---|---|---|---|
| | ಪುರಸ್ಕೃತ | ಪ್ರಭೃತ | ಒಟ್ಟು | ಪುರಸ್ಕೃತ | ಪ್ರಭೃತ | ಒಟ್ಟು |
| 2017–18 | 2,638.20 | *0.00* | 2638.20 | 19.27 | *0.00* | 19.27 |
| 2018–19 | 547.46 | *86.57* | 634.03 | 31.12 | *0.00* | 31.12 |
| 2019–20 | 1,110.85 | *0.36* | 1,111.21 | 276.84 | *0.00* | 276.84 |
| **ಒಟ್ಟು** | **4,296.51** | ***86.93*** | **4,383.44** | **327.23** | ***0.00*** | **327.23** |

*ಆಕರ: ಅನುದಾನ ವಹಿ*

### *3.7.2.6 ಸತತ ಉಳಿತಾಯಗಳು*

ಕರ್ನಾಟಕ ಆಯವ್ಯಯ ಕೈಪಿಡಿ ಕಂಡಿಕೆ 110ರ ಅನುಸಾರ ವಿವಿಧ ಯೋಜನೆಗಳ ರೂಪಣ/ಅನುಷ್ಠಾನ, ಸಕಾಲದಲ್ಲಿ ಅನುಷ್ಠಾನಗೊಳಿಸಲು ಏಜೆನ್ಸಿಗಳ ಸಾಂಸ್ಥಿಕ ಕ್ಷಮತೆ, ವೆಚ್ಚ ಮಾಡುವ ಸಂಸ್ಥೆಗಳಿಗೆ ವೆಚ್ಚ ಭರಿಸಲು ಇರುವ ನಿರ್ಬಂಧಗಳು ಮತ್ತು ಪ್ರಮುಖವಾಗಿ ಹಣ ಪಡೆದವರ ಬಳಿ ಬಳಕೆಯಾಗದ/ಲೆಕ್ಕಕ್ಕೆ ಸಿಗದ ಸರಕಾರದ ಸಹಾಯದ ಮೊತ್ತ ಮೊದಲಾದವುಗಳು ಮುಂದಿನ ಹಂತದಲ್ಲಿ ಅವಕಾಶದ ಅಧ್ಯರ್ಪಣೆಗಳನ್ನು ಕನಿಷ್ಠಗೊಳಿಸಲು ಹಿಂದಿನ ನಿರ್ವಹಣೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. 2017–20ರ ಅವಧಿಯ ಸತತ ಉಳಿತಾಯಗಳನ್ನು ಗಮನಿಸಿದಾಗ ಕರ್ನಾಟಕ ಆಯವ್ಯಯ ಕೈಪಿಡಿಯ ಕಂಡಿಕೆ 110ರ ಉಪಬಂಧಗಳನ್ನು ಗಮನಿಸಿಲ್ಲದಿರುವುದು ಈ ಕೆಳಗಿನ ಅಂಶಗಳಿಂದ ತಿಳಿದು ಬರುತ್ತದೆ. **ಕೋಷ್ಟಕ–3.20**ರಲ್ಲಿ ಶೀರ್ಷಿಕಾವಾರು ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ–3.20: ಸತತ ಉಳಿತಾಯಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ/ವಿವರ | 2017–18 | 2018–19 | 2019–20 |
|---|---|---|---|---|
| 1 | 2700–05–001–0–01–059 – ಇತರೆ ವೆಚ್ಚಗಳು | 9.90 | 9.90 | 9.90 |
| 2 | 2701–80–001–0–21 –014 – ಇತರೆ ಭತ್ಯೆಗಳು | 3.17 | 3.17 | 11.03 |
| 3 | 2702–02–005–0–15–180 –ಯಂತ್ರಗಳು ಮತ್ತು ಸಾಮಗ್ರಿಗಳು | 5.93 | 11.04 | 9.45 |
| 4 | 2702–03–101–0–02 –200 – ನಿರ್ವಹಣಾ ವೆಚ್ಚ | 12.28 | 9.31 | 21.04 |
| 5 | 2705–00–201–0–01–102 ಅನುದಾನ – ಆಸ್ತಿ ಸೃಜನೆ | 13.10 | 3.10 | 4.93 |
| 6 | 4701–73–800–0–01–139 – ಪ್ರಧಾನ ಕಾಮಗಾರಿಗಳು | 169.32 | 61.45 | 155.67 |
| 7 | 4701–74–800–0–01–139 – ಪ್ರಧಾನ ಕಾಮಗಾರಿಗಳು | 68.78 | 61.45 | 48.25 |
| 8 | 4701–80–800–0–10–059 – ಇತರೆ ವೆಚ್ಚಗಳು | 51.69 | 20.49 | 85.52 |
| 9 | 4701–80–800–0–13–059 – ಇತರೆ ವೆಚ್ಚಗಳು | 177.71 | 10.00 | 1.00 |
| 10 | 4705–00–800–0–01–133 – ವಿಶೇಷ ಅಭಿವೃದ್ಧಿ ಯೋಜನೆ | 80.66 | 73.53 | 47.69 |

*ಆಕರ: ಅನುಧಾನ ವಹಿ*

### *3.7.2.7 ಸಾಲ ತೀರುವಳಿಗಾಗಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಿಂದ ಕಾವೇರಿ ನೀರಾವರಿ ನಿಗಮಕ್ಕೆ ಹಣ ಬಿಡುಗಡೆ ಮಾಡಿರುವುದು*

ಇಲಾಖೆಯ ಆಯವ್ಯಯ ಅಗತ್ಯತೆಯು ನಾಲ್ಕು ಪ್ರಮುಖ ಕಂಪನಿಗಳಾದ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾವೇರಿ ನೀರಾವರಿ ನಿಗಮ ನಿಯಮಿತ, ಮತ್ತು ವಿಶ್ವೇಶ್ವರಯ್ಯ ನೀರಾವರಿ ನಿಗಮ ನಿಯಮಿತಗಳಿಗೆ ಅವಕಾಶ ಒದಗಿಸುವುದನ್ನು ಒಳಗೊಂಡಿರುತ್ತದೆ. ಈ ಕಂಪನಿಗಳು ಕ್ರಮವಾಗಿ 1994, 1998 2003 ಮತ್ತು 2016ರಲ್ಲಿ ನೀರಾವರಿ ವಲಯದ ಕಾರ್ಯಯೋಜನೆಗಳನ್ನು ಅನುಷ್ಠಾನ ಮಾಡುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟವು. ಈ ಕಂಪನಿಗಳು ರಾಜ್ಯ ಆಯವ್ಯಯದ ಹೊರಗೆ ಮಾರುಕಟ್ಟೆ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆಯುತ್ತವೆ.
ರಾಜ್ಯ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಈ ಕಂಪನಿಗಳು ರಾಜ್ಯ ಆಯವ್ಯಯದ ಹೊರಗೆ ಹಣ ಸಂಗ್ರಹ ಮಾಡಬೇಕಾಗಿದ್ದರೂ ಸಹ ಈ ಕಂಪನಿಗಳ ಸಾಲಕ್ಕೆ ಖಾತರಿ ನೀಡದಿರುವುದರಿಂದಾಗಿ ಇವು ಖಾತರಿ ನಿಂತ ರಾಜ್ಯ ಸರ್ಕಾರದ ಹೊಣೆಗಾರಿಕೆಗಳಾಗಿರುತ್ತವೆ. ರಾಜ್ಯ ಸರ್ಕಾರವು ಈ ನಿಗಮಗಳ ಆಯವ್ಯಯ ಹೊರಗಿನ ಸಾಲವನ್ನು ಬಡ್ಡಿಯೂ ಸೇರಿದಂತೆ ಸಾಮಾನ್ಯ (ರಾಜಸ್ವ ಮತ್ತು ಬಂಡವಾಳ) ಆಯವ್ಯಯದ ಮೂಲಕ ಶಾಸಕಾಂಗದ ಅನುಮೋದನೆ ಪಡೆದು ಮರುಪಾವತಿ ಮಾಡುತ್ತದೆ. ಈ ಕಂಪನಿಗಳು ಮಾಡುವ ಸಾಲಗಳನ್ನು ಆಯವ್ಯಯ ಸ್ಥೂಲ ನೋಟದಲ್ಲಿ ಸತತವಾಗಿ ಆಯವ್ಯಯದ ಹೊರಗಿನ ಸಾಲಗಳಡಿಯಲ್ಲಿ ತೋರಿಸಲಾಗುತ್ತಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತವು ತನ್ನ ಅಗತ್ಯತೆಗಳನ್ನು ಆರ್ಥಿಕ ಇಲಾಖೆಗೆ ಪ್ರತ್ಯೇಕವಾಗಿ ಸಲ್ಲಿಸಿದ್ದಾಗ್ಯೂ ಸರ್ಕಾರವು ಕಾವೇರಿ ನೀರಾವರಿ ನಿಗಮ ನಿಯಮಿತಕ್ಕೆ ಸಾಲ ತೀರುವಳಿಗಾಗಿನ ಹಣವನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ ಸಂಬಂಧಿಸಿದ 2701–80–190–0–01–240 ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡುತ್ತಿರುವುದನ್ನು 2017–20ರ ಅವಧಿಯ ಆಯವ್ಯಯ ದಾಖಲೆಗಳ ಪರಿಶೀಲನೆಯಿಂದ ಲೆಕ್ಕಪರಿಶೋದನೆಯು ಗಮನಿಸಿತು. ಇದು ಕಾವೇರಿ ನೀರಾವರಿ ನಿಗಮ ನಿಯಮಿತದ ಋಣಸೇವೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದೊಂದಿಗೆ ಒಗ್ಗೂಡಿಸಿರುವುದನ್ನು ಹಾಗೂ ಆಯವ್ಯಯ ಸಿದ್ಧಪಡಿಸುವಲ್ಲಿ ಪಾರದರ್ಶಕತೆಯ ಕೊರತೆಯನ್ನು ತೋರಿಸುತ್ತದೆ.

### *3.7.2.8 ಬಂಡವಾಳ ಶೀರ್ಷಿಕೆಗಳಡಿ ಸಿಬ್ಬಂದಿ ವೆಚ್ಚಗಳ ತಪ್ಪು ವರ್ಗೀಕರಣ*

ಸಾಮಾನ್ಯ ಆರ್ಥಿಕ ನಿಯಮಗಳು 2017ರ ನಿಯಮ 84ರನ್ವಯ, ಶಾಶ್ವತ ಮೌಲ್ಯಯುತ ಆಸ್ತಿಗಳನ್ನು ಹೊಂದುವ ಉದ್ದೇಶದಿಂದ ಸಂಸ್ಥೆಯಲ್ಲಿ ಬಳಸಲು ಮತ್ತು ಸಾಮಾನ್ಯ ವ್ಯವಹಾರದಲ್ಲಿ ಮಾರಾಟ ಮಾಡದಿರುವ ಅಥವಾ ಹಾಲಿಯಿರುವ ಆಸ್ತಿಗಳ ಉಪಯುಕ್ತತೆಯನ್ನು ಹೆಚ್ಚಿಸಲು ಭರಿಸಲಾಗುವ ಪ್ರಮುಖ ವೆಚ್ಚಗಳನ್ನು ಬಂಡವಾಳ ವೆಚ್ಚವೆಂದು ಉಲ್ಲೇಖಿಸಲಾಗುತ್ತದೆ. ತದನಂತರದ ಆಸ್ತಿಗಳ ನಿರ್ವಹಣೆ, ದುರಸ್ತಿ ಮತ್ತು ಸುಸ್ಥಿತಿಯಲ್ಲಿಡಲು ಭರಿಸಲಾಗುವ ವೆಚ್ಚ ಹಾಗೂ ಆಡಳಿತಾತ್ಮಕ ವೆಚ್ಚಗಳೂ ಸೇರಿದಂತೆ ಸಂಸ್ಥೆಯನ್ನು ನಡೆಸಲು ಅವಶ್ಯಕವಾದ ದೈನಂದಿನ ವೆಚ್ಚಗಳನ್ನು ರಾಜಸ್ವ ವೆಚ್ಚವೆಂದು ವರ್ಗೀಕರಿಸಲಾಗುತ್ತದೆ. ಬಂಡವಾಳ ಮತ್ತು ರಾಜಸ್ವ ವೆಚ್ಚಗಳನ್ನು ಲೆಕ್ಕಗಳಲ್ಲಿ ಪ್ರತ್ಯೇಕವಾಗಿ ತೋರಿಸಬೇಕು. ಆದರೆ, ವೇತನ ವೆಚ್ಚಗಳಿಗಾಗಿ ಬಂಡವಾಳ ವರ್ಗದ ಆಸ್ತಿಗಳ ಅಡಿಯಲ್ಲಿ ಅವಕಾಶಗಳನ್ನು ಮಾಡಲಾಗಿರುವುದನ್ನು ಗಮನಿಸಲಾಗಿದೆ. 2017–18 ರಿಂದ 2019–20ರವರೆಗೆ ₹16.05 ಕೋಟಿ ವೇತನ ವೆಚ್ಚಗಳನ್ನು ಬಂಡವಾಳ ಲೆಕ್ಕಗಳಡಿಯಲ್ಲಿ ಲೆಕ್ಕ ಮಾಡಿರುವುದು ಬಂಡವಾಳ ವೆಚ್ಚವನ್ನು ಹೆಚ್ಚಿಸಿದಂತಾಗಿದೆಯಲ್ಲದೆ ರಾಜಸ್ವದಡಿಯಲ್ಲಿ ವೇತನ ವೆಚ್ಚವನ್ನು ಕಡಿಮೆಗೊಳಿಸಿದಂತಾಗಿದೆ. ವಿವರಗಳನ್ನು **ಕೋಷ್ಟಕ–3.21**ರಲ್ಲಿ ನೀಡಲಾಗಿದೆ.

**ಕೋಷ್ಟಕ-3.21: ಬಂಡವಾಳ ಲೆಕ್ಕಗಳಡಿಯಲ್ಲಿ ವೇತನ ವೆಚ್ಚದ ತಪ್ಪು ವರ್ಗೀಕರಣ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | 2017-18 | 2018-19 | 2019-20 | ಒಟ್ಟು |
|---|---|---|---|---|---|
| 1 | 4700 | 4.95 | 5.82 | 0.00 | 10.77 |
| 2 | 4701 | 1.50 | 1.82 | 1.96 | 5.28 |
| ಒಟ್ಟು | | **6.45** | **7.64** | **1.96** | **16.05** |

ಆಕರ: ಅನುದಾನ ವಹಿ

ಆರ್ಥಿಕ ಇಲಾಖೆಯು ನಿರ್ಗಮನ ಸಭೆಯಲ್ಲಿ (ಫೆಬ್ರವರಿ 2021) ಅವಲೋಕನವನ್ನು ಒಪ್ಪಿಕೊಂಡು ಮುಂದೆ ಇಂತಹ ತಪ್ಪುಗಳನ್ನು ತಪ್ಪಿಸಲಾಗುವುದು ಎಂದು ತಿಳಿಸಿದೆ.

### *3.7.2.9 ವೆಚ್ಚದ ಒತ್ತಡ*

ಮೊತ್ತಗಳ ಬಿಡುಗಡೆ, ಸೆಳೆತ ಮತ್ತು ಲೆಕ್ಕ ವಿಧಾನಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ಜಾರಿ ಮಾಡಿದ 9 ಸೆಪ್ಟೆಂಬರ್ 2004ರ ಸುತ್ತೋಲೆಯ ಕಂಡಿಕೆ 6ರಂತೆ, ಆಡಳಿತ ಇಲಾಖಾ ಮುಖ್ಯಸ್ಥರು ಆರ್ಥಿಕ ವರ್ಷದ ಉಳಿದ ಭಾಗಕ್ಕೆ ಬೇಕಾದ ವೆಚ್ಚವನ್ನು ಎಚ್ಚರಿಕೆಯಿಂದ ಮತ್ತು ಅನುದಾನಗಳ ಅವಕಾಶದ ಒಳಗೆ ಯೋಜಿಸಬೇಕಾಗಿದೆ. ಮಾರ್ಚ್ ತಿಂಗಳಲ್ಲಿ ಬಿಲ್ಲುಗಳನ್ನು ಒಟ್ಟುಗೂಡಿಸುವುದು ಮತ್ತು ಆತುರದ ಪಾವತಿಯನ್ನು ತಪ್ಪಿಸಬೇಕಾಗಿದೆ. ವೆಚ್ಚಗಳಿಗೆ, ಅಗತ್ಯವಿರುವ ಸೂಕ್ತ ಮಟ್ಟದ ಅಧಿಕಾರಿಯಿಂದ ಅನುಮೋದನೆ ಪಡೆದು ಆಡಳಿತಾತ್ಮಕ ಆದೇಶಗಳನ್ನು ಮುಂಚಿತವಾಗಿಯೇ ಹೊರಡಿಸಬೇಕು. 2019-20ರ ಕೊನೆಯ ತ್ರೈಮಾಸಿಕದಲ್ಲಿ ಅದರಲ್ಲೂ ಮಾರ್ಚ್ ತಿಂಗಳಿನಲ್ಲಿ ವೆಚ್ಚದ ಒತ್ತಡವನ್ನು ಗಮನಿಸಲಾಗಿದ್ದು, ಉದ್ದೇಶ ಶೀರ್ಷಿಕಾವಾರು ವೆಚ್ಚ, ಒಟ್ಟು ವೆಚ್ಚಕ್ಕೆ ಹೋಲಿಸಿದರೆ, ಕೊನೆಯ ತ್ರೈಮಾಸಿಕದಲ್ಲಿನ ವೆಚ್ಚದ ಶತಾಂಶ ಮತ್ತು ಮಾರ್ಚ್ ತಿಂಗಳಿನಲ್ಲಿನ ವೆಚ್ಚಗಳ ಒತ್ತಡದ ವಿವರಗಳನ್ನು **ಕೋಷ್ಟಕ-3.22**ರಲ್ಲಿ ನೀಡಲಾಗಿದೆ.

**ಕೋಷ್ಟಕ-3.22: 2019-20ರಲ್ಲಿ ವೆಚ್ಚದ ಒತ್ತಡ**

(₹ ಕೋಟಿಗಳಲ್ಲಿ)

| ಕ್ರ.ಸಂ. | ಲೆಕ್ಕ ಶೀರ್ಷಿಕೆ ಮತ್ತು ವಿವರ | ಒಟ್ಟು ವೆಚ್ಚ | ಕೊನೆಯ ತ್ರೈಮಾಸಿಕದಲ್ಲಿನ ವೆಚ್ಚ | | ಮಾರ್ಚ್ ತಿಂಗಳಿನ ವೆಚ್ಚ | |
|---|---|---|---|---|---|---|
| | | | ಮೊತ್ತ | ಶೇಕಡ | ಮೊತ್ತ | ಶೇಕಡ |
| 1 | 2700-09-101-0-01-200 ನಿರ್ವಹಣೆ | 111.51 | 61.95 | 56 | 61.95 | 56 |
| 2 | 2705-00-204-0-01-101 ಸಹಾಯಾನುದಾನ - ವೇತನಗಳು | 15.40 | 6.67 | 43 | 6.67 | 43 |
| 3 | 2711-02-103-0-01-200_ ನಿರ್ವಹಣೆ | 4.89 | 4.45 | 91 | 2.00 | 41 |
| 4 | 4701-74-800-0-01-139 ಭಾರಿ ಕಾಮಗಾರಿಗಳು | 11.75 | 11.75 | 100 | 11.75 | 100 |
| 5 | 4702-00-101-0-10-423 ಗಿರಿಜನ ಉಪ ಯೋಜನೆ | 4.34 | 3.71 | 85 | 2.14 | 49 |
| 6 | 4702-00-101-1-07-139- ಭಾರಿ ಕಾಮಗಾರಿಗಳು | 208.00 | 135.69 | 65 | 88.60 | 43 |
| 7 | 4702-00-101-1-16-132 ಬಂಡವಾಳ ವೆಚ್ಚಗಳು | 28.30 | 21.22 | 75 | 21.22 | 75 |

*ಆಕರ: ಅನುದಾನ ವಹಿ*

ಮಾರ್ಚ್ ತಿಂಗಳಿನ ಒಟ್ಟು ವೆಚ್ಚದ ಶತಾಂಶವು ಶೇಕಡ 41ರಿಂದ 100ರಷ್ಟಿದ್ದು, ಕೊನೆಯ ತ್ರೈಮಾಸದಲ್ಲಿ ಇದು ಶೇಕಡ 43ರಿಂದ 100ರಷ್ಟು ಇದೆ. ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ವೆಚ್ಚಗಳನ್ನು ಒಟ್ಟುಮಾಡುವುದು ಅಸಮಂಜಸವಾಗಿದ್ದು, ಇದು ವಿವೇಚನೆಯ ಆರ್ಥಿಕ ನಿರ್ವಹಣೆಯಾಗುವುದಿಲ್ಲ.

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಫೆಬ್ರವರಿ 2021) ಇಲಾಖಾ ಮುಖ್ಯಸ್ಥರುಗಳಿಗೆ ಮೂರು ತ್ರೈಮಾಸಿಕದ ಮೊತ್ತ ಬಿಡುಗಡೆಯ ಅಧಿಕಾರವನ್ನು ಏಪ್ರಿಲ್ ತಿಂಗಳಿನಲ್ಲಿಯೇ ತಿಳಿಸಲಾಗಿದೆ ಮತ್ತು ಕಾರ್ಯತಂತ್ರಗಳನ್ನು ರೂಪಿಸಿ ಅವುಗಳ ಅನುಮೋದನೆ ಪಡೆಯಲು ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ ಎಂದು ತಿಳಿಸಿದೆ.

## 3.8 ನಿರ್ಣಯಗಳು

- ಒಟ್ಟು ಅವಕಾಶದ ಶೇಕಡ 11 ರಷ್ಟು ಬಳಕೆಯಾಗದೆ ಉಳಿದಿರುವುದರಿಂದ ರಾಜ್ಯ ಸರ್ಕಾರವು ಕೈಗೊಳ್ಳುವ ಆಯವ್ಯಯ ಪ್ರಕ್ರಿಯೆಯು ಹೆಚ್ಚು ವಾಸ್ತವಿಕವಾಗಿರಬೇಕು. ಪ್ರಸಕ್ತ ವರ್ಷದ ಒಟ್ಟು ವೆಚ್ಚವು ಮೂಲ ಅವಕಾಶಕ್ಕಿಂತ ಶೇಕಡ ಮೂರರಷ್ಟು ಕಡಿಮೆಯಿದೆ ಮತ್ತು ಪೂರಕ ಅವಕಾಶವು ಮೂಲ ಅವಕಾಶದ ಶೇಕಡ 10ರಷ್ಟು ಇದೆ. ಅಲ್ಲದೆ, ಶೇಕಡ 51ರಷ್ಟು ಬಳಕೆಯಾಗದ ಅವಕಾಶವನ್ನು ಅಧ್ಯರ್ಪಿಸಿರಲಿಲ್ಲ.
- ಕರ್ನಾಟಕ ಆಯವ್ಯಯ **ಕೈಪಿಡಿಯ** ಉಪಬಂಧ 264ರಲ್ಲಿ ನಿರ್ದಿಷ್ಟವಾಗಿ ಉಳಿತಾಯಕ್ಕೆ ವಿವರಣೆ ನೀಡಲು ತಿಳಿಸಿದ್ದರೂ ಸಹ ಇಲಾಖೆಗಳು ಶೇಕಡ 46ರಷ್ಟು ಉಳಿತಾಯಗಳಿಗೆ ವಿವರಣೆ ನೀಡಿಲ್ಲ.
- ರಾಜಸ್ವ ಮತ್ತು **ಬಂಡವಾಳ** ವರ್ಗಗಳ ನಡುವೆ ತಪ್ಪು ವರ್ಗೀಕರಣವಾಗಿದ್ದು, ಇದು ವಿತ್ತೀಯ ಸೂಚಕಗಳ ಮೇಲೆ ಪರಿಣಾಮ ಬೀರುತ್ತದೆ.
- ಮಹಿಳಾ ಉದ್ದೇಶಿತ ಆಯವ್ಯಯದ ದಾಖಲೆಗಳು ಕೇವಲ ಲಿಂಗಾಧಾರಿತ ಅಂಶಗಳನ್ನೊಳಗೊಂಡ ನಿರ್ದಿಷ್ಟ ಯೋಜನೆಗಳ ಹಂಚಿಕೆಗಳ ಪ್ರಮಾಣವನ್ನು ಒಳಗೊಂಡಿತ್ತು ಮತ್ತು ಇದನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಿಲ್ಲ. ಹಿಂದಿನ ರಾಜ್ಯ ಹಣಕಾಸು ವ್ಯವಹಾರಗಳ ವರದಿಯಲ್ಲಿ ತಿಳಿಸಿದ್ದಾಗ್ಯೂ, ವಿಭಜಿತ ಲಿಂಗಾಧಾರಿತ ಮಾಹಿತಿ ಮತ್ತು ಮಹಿಳಾ **ಉದ್ದೇಶಿತ** ಆಯವ್ಯಯದ ಮೇಲ್ವಿಚಾರಣೆಗಳ ಕೊರತೆ ಮುಂದುವರೆದಿತ್ತು.
- ಪೂರ್ವಭಾವಿ ಚಟುವಟಿಕೆಗಳು ಅಪೂರ್ಣವಾದ್ದರಿಂದ, ಸರ್ಕಾರದ ಪ್ರಸಕ್ತ ವರ್ಷದ ಪ್ರಮುಖ ಕಾರ್ಯನೀತಿ ಪ್ರಕ್ರಿಯೆಗಳನ್ನು ಈಡೇರಿಸಲಾಗಿಲ್ಲ.
- 2012–13ರಿಂದ 2017–18ರವರೆಗಿನ ಅಧಿಕ ವೆಚ್ಚವನ್ನು ಸಂವಿಧಾನದ ಉಪಬಂಧ 205ರ ಪ್ರಕಾರ ಸಕ್ರಮಗೊಳಿಸಬೇಕಾಗಿದೆ.
- ಪೂರಕ ಅನುದಾನ/ವಿನಿಯೋಗಗಳು ಮತ್ತು ಪುನರ್ವಿನಿಯೋಗಗಳನ್ನು ಸೂಕ್ತ ಸಮರ್ಥನೆ ಇಲ್ಲದೆ ತೆಗೆದುಕೊಳ್ಳಲಾಗಿದ್ದರಿಂದ ಬೃಹತ್ ಪ್ರಮಾಣದ ಮೊತ್ತ ಬಳಕೆಯಾಗದೆ ಉಳಿತಾಯವಾಗಿದೆ.

## 3.9 ಶಿಫಾರಸುಗಳು

- ಅವಕಾಶಗಳು ಬಳಕೆಯಾಗದೆ ಉಳಿಯುವ ಪ್ರಕರಣಗಳನ್ನು ತಪ್ಪಿಸಲು ಆಯವ್ಯಯ ಅಂದಾಜಿನ ನಿಯಂತ್ರಣವನ್ನು ಎಲ್ಲಾ ಇಲಾಖೆಗಳಲ್ಲೂ ಬಲಪಡಿಸಬೇಕು.
- ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಮಂಡಿಸುವ ಮೂಲಕ, 2012–13ನೇ ವರ್ಷದಿಂದ ಅಧಿಕ ವೆಚ್ಚವನ್ನು ಸಕ್ರಮೀಕರಣಗೊಳಿಸಲು ಹೆಚ್ಚಿನ ಆದ್ಯತೆ ನೀಡಬೇಕು.
- ಅನವಶ್ಯಕ/ಅಧಿಕ ಪೂರಕ ಅವಕಾಶಗಳನ್ನು ತಪ್ಪಿಸಬೇಕು.
- ಕರ್ನಾಟಕ ಆರ್ಥಿಕ ಸಂಹಿತೆ ಅನುರೂಪತೆಯ ಉಪಬಂಧಗಳಿಗನುಸಾರ ಪುನರ್ವಿನಿಯೋಗ ಆದೇಶಗಳನ್ನು ಹೊರಡಿಸಬೇಕು.

# ಅಧ್ಯಾಯ–4

# ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು

# ಅಧ್ಯಾಯ 4 – ಲೆಕ್ಕಗಳ ಗುಣಮಟ್ಟ ಮತ್ತು ಆರ್ಥಿಕ ನಿರೂಪಣಾ ಪದ್ಧತಿಗಳು

ಹಣಕಾಸು ನಿಯಮಗಳ ಅನುಸರಣೆಯನ್ನು ಆಧರಿಸಿದ ಸ್ವಸ್ಥ ಆಂತರಿಕ ಆರ್ಥಿಕ ನಿರೂಪಣಾ ವ್ಯವಸ್ಥೆಯು ಉತ್ತಮ ಆಡಳಿತದ ಲಕ್ಷಣಗಳಲ್ಲಿ ಒಂದಾಗಿದೆ. ಈ ಅಧ್ಯಾಯವು ಪ್ರಸಕ್ತ ಸಾಲಿನಲ್ಲಿ ವಿವಿಧ ಹಣಕಾಸು ನಿಯಮಗಳ, ಕಾರ್ಯ ವಿಧಾನಗಳ ಮತ್ತು ನಿರ್ದೇಶನಗಳ ಅನುಸರಣೆಯ ಸ್ಥಿತಿಯನ್ನು ಮತ್ತು ಸ್ಥೂಲ ನೋಟವನ್ನು ನೀಡುತ್ತದೆ.

## ಎ. ಲೆಕ್ಕಗಳ ಪರಿಪೂರ್ಣತೆಯ ಮೇಲಿನ ಅವಲೋಕನಗಳು

### 4.1 ರಾಜ್ಯದ ಸಂಚಿತ ನಿಧಿ ಅಥವಾ ಸಾರ್ವಜನಿಕ ಲೆಕ್ಕದಿಂದ ಹೊರಗೆ ಉಳಿದಿರುವ ಮೊತ್ತ

- **ಸರ್ಕಾರದಿಂದ ಪಡೆದ ಅನುದಾನಗಳ ಮೇಲೆ ಗಳಿಸಿದ ಬಡ್ಡಿಯನ್ನು ಜಮೆ ಮಾಡದಿರುವುದು**

ಸರ್ಕಾರವು ಕಂಪನಿಗಳಿಗೆ, ನಿಗಮಗಳಿಗೆ, ಸ್ವಾಯುತ್ತ ಸಂಸ್ಥೆಗಳಿಗೆ ( ಪ್ರಾದೇಶಿಕ, ಸಂಘ ಹಾಗೂ ಶಾಸನಬದ್ಧ ಮಂಡಳಿಗಳನ್ನೊಳಗೊಂಡು) ಸಂಬಂಧಿಸಿದ ಸಂಸ್ಥೆಗಳ ಶೇರು ಬಂಡವಾಳ, ಅನುದಾನ, ಸಹಾಯಾನುದಾನ, ಖರ್ಚುಗಳ ಮರುಪಾವತಿ ಹಾಗೂ ಯೋಜನೆಗಳಿಗಾಗಿ ಬಿಡುಗಡೆ ಮಾಡುವ ಮೊತ್ತ, ಮೊದಲಾದವುಗಳ ರೂಪದಲ್ಲಿ ಹಣ ಬಿಡುಗಡೆ ಮಾಡುತ್ತದೆ.

ಆರ್ಥಿಕ ಇಲಾಖೆಯು, ಆದೇಶ ಸಂಖ್ಯೆ : ಆಇ 53/ಬೆಂ/2003, ಬೆಂಗಳೂರು ದಿನಾಂಕ 3 ಜುಲೈ 2003ರಲ್ಲಿ ಎಲ್ಲಾ ನಿಗಮಗಳು, ಸ್ವಾಯತ್ತ ಸಂಸ್ಥೆಗಳಿಗೆ ನಿರ್ದೇಶನ ನೀಡಿ, ಸರ್ಕಾರದಿಂದ ಬಿಡುಗಡೆಯಾದ ಮೊತ್ತಗಳ ಮೇಲೆ ಗಳಿಸಿದ ಬಡ್ಡಿಯನ್ನು ಸರ್ಕಾರದ ಲೆಕ್ಕ ಶೀರ್ಷಿಕೆ '0049 – ಬಡ್ಡಿ ಸ್ವೀಕೃತಿಗಳು' ಅಡಿಯಲ್ಲಿ ಜಮೆ ಮಾಡುವಂತೆ ಆದೇಶ ನೀಡಿತು. ಅಲ್ಲದೆ, ಹೀಗೆ ಗಳಿಸಿದ ಬಡ್ಡಿ ಮೊತ್ತವನ್ನು ಸಂಸ್ಥೆಗಳು ಬೇರೆ ಖರ್ಚುಗಳಿಗೆ ಉಪಯೋಗಿಸುವಂತಿಲ್ಲವೆಂದೂ ಒತ್ತಿ ಹೇಳಿದೆ. ಈ ವಿಷಯವನ್ನು ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಆಇ 24/ಟಿಎಆರ್ 2019 ದಿನಾಂಕ 27 ಆಗಸ್ಟ್ 2019ರಲ್ಲಿ ಪುರುಚ್ಚರಿಸಲಾಗಿದೆ.

ಹತ್ತು ಕಂಪನಿಗಳು/ನಿಗಮಗಳು, ಮೇಲಿನ ಸೂಚನೆಗಳನ್ನು ಉಲ್ಲಂಘಿಸಿ ₹803.99 ಕೋಟಿ ಬಡ್ಡಿ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಿರುವುದಿಲ್ಲ. 2016–17ರಿಂದ 2019–20ರವರೆಗೆ ಗಳಿಸಿದ ಬಡ್ಡಿಯ ವಿವರಗಳನ್ನು **ಕೋಷ್ಟಕ 4.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 4.1. ಬಡ್ಡಿ ಹಣದ ವಿವರ ಮತ್ತು ಅದರ ವ್ಯವಹಾರ**

(₹ ಕೋಟಿಗಳಲ್ಲಿ)

| ಸಂಸ್ಥೆಗಳ ಹೆಸರು | ಗಳಿಸಿದ ಬಡ್ಡಿ | | | | ಬಡ್ಡಿ ಹಣದ ವ್ಯವಹಾರ |
|---|---|---|---|---|---|
| | 2016–17 | 2017–18 | 2018–19 | 2019–20 | |
| ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | – | 23.50 | 22.28 | 18.870 | 2019–20ರಲ್ಲಿ, 2016–17 ರಿಂದ 2019–20ರ ವರೆಗೆ ಗಳಿಸಿದ ಬಡ್ಡಿ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಬೇಕಾದ ಹಣವೆಂದು ನಿಗಮದ ಲೆಕ್ಕಗಳಲ್ಲಿ ತೋರಿಸಲಾಗಿದೆಯಾದರೂ, ಸರ್ಕಾರಕ್ಕೆ ಪಾವತಿಸಿರುವುದಿಲ್ಲ |
| ತುಮಕೂರು ಯಂತ್ರ ಉಪಕರಣ ಪಾರ್ಕ್ | | 1.54 | 4.50 | 3.090 | ಲೆಕ್ಕ ಪುಸ್ತಕಗಳಲ್ಲಿ ಬಡ್ಡಿ ಮೊತ್ತವನ್ನು ಜವಾಬ್ದಾರಿಯೆಂದು ತೋರಿಸಲಾಗಿದೆ. |
| ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ | 0.38 | 16.30 | 23.66 | 38.410 | |

| ಸಂಸ್ಥೆಗಳ ಹೆಸರು | ಗಳಿಸಿದ ಬಡ್ಡಿ | | | | ಬಡ್ಡಿ ಹಣದ ವ್ಯವಹಾರ |
|---|---|---|---|---|---|
| | 2016–17 | 2017–18 | 2018–19 | 2019–20 | |
| ಕರ್ನಾಟಕ ನವೀಕರಣ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ | 2.75 | 0 | 0 | 0.017 | ಸಂಸ್ಥೆಗಳ ಲೆಕ್ಕ ಪುಸ್ತಕಗಳಲ್ಲಿ ಬಡ್ಡಿ ಹಣವನ್ನು ಆದಾಯವೆಂದು ಪರಿಗಣಿಸಲಾಗಿದೆ. |
| ಡಾ. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | 4.39 | 16.24 | 6.00 | 0.160 | |
| ಕರ್ನಾಟಕ ನೀರಾವರಿ ನಿಗಮ ನಿಯಮಿತ | 15.65 | 34.45 | 42.22 | 48.680 | |
| ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ | 0.48 | 3.57 | 3.74 | 7.440 | |
| ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ | 58.32 | 80.79 | 148.51 | 133.880 | |
| ಕರ್ನಾಟಕ ಮೀನು ಅಭಿವೃದ್ಧಿ ನಿಗಮ ನಿಯಮಿತ | 3.28 | 3.50 | 1.88 | 1.210 | |
| ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ | 7.73 | 7.77 | 10.42 | 8.380 | ನಿಗಮವು ಗಳಿಸಿದ ಬಡ್ಡಿ ಹಣದಲ್ಲಿ (₹34.30 ಕೋಟಿ) ₹15.92 ಕೋಟಿಗಳನ್ನು ವೇತನ ಮತ್ತು ಆಡಳಿತ ವೆಚ್ಚಗಳಿಗೆ ಉಪಯೋಗಿಸಿದೆ. |
| ಒಟ್ಟು | **92.98** | **187.66** | **263.21** | **260.14** | **803.99** |

ಮುಂದುವರೆದು, ಲೆಕ್ಕಪರಿಶೋಧನೆಯಲ್ಲಿ, ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.

- ಕರ್ನಾಟಕ ನೀರಾವರಿ ನಿಗಮವು, ಸರ್ಕಾರದ ಅನುದಾನದ ಮೇಲೆ ಗಳಿಸಿದ ಬಡ್ಡಿಯನ್ನು ವೇತನ ವೆಚ್ಚಗಳು, ಆಡಳಿತ ವೆಚ್ಚಗಳು, ಭೂ ಸ್ವಾಧೀನ ವೆಚ್ಚಗಳಿಗೆ ಸಂಬಂಧಿಸಿದ ಕೋರ್ಟ್ ಬಾಬ್ತುಗಳು ಮುಂತಾದ ವೆಚ್ಚಗಳಿಗೆ ಬಳಸಿಕೊಳ್ಳಲು ಆರ್ಥಿಕ ಇಲಾಖೆಯ ಅನುಮತಿ ಕೇಳಿತ್ತಾದರೂ(ಡಿಸೆಂಬರ್ 2019), ಆರ್ಥಿಕ ಇಲಾಖೆಯು (29 ಜೂನ್ 2020) ಇದನ್ನು ತಿರಸ್ಕರಿಸಿ, ಬಡ್ಡಿ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಬೇಕೆಂದು ಆದೇಶ ನೀಡಿತು. ಆದಾಗ್ಯೂ, ಬಡ್ಡಿ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಲಾಗಿಲ್ಲ.

- ಕರ್ನಾಟಕ ಮೀನು ಅಭಿವೃದ್ಧಿ ನಿಗಮ ನಿಯಮಿತವು ತನ್ನ ಉತ್ತರದಲ್ಲಿ (ಜನವರಿ 2021) ಸರ್ಕಾರದಿಂದ ಅನುದಾನ ನಿರ್ವಹಣೆಗೆ ಯಾವುದೇ ಹಣ/ಶುಲ್ಕ ಬರದ ಕಾರಣ, ನಿಗಮವು ಬಡ್ಡಿ ಹಣವನ್ನು ಆಡಳಿತಾತ್ಮಕ ವೆಚ್ಚ, ಮೇಲ್ವಿಚಾರಣಾ ವೆಚ್ಚ, ದಾಖಲೆಗಳನ್ನು ನಿರ್ವಹಿಸುವ ವೆಚ್ಚ, ಟೆಂಡರ್ ವೆಚ್ಚ ಮುಂತಾದ ವೆಚ್ಚಗಳಿಗೆ ಬಳಸಿಕೊಳ್ಳಲಾಗಿದೆ ಎಂದು ಹೇಳಿದೆ. ಮುಂದುವರೆದು, ಅನುದಾನ ಬಿಡುಗಡೆ ಆದೇಶದಲ್ಲಿ ಅನುದಾನದ ಮೇಲಿನ ಬಡ್ಡಿ ಮೊತ್ತದ ಬಳಕೆಯ ಬಗ್ಗೆ ಸೂಚನೆಗಳಿಲ್ಲದ ಕಾರಣ, ನಿಗಮವು ಈ ಹಣವನ್ನು ನಿಗಮದ ಆದಾಯವೆಂದು ತನ್ನ ಪುಸ್ತಕಗಳಲ್ಲಿ ಪರಿಗಣಿಸಿದೆ ಎಂದೂ ತಿಳಿಸಿದೆ. ಆದರೆ 3 ಜುಲೈ 2003 ಮತ್ತು 27 ಆಗಸ್ಟ್ 2019ರ ಸರ್ಕಾರಿ ಆದೇಶಗಳನ್ವಯ, ಸರ್ಕಾರದ ಅನುದಾನಗಳನ್ನು ಬ್ಯಾಂಕ್ ಗಳಲ್ಲಿರಿಸಿ ಅದರಿಂದ ಗಳಿಸಿದ ಬಡ್ಡಿ ಮೊತ್ತವನ್ನು ಸರ್ಕಾರದ ಲೆಕ್ಕಗಳಿಗೆ ಜಮೆ ಮಾಡುವ ಅಗತ್ಯತೆಯಿರುವುದರಿಂದ, ನಿಗಮವು ಈ ಆದೇಶಗಳನ್ನು ಉಲ್ಲಂಘಿಸಿದಂತಾಗಿದೆ.

- ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತವು ಗಳಿಸಿದ ಬಡ್ಡಿಯನ್ನು ಸಂಬಳ ನೀಡಲು ಮತ್ತು ಕಚೇರಿ ನಿರ್ಮಹಣೆಗಾಗಿ ಬಳಸಿಕೊಂಡಿದ್ದು, ನಿಗಮವು ಈ ವೆಚ್ಚಗಳನ್ನು ಭರಿಸಲು ತನ್ನದೇ ಆದ ಆದಾಯವನ್ನು ಹೊಂದಿಲ್ಲ ಮತ್ತು ಸರ್ಕಾರದ ಅನುದಾನವನ್ನೇ ಅವಲಂಬಿಸಿದೆ ಎಂದು ಹೇಳಿದೆ(ಅಕ್ಟೋಬರ್ 2020).

ಸರ್ಕಾರದ ಅನುದಾನಗಳ ಮೇಲೆ ಕಂಪೆನಿಗಳು/ನಿಗಮಗಳು ಗಳಿಸಿದ ಬಡ್ಡಿಯನ್ನು ಸರಕಾರಕ್ಕೆ ಸಂದಾಯ ಮಾಡಲು ಆ ಮೂಲಕ ರಾಜ್ಯದ ತೆರಿಗೆಯೇತರ ಆದಾಯವನ್ನು ಹೆಚ್ಚಿಸಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳಬೇಕು.

ಇದನ್ನು ಒಪ್ಪಿಕೊಂಡ ಆರ್ಥಿಕ ಇಲಾಖೆಯು ನಿರ್ಗಮನ ಸಭೆಯಲ್ಲಿ (ಫೆಬ್ರವರಿ 2021) ಮುಂದಿನ ಕ್ರಮ ತೆಗೆದುಕೊಳ್ಳಲು ಸಾರ್ವಜನಿಕ ವಲಯದ ಉದ್ದಿಮೆಗಳ ವಿವರಗಳನ್ನು ತಿಳಿಸಬೇಕೆಂದು ಲೆಕ್ಕಪರಿಶೋಧನೆಯನ್ನು ವಿನಂತಿಸಿಕೊಂಡಿದೆ.

## ಬಿ. ಪಾರದರ್ಶಕತೆಗೆ ಸಂಬಂಧಿಸಿದ ಅವಲೋಕನಗಳು

### 4.2 ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಲ್ಲಿ ವಿಳಂಬ

ಕರ್ನಾಟಕ ಸರ್ಕಾರದ ಆರ್ಥಿಕ ಸಂಹಿತೆ, 1958ರ ನಿಯಮ 161(5) ರ ಪ್ರಕಾರ ಇಲಾಖಾ ಅಧಿಕಾರಿಗಳು ನೀಡಿದ ಅನುದಾನಗಳಿಗೆ ಅನುದಾನಿತ ಸಂಸ್ಥೆಗಳಿಂದ ಬಳಕೆ ಪ್ರಮಾಣಪತ್ರಗಳನ್ನು ಪಡೆಯಬೇಕು ಹಾಗೂ ಪರಿಶೀಲನೆಯ ನಂತರ ಅವುಗಳನ್ನು ಮಂಜೂರಾದ ದಿನಾಂಕದಿಂದ 18 ತಿಂಗಳುಗಳೊಳಗೆ (ಬೇರೆ ರೀತಿ ನಿಗದಿಪಡಿಸಿದ್ದರ ಹೊರತಾಗಿ) ಮಹಾಲೇಖಾಪಾಲರಿಗೆ (ಲೆ ಮತ್ತು ಹ) ಕಳುಹಿಸಬೇಕು. ಆದಾಗ್ಯೂ, 2019–20ರ ಅಂತ್ಯಕ್ಕೆ ₹182.49 ಕೋಟಿಗಳ ಬಳಕೆ ಪ್ರಮಾಣ ಪತ್ರಗಳು ಬಾಕಿ ಇದ್ದು **ಕೋಷ್ಟಕ 4.2**ರಲ್ಲಿ ವಿವರಗಳನ್ನು ನೀಡಲಾಗಿದೆ. **ಕೋಷ್ಟಕ 4.3**ರಲ್ಲಿ ವರ್ಷವಾರು ಬಾಕಿ ಇರುವ ಪ್ರಮಾಣ ಪತ್ರಗಳ ವಿಂಗಡಣೆಯನ್ನು ನೀಡಲಾಗಿದೆ.

**ಕೋಷ್ಟಕ 4.2 : 2019–20ರಲ್ಲಿ ಬಾಕಿ ಇರುವ ಪ್ರಮಾಣ ಪತ್ರಗಳು**

(₹ ಕೋಟಿಗಳಲ್ಲಿ)

| ವರ್ಷ | ಆರಂಭಿಕ ಶಿಲ್ಕು | | ಸ್ವೀಕೃತಿಗಳು | | ತೀರುವಳಿಗಳು | | ಸಲ್ಲಿಸಬೇಕಾದ ಪ್ರಮಾಣ ಪತ್ರಗಳು | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| **2019–20** | 110 | 764.81 | 79 | 737.13 | 138 | 1.319.45 | 51 | 182.49 |

ಆಕರ: ಪ್ರಧಾನ ಮಹಾಲೇಖಾಪಾಲರು(ಲೆ.ಮತ್ತು ಹ.)

**ಕೋಷ್ಟಕ 4.3 : ವರ್ಷವಾರು ಬಾಕಿ ಇರುವ ಬಳಕೆ ಪ್ರಮಾಣ ಪತ್ರಗಳ ವಿಂಗಡಣೆ**

**(₹ ಕೋಟಿಗಳಲ್ಲಿ)**

| ವರ್ಷ | ಬಳಕೆ ಪ್ರಮಾಣ ಪತ್ರಗಳ ಸಂಖ್ಯೆ | ಮೊತ್ತ |
|---|---|---|
| **2002–03** | 3 | 1.41 |
| **2007–08** | 3 | 0.30 |
| **2010–11** | 3 | 1.00 |
| **2011–12** | 3 | 1.14 |
| **2012–13** | 3 | 1.50 |
| **2013–14** | 4 | 25.86 |
| **2014–15** | 1 | 3.75 |
| **2015–16** | 2 | 1.85 |
| **2016–17** | 8 | 30.38 |
| **2017–18** | 2 | 3.51 |
| **2018–19** | 19 | 111.79 |
| ಒಟ್ಟು | **51** | **182.49** |

*ಆಕರ: ಪ್ರಧಾನ ಮಹಾಲೇಖಾಪಾಲರು (ಲೆ.ಮತ್ತು ಹ.)*

ಮುಂದುವರೆದು, ನಿಯಮ 161(5)ರ ಅನುಸಾರ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕಾದ ನಮೂನೆಯಲ್ಲಿ ಪ್ರಸಕ್ತ ವರ್ಷದಲ್ಲಿ ಬಳಕೆಯಾಗದ ಅನುದಾನಗಳನ್ನು ಅಧ್ಯರ್ಪಿಸಬೇಕು ಅಥವಾ ಈ ಮೊತ್ತವನ್ನು ನಂತರದ ವರ್ಷಗಳಲ್ಲಿ ನೀಡುವ ಅನುದಾನಗಳ ಮೊತ್ತದಲ್ಲಿ ಹೊಂದಾಣಿಕೆ ಮಾಡಬೇಕೆಂದು ನಿಖರವಾಗಿ ಸೂಚಿಸಲಾಗಿದೆ. ಮೇಲೆ ವಿವರಿಸಿದಂತೆ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಲಾಗಿಲ್ಲದಿರುವ ಕಾರಣ, ಪೂರ್ಣ ಅನುದಾನಗಳ ಬಳಕೆಯನ್ನು ಖಚಿತಪಡಿಸಿಕೊಳ್ಳಲಾಗಿಲ್ಲ. ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದಿದ್ದಾಗ್ಯೂ ಸಂಸ್ಥೆಗಳಿಗೆ ಅನುದಾನಗಳನ್ನು ಬಿಡುಗಡೆ ಮಾಡಲಾಗಿದ್ದು, ಇದು ಅನುದಾನಗಳ ಮಂಜೂರಾತಿಗಳಲ್ಲಿ ನಿಯಂತ್ರಣವಿಲ್ಲದಿರುವುದನ್ನು ಸೂಚಿಸುತ್ತದೆ. ಆದ್ದರಿಂದ, ಸರ್ಕಾರವು ಒಂದು ವರ್ಷಕ್ಕಿಂತ ಹೆಚ್ಚು ಕಾಲದಿಂದ ಬಾಕಿಯಿರುವ ಬಳಕೆ ಪ್ರಮಾಣಪತ್ರಗಳ ಪ್ರಕರಣಗಳನ್ನು ಪರಿಶೀಲಿಸಿ ನಂತರ ಅನುದಾನಗಳನ್ನು ಬಿಡುಗಡೆ ಮಾಡಬೇಕು.

**ನಕ್ಷೆ 4.1: ಐದು ಪ್ರಮುಖ ಇಲಾಖೆಗಳಲ್ಲಿ 2018–19ರಲ್ಲಿ ನೀಡಿದ ಅನುದಾನಗಳ ಬಳಕೆ ಪ್ರಮಾಣಪತ್ರಗಳು ಬಾಕಿ ಉಳಿದಿರುವುದು**

**(₹ ಕೋಟಿಗಳಲ್ಲಿ)**




ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸದಿರುವ ಪ್ರಕರಣಗಳಲ್ಲಿ ಹೆಚ್ಚಿನ ಪಾಲು ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆ (ಶೇಕಡ 64) ಮತ್ತು ನಗರಾಭಿವೃದ್ಧಿ ಇಲಾಖೆಗೆ (ಶೇಕಡ 31) ಸಂಬಂಧಿಸಿವೆ. ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸುವಲ್ಲಿನ ಬಾಕಿಯು ಯಾವ ಉದ್ದೇಶಕ್ಕಾಗಿ ಅನುದಾನಗಳು ಬಿಡುಗಡೆಯಾಗಿವೆಯೋ ಅದರ ಬಳಕೆಯ ಬಗ್ಗೆ ಆಶ್ವಾಸನೆಯ ಅನುಪಸ್ಥಿತಿಯನ್ನು ಸೂಚಿಸುತ್ತದಲ್ಲದೆ ಇಲಾಖೆಗಳಿಂದ ಅನುದಾನಿತರಿಗೆ ಬಿಡುಗಡೆಯಾದ ಅನುದಾನಗಳ ಬಳಕೆಯ ಮೇಲ್ವಿಚಾರಣೆಯಲ್ಲಿನ ಕೊರತೆಯನ್ನೂ ಸಹ ಸೂಚಿಸುತ್ತದೆ. ಪ್ರಧಾನ ಶೀರ್ಷಿಕೆ ಮತ್ತು ಇಲಾಖಾವಾರು ಬಾಕಿಯಿರುವ ಬಳಕೆ ಪ್ರಮಾಣ ಪತ್ರಗಳ ವಿವರಗಳನ್ನು **ಅನುಬಂಧ 4.1**ರಲ್ಲಿ ನೀಡಲಾಗಿದೆ.

ಇದಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು ಬಾಕಿ ಇರುವ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಲಾಗುವುದು ಎಂದು ಹೇಳಿದೆ (ಫೆಬ್ರವರಿ 2021).

## 4.3 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು

ಕರ್ನಾಟಕ ಸರ್ಕಾರದ ಸಾದಿಲ್ವಾರು ವೆಚ್ಚ ಕೈಪಿಡಿ 1958ರ ನಿಯಮ 36ರಲ್ಲಿ ವಿಧಿಸಿರುವಂತೆ, ನಿಯಂತ್ರಣಾಧಿಕಾರಿಗಳು ಮತ್ತು ವಿತರಣಾಧಿಕಾರಿಗಳು ಸೇವಾ ಲೆಕ್ಕಶೀರ್ಷಿಕೆಗಳಿಗೆ ಖರ್ಚು ಹಾಕಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣವನ್ನು ಸೆಳೆಯಬಹುದಾಗಿದ್ದು, ಅದಕ್ಕೆ ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳನ್ನು (ಅಂತಿಮ ವೆಚ್ಚಕ್ಕೆ ಸಮರ್ಥನೆಯಾಗಿ ವೋಚರುಗಳು) ಸಂಕ್ಷಿಪ್ತ ಸಾದಿಲ್ವಾರು ಬಿಲ್ಲು ಸೆಳೆದ ತಿಂಗಳಿನ ಮುಂದಿನ ತಿಂಗಳ 15ನೇ ದಿನಾಂಕದೊಳಗೆ ಖಜಾನೆಗಳ ಮೂಲಕ ಪ್ರಧಾನ ಮಹಾಲೇಖಾಪಾಲರು (ಲೆ ಮತ್ತು ಹ) ಅವರಿಗೆ ಕಳುಹಿಸಬೇಕಾಗಿದೆ. ತಕ್ಷಣದ ವಿತರಣೆಗೆ ಅಗತ್ಯವಿದ್ದ ಹೊರತು ಖಜಾನೆಯಿಂದ ಹಣವನ್ನು ಸೆಳೆಯದಿರುವುದನ್ನು ಸಹ ನಿಯಂತ್ರಣಾಧಿಕಾರಿಗಳು ಖಚಿತಪಡಿಸಿ ಕೊಳ್ಳಬೇಕಾಗಿದೆ. ಮಾರ್ಚ್ 2020ರ ಅಂತ್ಯಕ್ಕೆ ₹96.68 ಕೋಟಿಗಳ ಮೊತ್ತದ 1,959 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು, **ಕೋಷ್ಟಕ 4.4**ರಲ್ಲಿ ವಿವರಿಸಿರುವಂತೆ, ಸವಿವರ ಬಿಲ್ಲುಗಳು ಸಲ್ಲಿಕೆಯಾಗದೆ ಬಾಕಿ ಉಳಿದಿವೆ.

**ಕೋಷ್ಟಕ 4.4: ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಿಗೆ ಸಲ್ಲಿಸಬೇಕಾದ ಸವಿವರ ಸಾದಿಲ್ವಾರು ಬಿಲ್ಲುಗಳ ಪ್ರಗತಿ**

**(₹ ಕೋಟಿಗಳಲ್ಲಿ)**

| ವರ್ಷ | ಆರಂಭಿಕ ಶಿಲ್ಕು | | ಸ್ವೀಕೃತಿಗಳು | | ತೀರುವಳಿಗಳು | | ಅಂತಿಮ ಶಿಲ್ಕು | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 2017-18ರ ವರೆಗೆ | 3,272 | 84.81 | 3,094 | 90.03 | 3,090 | 90.84 | 3,276 | 84.00 |
| 2018-19 | 3,276 | 84.00 | 2,286 | 188.64 | 3,467 | 179.37 | 2,095 | 93.27 |
| 2019-20* | 2,095 | 93.27 | 2,109 | 182.90 | 2,245 | 179.49 | 1,959 | 96.68 |

*ಆಕರ: ಹಣಕಾಸು ಲೆಕ್ಕಗಳು*

**ಮಾರ್ಚ್ 2020ರ ತಿಂಗಳಿನ ಬಿಲ್ಲುಗಳನ್ನು ಹೊರತುಪಡಿಸಿ*

**ನಕ್ಷೆ 4.2: ಪ್ರಮುಖ ಇಲಾಖೆಗಳಲ್ಲಿ ಬಾಕಿಯಿರುವ ಸವಿವರ ಸಾದಿಲ್ವಾರು ಬಿಲ್ಲುಗಳು**

**(₹ ಕೋಟಿಗಳಲ್ಲಿ)**




*ಆಕರ: ಪ್ರಧಾನ ಮಹಾಲೇಖಾಪಾಲರು (ಲೆ ಮತ್ತು ಹ)*

**ನಕ್ಷೆ 4.2**ರಲ್ಲಿ ತೋರಿಸಿರುವಂತೆ ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆ ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಶೇಕಡ 45ರಷ್ಟು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಚುನಾವಣೆಗಳು) – ಪ್ರಧಾನ ಶೀರ್ಷಿಕೆ 2015 (₹43.39 ಕೋಟಿ), ಶೇಕಡ 32ರಷ್ಟು ಒಳಾಡಳಿತ (ಪೊಲೀಸ್) – ಪ್ರಧಾನ ಶೀರ್ಷಿಕೆ 2055 (₹31.12 ಕೋಟಿ) ಗಳಿಗೆ ಸಂಬಂಧಿಸಿದ್ದವು.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನ ಮೇಲೆ ಸೆಳೆದ ಮೊತ್ತವನ್ನು ಸಂಚಿತ ನಿಧಿಯಲ್ಲಿನ ಆಯಾ ಸೇವಾ ಪ್ರಧಾನ ಶೀರ್ಷಿಕೆಯಡಿ ಖರ್ಚು ಹಾಕಲಾಗುತ್ತದೆ. ನಿಗದಿತ ಸಮಯದೊಳಗೆ ಈ ಲೆಕ್ಕವನ್ನು ಇತ್ಯರ್ಥ ಮಾಡದಿದ್ದಲ್ಲಿ ವೆಚ್ಚವನ್ನು ಅಧಿಕವಾಗಿ ತೋರಿಸಿದಂತಾಗುತ್ತದೆ. ಆರ್ಥಿಕ ಇಲಾಖೆಯು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ, ನಿಗದಿತ ಸಮಯದೊಳಗೆ ಲೆಕ್ಕಗಳನ್ನು ತೀರುವಳಿ ಮಾಡಲು, ಇಲ್ಲದಿದ್ದಲ್ಲಿ ಸಂಬಂಧಿಸಿದ ಬಟವಾಡೆ ಅಧಿಕಾರಿಗಳ ಸಂಬಳವನ್ನು ನಿಲ್ಲಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚನೆಗಳನ್ನು ನೀಡಿದೆ (ಆಗಸ್ಟ್ 2012). ಆದಾಗ್ಯೂ, ಗಮನಾರ್ಹ ಸಂಖ್ಯೆಯ ಬಿಲ್ಲುಗಳು ಬಾಕಿಯಿದ್ದ ಬಟವಾಡೆ ಅಧಿಕಾರಿಗಳಿಗೆ ಸಂಬಳ ಸೆಳೆಯುವ ಪರಿಪಾಠವು ಮುಂದುವರೆದಿದ್ದು, ಆರ್ಥಿಕ ಇಲಾಖೆಯ ಸೂಚನೆಯ ಅನುಸರಣೆಯಲ್ಲಿರುವ ಕೊರತೆಯನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೇಲೆ ಸೆಳೆದ ಮೊತ್ತಗಳ ಕ್ಲೈಮ್‌ಗಳಿಗೆ ಬೆಂಬಲವಾಗಿ ವೋಚರುಗಳನ್ನು ಸಾದಿಲ್ವಾರು ವೆಚ್ಚ ಕೈಪಿಡಿಯಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ಸಲ್ಲಿಸಬೇಕು.

ಆರ್ಥಿಕ ಇಲಾಖೆಯು ಎಲ್ಲ ಇಲಾಖೆಗಳಿಗೆ ಬಾಕಿ ಇರುವ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ತೀರುವಳಿ ಮಾಡಲು ಮತ್ತು ಬಾಕಿ ಇರುವ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಸಕಾಲದಲ್ಲಿ ಇತ್ಯರ್ಥಗೊಳಿಸಲು ಸೂಚನೆಗಳನ್ನು ನೀಡಲಾಗಿದೆ ಎಂದು ತಿಳಿಸಿದೆ (ಫೆಬ್ರವರಿ 2021).

## 4.4 ವೈಯಕ್ತಿಕ ಠೇವಣಿ ಲೆಕ್ಕಗಳು

ಕರ್ನಾಟಕ ಆರ್ಥಿಕ ಸಂಹಿತೆ 1958ರ ನಿಯಮ 286ರ ಪ್ರಕಾರ, ವಹಿವಾಟುಗಳ ಲೆಕ್ಕಾಚಾರಕ್ಕೆ ರೂಢಿಯಲ್ಲಿನ ವಿಧಾನವು ಸೂಕ್ತವಲ್ಲವೆಂದು ಕಂಡು ಬಂದ ಪ್ರಸಂಗಗಳಲ್ಲಿ ಸರ್ಕಾರದ ಅನುಮತಿಯೊಂದಿಗೆ ವೈಯಕ್ತಿಕ ಠೇವಣಿ (ಪಿಡಿ) ಲೆಕ್ಕಗಳನ್ನು ನಿರ್ವಹಿಸಲು ಅವಕಾಶ ಕಲ್ಪಿಸಿದೆ. ರಾಜ್ಯದ ಸಂಚಿತ ನಿಧಿಗೆ ಖರ್ಚು ಹಾಕಿ ಪ್ರಾರಂಭಿಸಿದ ವೈಯಕ್ತಿಕ ಠೇವಣಿ ಲೆಕ್ಕಗಳನ್ನು ಆರ್ಥಿಕ ವರ್ಷಾಂತ್ಯದಲ್ಲಿ ಮುಕ್ತಾಯಗೊಳಿಸಬೇಕಾಗಿದೆ. ಆದರೆ, ಈ ನಿಯಮವನ್ನು ರಾಜ್ಯದಲ್ಲಿ ಕಟ್ಟುನಿಟ್ಟಾಗಿ ಪಾಲಿಸದೆ ಗಣನೀಯವಾದ ಶಿಲ್ಕುಗಳನ್ನು ನಂತರದ ವರ್ಷಕ್ಕೆ ಮುಂದುವರೆಸಿಕೊಂಡು ಹೋಗಲಾಗುತ್ತಿದ್ದು ಅವುಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ. ವೈಯಕ್ತಿಕ ಠೇವಣಿ ಲೆಕ್ಕಗಳ ಆಡಳಿತಾಧಿಕಾರಿಗಳು ಆರ್ಥಿಕ ವರ್ಷದ ಕೊನೆಯಲ್ಲಿ ಸಂಚಿತನಿಧಿಗೆ ವರ್ಗಾಯಿಸಬೇಕಾದ ಮೊತ್ತಗಳನ್ನು ಖಜಾನಾಧಿಕಾರಿಗೆ ತಿಳಿಸಬೇಕಾಗಿದೆ. ವೈಯಕ್ತಿಕ ಠೇವಣಿ ಲೆಕ್ಕಗಳನ್ನು ಚಾಲ್ತಿಯ ಅವಧಿ ಮುಗಿದ ನಂತರವೂ ಮುಂದುವರೆಸಬೇಕಾದ ಸಂದರ್ಭದಲ್ಲಿ ಆಡಳಿತಾಧಿಕಾರಿಗಳು ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗಿದೆ. ಕಾಲಕಾಲಕ್ಕೆ ವೈಯಕ್ತಿಕ ಲೆಕ್ಕಗಳನ್ನು ಖಜಾನೆಯ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡುವುದು ಆಯಾ ಆಡಳಿತಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

### *4.4.1 ವೈಯಕ್ತಿಕ ಠೇವಣಿ ಲೆಕ್ಕಗಳ ಅಂತಿಮ ಶಿಲ್ಕುಗಳ ಪ್ರವೃತ್ತಿಗಳು*

2015–16ರಿಂದ 2019–20ರ ಐದು ವರ್ಷಗಳ ಅವಧಿಯವರೆಗಿನ 76 ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಅಂತಿಮ ಶಿಲ್ಕುಗಳ ವಿವರಗಳನ್ನು **ಕೋಷ್ಟಕ 4.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 4.5: ವೈಯಕ್ತಿಕ ಠೇವಣಿ ಖಾತೆಗಳಲ್ಲಿನ ಮೊತ್ತ**

**(₹ ಕೋಟಿಗಳಲ್ಲಿ)**

| ವರ್ಷ | ಆರಂಭಿಕ ಶಿಲ್ಕು | ಸ್ವೀಕೃತಿಗಳು/ಠೇವಣಿಗಳು | ಹಿಂಪಡೆತಗಳು | ನಿವ್ವಳ ಅಂತಿಮ ಶಿಲ್ಕು |
|---|---|---|---|---|
| **2015–16** | 2,428.29 | 6,368.39 | 6,061.07 | 2,735.61 |
| **2016–17** | 2,735.61 | 5,516.51 | 5,310.01 | 2,942.12 |
| **2017–18** | 2,942.12 | 4,191.46 | 4,395.06 | 2,741.52 |
| **2018–19** | 2,741.52 | 5,350.98 | 4,007.36 | 4,085.14 |
| **2019–20** | 4,085.14 | 6,557.67 | 6,221.25 | 4,221.56 |

*ಆಕರ: ಹಣಕಾಸು ಲೆಕ್ಕಗಳು*

2019–20ರ ಅವಧಿಯಲ್ಲಿ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ಜಮೆ ಮಾಡಿದ ₹6,557.67 ಕೋಟಿಗಳಲ್ಲಿ ₹643.60 ಕೋಟಿಗಳನ್ನು ಮಾರ್ಚ್ 2020ರಲ್ಲಿ ವರ್ಗಾವಣೆ ಮಾಡಲಾಗಿದೆ. 2019–20ರಲ್ಲಿ ಠೇವಣಿ ಖಾತೆಗಳಲ್ಲಿನ ಶಿಲ್ಕು 2018–19ಕ್ಕೆ ಹೋಲಿಸಿದರೆ ಶೇಕಡ ಮೂರರಷ್ಟು ಅಧಿಕವಾಗಿದೆ.

ಅಧಿಕ ಶಿಲ್ಕುಗಳಿರುವ ಕೆಲವು ಆಡಳಿತಗಾರರ ವೈಯಕ್ತಿಕ ಠೇವಣಿ ಲೆಕ್ಕಗಳ ನಿವ್ವಳ ಅಂತಿಮ ಶಿಲ್ಕುಗಳನ್ನು **ಕೋಷ್ಟಕ 4.6**ರಲ್ಲಿ ನೀಡಲಾಗಿದೆ.

**ಕೋಷ್ಟಕ 4.6: ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿನ ಅಂತಿಮ ಶಿಲ್ಕುಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಆಡಳಿತಗಾರರು | ಮೊತ್ತ |
|---|---|---|
| **1** | ವೈಯಕ್ತಿಕ ಠೇವಣಿಗಳು – ಸಾಮಾನ್ಯ | 474.89 |
| **2** | ಜಿಲ್ಲಾಧಿಕಾರಿಗಳ ಠೇವಣಿ ಖಾತೆಗಳು | 8,689.59 |
| **3** | ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಇಲಾಖೆ | 386.66 |
| **4** | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | 197.41 |

ಆಕರ: ಋಣ, ಠೇವಣಿ ಮತ್ತು ಇರಸಾಲು (ಡಿಡಿಆರ್) ಲೆಡ್ಜರ್

### *4.4.2 ನಿಷ್ಕ್ರಿಯ ಮತ್ತು ಹೊಂದಾಣಿಕೆಯಾಗದ ವೈಯಕ್ತಿಕ ಠೇವಣಿ ಖಾತೆಗಳು*

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 286ಎ ಅನ್ವಯ ಅವಧಿಗಿಂತಲೂ ಮೇಲ್ಪಟ್ಟ ನಿಷ್ಕ್ರಿಯವಾಗಿರುವ ಎಲ್ಲ ವೈಯಕ್ತಿಕ ಠೇವಣಿ ಖಾತೆಗಳನ್ನು ರಾಜ್ಯ ಸರ್ಕಾರವು ಮುಕ್ತಾಯ ಗೊಳಿಸಬೇಕಾಗಿರುತ್ತದೆ. 2020ರ ಹಣಕಾಸು ಲೆಕ್ಕಗಳ ಟಿಪ್ಪಣಿಗಳಲ್ಲಿ ಸೂಚಿಸಿರುವಂತೆ 76 ವೈಯಕ್ತಿಕ ಠೇವಣಿ ಖಾತೆಗಳಲ್ಲಿ 23 ವೈಯಕ್ತಿಕ ಠೇವಣಿ ಖಾತೆಗಳು (13 ವೈಯಕ್ತಿಕ ಠೇವಣಿ ಖಾತೆಗಳಲ್ಲಿ ₹4.13 ಕೋಟಿ ಧನಾತ್ಮಕ ಶಿಲ್ಕು ಮತ್ತು ಎಂಟು ವೈಯಕ್ತಿಕ ಠೇವಣಿ ಖಾತೆಗಳಲ್ಲಿ ₹1.13 ಕೋಟಿ ಋಣಾತ್ಮಕ ಶಿಲ್ಕು ಹಾಗೂ ಎರಡು ವೈಯಕ್ತಿಕ ಠೇವಣಿ ಖಾತೆಗಳ ಶಿಲ್ಕು ಶೂನ್ಯ) ಮೂರು ವರ್ಷಗಳಿಗೂ ಮೇಲ್ಪಟ್ಟು ನಿಷ್ಕ್ರಿಯವಾಗಿರುತ್ತವೆ **(ಅನುಬಂಧ 4.2)**. ಶಿಲ್ಕನ್ನು ವಿಶ್ಲೇಷಿಸಿ, ಹೊಂದಾಣಿಕೆ ಮಾಡಲು, ಮುಕ್ತಾಯಗೊಳಿಸಲು ಮತ್ತು ರಾಜ್ಯದ ಸಂಚಿತ ನಿಧಿಗೆ ವಹಿವಾಟುಗಳನ್ನು ವಾಪಸ್ಸು ಮಾಡಲು ಆಡಳಿತಾಧಿಕಾರಿಗಳು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

ಇದಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿನ ಶಿಲ್ಕುಗಳನ್ನು ಹೊಂದಾಣಿಕೆ ಮಾಡಿ ಬಹುಕಾಲದಿಂದ ನಿರ್ವಹಣೆಯಲ್ಲಿ ಇರದ ವೈಯಕ್ತಿಕ ಠೇವಣಿ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಪ್ರಸ್ತಾವನೆ ಸಲ್ಲಿಸಲು ಕೋರಲಾಗಿದೆ ಎಂದು ಹೇಳಿದೆ(ಫೆಬ್ರವರಿ 2021).

## ಸಿ. ಮಾಪನಕ್ಕೆ ಸಂಬಂಧಿಸಿದ ಅವಲೋಕನಗಳು

### 4.5 ಅಮಾನತ್ತು ಮತ್ತು ಋಣ, ಠೇವಣಿ ಮತ್ತು ಇರಸಾಲು (ಡಿಡಿಆರ್) ಲೆಕ್ಕಗಳಡಿ ಉಳಿದಿರುವ ಶಿಲ್ಕುಗಳು

### *4.5.1 ಪ್ರಮುಖ ಅಮಾನತ್ತು ಲೆಕ್ಕಗಳಡಿ ಬಾಕಿ ಉಳಿದಿರುವ ಶಿಲ್ಕುಗಳು*

ಸರ್ಕಾರದ ಲೆಕ್ಕಗಳನ್ನು ನಗದು ಆಧಾರದ ಮೇಲೆ ನಿರ್ವಹಿಸಲಾಗುತ್ತದೆ. ಸರ್ಕಾರಿ ಲೆಕ್ಕದಲ್ಲಿ ಉದ್ಭವಿಸುವ ಕೆಲವು ವಹಿವಾಟುಗಳ ಸಂದರ್ಭದಲ್ಲಿ ಸ್ವೀಕೃತಿ ಮತ್ತು ಪಾವತಿಗಳನ್ನು ಸ್ವೀಕೃತಿಯ ಸ್ವರೂಪ ಅಥವಾ ಬೇರೆ ಯಾವುದೇ ಕಾರಣಗಳಿಂದಾಗಿ ಸ್ವೀಕೃತಿ ಅಥವಾ ವೆಚ್ಚ ಶೀರ್ಷಿಕೆಯಡಿ ಲೆಕ್ಕ ಮಾಡಲಾಗದಿದ್ದರೆ ಅವುಗಳನ್ನು ತಾತ್ಕಾಲಿಕವಾಗಿ ಅಮಾನತ್ತು ಶೀರ್ಷಿಕೆಯಡಿ ಇಡಲಾಗುತ್ತದೆ. ಈ ಲೆಕ್ಕಶೀರ್ಷಿಕೆಗಳನ್ನು ಅಂತಿಮವಾಗಿ ಅನುಕ್ರಮವಾಗಿ ಅವುಗಳ ಅಂತಿಮ ಲೆಕ್ಕಶೀರ್ಷಿಕೆಗಳಡಿ ದಾಖಲಿಸಿದಾಗ, ಅವುಗಳನ್ನು ಸ್ವೀಕೃತಿ ಅಥವಾ ವೆಚ್ಚದ ಕಡಿತದಿಂದ ತೀರುವಳಿ ಮಾಡಲಾಗುವುದು. ಒಂದು ವೇಳೆ ಈ ಮೊತ್ತಗಳು ತೀರುವಳಿಯಾಗದೆ ಉಳಿದರೆ, ಅಮಾನತ್ತು ಶೀರ್ಷಿಕೆಗಳಡಿ ಶಿಲ್ಕುಗಳ ಶೇಖರಣೆಯಾಗಿ ಸರ್ಕಾರದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ನಿಖರವಾಗಿ ಬಿಂಬಿಸುವುದಿಲ್ಲ. ಕೆಲವು ಪ್ರಧಾನ ಅಮಾನತ್ತು ಶೀರ್ಷಿಕೆಗಳಡಿಯ ಶಿಲ್ಕುಗಳನ್ನು ಪ್ರಧಾನ ಮಹಾಲೇಖಾಪಾಲರು (ಲೆ.ಮತ್ತು ಹ) ನಿರ್ವಹಿಸಿರುವ ಲೆಡ್ಜರುಗಳಲ್ಲಿ ಇರುವಂತೆ **ಕೋಷ್ಟಕ 4.7**ರಲ್ಲಿ ತೋರಿಸಲಾಗಿದೆ.

ಋಣ, ಠೇವಣಿ ಮತ್ತು ಇರಸಾಲು ಶೀರ್ಷಿಕೆಗಳು (ಡಿಡಿಆರ್) ಇಂತಹ ವಹಿವಾಟುಗಳನ್ನು ಲೆಕ್ಕ ಮಾಡಲು ಇದ್ದು, ಸರ್ಕಾರವು ಸಾರ್ವಜನಿಕ ಹಣದ ಪಾಲಕನಾಗಿ ಈ ಹಣವನ್ನು ಸ್ವೀಕರಿಸುತ್ತದೆ ಮತ್ತು ವಿಶ್ವಾಸಾರ್ಹವಾಗಿ ನಿರ್ವಹಿಸುತ್ತದೆ.

2019–20ರ ರಾಜ್ಯದ ಹಣಕಾಸಿನ ಲೆಕ್ಕಗಳ ನಿಖರತೆಯ ಮೇಲೆ, ಕೆಳಗಿನ ಅಂಶಗಳು ವ್ಯತಿರಿಕ್ತವಾಗಿ ಪರಿಣಾಮ ಬೀರಿವೆ:

(i) ಅಮಾನತ್ತು ಶೀರ್ಷಿಕೆಗಳಡಿ ಅಂತಿಮ ವರ್ಗೀಕರಣವನ್ನು ನಿರೀಕ್ಷಿಸುತ್ತಿರುವ ಹೆಚ್ಚಿನ ಸಂಖ್ಯೆಯ ವ್ಯವಹಾರಗಳು ಮತ್ತು

(ii) ಋಣ, ಠೇವಣಿ ಮತ್ತು ಇರಸಾಲು ಲೆಕ್ಕಶೀರ್ಷಿಕೆಗಳಡಿ ಹೆಚ್ಚುತ್ತಿರುವ ವ್ಯತಿರಿಕ್ತ ಶಿಲ್ಕುಗಳ ಸಂಖ್ಯೆ ಮತ್ತು ಪ್ರಮಾಣ.

ಈ ವ್ಯವಹಾರಗಳ ಸಾಮಾನ್ಯ ಸಮೀಕ್ಷೆಯು ಕೆಳಕಂಡ ಅಂಶಗಳನ್ನು ತೋರಿಸಿದೆ:

**ಕೋಷ್ಟಕ 4.7 : ಅಮಾನತ್ತು ಮತ್ತು ಇರಸಾಲು ಶೀರ್ಷಿಕೆಗಳಡಿಯಲ್ಲಿನ ಶಿಲ್ಕುಗಳು**

**(₹ ಕೋಟಿಗಳಲ್ಲಿ)**

| ಒಳಶೀರ್ಷಿಕೆ | 2017–18 | | 2018–19 | | 2019–20 | |
|---|---|---|---|---|---|---|
| ಒಳಶೀರ್ಷಿಕೆ 8658–ಅಮಾನತ್ತು | ಖರ್ಚು | ಜಮೆ | ಖರ್ಚು | ಜಮೆ | ಖರ್ಚು | ಜಮೆ |
| **101– ವೇತನ ಮತ್ತು ಲೆಕ್ಕಾಧಿಕಾರಿಗಳ ಅಮಾನತ್ತು** | 189.66 | 0.25 | 288.08 | 16.93 | 270.30 | 10.86 |
| ನಿವ್ವಳ | **ಖರ್ಚು 189.41** | | **ಖರ್ಚು 271.15** | | **ಖರ್ಚು 259.44** | |
| **102– ಅಮಾನತ್ತು ಲೆಕ್ಕಗಳು–ಸಿವಿಲ್** | 17.37 | 175.77 | 17.76 | 296.45 | 18.14 | 414.95 |
| ನಿವ್ವಳ | **ಜಮೆ 158.40** | | **ಜಮೆ 278.69** | | **ಜಮೆ 396.81** | |
| **107– ನಗದು ಇತ್ಯರ್ಥ ಅಮಾನತ್ತು ಲೆಕ್ಕಗಳು** | 20.53 | 0.00 | 20.53 | 0.00 | 20.53 | 0.00 |
| ನಿವ್ವಳ | **ಖರ್ಚು 20.53** | | **ಖರ್ಚು 20.53** | | **ಖರ್ಚು 20.53** | |
| **110 – ರಿಸರ್ವ್ ಬ್ಯಾಂಕ್ ಅಮಾನತ್ತು (ಕೇಂದ್ರ ಲೆಕ್ಕ ಕಛೇರಿ )** | 44.53 | 151.18 | 91.41 | 183.28 | 17.59 | 154.67 |
| ನಿವ್ವಳ | **ಜಮೆ 106.65** | | **ಜಮೆ 91.87** | | **ಜಮೆ 137.08** | |
| **112 – ಮೂಲ ಆದಾಯದಲ್ಲಿ ಕಡಿತಗೊಳಿಸಿದ ತೆರಿಗೆ (ಟಿಡಿಎಸ್) ಅಮಾನತ್ತು** | 0.74 | 68.41 | 204.16 | 233.34 | 0.74 | 32.77 |
| ನಿವ್ವಳ | **ಜಮೆ 67.67** | | **ಜಮೆ 29.18** | | **ಜಮೆ 32.03** | |
| **123– ಐಎಎಸ್ ಅಧಿಕಾರಿಗಳ ಸಮೂಹ ವಿಮಾ ಯೋಜನೆ** | 1.19 | 0.00 | 9.30 | 0.00 | 1.00 | 0.00 |
| ನಿವ್ವಳ | **ಖರ್ಚು 1.19** | | **ಖರ್ಚು 9.30** | | **ಖರ್ಚು 1.00** | |
| **8782–ನಗದು ರವಾನೆ** | | | | | | |
| **102 – ಖಜಾನೆಗೆ ಲೋಕೋಪಯೋಗಿ ಕಾಮಗಾರಿ ಇಲಾಖೆಯ ರವಾನೆಗಳು** | 81.72 | 0.00 | 82.61 | 0.00 | 82.61 | 0.00 |
| ನಿವ್ವಳ | **ಖರ್ಚು 81.72** | | **ಖರ್ಚು 82.61** | | **ಖರ್ಚು 82.61** | |
| **103 – ಖಜಾನೆಗೆ ಅರಣ್ಯ ಇಲಾಖೆಯ ರವಾನೆಗಳು** | 12.13 | 0.00 | 12.13 | 0.00 | 12.13 | 0.00 |
| ನಿವ್ವಳ | **ಖರ್ಚು 12.13** | | **ಖರ್ಚು 12.13** | | **ಖರ್ಚು 12.13** | |

ಆಕರ: ಋಣ, ಠೇವಣಿ ಮತ್ತು ಇರಸಾಲು (ಡಿಡಿಆರ್) ಲೆಡ್ಜರ್

ಹಣಕಾಸು ಲೆಕ್ಕಗಳು ಈ ಲೆಕ್ಕಶೀರ್ಷಿಕೆಗಳಡಿಯ ನಿವ್ವಳ ಶಿಲ್ಕುಗಳನ್ನು ಪ್ರತಿಬಿಂಬಿಸುತ್ತವೆ. ಬಾಕಿಯಿರುವ ಶಿಲ್ಕುಗಳನ್ನು ಖರ್ಚು ಮತ್ತು ಜಮೆಯನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸಿ ಲೆಕ್ಕ ಮಾಡಲಾಗಿದೆ. ಅಮಾನತ್ತು ಲೆಕ್ಕಶೀರ್ಷಿಕೆಯಡಿಯ ಶಿಲ್ಕುಗಳ ಪರಿಣಾಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

- **ವೇತನ ಮತ್ತು ಲೆಕ್ಕ ಕಛೇರಿ (ಪಿಎಒ) ಅಮಾನತ್ತು**

ಈ ಲೆಕ್ಕ ಶೀರ್ಷಿಕೆಯನ್ನು ಭಾರತ ಸರ್ಕಾರದ ವಿವಿಧ ಪ್ರತ್ಯೇಕ ವೇತನ ಮತ್ತು ಲೆಕ್ಕಾಧಿಕಾರಿಗಳ (ಪಿಎಒ) ಮತ್ತು ಪ್ರಧಾನ ಮಹಾಲೇಖಾಪಾಲರ ಪುಸ್ತಕಗಳಲ್ಲಿ ದಾಖಲಾಗುವ ವಹಿವಾಟುಗಳನ್ನು ಇತ್ಯರ್ಥಗೊಳಿಸಲು ನಿರ್ವಹಿಸಲಾಗುತ್ತಿದೆ. ಮಹಾಲೇಖಾಪಾಲರ ಪುಸ್ತಕದಲ್ಲಿ ಮೊದಲಿಗೆ ಈ ಶೀರ್ಷಿಕೆಯಡಿ ದಾಖಲಾದ ವಹಿವಾಟುಗಳನ್ನು ವೇತನ ಮತ್ತು ಲೆಕ್ಕಾಧಿಕಾರಿಯವರಿಂದ ಚೆಕ್/ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸ್ವೀಕೃತವಾದ ನಂತರ ವೇತನ ಮತ್ತು ಲೆಕ್ಕಾಧಿಕಾರಿಗಳ ಪರವಾಗಿ ರಾಜ್ಯ ಖಜಾನೆಗಳಲ್ಲಿ ಸ್ವೀಕರಿಸಿದ ಮೊತ್ತಗಳ ಸಂಬಂಧವಾಗಿ ಚೆಕ್/ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಜಾರಿಗೊಳಿಸಿದ ನಂತರ ತೀರುವಳಿ ಮಾಡಲಾಗುತ್ತದೆ. ಈ ಶೀರ್ಷಿಕೆಯಡಿಯ ಬಾಕಿ ಉಳಿದ ಖರ್ಚಿನ ಶಿಲ್ಕು, ವೇತನ ಮತ್ತು ಲೆಕ್ಕಾಧಿಕಾರಿಯ ಪರವಾಗಿ ಪ್ರಧಾನ ಮಹಾಲೇಖಾಪಾಲರು ಸಂದಾಯಗಳನ್ನು ಮಾಡಿದ್ದು, ಅವುಗಳನ್ನು ಇನ್ನೂ ವಸೂಲಿ ಮಾಡಬೇಕಾಗಿದೆ ಎಂದು ಸೂಚಿಸುತ್ತದೆ. ಬಾಕಿ ಉಳಿದ ಜಮೆಯ ಶಿಲ್ಕು, ವೇತನ ಮತ್ತು ಲೆಕ್ಕಾಧಿಕಾರಿ ಬದಲಿಗೆ ಪ್ರಧಾನ ಮಹಾಲೇಖಾಪಾಲರು ಸಂದಾಯಗಳನ್ನು ಸ್ವೀಕರಿಸಿದ್ದು, ಅವುಗಳನ್ನು ಇನ್ನೂ ಪಾವತಿ ಮಾಡಬೇಕಾಗಿದೆ ಎಂದು ಸೂಚಿಸುತ್ತದೆ. ಈ

ಶೀರ್ಷಿಕೆಯಡಿಯ ನಿವ್ವಳ ಖರ್ಚಿನ ಶಿಲ್ಕು ಇಳಿಕೆಯ ಪ್ರವೃತ್ತಿಯನ್ನು ತೋರಿಸುತ್ತಿದೆ. ಇದರ ತೀರುವಳಿ/ಇತ್ಯರ್ಥದಿಂದ ರಾಜ್ಯಸರ್ಕಾರದ ನಗದುಶಿಲ್ಕು ಹೆಚ್ಚಾಗುತ್ತದೆ. ಈ ವಹಿವಾಟುಗಳು ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಾಜ್ಯ ಸರ್ಕಾರದಿಂದ ಪಾವತಿಸಿದ ಕೇಂದ್ರ ಸರ್ಕಾರದ ನಾಗರೀಕ ಪಿಂಚಣಿಯ ಬಾಬ್ತಿಗೆ ಸಂಬಂಧಿಸಿದ್ದಾಗಿದೆ.

- **ಅಮಾನತ್ತು ಲೆಕ್ಕ (ಸಿವಿಲ್)**

ಪೂರ್ಣ ವರ್ಗೀಕರಣದ ಮಾಹಿತಿಯು ಇರದಿರುವ ಅಥವಾ ಸಂಬಂಧಿಸಿದ ವೋಚರ್/ಅನುಸೂಚಿಗಳು ಇರದಿರುವ ಅಥವಾ ಖಜಾನೆಯ ಅನುಸೂಚಿಗಳಲ್ಲಿ ನಮೂದಿಸಿದ ಅಂಕಿಗಳು ಹಾಗೂ ಖಜಾನೆ ಅನುಸೂಚಿಗಳ ಪಾವತಿಗಳ/ನಗದು ಲೆಕ್ಕಗಳಲ್ಲಿ ವರದಿ ಮಾಡಿದ ಅಂಕಿಗಳು ಮತ್ತು ಸಂಬಂಧಿತ ವೋಚರ್‌ಗಳು, ಅನುಸೂಚಿಗಳಲ್ಲಿ ಇರುವ ಅಂಕಿಗಳ ನಡುವೆ ವ್ಯತ್ಯಾಸವಿರುವ ವ್ಯವಹಾರಗಳು ಈ ಶೀರ್ಷಿಕೆಯಡಿ ಬಾಕಿ ಇರುವ ಅಂಕಿಗಳ ಹೆಚ್ಚಿನ ಭಾಗವಾಗಿರುತ್ತವೆ. ರಾಜ್ಯ ಖಜಾನೆಗಳಲ್ಲಿ ನಡೆಯುವ ರೈಲ್ವೆ, ರಕ್ಷಣೆ, ಅಂಚೆ ಮತ್ತು ದೂರಸಂಪರ್ಕ ಲೆಕ್ಕಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ಮೊದಲು ಈ ಶೀರ್ಷಿಕೆಯಲ್ಲಿ ವರ್ಗೀಕರಿಸಲಾಗುವುದು ಹಾಗೂ ಸಂಬಂಧಿಸಿದ ಅಧಿಕಾರಿಗಳಿಂದ ಕ್ಲೈಮುಗಳು ಬರುವ ತನಕ ತೀರುವಳಿಯನ್ನು ಬಾಕಿ ಇರಿಸಲಾಗುವುದು. ಪ್ರಸಕ್ತ ಸಾಲಿನಲ್ಲಿ ಈ ಶೀರ್ಷಿಕೆಯಡಿ ನಿವ್ವಳ ಧನಾತ್ಮಕ ಶಿಲ್ಕು ₹118.12 ಕೋಟಿಗಳಷ್ಟು ಹೆಚ್ಚಾಗಿದೆ. ರೈಲ್ವೆ (₹3.15 ಕೋಟಿ) ಮತ್ತು ರಕ್ಷಣಾ (₹1.57 ಕೋಟಿ) ಲೆಕ್ಕಗಳಿಗೆ ಸಂಬಂಧಿಸಿದಂತೆ ಅಮಾನತ್ತು ತೀರುವಳಿಯ ನಂತರ ನಗದು ಶಿಲ್ಕಿನಲ್ಲಿ ಹೆಚ್ಚಳವಾಗುವುದು. ಉಳಿದ ಬಾಬ್ತುಗಳಿಗೆ ಸಂಬಂಧಿಸಿದಂತೆ ತೀರುವಳಿಯು ನಗದು ಶಿಲ್ಕಿನ ಮೇಲೆ ಪರಿಣಾಮವನ್ನು ಬೀರುವುದಿಲ್ಲ.

- **ರಿಸರ್ವ್ ಬ್ಯಾಂಕ್ ಅಮಾನತ್ತು, ಕೇಂದ್ರ ಲೆಕ್ಕ ಕಛೇರಿ**

ಈ ಶೀರ್ಷಿಕೆಯನ್ನು ಸರಕಾರಗಳ ನಡುವಿನ ವಹಿವಾಟುಗಳನ್ನು ದಾಖಲಿಸಲು ನಿರ್ವಹಿಸಲಾಗಿದ್ದು ಎರಡು ಸರ್ಕಾರಗಳ ನಡುವಿನ ನಗದು ಶಿಲ್ಕಿನ ಇತ್ಯರ್ಥವು ಭಾರತೀಯ ರಿಸರ್ವ್ ಬ್ಯಾಂಕಿನ (ಆರ್‌ಬಿಐ) ಕೇಂದ್ರ ಲೆಕ್ಕ ವಿಭಾಗಕ್ಕೆ ಸೂಚನೆ ಕಳುಹಿಸುವ ಮುಖಾಂತರ ಆಗುತ್ತದೆ. ಭಾರತೀಯ ರಿಜರ್ವ ಬ್ಯಾಂಕ್‌ನಿಂದ ಹಣ ಇತ್ಯರ್ಥವಾದ ಸೂಚನೆ ಬಂದ ನಂತರ ಅಂತಿಮ ಶೀರ್ಷಿಕೆಗೆ ವರ್ಗಾಯಿಸುವುದರ ಮೂಲಕ ಈ ಶೀರ್ಷಿಕೆಯನ್ನು ತೀರುವಳಿ ಮಾಡಲಾಗುವುದು. ಭಾರತ ಸರಕಾರದಿಂದ ಸ್ವೀಕರಿಸಿದ ಅನುದಾನ/ಸಾಲಗಳು ಮತ್ತು ಅವುಗಳ ಮರುಪಾವತಿ, ಆರ್‌ಬಿಐನ ಸಾರ್ವಜನಿಕ ಋಣ ಕಛೇರಿಗಳಿಂದ ಭದ್ರತಾ ತೀರುವಳಿ ಮತ್ತು ಅದಕ್ಕೆ ಪಾವತಿ ಮಾಡಿದ ಬಡ್ಡಿಗಳ ವಿಲೇವಾರಿ ಹಾಗೂ ಸರ್ಕಾರದ ಇಲಾಖೆಗಳಿಗೆ ಸಾಮಗ್ರಿ ಒದಗಿಸಿದ ಪ್ರಧಾನ ನಿರ್ದೇಶಕರು, ಪೂರೈಕೆ ಮತ್ತು ಇತ್ಯರ್ಥ ಅವರಿಗೆ ಮಾಡಿದ ಪಾವತಿಗಳು ಈ ಶೀರ್ಷಿಕೆಯ ಪ್ರಮುಖ ಅಮಾನತ್ತು ವ್ಯವಹಾರಗಳಾಗಿರುತ್ತವೆ. 2019–20ರ ಅವಧಿಯಲ್ಲಿ ಈ ಶೀರ್ಷಿಕೆಯಡಿಯಲ್ಲಿನ ಧನಾತ್ಮಕ ಶಿಲ್ಕು ₹137.08 ಕೋಟಿಗಳಾಗಿದ್ದು ಮತ್ತು ಕಳೆದ ವರ್ಷಕ್ಕೆ ಹೋಲಿಸಿದರೆ ₹45.21 ಕೋಟಿ ಹೆಚ್ಚಾಗಿದೆ.

### *4.5.2 ಋಣ, ಠೇವಣಿ, ಇರಸಾಲು (ಡಿಡಿಆರ್) ಶೀರ್ಷಿಕೆಗಳಡಿ ವ್ಯತಿರಿಕ್ತ ಶಿಲ್ಕುಗಳು*

ವ್ಯತಿರಿಕ್ತ ಶಿಲ್ಕುಗಳೆಂದರೆ ಋಣಾತ್ಮಕ ಶಿಲ್ಕು ಇರಬಾರದಂತಹ ಲೆಕ್ಕಶೀರ್ಷಿಕೆಗಳಡಿ ಕಾಣುವ ಋಣಾತ್ಮಕ ಶಿಲ್ಕುಗಳಾಗಿವೆ. ಉದಾಹರಣೆಗೆ, ಯಾವುದೇ ಸಾಲ ಅಥವಾ ಮುಂಗಡ ಲೆಕ್ಕಶೀರ್ಷಿಕೆಯಡಿಯ ಋಣಾತ್ಮಕ ಶಿಲ್ಕು, ಮುಂಗಡ ನೀಡಿದ ಮೂಲ ಮೊತ್ತಕ್ಕೆ ಪ್ರತಿಯಾಗಿ ಹೆಚ್ಚಿನ ಮರುಪಾವತಿಯನ್ನು ಸೂಚಿಸುತ್ತದೆ. **ಕೋಷ್ಟಕ–**

**4.8**ರಲ್ಲಿ ಸಾರ್ವಜನಿಕ ಋಣ, ಠೇವಣಿ, ಇರಸಾಲು ಶೀರ್ಷಿಕೆಗಳಡಿಯಲ್ಲಿ ಇರುವ ವ್ಯತಿರಿಕ್ತ ಶಿಲ್ಕುಗಳನ್ನು ತೋರಿಸಲಾಗಿದೆ.

**ಕೋಷ್ಟಕ–4.8: ಸಾರ್ವಜನಿಕ ಋಣ, ಠೇವಣಿ, ಇರಸಾಲು ಶೀರ್ಷಿಕೆಗಳಡಿಯಲ್ಲಿನ ವ್ಯತಿರಿಕ್ತ ಶಿಲ್ಕುಗಳು**

(₹ ಕೋಟಿಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ವಿವರಣೆ | ಮೊತ್ತ | ಕಾರಣಗಳು |
|---|---|---|---|---|
| ಸಾರ್ವಜನಿಕ ಋಣ | | | | |
| 1 | 6003–00–108–0–01 | ರಾಜ್ಯ ಸರ್ಕಾರದ ಆಂತರಿಕ ಋಣ – ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ ನಿಯಮಿತದಿಂದ ಸಾಲ | ಖರ್ಚು174.40 | ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (ಎನ್ ಸಿಡಿಸಿ)ದಿಂದ ಪಡೆದ ಸಾಲದ ಸ್ವೀಕೃತಿಗಳು ಸರ್ಕಾರದ ಲೆಕ್ಕಗಳಲ್ಲಿ ಬಿಂಬಿತವಾಗದೆ, ಮರುಪಾವತಿಗಳು ಸಂಚಿತ ನಿಧಿಯ ಮೂಲಕ ಆಗಿರುವುದರಿಂದ ಉಂಟಾಗಿದೆ. |
| 2 | 6004–03 & 6004–04 | ಕೇಂದ್ರ ಯೋಜನೆ/ಕೇಂದ್ರ ಪುರಸ್ಕೃತ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮತ್ತು ಮುಂಗಡಗಳು | ಖರ್ಚು 10.36 | 13ನೇ ಹಣಕಾಸು ಸಮಿತಿಯ ಶಿಫಾರಸಿನ ಮೇಲೆ ಕೇಂದ್ರ ಸಾಲಗಳನ್ನು ವಜಾ ಮಾಡಿದ ಕಾರಣದಿಂದ ಉಂಟಾಗಿದೆ (31 ಮಾರ್ಚ್ 2010ರಲ್ಲಿದ್ದಂತೆ ಬಾಕಿ ಶಿಲ್ಕು). ಹಣಕಾಸು ಮಂತ್ರಾಲಯ, ಭಾರತ ಸರ್ಕಾರ 2010–12ರ ಅವಧಿಯಲ್ಲಿ ವೇತನ ಮತ್ತು ಲೆಕ್ಕ ಕಛೇರಿಗಳಿಗೆ ಮಾಡಿದ ಅಧಿಕ ಮರುಪಾವತಿಗಳನ್ನು ಹೊಂದಾಣಿಕೆ ಮಾಡಬೇಕಿದೆ. |
| ಒಟ್ಟು | | | ಖರ್ಚು **184.76** | |
| ಸಾಲಗಳು ಮತ್ತು ಮುಂಗಡಗಳು | | | | |
| 3 | 6202,6215, 6217, 6401, 6402, 6405, 6408, 6435 6505, 6506, 6701, 7475 & 7615 | ರಾಜ್ಯದ ಸಂಸ್ಥೆಗಳಿಗೆ ಸಾಲ | ಜಮೆ 90.06 | ವ್ಯತಿರಿಕ್ತ ಶಿಲ್ಕು ತಪ್ಪು ವರ್ಗೀಕರಣದ ಕಾರಣದಿಂದಾಗಿದ್ದು, ಇದು ಹೊಂದಾಣಿಕೆಯಾಗಬೇಕಾಗಿದೆ. |
| 4 | 7610 | ಸರಕಾರಿ ನೌಕರರಿಗೆ ಸಾಲ ಮತ್ತು ಮುಂಗಡ | ಜಮೆ 6.24 | ವ್ಯತಿರಿಕ್ತ ಶಿಲ್ಕು ತಪ್ಪು ವರ್ಗೀಕರಣದ ಕಾರಣದಿಂದಾಗಿದ್ದು, ಇದು ಹೊಂದಾಣಿಕೆಯಾಗಬೇಕಾಗಿದೆ. |
| ಒಟ್ಟು | | | ಜಮೆ **96.30** | |

ಆಕರ: ಹಣಕಾಸು ಲೆಕ್ಕಗಳು

ಆರ್ಥಿಕ ಇಲಾಖೆಯು ತನ್ನ ಉತ್ತರದಲ್ಲಿ (ಫೆಬ್ರವರಿ 2021) ಈ ವಿಷಯವಾಗಿ ಪ್ರಧಾನ ಮಹಾಲೇಕಾಪಾಲರೊಂದಿಗೆ ಚರ್ಚಿಸಲಾಗುವುದು ಮತ್ತು ಶಿಲ್ಕಿನ ತೀರುವಳಿಗಾಗಿ ಅಗತ್ಯ ಕ್ರಮಗಳನ್ನು ಶೀಘ್ರದಲ್ಲಿ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದೆ.

## 4.6 ಹೊಂದಾಣಿಕೆಯಾಗದ ಇಲಾಖೆಯ ಅಂಕಿಗಳು

ವೆಚ್ಚದ ಮೇಲಿನ ಪರಿಣಾಮಕಾರಿ ಆಯವ್ಯಯ ನಿಯಂತ್ರಣವನ್ನು ಸಾಧಿಸಲು ಮತ್ತು ಲೆಕ್ಕಪತ್ರಗಳಲ್ಲಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಬಟವಾಡೆ ಅಧಿಕಾರಿಗಳು ತಮ್ಮ ಪುಸ್ತಕಗಳಲ್ಲಿನ ವೆಚ್ಚ ಮತ್ತು ಸ್ವೀಕೃತಿಗಳ ಅಂಕಿಗಳನ್ನು ಪ್ರಧಾನ ಮಹಾಲೇಖಾಪಾಲರ (ಲೆಕ್ಕ ಮತ್ತು ಹಕ್ಕುಗಳು) ಲೆಕ್ಕ ಪುಸ್ತಕಗಳಲ್ಲಿ ದಾಖಲು ಮಾಡಿರುವ ಅಂಕಿಗಳೊಂದಿಗೆ ಪ್ರತಿ ತಿಂಗಳೂ ಹೊಂದಾಣಿಕೆ ಮಾಡಬೇಕಾಗಿರುತ್ತದೆ. 2017–20ರ ಮೂರು ವರ್ಷಗಳ ಆದಾಯ ಮತ್ತು ವೆಚ್ಚಗಳ ಹೊಂದಾಣಿಕೆಯ ವಿವರಗಳನ್ನು **ನಕ್ಷೆ 4.3**ರಲ್ಲಿ ನೀಡಲಾಗಿದೆ.

**ನಕ್ಷೆ 4.3: 2017–18ರಿಂದ 2019–20ರ ಅವಧಿಯಲ್ಲಿನ ಲೆಕ್ಕ ಹೊಂದಾಣಿಕೆಗಳು**

(₹ ಕೋಟಿಗಳಲ್ಲಿ)




ಸಾಲ ಮತ್ತು ಮುಂಗಡಗಳನ್ನು ಹೊರತುಪಡಿಸಿ ಆಕರ: ಹಣಕಾಸು ಲೆಕ್ಕಗಳು

ಕಳೆದ ಮೂರು ವರ್ಷಗಳಲ್ಲಿ ಸ್ವೀಕೃತಿ ಮತ್ತು ವೆಚ್ಚಗಳ ಹೊಂದಾಣಿಕೆ ಮಾಡಿದ ನಿಯಂತ್ರಣಾಧಿಕಾರಿಗಳ ಸಂಖ್ಯೆ ಮತ್ತು ಹೊಂದಾಣಿಕೆಯ ವ್ಯಾಪ್ತಿಯನ್ನು ಕೋಷ್ಟಕ–4.9ರಲ್ಲಿ ನೀಡಲಾಗಿದೆ.

**ಕೋಷ್ಟಕ–4.9 : ಸ್ವೀಕೃತಿ ಮತ್ತು ವೆಚ್ಚಗಳ ಅಂಕಿಗಳ ಹೊಂದಾಣಿಕೆಗಳ ಸ್ಥಿತಿ**

(₹ ಕೋಟಿಗಳಲ್ಲಿ)

| ವರ್ಷ | ಒಟ್ಟು ನಿಯಂತ್ರಣಾ ಅಧಿಕಾರಿಗಳು | ಪೂರ್ಣ ಹೊಂದಾಣಿಕೆ ಮಾಡಿರುವ ಅಧಿಕಾರಿಗಳು | ಭಾಗಶ: ಹೊಂದಾಣಿಕೆ ಮಾಡಿದ ಅಧಿಕಾರಿಗಳು | ಹೊಂದಾಣಿಕೆ ಮಾಡದ ಅಧಿಕಾರಿಗಳು | ವಹಿವಾಟು ನಡೆಸದ ಅಧಿಕಾರಿಗಳು | ಒಟ್ಟು ಮೊತ್ತ | ಹೊಂದಾಣಿಕೆ ಮೊತ್ತ | ಶತಾಂಶ |
|---|---|---|---|---|---|---|---|---|
| ಸ್ವೀಕೃತಿಗಳು | | | | | | | | |
| **2017–18** | 80 | 66 | 0 | 14 | – | 1,47,003.35 | 1,45,344.52 | 98.87 |
| **2018–19** | 92 | 84 | 04 | 04 | – | 1,64,973.15 | 1,64,817.41 | 99.90 |
| **2019–20** | 101 | 75 | 18 | 08 | – | 1,75,487.87 | 1,73,687.60 | 98.97 |
| ವೆಚ್ಚಗಳು | | | | | | | | |
| **2017–18** | 194 | 159 | 18 | 17 | – | 1,73,149.09 | 1,38,610.22 | 80.05 |
| **2018–19** | 331 | 299 | 05 | 26 | 01 | 1,98,959.17 | 1,97,933.22 | 99.48 |
| **2019–20** | 322 | 245 | 50 | 27 | – | 2,09,786.84 | 1,79,098.38 | 85.37 |

*ಆಕರ: ಮಾಸಿಕ ಸಿವಿಲ್ ಲೆಕ್ಕಗಳ ಮೇಲಿನ ವರದಿ ಮತ್ತು ಹಣಕಾಸು ಲೆಕ್ಕಗಳು*

ಕೋಷ್ಟಕ 4.9ರಲ್ಲಿ ತೋರಿಸಿರುವಂತೆ 2018–19ರಲ್ಲಿ ಶೇಕಡ 99ರಷ್ಟು ಹೊಂದಾಣಿಕೆಯಾಗಿದ್ದು ಇದು 2017–18ರಲ್ಲಿ ಆದ ಹೊಂದಾಣಿಕೆ (ಶೇಕಡ 80)ಕ್ಕಿಂತ ಅಧಿಕವಾಗಿದ್ದು, 2019–20ರಲ್ಲಿ (ಶೇಕಡ 85) ಕಡಿಮೆಯಾಗಿದೆ. ಸಾಲ ಮತ್ತು ಮುಂಗಡಗಳಡಿ ಲೆಕ್ಕ ಹೊಂದಾಣಿಕೆ ಮಾಡಿಲ್ಲ. ಸಾಲ ಮತ್ತು ಮುಂಗಡಗಳಿಗೆ ಸಂಬಂಧಿಸಿದ ಶೀರ್ಷಿಕೆಗಳಡಿ ಸ್ವೀಕೃತಿ ಮತ್ತು ವೆಚ್ಚಗಳ ಹೊಂದಾಣಿಕೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

### 4.7 ನಗದು ಶಿಲ್ಕುಗಳಲ್ಲಿ ಹೊಂದಾಣಿಕೆ

ಪ್ರಧಾನ ಮಹಾಲೇಖಾಪಾಲರ (ಲೆ ಮತ್ತು ಹ) ಪುಸ್ತಕಗಳಲ್ಲಿನ ರಾಜ್ಯದ ನಗದು ಶಿಲ್ಕು ಹಾಗೂ ರಿಸರ್ವ್ ಬ್ಯಾಂಕಿನ ಲೆಕ್ಕಗಳಲ್ಲಿ ವರದಿ ಮಾಡಿರುವ ರಾಜ್ಯದ ನಗದು ಶಿಲ್ಕು ಇವೆರಡರ ಮಧ್ಯೆ ವ್ಯತ್ಯಾಸವಿರಕೂಡದು.

ಮಾರ್ಚ್ 2020ರ ಅಂತ್ಯದವರೆಗೆ ರಾಜ್ಯದ ಲೆಕ್ಕಗಳಲ್ಲಿನ ನಗದು ಶಿಲ್ಕಿಗೂ (₹1,659.20 ಕೋಟಿ – ಜಮೆ) ಮತ್ತು ರಿಸರ್ವ್ ಬ್ಯಾಂಕ್ ಸೂಚಿಸಿರುವ ರಾಜ್ಯದ ನಗದು ಶಿಲ್ಕಿಗೂ (₹12.11 ಕೋಟಿ – ಜಮೆ) ₹1,671.31 ಕೋಟಿಗಳ (ಜಮೆ) ವ್ಯತ್ಯಾಸ ಕಂಡು ಬಂದಿದೆ. ಈ ವ್ಯತ್ಯಾಸವು ವಿಶ್ರಾಂತಿ ವೇತನದ ವಿತರಣೆಗಳಿಗೆ ಸಂಬಂಧಪಟ್ಟಿದ್ದು, ಏಜೆನ್ಸಿ ಬ್ಯಾಂಕುಗಳು ಅಂಕಿಅಂಶಗಳನ್ನು ಒದಗಿಸಿಲ್ಲದ ಕಾರಣ ಮತ್ತು ಹೊಂದಾಣಿಕೆಯಾಗಿಲ್ಲವಾದ್ದರಿಂದ ಉಂಟಾಗಿದೆ. ಇದನ್ನು ಪ್ರಧಾನ ಮಹಾಲೇಖಾಪಾಲರ(ಲೆ ಮತ್ತು ಹ) ಕಛೇರಿಯಲ್ಲಿ ಹೊಂದಾಣಿಕೆ ಮಾಡಲಾಗುತ್ತಿದೆ.

ಆರ್ಥಿಕ ಇಲಾಖೆಯು, ವಿಶ್ರಾಂತಿವೇತನ ಪಾವತಿಯಲ್ಲಿನ ಈ ವ್ಯತ್ಯಾಸವು ರಿಸರ್ವ್ ಬ್ಯಾಂಕ್, 2019–20ರ ವರ್ಷದ ಮಧ್ಯೆ ವಿಶ್ರಾಂತಿ ವೇತನ ಪಾವತಿಯ ಹೊಸಮಾದರಿಯನ್ನು ಪ್ರಾರಂಭಿಸಿದ್ದರಿಂದ ಉಂಟಾಗಿದೆ ಎಂದು ಉತ್ತರಿಸಿದೆ (ಫೆಬ್ರವರಿ 2021). ಈ ವಿಶ್ರಾಂತಿ ವೇತನ ಮಾದರಿಯು ಸಂಪೂರ್ಣವಾಗಿ ಸ್ಥಿರಗೊಂಡರೆ ಇದು ಬಗೆಹರಿಯುವುದು ಎಂದೂ ಹೇಳಿದೆ.

## ಡಿ. ಪ್ರಕಟಗಳಿಗೆ ಸಂಬಂಧಿಸಿದ ಅಭಿಪ್ರಾಯಗಳು

### 4.8 ಲೆಕ್ಕ ಮಾನದಂಡಗಳ ಅನುಸರಣೆ

ಭಾರತ ಸರ್ಕಾರದ ಸಹಯೋಗದೊಂದಿಗೆ ಸರ್ಕಾರದ ಲೆಕ್ಕಗಳ ಮಾನದಂಡ ಸಲಹಾ ಮಂಡಳಿ (ಗಸಬ್)ಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಕಛೇರಿಯಲ್ಲಿ ಸ್ಥಾಪಿಸಲಾಗಿದೆ. ಸರ್ಕಾರದ ಕಛೇರಿಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಲೆಕ್ಕ ಮತ್ತು ಆರ್ಥಿಕ ವರದಿಗಳ ಮಾನದಂಡಗಳನ್ನು ರೂಪಿಸುವುದು ಮತ್ತು ಪ್ರಸ್ತಾಪಿಸುವ ಜವಬ್ದಾರಿಯನ್ನು ಈ ಮಂಡಳಿಗೆ ಒಪ್ಪಿಸಲಾಗಿದೆ. ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋದಕರ ಸಲಹೆಯ ಮೇರೆಗೆ ರಾಷ್ಟ್ರಾಧ್ಯಕ್ಷರು ಈವರೆಗೆ ಮೂರು ಭಾರತೀಯ ಸರ್ಕಾರೀ ಲೆಕ್ಕ ಮಾನದಂಡಗಳನ್ನು ಪ್ರಕಟಿಸಿದ್ದಾರೆ.

ಭಾರತೀಯ ಸರ್ಕಾರೀ ಲೆಕ್ಕ ಮಾನದಂಡಗಳು ಮತ್ತು ಕರ್ನಾಟಕ ಸರ್ಕಾರದಿಂದ ಅವುಗಳ ಅನುಸರಣೆಗಳ ವಿವರಗಳನ್ನು **ಕೋಷ್ಟಕ 4.10**ರಲ್ಲಿ ಚರ್ಚಿಸಲಾಗಿದೆ.

**ಕೋಷ್ಟಕ–4.10: ಲೆಕ್ಕ ಮಾನದಂಡಗಳ ಅನುಸರಣೆ**

| ಕ್ರ. ಸಂ | ಲೆಕ್ಕ ಮಾನದಂಡಗಳು | ಭಾರತೀಯ ಸರ್ಕಾರದ ಲೆಕ್ಕ ಮಾನದಂಡಗಳ (ಐಜಿಎಎಸ್) ಸಾರಾಂಶ | ಸ್ಥಿತಿ | ನ್ಯೂನತೆಗಳ ಪ್ರಭಾವ |
|---|---|---|---|---|
| 1 | ಐಜಿಎಎಸ್ –1: ಸರ್ಕಾರದಿಂದ ಖಾತರಿಗಳನ್ನು ಬಹಿರಂಗಪಡಿಸುವ ಅಗತ್ಯತೆಗಳು | ಸರ್ಕಾರವು ತನ್ನ ಹಣಕಾಸು ವಿವರಣೆಗಳಲ್ಲಿ ಖಾತರಿಗಳಿಗೆ ಸಂಬಂಧಪಟ್ಟ ಮಾದರಿಯಾಗಿ ಈ ಮಾನದಂಡವನ್ನು ರಚಿಸಿದೆ. ಇದರೊಂದಿಗೆ ಪ್ರಸಕ್ತ ವರ್ಷದಲ್ಲಿ ಸರ್ಕಾರವು ನೀಡಿದ ಗರಿಷ್ಠ ಖಾತರಿ ಮೊತ್ತ, ಸೇರ್ಪಡಿಕೆ, ಕಳೆದದ್ದು (ಪ್ರಸಕ್ತ ವರ್ಷದಲ್ಲಿ ಇನ್‌ವೋಕ್ ಗಳನ್ನು ಹೊರತುಪಡಿಸಿ) ವರ್ಷದ ಆರಂಭ ಮತ್ತು ವರ್ಷಾಂತ್ಯದಲ್ಲಿ ಬಾಕಿ ಇರುವ ಮೊತ್ತ ಹಾಗೂ ಖಾತರಿ ಕಮಿಷನ್ ಅಥವಾ ಶುಲ್ಕಗಳು ಸೇರಿವೆ. | ಅನುಸರಣೆಯಾಗಿದೆ | ಖಾತರಿಗಳನ್ನು ಪ್ರಕಟ ಪಡಿಸುವ ಪ್ರಮಾಣವು ಅನುಪಾಲನೆಯಾಗಿದೆ. |
| 2 | ಐಜಿಎಎಸ್ – 2 ಸಹಾಯಾನುದಾನಗಳ ಲೆಕ್ಕಹಾಕುವಿಕೆ ಮತ್ತು ವರ್ಗೀಕರಣ | ಸಹಾಯಾನುದಾನಗಳನ್ನು ಅನುದಾನ ಪ್ರಧಾನರ ಲೆಕ್ಕಪುಸ್ತಕಗಳಲ್ಲಿ ರಾಜಸ್ವ ವೆಚ್ಚಗಳೆಂದು, ಅನುದಾನಿತರ ಲೆಕ್ಕಪುಸ್ತಕಗಳಲ್ಲಿ ರಾಜಸ್ವ ಸ್ವೀಕೃತಿಗಳೆಂದು ವರ್ಗೀಕರಿಸಬೇಕು. | ಅನುಸರಣೆಯಾಗಿಲ್ಲ | ಕೆಲವು ಸಂಸ್ಥೆಗಳಿಗೆ ನೀಡಿದ ಸಹಾಯಾನುದಾನವನ್ನು (`38.73 ಕೋಟಿ) ರಾಜಸ್ವ ವರ್ಗದ ಬದಲು ಬಂಡವಾಳ ವರ್ಗದಡಿ ವರ್ಗೀಕರಿಸಲಾಗಿದೆ. ಇದು ಬಂಡವಾಳ ವೆಚ್ಚವನ್ನು ಅಧಿಕವಾಗಿ ತೋರಿಸಿರುವುದಲ್ಲದೆ ರಾಜಸ್ವ ಹೆಚ್ಚಳವನ್ನು ಸಹ ಅಧಿಕವಾಗಿ ತೋರಿಸಲಾಗಿದ್ದು, ಈ ಮಾನದಂಡವು ಅನುಪಾಲನೆಯಾಗಿರುವುದಿಲ್ಲ |
| 3 | ಐಜಿಎಎಸ್ –3 ಸರ್ಕಾರವು ಮಾಡಿದ ಸಾಲಗಳು ಮತ್ತು ಮುಂಗಡಗಳು | ಈ ಮಾನದಂಡವು ಹಣಕಾಸು ವಿವರಣಾ ಪಟ್ಟಿಗಳಲ್ಲಿ ಸರ್ಕಾರವು ಮಾಡಿದ ಸಾಲ ಮತ್ತು ಮುಂಗಡಗಳನ್ನು ಗುರುತಿಸುವ ಮಾಪನ, ಮೌಲ್ಯೀಕರಣ ಮತ್ತು ಅವುಗಳ ವರದಿಗಳಿಗೆ ಸಂಬಂಧಪಟ್ಟಿರುವುದಲ್ಲದೆ ಸಮಗ್ರ, ನಿಖರ ಮತ್ತು ಏಕರೂಪ ಲೆಕ್ಕ ಹಾಕುವಿಕೆಗಳನ್ನು ಖಚಿತಪಡಿಸುತ್ತದೆ. | ಭಾಗಶ: ಅನುಸರಣೆಯಾಗಿದೆ | ರಾಜ್ಯ ಸರ್ಕಾರವು ಈ ಮಾನದಂಡವು ನಿಗದಿ ಪಡಿಸಿದ ನಮೂನೆಯನ್ನು ಅನುಪಾಲನೆ ಮಾಡಿದೆ. ಆದರೆ, ಸಾಲ ಮತ್ತು ಮುಂಗಡಗಳ ಅಸಲು ಮತ್ತು ಬಡ್ಡಿಗಳ ವಿವರಣೆಗಳನ್ನು ಪ್ರಧಾನ ಮಹಾಲೇಖಾಪಾಲರಿಗೆ (ಲೆ. ಮತ್ತು ಹ.) ಒದಗಿಸಿಲ್ಲವಾದ್ದರಿಂದ ಇದರಲ್ಲಿನ ಮಾಹಿತಿಗಳು ಅಪೂರ್ಣವಾಗಿವೆ. |

ಕ್ರಮಸಂಖ್ಯೆ 2ಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳಿಗೆ ನೀಡಿದ ಅವಕಾಶವನ್ನು 2020–21ರಿಂದ ಬಂಡವಾಳ ಶೀರ್ಷಿಕೆಯಿಂದ ರಾಜಸ್ವ ಶೀರ್ಷಿಕೆಗೆ ಬದಲಾಯಿಸಲಾಗಿದೆ ಎಂದು ಆರ್ಥಿಕ ಇಲಾಖೆಯು ಉತ್ತರಿಸಿದೆ (ಫೆಬ್ರವರಿ 2021).

ಕ್ರಮಸಂಖ್ಯೆ 3ಕ್ಕೆ ಸಂಬಂಧಿಸಿದಂತೆ, ಈ ಮಾನದಂಡವನ್ನು ಸಂಬಂಧಪಟ್ಟ ಇಲಾಖೆಗಳು ಹಾಗೂ ಪ್ರಧಾನ ಮಹಾಲೇಖಾಪಾಲರ ಇಲಾಖೆಯಲ್ಲಿ ನಿರ್ವಹಿಸಿರುವ ಸಾಲ ವಿವರಗಳ ಸಂಪೂರ್ಣ ವಿನಿಮಯ ಮತ್ತು ದಾಖಲೆಗಳಿಂದ ಮಾತ್ರ ಸಾಧಿಸಬಹುದು ಎಂದು ಆರ್ಥಿಕ ಇಲಾಖೆಯು ಉತ್ತರಿಸಿದೆ (ಫೆಬ್ರವರಿ 2021). ಖಜಾನೆ–2ರ ಎ ಎಲ್ ಎಂ ಮಾದರಿಯ ಅನುಷ್ಠಾನದಿಂದ ಸರ್ಕಾರದ ಸಾಲಗಳ ವ್ಯವಸ್ಥಿತ ಲೆಕ್ಕ ನಿರ್ವಹಣೆ, ದಾಖಲಾತಿ ಮತ್ತು ವಿತರಣೆಗಳು ಸಾಧ್ಯವೆಂದೂ ತಿಳಿಸಿದೆ.

## 4.9 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಸಲ್ಲಿಕೆ ಮತ್ತು ಪ್ರತ್ಯೇಕ ಲೆಕ್ಕಪರಿಶೀಲನಾ ವರದಿಗಳ ಮಂಡನೆಯ ಸ್ಥಿತಿ

ರಾಜ್ಯ ಸರ್ಕಾರವು ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು, ನಗರಾಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಹಲವು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾ ನಿಬಂಧನೆಗಳು) ಅಧಿನಿಯಮ, 1971ರ 19 ಮತ್ತು 20ನೇ ಪರಿಚ್ಛೇದಗಳಡಿ

ರಾಜ್ಯದಲ್ಲಿನ 12 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ.

ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ವಹಿಸಿರುವಿಕೆ, ಲೆಕ್ಕಪತ್ರಗಳ ಸಲ್ಲಿಕೆ, ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಜಾರಿ ಮತ್ತು ರಾಜ್ಯವಿಧಾನಮಂಡಲದಲ್ಲಿ ಅವುಗಳ ಮಂಡನೆಯ ಸ್ಥಿತಿಯನ್ನು **ಅನುಬಂಧ 4.3ರಲ್ಲಿ** ನೀಡಲಾಗಿದೆ. ಈ ಅನುಬಂಧದಲ್ಲಿ ತೋರಿಸಿರುವಂತೆ ಎಂಟು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದ ಒಂದು ಪ್ರತ್ಯೇಕ ಲೆಕ್ಕ ಪರಿಶೋಧನಾ ವರದಿ, ಎರಡು ಸಂಸ್ಥೆಗಳಿಗೆ ಸಂಬಂಧಿಸಿದ ಎರಡು ವರದಿಗಳು ಶಾಸಕಾಂಗದ ಮುಂದೆ ಮಂಡಿಸಲು ಬಾಕಿ ಇದೆ. 2018–19ರಲ್ಲಿ ಕರ್ನಾಟಕ ಪಠ್ಯಪುಸ್ತಕ ಸೊಸೈಟಿಯು ಮೊದಲ ಬಾರಿಗೆ 2006–07ನೇ ವರ್ಷದ ಲೆಕ್ಕಪತ್ರಗಳನ್ನು ಸಲ್ಲಿಸಿದೆ.

## 4.10 ಇಲಾಖಾ ವಾಣಿಜ್ಯ ಉದ್ದಿಮೆಗಳು/ನಿಗಮಗಳು/ಕಂಪನಿಗಳು

ಕೆಲವು ಸರ್ಕಾರಿ ಇಲಾಖೆಗಳ ಇಲಾಖಾ ಉದ್ದಿಮೆಗಳು ವಾಣಿಜ್ಯ ಮತ್ತು ಅರೆವಾಣಿಜ್ಯ ಸ್ವರೂಪದ ಚಟುವಟಿಕೆಗಳನ್ನು ನಡೆಸುತ್ತಿದ್ದು, ಈ ಉದ್ದಿಮೆಗಳು ಪ್ರತಿ ವರ್ಷವೂ, ಸರ್ಕಾರವು ಈ ಉದ್ದಿಮೆಗಳ ಕಾರ್ಯ ವೈಖರಿಯನ್ನು ಅಳೆಯಲು ಸಹಕಾರಿಯಾಗುವಂತೆ, ಹಣಕಾಸು ನಿರ್ವಹಣೆಯ ಕಾರ್ಯಫಲಗಳನ್ನು ತೋರಿಸುವಂತಹ ಪ್ರಪತ್ರ ಲೆಕ್ಕಗಳನ್ನು ನಿಗದಿತ ನಮೂನೆಯಲ್ಲಿ ತಯಾರಿಸಬೇಕಾಗಿದೆ. ಇಲಾಖಾ ನಿರ್ವಹಣೆಯ ವಾಣಿಜ್ಯ ಮತ್ತು ಅರೆವಾಣಿಜ್ಯ ಉದ್ದಿಮೆಗಳ ಅಂತಿಮಗೊಳಿಸಿದ ಲೆಕ್ಕಗಳು ಈ ಉದ್ದಿಮೆಗಳ ಸಮಗ್ರ ಆರ್ಥಿಕ ಸ್ವಾಸ್ಥ್ಯವನ್ನು ಮತ್ತು ಅವುಗಳ ವ್ಯವಹಾರಗಳನ್ನು ನಿರ್ವಹಿಸುವಲ್ಲಿನ ಸಮರ್ಥತೆಯನ್ನು ಪ್ರತಿಬಿಂಬಿಸುತ್ತದೆ. ಸಕಾಲದಲ್ಲಿ ಲೆಕ್ಕಗಳನ್ನು ಅಂತಿಮಗೊಳಿಸುವಲ್ಲಿನ ಅನುಪಸ್ಥಿತಿಯು ಸರ್ಕಾರದ ಹೂಡಿಕೆಯು ಲೆಕ್ಕಪರಿಶೋಧನೆಯ/ಶಾಸಕಾಂಗದ ಪರಿಶೀಲನೆಯಿಂದ ಹೊರಗೆ ಉಳಿಯುತ್ತವೆ. ತತ್ಪರಿಣಾಮವಾಗಿ ಇವುಗಳ ಹೊಣೆಗಾರಿಕೆಗಳನ್ನು ಖಚಿತಪಡಿಸಿಕೊಳ್ಳುವ ಮತ್ತು ದಕ್ಷತೆಯನ್ನು ಹೆಚ್ಚಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದ್ದಲ್ಲಿ, ಅವುಗಳನ್ನು ಸಕಾಲದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ, ಇಂತಹ ವಿಳಂಬಗಳಿಂದ, ಸಂಭಾವ್ಯ ವಂಚನೆಯ ಅಪಾಯ ಮತ್ತು ಸಾರ್ವಜನಿಕ ಹಣದ ಸೋರುವಿಕೆಯ ಸಾಧ್ಯತೆ ಇರುತ್ತದೆ.

ಸರ್ಕಾರದ ಇಲಾಖಾ ಮುಖ್ಯಸ್ಥರು, ಈ ಉದ್ದಿಮೆಗಳು ತಮ್ಮ ಲೆಕ್ಕಗಳನ್ನು ನಿಗದಿತ ಸಮಯದಲ್ಲಿ ತಯಾರಿಸಿ ಮಹಾಲೇಖಾಪಾಲರ ಲೆಕ್ಕಪರಿಶೋಧನೆಗೆ ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಮುಚ್ಚಿ ಹೋಗಿರುವ/ ವರ್ಗವಾಗಿರುವ/ಸಹಕಾರಿ ಒಕ್ಕೂಟಗಳಾಗಿ ಪರಿವರ್ತಿತವಾಗಿರುವ ಒಂಭತ್ತು ಉದ್ದಿಮೆಗಳಲ್ಲಿ ಎರಡು ಉದ್ದಿಮೆಗಳ ಪ್ರಪತ್ರ ಲೆಕ್ಕಗಳು 1969–70ರಿಂದ ಸಲ್ಲಿಕೆಯಾಗದೆ ಬಾಕಿ ಉಳಿದಿವೆ. ಉದ್ದಿಮೆಗಳ ಪ್ರಪತ್ರ ಲೆಕ್ಕಗಳ ತಯಾರಿಕೆಯಲ್ಲಿ ಬಾಕಿ ಇರುವ ಸ್ಥಿತಿಯನ್ನು **ಅನುಬಂಧ–4.4ರಲ್ಲಿ** ನೀಡಲಾಗಿದೆ.

ಮಾರ್ಚ್ 2016ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಹಣಕಾಸಿನ ಮೇಲಿನ ಲೆಕ್ಕಪರಿಶೋಧನಾ ವರದಿಯ **ಕಂಡಿಕೆ 3.4**ಕ್ಕೆ ಉತ್ತರವಾಗಿ ಆರ್ಥಿಕ ಇಲಾಖೆಯು (ಮಾರ್ಚ್ 2018) 18 ಆಗಸ್ಟ್ 2015ರಂದು ನಡೆದ ಸಭೆಯಲ್ಲಿ ಮಹಾಲೇಖಪಾಲರಿಗೆ ಪ್ರಪತ್ರ ಲೆಕ್ಕಪತ್ರಗಳನ್ನು ಸಲ್ಲಿಸುವುದನ್ನು ಮುಂದುವರೆಸುವಂತೆ ಮತ್ತು ಘಟಕಗಳನ್ನು ಮುಚ್ಚಲು ಸಮಗ್ರ ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಗೆ ಕಳುಹಿಸುವಂತೆ ಇಲಾಖೆಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿತು.

## 4.11 ಸಂಸ್ಥೆಗಳಿಗೆ ಮತ್ತು ಪ್ರಾಧಿಕಾರಗಳಿಗೆ ನೀಡಿದ ಅನುದಾನ/ಸಾಲದ ವಿವರಗಳನ್ನು ಸಲ್ಲಿಸದಿರುವುದು

ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರಗಳಿಗೆ ರಾಜ್ಯದ ಸಂಚಿತ ನಿಧಿಯಿಂದ ಅನುದಾನ ಅಥವಾ ಸಾಲರೂಪದಲ್ಲಿ ಗಣನೀಯವಾಗಿ ಹಣಕಾಸು ಒದಗಿಸಿದಾಗ, ಅದು ಆ ಸಂಸ್ಥೆ/ಪ್ರಾಧಿಕಾರಕ್ಕೆ ಆ ಸಮಯದಲ್ಲಿ ಅನ್ವಯವಾಗುವ ಯಾವುದೇ ಕಾನೂನಿನ ಅಥವಾ ಅಧಿಕಾರ, ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಕರ್ತವ್ಯ, ಅಧಿಕಾರ ಮತ್ತು ಸೇವಾ ನಿಬಂಧನೆಗಳ (ಡಿಪಿಸಿ) ಪರಿಚ್ಛೇದ ಕಾಯ್ದೆ 1971ರ ಸೆಕ್ಷನ್ 14ರ ಅಡಿಯಲ್ಲಿ ಆ ಸಂಸ್ಥೆ ಅಥವಾ ಪ್ರಾಧಿಕಾರದ ಎಲ್ಲಾ ಸ್ವೀಕೃತಿಗಳನ್ನು ಮತ್ತು ವೆಚ್ಚಗಳನ್ನು ಲೆಕ್ಕ ಪರಿಶೋಧಿಸಿ ವರದಿ ಮಾಡಬೇಕಿರುತ್ತದೆ. ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಯಾವುದೇ ಅನುದಾನ ಅಥವಾ ಸಾಲವನ್ನು ನೀಡಲಾಗಿದ್ದರೆ, ಮಂಜೂರು ಮಾಡುವ ಅಧಿಕಾರ, ಕಾರ್ಯವಿಧಾನ ಷರತ್ತುಗಳ ಪಾಲನೆಯನ್ನು ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ (ಡಿಪಿಸಿ) 1971ರ ಸೆಕ್ಷನ್ 15ರ ಅಡಿಯಲ್ಲಿ ಪರಿಶೀಲಿಸಲಾಗುತ್ತದೆ.

ಮೇಲಿನ ಪರಿಚ್ಛೇದಗಳಡಿ, ಲೆಕ್ಕ ಪರಿಶೋಧನೆಗೆ ಒಳಪಡುವ ಸಂಸ್ಥೆಗಳನ್ನು ಗುರುತಿಸಲು ಅನುವಾಗುವಂತೆ, ಸರ್ಕಾರದ ಇಲಾಖಾ ಮುಖ್ಯಸ್ಥರುಗಳು ಪ್ರತಿ ವರ್ಷವೂ ₹25 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಆರ್ಥಿಕ ಸಹಾಯ ಪಡೆದಿರುವ ಸಂಸ್ಥೆಗಳ, ಸಹಾಯ ನೀಡಿದ ಉದ್ದೇಶ ಮತ್ತು ಒಟ್ಟು ವೆಚ್ಚದ ವಿವರಗಳ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಬೇಕಾಗಿರುತ್ತದೆ.

ಹದಿನಾಲ್ಕು ಇಲಾಖೆಗಳು 2 ರಿಂದ 20 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ₹25 ಲಕ್ಷ ಅಥವಾ ಅದಕ್ಕಿಂತಲೂ ಹೆಚ್ಚಿನ ಅನುದಾನ ಪಡೆದಿರುವ 1121 ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ವಿವರಗಳನ್ನು **ಅನುಬಂಧ 4.5ರಲ್ಲಿ** ನೀಡಲಾಗಿದೆ. ಅನುಬಂಧದಲ್ಲಿ ಕಂಡುಬರುವಂತೆ, ಶಿಕ್ಷಣ ಇಲಾಖೆಯು ಪ್ರಮುಖ ಕರ್ತವ್ಯಲೋಪ ಇಲಾಖೆಯಾಗಿದೆ.

ಅಗತ್ಯ ಮಾಹಿತಿಯನ್ನು ನೇರವಾಗಿ ಪ್ರಧಾನ ಮಹಾಲೇಖಾಪಾಲರಿಗೆ ಸಲ್ಲಿಸಬೇಕು ಎಂದು ಎಲ್ಲಾ ಆಡಳಿತ ಇಲಾಖೆಗಳ ಕಾರ್ಯದರ್ಶಿಗಳಿಗೆ ಆರ್ಥಿಕ ಇಲಾಖೆಯು ಸೂಚನೆಗಳನ್ನು ಹೊರಡಿಸಿತ್ತು (ಡಿಸೆಂಬರ್ 2017). ಆದರೆ, ಅನುಸರಣೆಯಲ್ಲಿ ಯಾವುದೇ ಸುಧಾರಣೆ ಕಂಡುಬಂದಿಲ್ಲ. ಆರ್ಥಿಕ ಇಲಾಖೆಯು ಮಹಾಲೇಖಾಪಾಲರಿಗೆ ಅಗತ್ಯ ಮಾಹಿತಿಯನ್ನು ಶೀಘ್ರವಾಗಿ ಸಲ್ಲಿಸಲು ಇಲಾಖೆಗಳಿಗೆ ಸೂಚನೆ ನೀಡಲಾಗುವುದು ಎಂದು ತಿಳಿಸಿದ್ದರೂ (ಮಾರ್ಚ್ 2020) ಸಹ, ಕಳೆದ ವರ್ಷಕ್ಕೆ ಹೋಲಿಸಿದರೆ ಮಾಹಿತಿ ಸಲ್ಲಿಸದ ಇಲಾಖೆಗಳ ಸಂಖ್ಯೆಗಳು ಹೆಚ್ಚಿರುವುದನ್ನು ಗಮನಿಸಲಾಗಿದೆ.

## 4.12 ಲೆಕ್ಕಗಳಲ್ಲಿನ ಗುಣಮಟ್ಟ ಮತ್ತು ಕಾಲ ಪರಿಮಿತಿಗಳು

ಭಾರತದ ರಿಸರ್ವ್ ಬ್ಯಾಂಕ್‌ನ ಸೂಚನೆಗಳಲ್ಲದೆ, 34 ಖಜಾನೆಗಳು, 5 ಇತರೆ ಕಛೇರಿಗಳು, 103 ಲೋಕೋಪಯೋಗಿ ಕಾಮಗಾರಿ ವಿಭಾಗಗಳು ಮತ್ತು 103 ಅರಣ್ಯ ಇಲಾಖೆಯ ವಿಭಾಗಗಳಿಂದ ಪ್ರಾಥಮಿಕ ಲೆಕ್ಕಗಳನ್ನು ಪಡೆದು ಪ್ರಧಾನ ಮಹಾಲೇಖಾಪಾಲರು (ಲೆ.ಮತ್ತು ಹ.) ರಾಜ್ಯ ಸರ್ಕಾರದ ಲೆಕ್ಕಗಳನ್ನು ಕ್ರೋಡೀಕರಿಸುತ್ತಾರೆ. ಮಾಸಿಕ ಲೆಕ್ಕಗಳನ್ನು ಸಲ್ಲಿಸುವಲ್ಲಿ ಆಗಾಗ್ಗೆ ವಿಳಂಬವಾಗುವುದು ಕಂಡು ಬಂದಿದೆ. ಸಕಾಲದಲ್ಲಿ ಲೆಕ್ಕ ಸಲ್ಲಿಸುವ ಘಟಕಗಳು ಲೆಕ್ಕಗಳನ್ನು ಸಲ್ಲಿಸದಿರುವುದರಿಂದ ಪ್ರಧಾನ ಮಹಾ ಲೇಖಾಪಾಲರು (ಲೆ.ಮತ್ತು ಹ.) ಕೆಲವು ಲೆಕ್ಕಗಳನ್ನು ಮಾಸಿಕ ಸಿವಿಲ್ ಲೆಕ್ಕಗಳಲ್ಲಿ ಸೇರಿಸಿರುವುದಿಲ್ಲ. ವಿವರಗಳನ್ನು **ಕೋಷ್ಟಕ 4.11**ರಲ್ಲಿ ನೀಡಲಾಗಿದೆ.

**ಕೋಷ್ಟಕ 4.11: 2019–20ನೇ ಸಾಲಿನಲ್ಲಿ ಮಾಸಿಕ ಸಿವಿಲ್ ಲೆಕ್ಕಗಳಿಂದ ಹೊರಗುಳಿದ ಲೆಕ್ಕಗಳ ಸಂಖ್ಯೆ**

| ಲೆಕ್ಕ ಸಲ್ಲಿಸುವ ಘಟಕಗಳು | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ಜನವರಿ | ಫೆಬ್ರವರಿ | ಮಾರ್ಚ್ |
|---|---|---|---|---|---|---|---|---|---|---|---|---|
| ಖಜಾನೆಗಳು | – | – | – | – | – | – | – | – | – | – | – | – |
| ಇತರೆ ಕಛೇರಿಗಳು | 02 | – | 04 | 03 | 01 | – | 02 | 02 | 01 | – | – | – |
| ಲೋಕೋಪಯೋಗಿ ಕಾಮಗಾರಿ ವಿಭಾಗಗಳು | 02 | 01 | 01 | 01 | 01 | 01 | – | – | – | 01 | – | – |
| ಅರಣ್ಯ ವಿಭಾಗಗಳು | – | – | – | – | – | – | – | – | – | – | – | – |

*ಆಕರ: ಮಾಸಿಕ ಸಿವಿಲ್ ಲೆಕ್ಕಗಳ ವರದಿ*

**ಕೋಷ್ಟಕ 4.11**ರಲ್ಲಿ ತೋರಿಸಿರುವಂತೆ ಇಲಾಖೆಯ ಎರಡು ವರ್ಗ/ಕಛೇರಿಗಳಿಂದ ಮಾಸಿಕ ಲೆಕ್ಕಗಳನ್ನು ಸಲ್ಲಿಸುವಲ್ಲಿ ವಿಳಂಬವಾಗಿದ್ದರೂ ಸಹ, ವರ್ಷ್ಯಾಂತದ ತ್ರೈಮಾಸಿಕದಲ್ಲಿ ಎಲ್ಲಾ ಲೆಕ್ಕ ಸಲ್ಲಿಸುವ ಘಟಕಗಳು ಪ್ರಧಾನ ಮಹಾಲೇಖಾಪಾಲರ (ಲೆ.ಮತ್ತು ಹ.) ರಿಗೆ ಲೆಕ್ಕಗಳನ್ನು ಸಲ್ಲಿಸಿರುವಂತೆ ರಾಜ್ಯ ಸರಕಾರವು ಮುತುವರ್ಜಿ ವಹಿಸಿದೆ.

## 4.13 ದುರುಪಯೋಗಗಳು, ನಷ್ಟಗಳು, ಕಳವು ಮುಂತಾದವುಗಳು

2019–20ರ ಅಂತ್ಯಕ್ಕೆ ₹17.40 ಕೋಟಿಗಳಷ್ಟು ಸರ್ಕಾರಿ ಹಣವನ್ನು ಒಳಗೊಂಡ 14 ದುರುಪಯೋಗಗಳು ಹಾಗೂ ನಷ್ಟ ಪ್ರಕರಣಗಳು ಅಂತಿಮ ಕ್ರಮ ತೆಗೆದು ಕೊಳ್ಳಲು ಬಾಕಿ ಇದ್ದವು. ಇಲಾಖಾವಾರು ಬಾಕಿ ಇರುವ ಪ್ರಕರಣಗಳ ವಿಶ್ಲೇಷಣೆಯನ್ನು **ಕೋಷ್ಟಕ 4.12** ರಲ್ಲಿ ಮತ್ತು ವರ್ಷಾವಾರು ವಿಂಗಡಣೆಯನ್ನು **ಅನುಬಂಧ 4.6**ರಲ್ಲಿ ನೀಡಲಾಗಿದೆ.

**ಕೋಷ್ಟಕ 4.12: ಬಾಕಿ ಇರುವ ದುರುಪಯೋಗಗಳು, ನಷ್ಟ ಹಾಗೂ ಕಳವು ಪ್ರಕರಣಗಳು.**

**(₹ ಕೋಟಿಗಳಲ್ಲಿ)**

| ಇಲಾಖೆ | ದುರುಪಯೋಗಗಳು, ನಷ್ಟ ಹಾಗೂ ಸರ್ಕಾರದ ಸಾಮಗ್ರಿಗಳ ಕಳವು ಪ್ರಕರಣಗಳು | | ದುರುಪಯೋಗಗಳು, ನಷ್ಟ, ಕಳವು, ಮುಂತಾದ ಬಾಕಿ ಇರುವ ಪ್ರಕರಣಗಳ ವಿಲೇವಾರಿಗೆ ತಡವಾದ ಕಾರಣಗಳು | | | | | |
|---|---|---|---|---|---|---|---|---|
| | | | ಇಲಾಖಾ ಹಾಗೂ ಕ್ರಿಮಿನಲ್ ವಿಚಾರಣೆಗಳು ತಪಾಸಣೆಯಲ್ಲಿರುವುದು | | ಇಲಾಖಾ ಕ್ರಮಗಳು ಪ್ರಾರಂಭವಾಗಿ ಇನ್ನೂ ಕೊನೆಗೊಳ್ಳದಿರುವುದು | | ಕ್ರಿಮಿನಲ್ ನಡವಳಿಕೆಗಳು ಪೂರ್ಣಗೊಂಡಿರುವುದು ಆದರೆ ಮೊತ್ತದ ವಸೂಲಿ ಬಾಕಿ ಉಳಿದಿರುವುದು | |
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| ಲೋಕೋಪಯೋಗಿ ಕಾಮಗಾರಿಗಳು | 02 | 11.80 | – | – | 02 | 11.80 | – | – |
| ಒಳಾಡಳಿತ | 05 | 1.72 | – | – | 05 | 1.72 | – | – |
| ಕಾರ್ಮಿಕ | 01 | 0.03 | – | – | 01 | 0.03 | – | – |
| ಸಮಾಜ ಕಲ್ಯಾಣ | 01 | 3.26 | – | – | 01 | 3.26 | – | – |
| ಶಿಕ್ಷಣ | 01 | 0.29 | – | – | 01 | 0.29 | – | – |
| ಪಶುಸಂಗೋಪನೆ ಮತ್ತು ಮೀನುಗಾರಿಕೆ | 01 | 0.06 | – | – | 01 | 0.06 | – | – |
| ಕೃಷಿ ಮತ್ತು ತೋಟಗಾರಿಕೆ | 01 | 0.02 | – | – | 01 | 0.02 | – | – |
| ಕಾನೂನು | 01 | 0.20 | – | – | 01 | 0.20 | – | – |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 01 | 0.02 | – | – | 01 | 0.02 | – | – |
| ಒಟ್ಟು | **14** | **17.40** | – | – | **14** | **17.40** | – | – |

*ಆಕರ: ಪ್ರಧಾನ ಮಹಾಲೇಖಾಪಾಲರು (ಲೇಖಾಪರೀಕ್ಷೆ – I ) ಮತ್ತು ಮಹಾಲೇಖಾಪಾಲರು (ಲೇಖಾಪರೀಕ್ಷೆ– II)*

## 4.14 ರಾಜ್ಯ ಸರ್ಕಾರದ ಹಣಕಾಸು ವ್ಯವಹಾರಗಳ ವರದಿಯ ಅನುಸರಣಾ ಕ್ರಮಗಳು

2009–10ನೇ ವರ್ಷದ ರಾಜ್ಯ ಹಣಕಾಸು ವ್ಯವಹಾರಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಮೇ 2011ರಿಂದ ಆಗಸ್ಟ್ 2011ರ ನಡುವಿನ ಅವಧಿಯಲ್ಲಿ ಚರ್ಚಿಸಿತು. ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಡಿಸೆಂಬರ್ 2011ರಲ್ಲಿ ಶಾಸನಸಭೆಯ ಮುಂದೆ ಮಂಡಿಸಲಾಯಿತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸುಗಳಿಗೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಂಡ ವರದಿಯನ್ನು ಸೆಪ್ಟೆಂಬರ್ 2014ರಲ್ಲಿ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಮುಂದೆ ಮಂಡಿಸಲಾಗಿದೆ. ಸಾರ್ವಜನಿಕ ಲೆಕ್ಕ ಸಮಿತಿಯು ಸರ್ಕಾರವು ಮಂಡಿಸಿದ ಕ್ರಮ ತೆಗೆದುಕೊಂಡ ವರದಿಯನ್ನು ಚರ್ಚಿಸಿ ಮುಂದಿನ ಶಿಫಾರಸುಗಳನ್ನು ಶಾಸನ ಸಭೆಯ ಮುಂದೆ ಜುಲೈ 2015ರಲ್ಲಿ ಮಂಡಿಸಿತು.

ಸಾರ್ವಜನಿಕ ಲೆಕ್ಕ ಸಮಿತಿಯ ಗಮನಕ್ಕೆ ತರಲು ಅರ್ಹವಾದ ರಾಜ್ಯ ಹಣಕಾಸಿನ ಮುಖ್ಯವಾದ ಅಂಶಗಳಾದ 2012–13 ರಿಂದ 2017–18ರ ವರೆಗಿನ ಅಧಿಕ ವೆಚ್ಚಗಳ ಸಕ್ರಮೀಕರಣ, ಧನವಿನಿಯೋಗ ಲೆಕ್ಕಗಳಲ್ಲಿ ಟಿಪ್ಪಣಿಗಳ ಆಯ್ಕೆಗಾಗಿ ವಿತ್ತ ಮಿತಿಗಳ ಪರಿಷ್ಕರಣೆ ಇವುಗಳನ್ನು ಘನಸಮಿತಿಯ ಪರಿಗಣನೆಗಾಗಿ ತರಲಾಗಿದೆ.

## 4.15 ಸಮಾಪನ

ಸರ್ಕಾರ ನೀಡಿದ ಅನುದಾನಗಳ ಮೇಲೆ ಗಳಿಸಿದ ಬಡ್ಡಿಯನ್ನು ಕೆಲವು ಸರ್ಕಾರಿ ಕಂಪೆನಿಗಳು/ನಿಗಮಗಳು ಆರ್ಥಿಕ ಇಲಾಖೆಯ ಸೂಚನೆಗಳ ನಂತರವೂ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿರುವುದಿಲ್ಲ.

ವೈಯಕ್ತಿಕ ಠೇವಣಿ ಲೆಕ್ಕಗಳಲ್ಲಿನ ಅಂತಿಮ ಶಿಲ್ಕು ಕಳೆದ ಎರಡು ವರ್ಷಗಳಿಂದ ಏರಿಕೆಯ ಪ್ರವೃತ್ತಿಯಲ್ಲಿದೆ. ದೊಡ್ಡ ಪ್ರಮಾಣದ ಮೊತ್ತವನ್ನು ಬಾಕಿ ಉಳಿಸಿಕೊಳ್ಳುವುದು ಶಾಸಕಾಂಗದ ಆರ್ಥಿಕ ನಿಯಂತ್ರಣ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಅಲ್ಲದೆ, ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. ನಿಷ್ಕ್ರಿಯ ವೈಯಕ್ತಿಕ ಠೇವಣಿ ಖಾತೆಗಳು ಹೊಂದಾಣಿಕೆಯಾಗದಿರುವುದು ಮತ್ತು ಅಂಥಹ ಖಾತೆಗಳಲ್ಲಿ ಬಳಕೆಯಾಗದೆ ಉಳಿದ ಮೊತ್ತವನ್ನು ಸಂಚಿತ ನಿಧಿಗೆ ವರ್ಗಾಯಿಸದೆ ಇರುವುದು ಸಾರ್ವಜನಿಕ ಹಣದ ದುರುಪಯೋಗ, ವಂಚನೆ ಮತ್ತು ಅವ್ಯವಹಾರಗಳು ಸಂಭವಿಸುವ ಅಪಾಯವನ್ನು ಹೊಂದಿರುತ್ತವೆ.

ಅಮಾನತ್ತು ಲೆಕ್ಕಗಳಲ್ಲಿ ತೀರುವಳಿಯಾಗದಿರುವುದು, ಸರಕಾರದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಸರಿಯಾದ ಶೀರ್ಷಿಕೆಗಳಲ್ಲಿ ಖಚಿತವಾಗಿ ಬಿಂಬಿಸುವುದಿಲ್ಲ. ಮುಂದುವರೆದು, ಋಣ, ಠೇವಣಿ ಮತ್ತು ಇರಸಾಲು ಶೀರ್ಷಿಕೆಯಡಿ ವ್ಯತಿರಕ್ತ ಶಿಲ್ಕುಗಳಿದ್ದು, ಇವುಗಳ ತೀರುವಳಿಗಾಗಿ ಪರಿಹಾರೋಪಾಯ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ.

ಪ್ರಸಕ್ತ ವರ್ಷದಲ್ಲಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಪೈಕಿ ಶೇಕಡ 20ರಷ್ಟು ಬಿಲ್ಲುಗಳು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸದಿರುವುದರಿಂದ ಬಾಕಿ ಉಳಿದಿವೆ.

ಸರ್ಕಾರವು ಗಣನೀಯವಾಗಿ ಹಣಕಾಸು ಒದಗಿಸಿದ ಸಂಸ್ಥೆಗಳ ಬಗ್ಗೆ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಆಡಳಿತಾತ್ಮಕ ಇಲಾಖೆಗಳಿಗೆ ಆರ್ಥಿಕ ಇಲಾಖೆಯು ಸೂಚನೆಗಳನ್ನು ನೀಡಿದ್ದರೂ ಸಹ ಅಗತ್ಯ ಮಾಹಿತಿ ನೀಡದ ಸಂಸ್ಥೆಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇದು ರಾಜ್ಯಸರ್ಕಾರದ ಅಪರ್ಯಾಪ್ತ ಆಂತರಿಕ ನಿಯಂತ್ರಣ ಮತ್ತು ಮೇಲ್ವಿಚಾರಣೆ ವ್ಯವಸ್ಥೆಯ ನ್ಯೂನತೆಗಳನ್ನು ಸೂಚಿಸುತ್ತದೆ.

## 4.16 ಶಿಫಾರಸುಗಳು

- **ಸರ್ಕಾರವು ನಿಗದಿಪಡಿಸಿದ ಅವಧಿಯಲ್ಲಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಹೊಂದಾಣಿಕೆಯಾಗುವುದನ್ನು ಖಚಿತಪಡಿಸಿಕೊಳ್ಳಬೇಕು;**
- **ತಮ್ಮ ಅಗತ್ಯತೆಯನ್ನು ಮೀರಿದ ವೈಯಕ್ತಿಕ ಠೇವಣಿ ಖಾತೆಗಳಲ್ಲಿರುವ ಶಿಲ್ಕುಗಳನ್ನು ಇತ್ಯರ್ಥಗೊಳಿಸುವುದನ್ನು ಪರಿಶೀಲಿಸುವ ಅಗತ್ಯವಿದೆ ಮತ್ತು ವೈಯಕ್ತಿಕ ಠೇವಣಿ ಖಾತೆಗಳ ಸ್ಥಿತಿಗತಿಯನ್ನು ಪರಿಶೀಲಿಸಲು ಕ್ರಮಗಳನ್ನು ತೆಗೆದುಕೊಳ್ಳುವ ಮತ್ತು ಆಡಳಿತಾಧಿಕಾರಿಗಳು ಹಾಗೂ ಖಜಾನೆಯೊಂದಿಗೆ ಸಮಾಲೋಚಿಸಿ ಶಿಲ್ಕುಗಳನ್ನು ಹೊಂದಾಣಿಕೆ ಮಾಡಿದ ನಂತರ ನಿಷ್ಕ್ರಿಯ ಖಾತೆಗಳನ್ನು ಮುಕ್ತಾಯಗೊಳಿಸುವ ಅಗತ್ಯವಿದೆ.**
- **ಲೆಕ್ಕಪತ್ರದ ವರ್ಷದಲ್ಲಿಯೇ ವಹಿವಾಟುಗಳನ್ನು ಸಂಬಂಧಪಟ್ಟ ಶೀರ್ಷಿಕೆಗಳಿಗೆ ತರಲು ಅಮಾನತ್ತು ಶೀರ್ಷಿಕೆಗಳ ಪರಿಶೀಲನೆಯನ್ನು ಕೈಗೊಳ್ಳಬೇಕು.**
- **ಸರ್ಕಾರದಿಂದ ಗಣನೀಯ ಆರ್ಥಿಕ ಬೆಂಬಲ ಪಡೆದಿರುವ ಸಂಸ್ಥೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಎಲ್ಲಾ ಆಡಳಿತಾತ್ಮಕ ಇಲಾಖೆಗಳು ಪ್ರಧಾನ ಮಹಾಲೇಖಾಪಾಲರಿಗೆ (ಲೆಕ್ಕ ಪರಿಶೋಧನೆ) ಸಲ್ಲಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.**

**ಬೆಂಗಳೂರು** (ಇ.ಪಿ. ನಿವೇದಿತ)
ದಿನಾಂಕ ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–I)
**ಕರ್ನಾಟಕ**

**ಮೇಲು ಸಹಿ ಮಾಡಿದೆ**

**ನವದೆಹಲಿ** (ಗಿರೀಶ್ ಚಂದ್ರ ಮುರ್ಮು)
**ದಿನಾಂಕ** **ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು

## ಅನುಬಂಧ 1.1 – ರಾಜ್ಯ ಚಿತ್ರಣ

## (ಉಲ್ಲೇಖ: ಕಂಡಿಕೆ 1.2 ಪುಟ 1)

| ಎ | | ಸಾಮಾನ್ಯ ದತ್ತಾಂಶ | |
|---|---|---|---|
| ಕ್ರ. ಸಂ. | | ವಿವರಗಳು | ಅಂಕಿಗಳು |
| 1 | ವಿಸ್ತೀರ್ಣ | | 1,91,791 ಚ.ಕಿ.ಮೀ |
| 2 | ಜನಸಂಖ್ಯೆ | | |
| | ಎ | 2001ರ ಜನಗಣತಿ ಪ್ರಕಾರ | 5.29 ಕೋಟಿ |
| | ಬಿ | 2011ರ ಜನಗಣತಿ ಪ್ರಕಾರ. | 6.11 ಕೋಟಿ |
| 3 | [1]ಜನಸಂಖ್ಯೆಯ ಸಾಂದ್ರತೆ (2011 ಜನಗಣತಿ).<br>(ರಾಷ್ಟ್ರೀಯ ಸಾಂದ್ರತೆ = **ಪ್ರತಿ ಚ.ಕಿ.ಮೀ.ಗೆ 382 ಜನ**) | | ಪ್ರತಿ ಚ.ಕಿ.ಮೀ 319 ಜನ |
| 4 | [2]ಬಡತನ ರೇಖೆಯ ಕೆಳಗಿನ ಜನಸಂಖ್ಯೆ. (2011 ಜನಗಣತಿ)<br>(ರಾಷ್ಟ್ರೀಯ ಸರಾಸರಿ = **21.90** %) | | 19.60 *ಶೇಕಡ* |
| 5 | [3]ಸಾಕ್ಷರತೆ (2011) (ರಾಷ್ಟ್ರೀಯ ಸರಾಸರಿ = **73.00** % ) | | 75.36 *ಶೇಕಡ* |
| 6 | [4]ಶಿಶು ಮರಣದರ (ಪ್ರತಿ 1,000 ಜೀವಂತ ಜನನಗಳಿಗೆ)<br>(ರಾಷ್ಟ್ರೀಯ ಸರಾಸರಿ = **33 ಪ್ರತಿ 1,000 ಜೀವಂತ ಜನನಗಳಿಗೆ** ) | | 1000 ಜೀವಂತ ಜನನಗಳಿಗೆ 25 |
| 7 | [5]ಜನನ ಸಮಯದ ಆಯು: ಪ್ರಮಾಣ (ರಾಷ್ಟ್ರೀಯ ಸರಾಸರಿ = **69.0 ವರ್ಷಗಳು**) | | 69.20 ವರ್ಷಗಳು |
| 8 | [6]ಮಾನವ ಅಭಿವೃದ್ಧಿ ಸೂಚ್ಯಂಕವು**1**(2012) (ರಾಷ್ಟ್ರೀಯ = **0.587**) | | 0.611 |
| 9 | [7]ರಾಜ್ಯದ ಒಟ್ಟುಆಂತರಿಕಉತ್ಪನ್ನ (ರಾಒಆಂಉ) 2019–20 ಪ್ರಸಕ್ತ ಬೆಲೆಗಳಲ್ಲಿ (ಕೋಟಿಗಳಲ್ಲಿ) | | 16,99,115 |
| 10 | ತಲಾರಾಒಆಂಉ (2019–20) (ರೂಪಾಯಿಗಳಲ್ಲಿ) | ಕರ್ನಾಟಕ | 2,53,444 |
| | | ರಾಷ್ಟ್ರೀಯ ಸರಾಸರಿ | 1,50,927 |
| 11 | ತಲಾರಾಒಆಂಉ ಸಿಎಜಿಆರ್ (2010–11 ರಿಂದ 2019–20) | ಕರ್ನಾಟಕ | 14.95 |
| | | ಸಾಮಾನ್ಯ ವರ್ಗ ರಾಜ್ಯಗಳು**2** | – |
| 12 | ರಾಒಆಂಉ ಸಿಎಜಿಆರ್ (2010–11ರಿಂದ 2019–20) | ಕರ್ನಾಟಕ | 16.83 |
| | | [5]ಸಾಮಾನ್ಯ ವರ್ಗ ರಾಜ್ಯಗಳು | – |
| 13 | [8]ಜನಸಂಖ್ಯಾವೃದ್ಧಿ (2010–2020) | ಕರ್ನಾಟಕ | 9.70 |
| | | [6]ಸಾಮಾನ್ಯ ವರ್ಗ ರಾಜ್ಯಗಳು | – |

| B | **ಆರ್ಥಿಕದತ್ತಾಂಶ** | | | | | | |
|---|---|---|---|---|---|---|---|
| ವಿವರಗಳು | | ಅಂಕಿಗಳು (ಶೇಕಡ) | | | | | |
| ಸಿಎಜಿಆರ್‌ನ | | ಸಾಮಾನ್ಯ ವರ್ಗ ರಾಜ್ಯಗಳು | | | ಕರ್ನಾಟಕ | | |
| | | **2010–11 ರಿಂದ 2018–19** | **2014–15 ರಿಂದ 2018–19** | **2018–19 ರಿಂದ 2019–20** | **2010–11 ರಿಂದ 2018–19** | **2014–15 ರಿಂದ 2018–19** | **2018–19 ರಿಂದ 2019–20^** |
| ಅ | ರಾಜಸ್ವ ಸ್ವೀಕೃತಿಗಳು | 13.65 | 12.71 | 2.08 | 13.91 | 12.19 | 6.34 |
| ಆ | ಸ್ವಂತ ತೆರಿಗೆ ಆದಾಯ | 12.21 | 10.42 | 2.12 | 12.23 | 8.38 | 5.71 |
| ಇ | ತೆರಿಗೆಯೇತರ ಆದಾಯ | 11.19 | 9.67 | 23.44 | 9.17 | 9.63 | 13.41 |
| ಈ | ಒಟ್ಟು ವೆಚ್ಚ | 13.87 | 12.22 | 4.09 | 14.45 | 13.22 | 5.12 |
| ಉ | ಬಂಡವಾಳ ವೆಚ್ಚ | 14.64 | 12.35 | (-)3.86 | 12.66 | 15.28 | 1.16 |
| ಊ | ಶಿಕ್ಷಣದ ಮೇಲಿನ ರಾಜಸ್ವ ವೆಚ್ಚ | 11.58 | 9.37 | 11.81 | 10.17 | 6.71 | 13.21 |
| ಋ | ಆರೋಗ್ಯದ ಮೇಲಿನ ರಾಜಸ್ವ ವೆಚ್ಚ | 15.43 | 13.23 | 9.48 | 17.14 | 13.42 | (-)0.36 |
| ಎ | ಸಂಬಳ ಮತ್ತು ಮಜೂರಿ | 10.78 | 10.35 | 9.51 | 11.30 | 8.97 | 12.46 |
| ಏ | ಪಿಂಚಣಿ | 14.14 | 14.27 | 9.74 | 17.82 | 10.54 | 21.81 |

*ಆಕರ: ಹಣಕಾಸು ದತ್ತಾಂಶಗಳಿಗೆ ಹಣಕಾಸು ಲೆಕ್ಕಗಳು.*

---

1 ಮಾನವ ಅಭಿವೃದ್ಧಿ ಸೂಚ್ಯಂಕವು ಜೀವಿತಾವಧಿ, ಶಿಕ್ಷಣ ಮತ್ತು ತಲಾ ಆದಾಯವನ್ನು ಒಳಗೊಂಡಿರುವ ಸಂಯೋಜಿತ ಸೂಚ್ಯಂಕವಾಗಿದೆ.

2 ವಿಶೇಷ ಪ್ರವರ್ಗದ ರಾಜ್ಯಗಳೆಂಬುದಾಗಿ ಪರಿಗಣಿಸಲಾಗಿರುವ 11 ರಾಜ್ಯಗಳನ್ನು ಹೊರತುಪಡಿಸಿ (ಅರುಣಾಚಲ ಪ್ರದೇಶ, ಅಸ್ಸಾಂ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರ ಹಾಗೂ ಉತ್ತರಾಖಂಡ).

- *ಸಾಮಾನ್ಯ ವರ್ಗದ ರಾಜ್ಯಗಳ ಅಂಕಿಅಂಶಗಳನ್ನು ಆರ್ಥಿಕ ಸಲಹೆಗಾರರು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಕಛೇರಿ, ನವದೆಹಲಿ ಇವರಿಂದ ಮಾಹಿತಿ ಪಡೆಯಲಾಗಿದೆ.*

^ *2018–19 ರಿಂದ 2019–20ರ ಅಂಕಿಅಂಶಗಳನ್ನು ಮಾರ್ಚ್ 2020ಕ್ಕೆ ಕೊನೆಗೊಂಡ ಆರ್ಥಿಕ ಲೆಕ್ಕಗಳಿಂದ ಅಳವಡಿಸಲಾಗಿದೆ.*

**ಪ್ರಮುಖ ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದ ಅಭಿವೃದ್ಧಿ ಸೂಚಕಗಳು**

(i) ನಯಮೇಲ್ಮೈ ರಸ್ತೆಗಳು (2018–19) – 100 ಚ.ಕಿ.ಮೀಗೆ **39.36 ಕಿ.ಮೀ.**

(ii) ಒರಟುಮೇಲ್ಮೈ ರಸ್ತೆಗಳು (2018–19) – 100 ಚ.ಕಿ.ಮೀಗೆ **0.41 ಕಿ.ಮೀ.**

(iii) ವಿದ್ಯುದೀಕರಣವಾದ ಹಳ್ಳಿಗಳು ಶೇಕಡ(2018–19) – **99.97**.

(iv) ಒಟ್ಟಾರೆ ಕೃಷಿ ಪ್ರದೇಶ(2017–18) –**119.94 ಹೆಕ್ಟೇರುಗಳು.**

(v) ಪ್ರಾಥಮಿಕ ಶಾಲೆಗಳು (2019–20ರಲ್ಲಿದ್ದಂತೆ) –**62,319**.

(vi) ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ – **2,359**.

(vii) ಪ್ರತಿ ಒಂದು ಲಕ್ಷಜನ ಸಂಖ್ಯೆಗೆ ಇರುವ ಹಾಸಿಗೆಗಳು (2018–19)–**108**.

1. *ಆರ್ಥಿಕ ಸಮೀಕ್ಷೆ, ಕರ್ನಾಟಕ ಸರ್ಕಾರ 2019–20*
2. *ಆರ್ಥಿಕಸಮೀಕ್ಷೆ (ಭಾರತ ಸರ್ಕಾರ) 2019–20, ಸಂಪುಟ II ಪುಟ ಎ 168–169,* ಕೋಷ್ಟಕ 9.8.
3. *ಆರ್ಥಿಕ ಸಮೀಕ್ಷೆ (ಭಾರತ ಸರ್ಕಾರ) 2019–20, ಸಂಪುಟ IIಪುಟ ಎ 164,* ಕೋಷ್ಟಕ 9.4.
4. *ಆರ್ಥಿಕಸಮೀಕ್ಷೆ (ಭಾರತ ಸರ್ಕಾರ) 2019–20, ಸಂಪುಟ II ಪುಟ ಎ 160,* ಕೋಷ್ಟಕ 9.1.
5. *ಆರ್ಥಿಕಸಮೀಕ್ಷೆ (ಭಾರತ ಸರ್ಕಾರ) 2019–20, ಸಂಪುಟ II ಪುಟ ಎ 160,* ಕೋಷ್ಟಕ 9.1.
6. *ಆರ್ಥಿಕಸಮೀಕ್ಷೆ (ಕರ್ನಾಟಕ ಸರ್ಕಾರ) 2019–20.*
7. ರಾಒಆಂಉದ ಅಂದಾಜು ಅಂಕಿಗಳನ್ನು 31 ಜುಲೈ2020ರಲ್ಲಿ ಭಾರತ ಸರ್ಕಾರದ ವೆಬ್ ಸೈಟ್ನಲ್ಲಿ ತಿಳಿಸಿರುವಂತೆ.
8. *ಭಾರತ ಜನಗಣತಿ 2001 (ಜನಸಂಖ್ಯಾ ಪ್ರಕ್ಷೇಪಣೆ 2001–2026, ಕೋಷ್ಟಕ 14, ಪುಟ 104* ರಿಂದ*115)*

ಟಿಪ್ಪಣಿ: ಸಾಮಾನ್ಯ ವರ್ಗದ ರಾಜ್ಯಗಳ ಅಖಿಲ ಭಾರತ ಸರಾಸರಿಯನ್ನು 16 ಸಾಮಾನ್ಯವರ್ಗದ ರಾಜ್ಯಗಳು ಒದಗಿಸಿದ ಅಂಕಿಸಂಖ್ಯೆಗಳ ಆಧಾರದ ಮೇರೆಗೆ ಲೆಕ್ಕ ಹಾಕಲಾಗಿದೆ– ತೆಲಂಗಾಣ ಸೇರಿದಂತೆ ಆಂಧ್ರಪ್ರದೇಶ, ಬಿಹಾರ, ಛತ್ತೀಸಗಡ, ಗುಜರಾತ್, ಹರಿಯಾಣ, ಜಾರ್ಖಂಡ್, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಾಸ್ಥಾನ, ತಮಿಳುನಾಡು, ಉತ್ತರಪ್ರದೇಶ ಹಾಗೂ ಪಶ್ಚಿಮ ಬಂಗಾಳ.

# ಅನುಬಂಧ 1.2
## ಸರ್ಕಾರಿ ಲೆಕ್ಕಗಳ ಸ್ವರೂಪ
(ಉಲ್ಲೇಖ: ಕಂಡಿಕೆ 1.4 ಪುಟ: 6)

**ಹಣಕಾಸು ಲೆಕ್ಕಗಳ ವಿನ್ಯಾಸ**

ರಾಜ್ಯ ಹಣಕಾಸು ಲೆಕ್ಕಗಳನ್ನು ಎರಡು ಸಂಪುಟಗಳಲ್ಲಿ ತಯಾರಿಸಲಾಗುತ್ತದೆ. ಸಂಪುಟ–I ಸರ್ಕಾರದ ಹಣಕಾಸುಗಳ ಸಾರಾಂಶದ ವಿವರಣಾ ಪಟ್ಟಿಗಳನ್ನು ಮತ್ತು ಸಂಪುಟ–II ಸವಿವರ ವಿವರಣಾಪಟ್ಟಿಗಳನ್ನು ಸಾದರ ಪಡಿಸುತ್ತದೆ. ವಿನ್ಯಾಸದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಅಲ್ಲದೆ ಸಂಪುಟ–II ವಿವಿಧ ಅನುಬಂಧಗಳಲ್ಲಿ ನೀಡಿರುವಂತೆ ಪ್ರಧಾನ ಶೀರ್ಷಿಕೆಯಲ್ಲಿ ಸಂಬಳ ಮತ್ತು ಸಹಾಯಧನಗಳ ತುಲನಾತ್ಮಕ ವೆಚ್ಚ, ರಾಜ್ಯಸರ್ಕಾರ ನೀಡಿದ ಸಹಾಯಾನುದಾನಗಳು ಮತ್ತುಆರ್ಥಿಕ ಸಹಾಯಗಳು, ಬಾಹ್ಯ ಬೆಂಬಲಿತ ಯೋಜನೆಗಳು, ಯೋಜನಾ ಕಾರ್ಯಕ್ರಮಗಳ ಮೇಲಿನ ವೆಚ್ಚ, ಅನುಷ್ಠಾನ ಏಜೆನ್ಸಿಗಳಿಗೆ ಕೇಂದ್ರ ಯೋಜನಾ ಮೊತ್ತಗಳ ನೇರ ಬಿಡುಗಡೆ, ಶಿಲ್ಕುಗಳ ಸಾರಾಂಶ, ನೀರಾವರಿ ಯೋಜನೆಗಳ ಆರ್ಥಿಕ ಫಲಗಳು ಅಪೂರ್ಣ ಸಾರ್ವಜನಿಕ ಕಾಮಗಾರಿಗಳ ಗುತ್ತಿಗೆಗಳ ಬದ್ಧತೆಗಳು ಮತ್ತು ನಿರ್ವಹಣಾ ವೆಚ್ಚಗಳನ್ನು ಹೊಂದಿದೆ.

| ವಿವರಣಾ ಪಟ್ಟಿ ಸಂಖ್ಯೆ | ವಿನ್ಯಾಸ |
|---|---|
| 1 | ರಾಜ್ಯದ ಆರ್ಥಿಕ ಸ್ಥಿತಿಯ ವಿವರಣಾ ಪಟ್ಟಿ. |
| 2 | ಸ್ವೀಕೃತಿಗಳು ಮತ್ತು ವಿತರಣೆಗಳ ವಿವರಣಾ ಪಟ್ಟಿ. |
| 3 | ಸಂಚಿತ ನಿಧಿಯಲ್ಲಿನ ಸ್ವೀಕೃತಿಗಳ ವಿವರಣಾ ಪಟ್ಟಿ. |
| 4 | ಸಂಚಿತ ನಿಧಿಯ ವೆಚ್ಚಗಳ ವಿವರಣಾ ಪಟ್ಟಿ. |
| 5 | ಕ್ರಮವೃದ್ಧಿಯ ಬಂಡವಾಳ ವೆಚ್ಚಗಳ ವಿವರಣಾ ಪಟ್ಟಿ. |
| 6 | ಸರ್ಕಾರದ ಸಾಲಗಳ ಮತ್ತು ಇತರ ಜವಾಬ್ದಾರಿಗಳ ವಿವರಣಾ ಪಟ್ಟಿ. |
| 7 | ರಾಜ್ಯ ಸರ್ಕಾರವು ನೀಡಿದ ಸಾಲಗಳ ಮತ್ತು ಮುಂಗಡಗಳ ವಿವರಣಾ ಪಟ್ಟಿ. |
| 8 | ಸರ್ಕಾರದ ಹೂಡಿಕೆಗಳ ವಿವರಣಾ ಪಟ್ಟಿ. |
| 9 | ಸರ್ಕಾರ ನೀಡಿದ ಖಾತರಿಗಳ ವಿವರಣಾ ಪಟ್ಟಿ. |
| 10 | ಸರ್ಕಾರವು ನೀಡಿದ ಅನುದಾನಗಳ ವಿವರಣಾ ಪಟ್ಟಿ. |
| 11 | ಪುರಸ್ಕೃತ ಮತ್ತು ಪ್ರಭೃತ ವೆಚ್ಚಗಳ ವಿವರಣಾ ಪಟ್ಟಿ. |
| 12 | ರಾಜಸ್ವ ಲೆಕ್ಕವನ್ನು ಹೊರತುಪಡಿಸಿ ವೆಚ್ಚದ ಆಕರ ಮತ್ತು ಅನ್ವಯಗಳ ವಿವರಣಾ ಪಟ್ಟಿ. |
| 13 | ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳಲ್ಲಿನ ಶಿಲ್ಕು ವಿವರಗಳ ಸಾರಾಂಶ. |
| 14 | ಒಳಶೀರ್ಷಿಕೆಯ ಹಂತದವರೆಗೆ ರಾಜಸ್ವ ಮತ್ತು ಬಂಡವಾಳ ಜಮೆಗಳ ಸವಿವರ ವಿವರಣಾ ಪಟ್ಟಿ. |
| 15 | ಒಳಶೀರ್ಷಿಕೆಯ ಹಂತದ ರಾಜಸ್ವ ವೆಚ್ಚಗಳ ಸವಿವರ ವಿವರಣಾ ಪಟ್ಟಿ. |
| 16 | ಒಳಶೀರ್ಷಿಕೆಯ ಮತ್ತು ಉಪಶೀರ್ಷಿಕೆಗಳ ಹಂತದ ಬಂಡವಾಳ ವೆಚ್ಚಗಳ ವಿವರಣಾ ಪಟ್ಟಿ. |
| 17 | ಸಾಲಗಳು ಮತ್ತು ಇತರ ಜವಾಬ್ದಾರಿಗಳ ಸವಿವರ ವಿವರಣಾ ಪಟ್ಟಿ. |
| 18 | ಸರ್ಕಾರವು ನೀಡಿರುವ ಸಾಲಗಳು ಮತ್ತು ಮುಂಗಡಗಳ ಸವಿವರ ವಿವರಣಾ ಪಟ್ಟಿ. |
| 19 | ಸರ್ಕಾರದ ಹೂಡಿಕೆಗಳ ಸವಿವರ ವಿವರಣಾ ಪಟ್ಟಿ. |
| 20 | ಸರ್ಕಾರ ನೀಡಿದ ಖಾತರಿಗಳ ಸವಿವರ ವಿವರಣಾ ಪಟ್ಟಿ. |
| 21 | ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕ ವಹಿವಾಟುಗಳ ಸವಿವರ ವಿವರಣಾ ಪಟ್ಟಿ. |
| 22 | ಮೀಸಲಿಟ್ಟ ನಿಧಿಗಳಲ್ಲಿನ ಶಿಲ್ಕುಗಳ ಸವಿವರ ವಿವರಣಾ ಪಟ್ಟಿ. |

## ಅನುಬಂಧ 1.3

### 31 ಮಾರ್ಚ್ 2020ರಲ್ಲಿದ್ದಂತೆ ಕರ್ನಾಟಕ ಸರ್ಕಾರದ ಸಂಕ್ಷಿಪ್ತ ಹಣಕಾಸು ಸ್ಥಿತಿ

(ಉಲ್ಲೇಖ: ಕಂಡಿಕೆ 1.7 ; ಪುಟ 9)

(₹ ಕೋಟಿಗಳಲ್ಲಿ)

| 31.03.2019 ರಂದುಇದ್ದಂತೆ | | ಜವಾಬ್ದಾರಿಗಳು | | 31.03.2020 ರಂದುಇದ್ದಂತೆ |
|---|---|---|---|---|
| 1,79,309.31 | | **ಆಂತರಿಕಋಣ** | | 2,20,336.92 |
| | 1,57,889.80 | ಬಡ್ಡಿಸಹಿತ ಮಾರುಕಟ್ಟೆ ಸಾಲಗಳು | 2,00,389.03 | |
| | 0.64 | ಬಡ್ಡಿರಹಿತ ಮಾರುಕಟ್ಟೆ ಸಾಲಗಳು | 0.86 | |
| | 105.14 | ಭಾರತೀಯ ಜೀವ ವಿಮಾ ನಿಗಮದಿಂದ ಪಡೆದ ಸಾಲಗಳು | 72.50 | |
| | 4,325.13 | ಇತರೆ ಸಂಸ್ಥೆಗಳಿಂದ ಪಡೆದ ಸಾಲಗಳು | 4,513.85 | |
| | 16,988.60 | ಭಾರತೀಯ ರಿಸರ್ವ್ ಬ್ಯಾಂಕಿನಿಂದ ಸಾಲಗಳು<br>ಕೇಂದ್ರ ಸರ್ಕಾರದ ರಾಷ್ಟ್ರೀಯ ಉಳಿತಾಯ ನಿಧಿಗೆ ಕೊಟ್ಟ ವಿಶೇಷ ಭದ್ರತೆಗಳು | 15,360.68 | |
| 14,657.49 | | **ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು** | | 13,908.50 |
| | 0.07 | 1984–85ನೇ ಸಾಲಿನ ಹಿಂದಿನ ವರ್ಷದ ಸಾಲಗಳು | 0.07 | |
| | 40.37 | ಯೋಜನೇತರ ಸಾಲಗಳು | 35.33 | |
| | 11,241.18 | ರಾಜ್ಯಯೋಜನೆ ಕಾರ್ಯಕ್ರಮಗಳಿಗಾಗಿ ಸಾಲಗಳು | 9,820.72 | |
| | 6.56 | ಕೇಂದ್ರಯೋಜನೆ ಕಾರ್ಯಕ್ರಮಗಳಿಗಾಗಿ ಸಾಲಗಳು | 7.89 | |
| | (-)18.25 | ಕೇಂದ್ರ ಪುರಸ್ಕೃತ ಯೋಜನೆಗಳಿಗಾಗಿ ಸಾಲಗಳು | (-)18.25 | |
| | 3,387.56 | ಇತರೆ ಸಾಲಗಳು | 4,062.74 | |
| 80.00 | | **ಸಾದಿಲ್ವಾರು ನಿಧಿ** | | 80.00 |
| 31,023.42 | | **ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಇತ್ಯಾದಿ** | | 35,179.15 |
| 32,871.47 | | **ಮೀಸಲು ನಿಧಿಗಳು** | | 37,599.04 |
| 28,385.41 | | **ಠೇವಣಿಗಳು** | | 31,559.22 |
| 6,660.36 | | **ಅಮಾನತ್ತು ಮತ್ತು ಸಂಕೀರ್ಣ ಶಿಲ್ಕುಗಳು** | | 5,296.95 |
| 2,92,987.46 | | **ಒಟ್ಟು** | | 3,43,959.78 |
| | | **ಆಸ್ತಿಗಳು** | | |
| 2,70,269.76 | | **ಸ್ಥಿರ ಆಸ್ತಿಗಳ ಮೇಲಿನ ಒಟ್ಟು ಬಂಡವಾಳ ವೆಚ್ಚ** | | 3,05,798.20 |
| | 66,518.28 | ಕಂಪನಿಗಳು, ನಿಗಮಗಳು ಇತ್ಯಾದಿಗಳ ಷೇರುಗಳಲ್ಲಿ ಹೂಡಿಕೆಗಳು | 67,816.71 | |
| | 2,03,751.48 | ಇತರೆ ಬಂಡವಾಳ ವೆಚ್ಚ | 2,37,981.49 | |
| 24,980.59 | | **ಸಾಲಗಳು ಮತ್ತು ಮುಂಗಡಗಳು** | | 28,847.23 |
| | 2,981.08 | ವಿದ್ಯುತ್‌ಚ್ಛಕ್ತಿ ಯೋಜನೆಗಳಿಗಾಗಿ ಸಾಲಗಳು | 5,336.90 | |
| | 21,913.40 | ಇತರೆ ಅಭಿವೃದ್ಧಿ ಸಾಲಗಳು | 23,424.71 | |
| | 86.11 | ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ಸಂಕೀರ್ಣ ಸಾಲಗಳು | 85.62 | |
| 690.50 | | **ಇರಸಾಲುಗಳು** | | 1,037.95 |
| 6.94 | | **ಇತರೆ ಮುಂಗಡಗಳು** | | 6.94 |
| 22,003.87 | | **ನಗದು** | | 34,463.13 |
| | --- | ಖಜಾನೆಗಳಲ್ಲಿನ ನಗದು | --- | |
| | 3.96 | ಖಾಯಂ ಮುಂಗಡಗಳು ಸೇರಿದಂತೆ ಇಲಾಖಾ ನಗದು ಶಿಲ್ಕು | 4.27 | |
| | 989.96 | ರಿಸರ್ವ್ ಬ್ಯಾಂಕ್ ಠೇವಣಿಗಳು | 1,659.20 | |
| | 0.01 | ರವಾನೆಯಲ್ಲಿರುವ ಇರಸಾಲುಗಳು | 0.01 | |
| | 5,139.28 | ನಗದು ಶಿಲ್ಕು ಹೂಡಿಕೆಗಳು | 13,634.21 | |
| | 15,870.66 | ಮೀಸಲು ನಿಧಿಗಳಿಂದ ಹೂಡಿಕೆಗಳು | 19,165.44 | |
| (-)24,964.20 | | **ಒಟ್ಟು** | | (-)26,193.67 |
| | (-)24,294.39 | ಸಂಚಿತ ಹೆಚ್ಚಳ | (-)24,964.21 | |
| | (-)678.81 | ರಾಜಸ್ವ ಹೆಚ್ಚಳವನ್ನು ಕಳೆಯಿರಿ | (-)1,185.39 | |
| | --- | ಇತರೆ ಹೊಂದಾಣಿಕೆಗಳನ್ನು ಕಳೆಯಿರಿ | --- | |
| | (+)9.00 | ಬಂಡವಾಳ ಸ್ವೀಕೃತಿಯನ್ನು ಕಳೆಯಿರಿ | (-)44.07* | |
| 2,92,987.46 | | **ಸರ್ಕಾರಿ ಲೆಕ್ಕಗಳ ಮೇಲಿನ ಹೆಚ್ಚಳ** | | 3,43,959.78 |

**ಸಹಕಾರಿ ಸಂಸ್ಥೆಗಳಲ್ಲಿ ಮರುಪಾವತಿ ಆದ ಹೂಡಿಕೆಗಳು ₹1.00ಕೋಟಿ ಹೊರತು ಮೊತ್ತ ತೋರಿಸಲಾಗಿದೆ*

# ಅನುಬಂಧ–2.1
## ಸ್ವೀಕೃತಿಗಳು ಮತ್ತು ಬಟವಾಡೆಗಳ ಸಾರಾಂಶ
(ಉಲ್ಲೇಖ: ಕಂಡಿಕೆ 2.2 ; ಪುಟ 19)

(₹ ಕೋಟಿಗಳಲ್ಲಿ)

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| 2018-19 | | 2019-20 | 2018-19 | | 2019-20 |
| ಭಾಗ ಎ: 2019–20ನೇ ಸಾಲಿನ ಜಮೆಗಳ ಮತ್ತು ವಿತರಣೆಗಳ ಸಾರಾಂಶ | | | | | |
| ಭಾಗ– ಎ: ರಾಜಸ್ವ | | | | | |
| **1,64,978.66** | **I. ರಾಜಸ್ವ ಜಮೆಗಳು** | **1,75,442.79** | **1,64,299.85** | **I. ರಾಜಸ್ವ ವೆಚ್ಚ ↑↑** | **1,74,257.40#** |
| **96,829.71** | ತೆರಿಗೆ ರಾಜಸ್ವ↑↑ | 1,02,362.79 | **42,655.05** | **ಸಾಮಾನ್ಯ ಸೇವೆಗಳು** | **48,823.84** |
| **6,772.87** | ತೆರಿಗೆಯೇತರ ರಾಜಸ್ವ↑↑ | 7,681.47 | | **ಸಾಮಾಜಿಕ ಸೇವೆಗಳು** | |
| **35,894.83** | ಕೇಂದ್ರದ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು | 30,919.00 | 23,424.22 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 26,517.81 |
| **25,481.25** | ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗಾಗಿ ಅನುದಾನಗಳು | 34,479.53 | 8,369.26 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 8,338.53 |
| **10,393.44** | ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳು | 12,213.55 | 8,610.97 | ನೀರು ಪೂರೈಕೆ ನೈರ್ಮಲ್ಯ, ವಸತಿ, ಮತ್ತು ನಗರಾಭಿವೃದ್ಧಿ | 7,132.91 |
| **3,373.89** | ಹಣಕಾಸು ಆಯೋಗದ ಅನುದಾನಗಳು | 4,672.91 | 181.63 | ವಾರ್ತಾ ಮತ್ತು ಪ್ರಸಾರ | 148.12 |
| **11,713.92** | ಇತರೆ ವರ್ಗಾವಣೆಗಳು/ ರಾಜ್ಯಗಳಿಗೆಅನುದಾನ | 17,593.07 | 8,487.81 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರು | 7,167.25 |
| | | | 519.87 | ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ | 525.01 |
| | | | 18,186.34 | ಸಮಾಜ ಕಲ್ಯಾಣ ಮತ್ತು ಪೌಷ್ಠಿಕತೆ | 16,327.50 |
| | | | 154.25 | ಇತರೆ | 215.68 |
| | | | **67,934.35** | **ಒಟ್ಟು ಸಾಮಾಜಿಕ ಸೇವೆಗಳು** | **66,372.81** |
| | | | | **ಆರ್ಥಿಕ ಸೇವೆಗಳು** | |
| | | | 20,304.58 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | 21,668.56 |
| | | | 7,001.37 | ಗ್ರಾಮೀಣಾಭಿವೃದ್ಧಿ | 7,276.64 |
| | | | 306.16 | ವಿಶೇಷ ಪ್ರದೇಶ ಕಾರ್ಯಕ್ರಮಗಳು | 226.42 |
| | | | 2,059.35 | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 2,103.15 |
| | | | 10,061.40 | ಇಂಧನ | 12,264.40 |
| | | | 1,486.30 | ಕೈಗಾರಿಕೆ ಮತ್ತು ಖನಿಜಗಳು | 1,473.35 |
| | | | 3,695.73 | ಸಾರಿಗೆ | 3,566.77 |
| | | | 84.65 | ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 65.54 |
| | | | 3,285.61 | ಸಾಮಾನ್ಯ ಆರ್ಥಿಕ ಸೇವೆಗಳು | 3,991.21 |
| | | | **48,285.14** | **ಒಟ್ಟು ಆರ್ಥಿಕ ಸೇವೆಗಳು** | **52,636.04** |
| | | | **5,425.31** | **ಸಹಾಯಾನುದಾನ ಮತ್ತು ಕೊಡುಗೆಗಳು** | **6,424.71** |
| | | | **678.81** | **II ರಾಜಸ್ವ ಹೆಚ್ಚಳ ಭಾಗ 'ಬಿ' ಗೆ ಮುಂದುವರೆಸಿದ್ದು** | **1,185.39** |
| **1,64,978.66** | | **1,75,442.79** | **1,64,978.66** | **ಒಟ್ಟು** | **1,75,442.79** |
| ಸ್ವೀಕೃತಿಗಳು | | | ಬಟವಾಡೆಗಳು | | |
| **2018-19** | | **2019-20** | **2018-19** | | **2019-20** |
| ಭಾಗ–ಬಿ : ಬಂಡವಾಳ ಮತ್ತು ಇತರೆ | | | | | |
| **26,184.05** | **II.ಪ್ರಾಯಂ ಮುಂಗಡಗಳು, ನಗದು ಶಿಲ್ಕಿನ ಹೂಡಿಕೆಗಳು ಮತ್ತು ಮೀಸಲಿಟ್ಟ ನಿಧಿಗಳಿಂದ ಹೂಡಿಕೆಗಳೂ ಸೇರಿದಂತೆಆರಂಭಿಕ ನಗದು ಶಿಲ್ಕು** | **22,003.87** | | | |
| **(-) 5.51** | **III. ಇತರೆ ಬಂಡವಾಳ ಜಮೆಗಳು** | **45.07** | **34,659.32** | **III. ಬಂಡವಾಳ ವೆಚ್ಚ** | **35,529.44*** |

| ಸ್ವೀಕೃತಿಗಳು | | | ಬಟವಾಡೆಗಳು | | |
|---|---|---|---|---|---|
| 2018-19 | | 2019-20 | 2018-19 | | 2019-20 |
| | | | **827.41** | **ಸಾಮಾನ್ಯ ಸೇವೆಗಳು** | **778.92** |
| | | | | **ಸಾಮಾಜಿಕ ಸೇವೆಗಳು** | |
| | | | 1,107.31 | ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 1,203.17 |
| | | | 1,107.97 | ಆರೋಗ್ಯ ಮತ್ತುಕುಟುಂಬ ಕಲ್ಯಾಣ | 821.96 |
| | | | 4,023.85 | ನೀರು ಪೂರೈಕೆ, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 4,244.78 |
| | | | 45.19 | ವಾರ್ತಾ ಮತ್ತು ಪ್ರಸಾರ | 3.89 |
| | | | 3,422.37 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಇತರೆ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು | 2,783.45 |
| | | | 66.44 | ಸಮಾಜಕಲ್ಯಾಣ ಮತ್ತು ಪೌಷ್ಠಿಕ ಆಹಾರ | 75.07 |
| | | | 20.42 | ಇತರೆ ಸಾಮಾಜಿಕ ಸೇವೆಗಳು | 59.49 |
| | | | **9,793.56** | **ಒಟ್ಟು ಸಾಮಾಜಿಕ ಸೇವೆಗಳು** | **9,191.81** |
| | | | | **ಆರ್ಥಿಕಸೇವೆಗಳು** | |
| | | | 214.52 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | 321.16 |
| | | | 66.82 | ಗ್ರಾಮೀಣಾಭಿವೃದ್ಧಿ | 64.80 |
